


ಕರ್ನಾಟಕ ಸರ್ಕಾರ
ಚೌಡ್ಕ
ಎಂ.ಜಿ. ಕಾವೇರಮ್ಮ
ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ

ಬೊಡ್ಕ

ಎಂ.ಜಿ. ಕಾವೇರಮ್ಮ

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ.
ಮಡಿಕೇರಿ, ಕೊಡಗು ಜಿಲ್ಲೆ – 571 201

'BODK' collection of Stories in Arebhase language written by M.G. Kaveramma, 'Nisarga', Mavaji, Sulia, D.K., Published by 'Karnataka Arebhase Samskrithi Mathu Sahitya Academy.

ಪ್ರಕಟಣೆ : **2018**

ಪ್ರತಿಗಳು : **500**

ಬೆಲೆ : ರೂ. 100/-   Price : Rs. 100/-

ಪುಟಗಳು : viii + 184 = 192

ಸಲಹ ಸಮಿತಿ :

ಶ್ರೀ ಎ.ಕೆ. ಹಿಮಕರ
ಶ್ರೀ ಪರಪುರಾಮ ಚಿಲ್ತಡ್ಕ
ಶ್ರೀಮತಿ ತಿರುಮಲೇಶ್ವರಿ
ಶ್ರೀಮತಿ ಸ್ವೇತಾ ಮಡಪ್ಪಾಡಿ

ಪ್ರಕಾಶಕರು : **ರಿಜಿಸ್ಟ್ರಾರ್**
ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ.

ಪುಸ್ತಕ ದೊರೆಯುವ ಸ್ಥಳ :

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ,
ಕಾಫಿ ಕೃಪ ಬಿಲ್ಡಿಂಗ್, ಮಹಾತ್ಮ ಗಾಂಧಿ ರಸ್ತೆ, ಮಡಿಕೇರಿ.
ದೂ. : 08272–223055

ಮುಖಪುಟ ಚಿತ್ರ ಮತ್ತು ಪರಿಕಲ್ಪನೆ : **ಎ.ಕೆ. ಹಿಮಕರ**

ಮುದ್ರಣ :
ಶ್ರೀ ಕೃಷ್ಣ ಕಂಪ್ಯೂಟರ್ಸ್ & ಪ್ರಿಂಟರ್ಸ್,
ಮಡಿಕೇರಿ, ಕೊಡಗು
Ph : 08272-224919, 9448135592

ಅಧ್ಯಕ್ಷರ ಮಾತ್

ಎಂ.ಜಿ. ಕಾವೇರಮ್ಮನವು ಸುಳ್ಯದ ಪ್ರಸಿದ್ಧ ಸಾಹಿತಿ, ಬರಹಗಾರ್ತಿ ಕನ್ನಡಲಿ ಮತ್ತೆ ಅರೆಬಾಸೆಲಿ ತುಂಬಾ ಬರ್‍ದ್ದೊಳೊ. ಇವು ಬರ್‍ದ ಮೂರು ಪುಸ್ತಕನ ಅರೆಬಾಸೆ ಅಕಾಡೆಮಿ ಹಿಂದೆನೇ ಪ್ರಕಟಮಾಡಿಟು. ಈಗ 'ಬೊದ್ಕ್'ಂತೇಳುವ ಇವರ ಕಾದಂಬರಿ ಪುಸ್ತಕನ ಪ್ರಿಂಟ್ ಮಾಡೊಕೂಂತ ನಾವು ನಿರ್ಧಾರ ತಕೊಂಡೊಳೊ. ನಾವ್ಗೆಲ್ಲಾ ಗೊತ್ತಿರುವ ಹಾಂಗೆ ಅಕಾಡೆಮಿಲಿ ಅತೀ ಹೆಚ್ಚ್ ಪುಸ್ತಕ ಪ್ರಕಟ ಆದ್ ಇವರ್‍ದೇಂತೇಳುವ ಕೀರ್ತಿ ಇವುಕ್ಕೆ ಉಟ್ಟು. ಇವರ ಸಾಧನೆಗೆ ಅರೆಬಾಸೆ ಅಕಾಡೆಮಿ ಪ್ರಶಸ್ತಿ ಕೊಟ್ಟು ಗೌರವಿಸಿಟು.

ಹುಟ್ಟಿದ ಪ್ರಸಿದ್ಧ ಸೂಂತೋಡು ಮನೆಂದ ಇಳ್ದ್ ಮಾವೊಜಿ ಮನೆ ಹತ್ತಿದ ಇವು ಆ ಕಾಲಲೇ ಪದವಿ ಪಡ್ದ ಹೆಣ್ಣ್ ಮಗಳ್, ಸಮಾಜ ಸೇವಕಿಯಾಗಿ, ಕಾಂಗ್ರೆಸ್ ಪಕ್ಷದ ಜನಪ್ರತಿನಿಧಿಯಾಗಿ, ಮಹಿಳಾ ಸಮಾಜದ ಮುಖಂಡರಾಗಿ ಸಮಾಜಕ್ಕೆ ಸೇವೆ ಸಲ್ಲಿಸ್ಯೊಳೊ.

ಇವು ಬರ್‍ದ 'ಬೊದ್ಕ್' ಕಾದಂಬರಿ ಒಂದು ಸೃಜನಶೀಲ ಸಾಹಿತ್ಯ ಪ್ರಕಾರವಾಗಿದ್ದ್ ಬಾರೀ ಒಳ್ಳ ಶೈಲಿಲಿ ನಿರೂಪಣೆ ಮಾಡ್ಯೊಳೊ. ಗೌಡ್ರ ಕುಟುಂಬ ಸಂಸಾರದೊಳಗೆ ಹೇಂಗೆ ಕೃಷಿ ಕೆಲ್ಸ ನಡ್ವದೆ, ಯಾವ್ಯಾವ ರೀತಿಲಿ ಸಂಪತ್ತು ಸಂಗ್ರಹ ಮಾಡಿವೆ, ಮಕ್ಕಳಿಗೆ ಓದು ಬರಹ ಕಲ್ಸಿ, ಒಳ್ಳೆ ಉದ್ಯೋಗಕ್ಕೆ ಸೇರ್‍ಸುವೆ, ಮತ್ತೆ ಪ್ರಾಯಕ್ಕೆ ಬಾಕನ ಮೊದ್ವೆ ಮಧ್ಯೆ ಸಂಸಾರ ಬೆಳ್ಸುವೆಂತ ಬಾರೀ ವಿವರವಾಗಿ ಬರ್‍ದ್ ತಿಳ್ಸಿದ ಕಾವೇರಮ್ಮ ಒಳ್ಳೆ ಸಾಧನೆಗಾರ್ತಿ. ಕೊಡ್ಗ್‍ನ ಗೂಡೆನ ಕನ್ನಡ ಜಿಲ್ಲೆಗೆ ತಂದ್, ಸಂಪ್ರದಾಯ ಅಲ್ಲಿ–ಇಲ್ಲಿ ಹೇಂಗೆ ಉಟ್ಟೂಂತ ಗೊತ್ತಾದೆ. ಮಕ್ಕ ಹಿರಿಯವರ ಗೌರವಿಸುವ ಗ್ರಾಮ ಗೊತ್ತಾದೆ. ಹೀಂಗೇ ಕಾದಂಬರಿ ಬಾರೀ ಪೊರ್‍ಲ್ಲಿ ಓದ್ಸಿಕಂಡ್ ಹೋದೆ. ಇಂತಹ ಒಂದು ಮೌಲಿಕ ಪುಸ್ತಕನ ಎಲ್ಲವೂ ತಕಂಡ್ ಓದೋಕು. ಬರ್‍ದ ಕಾವೇರಮ್ಮಂಗೆ ಅಭಿನಂದನೆಗ.

ಪಿ.ಸಿ. ಜಯರಾಮ
ಅಧ್ಯಕ್ಷರ್
ಕರ್ನಾಟಕ ಅರೆಬಾಸೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ

ಮಡಿಕೇರಿ
18–09–2018

ಮುನ್ನುಡಿ

'ಸರ್ಮಾಲೆ', 'ಅಜ್ಜಪ್ಪನ ಕತಾ ಭಂಡಾರಂದ ಹೆರ್ಕಿದ ಕತೆಗ' ಮತ್ತೆ "ನೆಂಪುಗಳ ರಂಗೋಲಿ" ತೇಳುವ ಮೂರು ಪುಸ್ತಕನ ಅರೆಬಾಸೆ ಅಕಾಡೆಮಿ ಪ್ರಕಟ ಮಾಡ್ಯುಟ್ಟು. ಇವರ ನಾಲ್ಕನೇ ಪುಸ್ತಕ 'ಬೊದ್ಕ್'ನ ಈಗ ಪ್ರಕಟ ಮಾಡಿಕೆ ಅಕಾಡೆಮಿ ಹೊರ್ಟುಟು. ಇನ್ನೂ ಎರಡ್ ಪುಸ್ತಕ ಕೈ ಬರಹ ರೂಪಲಿ ಉಟ್ಟು. ಇಂದ್ ಅವುಕೆ 80 ವರ್ಸ ಆಗ್ತಾಉಟ್ಟುಂತೇಳಿರೆ ಯಾರೂ ನಂಬಿಕಿಲೆ. ಈ ಪ್ರಾಯಲಿನೂ ಬರ್‍ಯವ ಅಬ್ಬೆಸ ಬಳ್ಸಿಕಂಡೊಳೊಂತೇಳಿರೆ ಇದೇ ಅವರ ಜೀವನೋತ್ಸಾಹಕ್ಕೆ ಸಾಕ್ಷಿತೇಳಕ್. ನಾವೆಲ್ಲಾ ಸುಳ್ಯದ ಬೋರ್ಡು ಹೈಸ್ಕೂಲಿಗೆ ಹೋವ ಕಾಲಲಿ ಇವು ಊರುಕ್‌ಟ್ಟುವ ಕೆಲ್ಸಲಿ ಬಿಸಿ ಜೋರಾಗಿಯೇ ಇದ್ದೊವು. ನಮ್ಮ ಹಳೆ ಜೋಸ್ತಿ ಸೂರಯ್ಯನವರ ಅತ್ತೆಂತ ಆಗಳೇ ಗೊತ್ತಿತ್ತ್. ಸುಳ್ಯಲಿ ರಾಶಿಗಟ್ಲೆ ಬರ್‍ಯವು ಎರಡೇ ಜನ ಇದ್ದದ್. ಈಗ ನೋಡಿರೆ ಅವರ ಸಾಲ್‌ಗೆ ಕಾವೇರಮ್ಮನವೂ ಸೇರಿವೆ. ಪ್ರಭಾಕರ ಶಿಶಿಲರ 'ಪುಂಸ್ತ್ರೀ'ಂತೇಳುವ ಕನ್ನಡ ಪುಸ್ತಕನ ಇವು ಅರೆಬಾಸೆಗೆ ಅನುವಾದ ಮಾಡ್ಯೊಳೊ.

'ಬೊದ್ಕ್' ಸುಮಾರ್ 174 ಪುಟದಷ್ಟ್ ಉದ್ದದ ಪುಸ್ತಕ. ಮೂವತ್ನಾಲ್ಕ್ ಉಪಶೀರ್ಷಿಕೆಲಿ ಕೂಡ್ಸಿ ಹೊಲ್ದ ಬೇರೆ ಬೇರೆ ಸಂಗತಿಗಳ ಮಾಲೆ. ಅರೆಬಾಸೆನ ಗ್‌ಟ್ಟಿನೆಲೆ ಸುಳು ಸೂಂತೋಡು ಮನೆತನಲಿ ಹುಟ್ಟಿ ಬೆಳ್ದ ಕಾವೇರಮ್ಮನವು ತಮ್ಮ ಅನುಭವಲಿ ಹುಟ್ಟಿಕಂಡ ವಿಚಾರಗಳ ಬಂಟವಲೆ ಕರೆಲಿರುವ ಪೆಂಬೆತ್ತಾಡಿತೇಳುವ ಉರೊಳಗೆ ಒಂದು ಕಾಲ್ಪನಿಕ ಪ್ರಪಂಚನ ಕಟ್ಟಿ ಕೊಟ್ಟೊಳೊ. ಕಾದಂಬರಿನ ಭೌಗೋಳಿಕ ಪರಿಸರ ಪಂಬೆತ್ತಾಡಿ ಸುತ್ತ ತಿರ್‍ಗಿರೆನೂ, ಅವುಕ್ಕೆ ಹಕ್ಕಲೆನ ನಂಟ್ರಗ ಇದ್ದದ್ ಪುತ್ತೂರುಂದಾಚೆ ಇರುವ ಬಲ್ನಾಡ್ ಸುತ್ತ ಮತ್ತೆ ಕೊಡ್ಗ್‌ನ ಮೂರ್‍ನಾಡ್‌ಲಿ. ಸುಳ್ಯದೊಳಗೆ ಬಂದು ಭಾರೀ ಪೊರ್ಲುನ ಸಂಸಾರ ಸಂಬಂಧನ ಕಾದಂಬರಿನೊಳಗೆ ನಾವು ಕಾಣಕ್. ಪಂಬೆತ್ತಾಡಿನ ಅಯ್ಯಣ್ಣ ಮಾಸ್ಟ್ರ ಒಂದು ಸುಖ ದಾಂಪತ್ಯಂದ ಸುರಾದ ಸಂಗತಿಗ ಅವರ ಅಂತ್ಯದವರೆಗೆ ಬಿಚ್ಚಿಕಂಡ್‌ಹೋದೆ. ಈ ಲೆಕ್ಕಕಿ ಅವ್ವೇ ಇಲ್ಲಿ ಕಥಾನಾಯಕ ಅಂತೇಳಕ್.

ಬಿಳ್ದವರ ಪೈಕಿ ಅಯ್ಯಣ್ಣ ಮಾಸ್ಟ್ರ ಹೆಣ್ಣ್ ಕಮಲಕ್ಕ. ಅವರ ಮಕ್ಕ ಸುರೇಶ ಮತ್ತೆ ಗಿರೀಶ, ಮನೆ ಹಕ್ಕಲೆ ಇರುವ ಕುಂಞಣ್ಣ, ಕುಕ್ಕಪ್ಪಣ್ಣ ಪೋಷಕ ಪಾತ್ರಂತೇಳಕ್.

ಮೇಲ್ನೋಟಕ್ಕೆ ಕಾದಂಬರಿಲಿ ಕಾಂಬದಾಂಗೆ ಅಯ್ಯಣ್ಣ ಮಾಸ್ಟ್ರ ಮತ್ತೆ ಕಮಲಕ್ಕಂದ್ ಒಳ್ಳೆ ಸ್ಥಿತಿವಂತರ ಕುಟುಂಬ. ಅವರ ಎರಡೂ ಮಕ್ಕ ಒಳ್ಳೆ ಉದ್ಯೋಗಕ್ಕೆ ಸೇರ್‍ದೊ. ಇವಕ್ಕೆಬ್ಬೊರಿಗೂ ಆಗುವ ಮೊದ್ವೆ. ಮತ್ತೆ ಮಕ್ಕ ಆದು, ಅಕೆರಿಗೆ ಅಯ್ಯಣ್ಣ ಗೌಡ್ರು ತಮ್ಮ ಬೊದ್ಕ್‌ಲಿ ಮಾಡ್ದ ಬೊದ್ಕ್‌ನ ಪಾಲ್ ಮಾಡಿ ಕೊಡ್ದು. ವಿಷಯ ಇಲಲಿಗೆ ಮುಗ್ಯೊದುಲೆ. ನಾವು ಇದರೆಡೆಲಿ ಇಳ್ಳ್ ಹೋವಂತ ನೂರಾರ್ ಸಂಗತಿಗಳ ಕಾದಂಬರಿನೊಳಗೆ ತುಂಬ್ಸಿಕೊಟ್ಟೊಳೊ. ಗಂಡ-ಹೆಣ್ಣ್‌ನ ಸಾಯಂದ, ಅಪ್ಪ ಮಕ್ಕಳ, ಅಣ್ಣ ತಮ್ಮಂದರ ಸಮ್ಮಂದ, ಅತ್ತೆ-ಸೊಸೆನ ಸಂಮಂದದ ಬಾರೀ ಪೊರ್ಲ್‌ನ ಮಾದರಿ ಇಲ್ಯುಟ್ಟು. ಒಂದು ರೀತಿಲಿ ಇಡೀ ಕಾದಂಬರಿನೇ ಒಂದು ಶೃಂಗಾರ ಕಾವ್ಯಂತೇಳಕ್. ಎಲ್ಲಿನೂ ಜಗಳ, ಗರ್ಸಣೆ, ಅಸಮಾಧಾನ, ಅತೃಪ್ತಿ ಕಾಂಬೋದೇ ಇಲ್ಲೆ. ಕುಟುಂಬ ಸಂಸಾರದೊಳಗೆ ಬಾರೀ ಹೊಂದಾಣಿಕೆನ ಸಂಮಂದಗ. ಬರೇ 'ಪೊಸಿಟಿವ್' ಸಂಕೇತಗ. ನಿರ್ದೇಶನಗಳೇ ತುಂಬಿದ ಇಂತಹ ಕಾದಂಬರಿನ ನಾ ಓದಿದೇ ಇದೇ ಸುರು. ಗಿರೀಶಂಗೆ ಅಯ್ಯಣ ಮಾಸ್ಟ್ರ ತಂಗೆನ ಮಗಳ ತರೊಕೂಂತೇಳೂವ ಇಸಯಲಿ ತಂಗೆ ಆಸೆಪಟ್ಟಿತ್ತ್‌ಂತ ಹೇಳುವ ಒಂದು ಸಣ್ಣ ಕಸ್ತ್ ಇದ್ದರೂ ಅದ್ ಮುಚ್ಚಿ ಹೋವುಟು. ಬಾರೀ ಸುಖಾಂತ್ಯಗಳ ಸರಮಾಲೆ ಈ ಕಾದಂಬರಿನ ಸೊತ್ತು.

ಕಾವೇರಮ್ಮನವರ ಮೇಲೂ ಶಿಷ್ಟ ಕನ್ನಡದ ಪ್ರಭಾವ ಇದ್ದರೂ ಅವು ಹಳೆತಲೆವು. ಪಂಡ್ ಕಾಲದ ಇಸಯಗ, ಆ ಕಾಲದತೇಳಿರೆ ಮೂಳ ಅರೆಬಾಸೆನ ಪದಗ ದೊಡ್ಡ ಮಟ್ಟಲಿ ಇಲ್ಲಿ ಕಂಡದೆ.

ಒಂದು ಅಂದಾಜಿ ಲೆಕ್ಕ ಹಾಕೊವೆಂತೇಳಿ ಸುರೂನ ಕೆಲವು ಪುಟಲಿ ಸಿಕ್ಕಿದ ಪದಗಳ ಹೀಂಗೆ ಪಟ್ಟಿ ಮಾಡ್ದೆ. ಮಾಜಿಸಿ, ಪುರುಂಞಿ, ಕಂದಲ್, ಕೋಸಿ, ಹಂಞ, ಇಜ್ಜೆಲ್, ನೇಕ್, ಅಡ್ಡಾದೊ. ಗೇನ, ಗೈಪು, ಪೊಕ್ಕರೊಟ್ಟಿ, ಕರಿಬೊಳ್ಳೆ, ಮಂಜ, ಐತ್ವಾರ, ಕುಸ್ಲಕ್ಕಿ, ಬೆಳ್ತಕ್ಕಿ, ಒಡ್ಡಿ, ಗೆಂಡೆ, ತೊಪ್ಪು, ಮನಾರ ಮಾಡ್ತ್, ಬೀಸ್ಕತ್ತಿ, ಗೀಪುಸು, ಮಾಸ ಮಾಡ್ದು, ಕನು, ಕರ್ಯಟ, ರೆಂಕರೆ, ಒರ್ಪಾದು, ಪಿಂಜಾಣಿ, ಪಿಲಿಕಂಡೆ, ಬಿಯ್ಯಪ್ರ, ಪಲ್ಲೆಕ್ಯಾ, ಪಳಾರ, ಅಟ್ಟೆಸ್ರ ಬುಡ್ಸಿ ತಿನ್ಸ್‌ನ ಚೀಲ ತೆರಿಮಣೆ, ಆಂಬ್ರ, ತುಗ್ಯದು, ಪೊರ್ಮಳ, ಬಾವೊಡೆ, ಹಾಗೇಳ್ರೆ, ಕಾವೇರಮ್ಮನವು ಒಳ್ಳೊಳ್ಳೆ ಅರೆಬಾಸೆ ಪದಗಳ ಮೂಲರೂಪೊಲಿ ಕೊಟ್ಟದ್ ಒಂದು ಸಾಧನೆಗೆ ಸೈ!

ಇದಲ್ಲದೆನೆ ಅವರ ಕೆಲವು ಈಡಿಯಂ ನೋಡಿ - ಕಣ್ಣ್ ಅಡ್ಡ

ಹಾಕುದು, (ನಿದ್ದೆ ಮಾಡುದು), ಅಡ್ಡಾದು (ಮಲ್ಗುದು) ಇಂತದ್ ನೂರಾರು ಉಟ್ಟು. ಕೆಲವು ಅರೆಬಾಸೆನ ರೂಢಿಗೆ ಬಂದ ಪದಗ. ಕಲಾಸ್ (ಇಂಗ್ಲಿಷ್‌ನ ಕ್ಲೋಸ್), ಸುಚ್ಚಿ (ಸ್ವಿಚ್) ಜೋಸ್ತಿ (ಉರ್ದುನ ದೋಸ್ತ್) ಹೀಂಗೇ ಕಾದಂಬರಿನ ಉದ್ದಕ್ಕೂ ನಾಟುವ ಹಾಂಗೆ ಬರ್ದೊಳೊ. ಅವುಕ್ಕೆ ಅವರ್ದೇ ಆದ ಒಂದು ಶೈಲಿ ಉಟ್ಟು. ಅದೇ ಕಾದಂಬರಿನ ಗ್ರೇಟ್ನೆಸ್. ಅರೆಬಾಸೆನ ಮನೆಮಾತಾಗಿಸಿಕಂಡ ನಮ್ಮ ಮನೆ ಮಕ್ಕ್‌ಳಿಗೆ ಈ ಮೇಲೆ ಬರ್ದ ಪದಗ ಇನ್ಸ್ ಅರ್ಥ ಮಾಡ್ಲೊಕಷ್ಟೆ.

ಹಾಂಗೆ ಹೇಳ್ರೆ, ಈ ಕಾದಂಬರಿನ ಓದಿದ ಮೇಲೆ ಇದರ ಹೊಗ್ಳಿ ಹೇಳಿಕೆನೂ ಕುಸಿ ಆದೆ. ಅಂತ ಒಂದು ಸಂಗತಿನ ಇಲ್ಲಿ ಹೇಳಿನೆ. ಮೊರ್ರ್ಯಾದಿನ ನೆಂಟ್ರ ಮನೆಗೆ ಬಾಕನ, ದೈವ ದೇವ್ರುಗೆ ಅಗ್ಳ್ ಹಾಕ್‌ಕನ, ಪ್ರಾಯಸ್ತ ಹಿರ್‍ಯವರ ಕಾಂಬಕೆ ಹೋಕನ ಮಾಸದ ಗೈಪು, ಅದರೊಟ್ಟಿಗೆ ಪೊಕ್ಕ ರೊಟ್ಟಿ, ಮತ್ತೆ ಗ್ಯಾದ್ರಣ್ಣ್ ಸರಾಯ ಇರೊಕೇ. ಗೌಡ್ರ ಸಂಪ್ರದಾಯದ ಆಹಾರ ಪದ್ದತಿ ಏನ್‌ಂತೇಳ್ದು ಇಲ್ಲಿ ಕಂಡದೆ. ಹಾಳೆಮೀನ್, ಚಂಡ್ರ್‌ಪುಳಿ ಮಾಮೂಲ ಊಟಕ್ಕೆ. ಅದರ್‍ಲೂ ಊರ್ ಕೋಳಿ ಬೆಂದಸ್ಟ್ ರುಚಿ ಜಾಸ್ತಿಂತೇಳುವ ಸತ್ಯ ಸಂಗತಿ ಗೊತ್ತಾತ್. ಇನ್ನೊಂದು ಕಡೆ ಊರುಕೋಳಿನ ಗೈಪು ಹೇಂಗೆಲ್ಲಾ ಮಾಡಿಕ್ಕಾದೆಂತ ವಿವರ್‍ಸುವೆ. ಓದಿಕಂಡ್ ಹೋಕನ ಅದರ ಪೊರ್ಮಳನೇ ಮೂಂಕುಗೆ ಹೊಡ್ದಾಂಗಾದೆ. ಅಂದ್ರೆ ಅವು ವಿವರ್‍ಸುವ ಶೈಲಿನೇ ಅಸ್ಟ್ ಪವರ್‌ಪುಲ್ ಆಗಿ ಉಟ್ಟು. 'ಬೆಂದ್ ಒರ್‍ಬಾದ ಮೇಲೆ ತುಪ್ಪ ನೆಡ್ಯಕೆ ಸುರಾತ್...' ಕೊದ್ಯರೆಸಿದ ಊರ್‍ಕೋಳಿ ಮಾಸ ಹಾಂಗೆ ಕೊದ್ದಕಂಡ್ ಬಾಕನ ಬಾವುಡೆ ತೆಗ್ದ್‌ನೋಡ್ರೆ ಮಾಸದ ತುಂಡುಗಳ ಮೇಲೆ ಮಾಸಂದ ಬುಟ್ಟ ಎಣ್ಣೆ ನೊರೆ ನೊರೆ ಆಗಿ ಹರ್‍ಯಕೆ ಸುರಾದೆ. ಇವರ ಬರವಣಿಗೆಲಿ ಮೂಲ ಅರೆಬಾಸೆನ ಮೂರಿ ಎದ್ದ್ ಕಂಡದೆ.

'ಗುಡಿಹೊದ್ದ್ ಮಲ್ಗಿದೊ', ಹಂದಾಡ್ಸಿ ನೋಡು (ವಿಚಾರಿಸು), ಕೈ ಅಂದಾಜಿ, 'ಕೋಳಿಗೆ ಪೊಕ್ಳರೊಟ್ಟಿ', 'ಹಂದಿಗೆ ಅಪ್ಪದಿಟ್ಟ್' ಇವೆಲ್ಲಾ ಮೂಲ ಸಂಸ್ಕೃತಿನ ಅನಾವರಣ ಮಾಡ್ದೆ. ಇದೊಂದು ಜಾರಿಹೋದ ಕಾಲದ ಸಂಗತಿಗಳ ಬಿಚ್ಚಿತೋರ್‍ಸಿದೆ. ಕಾವೇರಮ್ಮನವು ಈ ಕಾದಂಬರಿಲಿ ಸಮರ್ತವಾಗಿ ದಾಖಲ್ಸಿಯೊಳೊ.

ಹಾಂಗೆನೇ ಬದ್ಲದ ಆಹಾರ ಸಂಸ್ಕೃತಿಗೂ ಕಾದಂಬರಿ ಸಾಕ್ಷಿ ಆಗುಟು. ಅಯ್ಯಣ್ಣ ಮಾಸ್ಟ್ರ ದೊಡ್ಡ ಮಂಜನ ಮೊದ್ವೆಗೆ ವಿಟ್ಲಂದ ಬಟ್ರ ಕರ್‍ಸಿ ಅಡ್ಗೆ

ಮಾಡ್ಡಿವೆ. ಹಂಗೆನೆ ಅಯ್ಯಣ್ಣ ಮಾಸ್ಟ್ರ ಬಟ್ರ ಮನೆಗಳಿಗೆ ಹೋದರೆ ಅಲ್ಲಿ ಊಟ ತಿಂಡಿ ಮಾಡಿಗೆ ನಿಲ್ಲುದುಲೆ. ಯಾಕೆಂತೇಳಿರೆ ಗ್ಲಾಸ್ ಬಟ್ಲ್‌ನ ನಾವೇ ತೊಳ್ದ್ ಸೆಗಣಿ ಹಾಕಿ ಕೊಡುವ ಮುಜುಗರ ತಪ್ಸಿಕೆ.

ಒಂದು ರೀತಿಲಿ ನೋಡ್ರೆ ಇದೊಂದು ಬರೇ ಸಾಹಿತ್ಯ ಕೃತಿನೇ ಅಲ್ಲ. ಬದ್ಲಿಗೆ ಇದೊಂದು ಮಾಹಿತಿ ಪುಸ್ತಕನೂ ಹೌದು.

– ಗೌಡ್ರ ಮೊದುವೆ,
– ಗರ್ಭಿಣಿ ಆಕನ ತಿಂಡಿ ಮಾಡುವ ವಿಚಾರ
– ಪೆದ್ದೋಳಿ ಮೊದ್ದು – ಪೆದ್ದೊಳಿ ಸಾಂಕುದು
– ಕೂಸುನ ಆರೈಕೆ – ಔಷಧೀಯ ವಿಚಾರ
– ನೆರ್ದ ಮೊದ್ವೆ– ಪಿಲ ತೆಗ್ಯೊದು, ಮೈನೆರ್ದ ಮೇಲೆನ ಸಾಸ್ತ್ರಗ
– ಸಾವು – ಕಾಟರೆಸುದು, ಕೊಳ್ಳಿ ಕೊಡ್ದು, ಸುದ್ದ, ಬೊಜ್ಜ, ಹದ್ನಾರ್ ಎಲ್ಲಾ ವಿಧಿ ವಿಧಾನಗಳ ವಿವರಣೆ, ಉದ್ದೇಸ, ಬಳಸುವ ಕ್ರಮ ಇಲ್ಲಿ ಕೊಟ್ಟೊಳೊ.

ಪುಸ್ತಕದ ಸುರೂಂದ, ಅರ್ಧದವರೆಗೆ ಒಂದು ಮೇಲ್ಮಧ್ಯಮ ಕುಟುಂಬಲಿ 'ಮೊದ್ವೆ ಹೇಂಗೆ ನಡ್ದೇಂತ' ಹೇಳುವ ವಿಚಾರಗಳ ಎಳೆ ಎಳೆಲಿ ಬುಡ್ಸಿ ವಿವರಣೆ ಉಟ್ಟು. ಹಾಂಗಾಗಿ ಇದೊಂದು ಸಮಾಜಶಾಸ್ತ್ರ ಮೂಳ ಪುಸ್ತಕನೂ ಹೌದು.

ಹೀಂಗೆ ಎಂ.ಜಿ. ಕಾವೇರಮ್ಮನವು ಅರೆಬಾಸೆ ಸಾಹಿತ್ಯ ಲೋಕಲಿ ದೊಡ್ಡ ಸಾಧನೆ ಮಾಡ್ಯೋಳೊ. ಮಾಡ್ತಾನೂ ಒಳೊ. ಇವರ್ದೇ ಆದ ವಸ್ತು, ವಿಚಾರ, ನಿರೂಪಣಾ ಶೈಲಿ, ಪದ ಪ್ರಯೋಗ ಒಂದು ಜನಪ್ರಿಯ ವರ್ಗಕ್ಕೆ ಸೇರುವ ಸಾಹಿತ್ಯ ಪ್ರಕಾರ ಆಗ್ಯುಟ್ಟು. ಒಳ್ಳ ಒಂದು ಸಾಂಸಾರಿಕ ಸಂಗತಿನ ಬಾರೀ ಲ್ಯಾಕಲಿ ಓದ್ಸಿಕಂಡ್ ಹೋದೆ. ಅರೆಬಾಸೆನ ಸಾಹಿತ್ಯ ಕ್ಷೇತ್ರಕ್ಕೆ ಇವು ಕೊಟ್ಟ ಕೊಡುಗೆಗೆ ನನ್ನ ಪ್ರೀತಿನ ಅಭಿನಂದನೆ.

– ಎ.ಕೆ. ಹಿಮಕರ.

ನನ್ನೆರ್ಡ್ ಮಾತ್‌ಗ

'ಬೊದ್ಕ್' ನನ್ನ ಸುರುನ ಅರೆಬಾಸೆ ಕಾದಂಬರಿ. ಹೆಸ್ರೇ ಹೇಳ್ವ ಹಾಂಗೆ ಇದರ್ಲಿ ಮ್ಯೊಂಸನ ಬೊದ್ಕ್‌ಲಿ ಬಾವ ಇಸಯಗಳ ಎಲ್ಲಾ ನೆಂಪು ಮಾಡಿಕಂಡ್ ಇದರ ಬರ್ದಳೆ. ನಮ್ಮ ಅರೆಬಾಸೆ ಜನಂಗಳ ಬೊದ್ಕ್‌ಲಿ ಹುಟ್ಟಿದರ್‌ಂದ ಸಾಯಕನ ಮುಟ್ಟ ಏನೇನ್ ನಡ್ದದೆ ಅದರೆಲ್ಲಾ ಈ ಕಾದಂಬರಿಲಿ ತಕಂಡ್ ಬರ್ದಳೆ. ನಾ ಕೂಡು ಕುಟುಂಬಲಿ ಹುಟ್ಟಿ ಬೆಳ್ದ ಹೆಣ್ಣ್. ಅಜ್ಜಪ್ಪ, ಉಗ್ಗವ, ಅಪ್ಪ, ಅವ್ವ, ಅಣ್ಣ, ಅತ್ತಿಗೆ, ಅಕ್ಕಂದರ್, ತಮ್ಮಂದರ್, ಅಣ್ಣನ ಮಕ್ಕ, ಅಕ್ಕಂದರ ಮ್ಕಕಂತೇಳಿ ನಮ್ಮ ಮನೆಲಿ ಯಾಗೋಳೂ ಮನೆ ತುಂಬಾ ಜನಗ, ನೆಂಟ್ರ್‌ಗ ಹೋದು ಬಾದು ಇತ್ತ್. ಮನೆಲಿ ಎಲ್ಲಾ ಸುಬ ಕಾರ್ಯಗ ನಡ್ಯತಿದ್ದೊ. ನಂಗೆ ಅರೆಬಾಸೆ ಜನಂಗಳ ಎಲ್ಲಾ ಸಂಪ್ರಾದಯಗಳ ನೋಡಿ, ನೋಡಿ ರೂಢಿ ಆವುಟು. ಇದರ್‌ಂದಾಗಿ ಬರ್ಯಕೆ ಕಸ್ಟ ಆತ್ಲೆ. ಹೆಣ್ಣ್ ನೋಡ್ದು, ಮೊದ್ವೆ ಮಾಡ್ದು, ಆ ಸಮಯಲಿ ಬರ್ವ ಎಲ್ಲಾ ಕೆಲ್ಸ ಕಾರ್ಯಗ ನಂಗೆ ಸಣ್ಣದರ್‌ಂದಲೇ ನೋಡಿ, ನೋಡಿ ನನ್ನ ಮೊನ್ಸ್‌ಲಿ ಅದ್ ಗಟ್ಟಿಲಿ ಕುದ್ದ್‌ಕಂಡಿತ್ತ್. ಹುಟ್ಟಿದ ಕೂಸುಗೆ ಅಮೆ, ತೊಟ್ಟಿಲಿಗೆ ಹಾಕುದು ನೆರ್ದ ಮೊದ್ವೆ, ಬೊಯ್ಕೆ, ಬೊಸ್ರಿ, ಪೆದ್ದೋಳ್ತಿ ಸಾಂಕುದು ಇದೆಲ್ಲಾ ಈ ಕಾದಂಬರಿಲಿ ಬಂದದೆ. ಇದರೆಲ್ಲಾ ನಾ ಅನ್ಬವಿಸಿ ಬರ್ದವುಳ. ಆದ ಕಾರ್‍ಣ ಇದ್ ನಿಮ್ಮ ಸರಾಗಲಿ ಓದಿಸಿಕಂಡ್ ಹೋದೂಂತ ನಾ ಗ್ರೇಸಿನೆ. ಆದರೆ ಮ್ಯೊಂಸ ಸಾಯಕಾಕನ ಅಂವನ ಹೆಣನ ಸುಡುವ, ಆಗ ಕಾಟದ ಹಕ್ಕಲೆ ನಡ್ಯವ ಕೆಲವು ಕ್ರಮಗ ನಂಗೆ ಅಸ್ಟ್ ಗೊತ್ತಿಲ್ಲೆ. ಅದರ ನಾ ಸುಳ್ಯದ ಗೌಡರ ಯುವ ಸೇನಾ ಸಂಘದೊವು ಶ್ರೀ ದೊಡ್ಡಣ್ಣ ಬರೆಮೇಲೆ ಇವರ ಸಂಪಾದಕತನಲಿ ಹೊರತಂದ 'ಗೌಡರ ಸಂಸ್ಕೃತಿ ಸಿರಿ' ಪುಸ್ತಕದ ಸಾಯಂದ ಬರ್ದೆ. ಅದ್ಕಾಗಿ ನಾ ಅದರ ಸಂಪಾದಕರಿಗೆ ಮತ್ತೆ ಸಂಪಾದಕ ಮಂಡಳಿಯೊವ್ಕೆ ನನ್ನ ಕೃತಜ್ಞತೆನ ಸಲ್ಲಿಸಿನೆ.

ಅರೆಬಾಸೆ ಬರ್ಯೋದು ಬಾಳ ಕಸ್ಟ, ಆದರುನೂ ನಾ ಬರ್ದದರ ಅರ್ತ ಮಾಡಿಕಂಡ್ ಅದರ ಒಂದ್ ಸಾ ತೊಪ್ಪು ಇಲ್ಲದೆ ಪೊರ್ಲುಲಿ ಡಿ.ಟಿ.ಪಿ. ಮಾಡಿಕೊಟ್ಟ ಸುಳ್ಯದ ವಿನೂ ಎಂಟರ್‌ಪ್ರೈಸಸ್‌ನ ಶ್ರೀ ನಾಗೇಶ ರೈ ಮತ್ತು ಶ್ರೀಮತಿ ವಿನೋದಿನಿ ರೈ ದಂಪತಿಗಳಿಗೆ ನಾ ಎಸ್ಟ್ ಕೃತಜ್ಞತೆನ ಹೇಳ್ರೂ ಸಾಲದ್. ಅವ್ಕೆ ನನ್ನ ಕೃತಜ್ಞತೆಗ.

ಅರೆಬಾಸೆ ಅಕಾಡೆಮಿನ ಪ್ರಧಾನ ಸಂಪಾದಕರ್ ಹಾಂಗೆನೇ ಅಧ್ಯಕ್ಷರ್‌ನೂ ಆದ ಪಿ.ಸಿ. ಜಯರಾಂನೊವ್ಕೆ ಮತ್ತೆ ಮುನ್ನುಡಿ ಬರ್ದ್, ಮುಖಪುಟ ವಿನ್ಯಾಸ ಮಾಡ್ದ ಶ್ರೀ ಎ.ಕೆ. ಹಿಮಕರನೊವ್ಕೆ, ವ್ಯವಸ್ಥಾಪಕ ಸಂಪಾದಕಕರಾದ ಶ್ರೀ ಉಮರಬ್ಬನೊವ್ಕೆ, ಅರೆಬಾಸೆ ಅಕಾಡೆಮಿನ ಸರ್ವ ಸದಸ್ಯರಿಗೆ ಹಾಂಗೂ ಇದರ ಮುದ್ರಣ ಮಾಡ್ದ ಶ್ರೀ ಕೃಷ್ಣ ಪ್ರಿಂಟರ್ಸ್, ಮಡಿಕೇರಿನ ಶ್ರೀ ಕೃಷ್ಣನೊವ್ಕೆ ನನ್ನ ಕೃತಜ್ಞತೆಗಳ ಅರ್ಪಿಸಿನೆ.

ಅರೆಬಾಸೆ ಬೆಳ್ಲೊಮೊ.

ಎಂ.ಜಿ. ಕಾವೇರಮ್ಮ
"ನಿಸರ್ಗ" ಮಾವಜಿ, ಸುಳ್ಯ, ದ.ಕ.

"1. ಅಯ್ಯಣ್ಣ ಮಾಸ್ಟ್ರ"

ಆ ಮಟ ಮಟ ಮದ್ಯಾನದ ಒಂದು ಗಂಟೆ ಸಮಯಲಿ ಅಯ್ಯಣ್ಣ ಮಾಸ್ಟ್ರ ತೋಟಂದ ಬಂದವೇ ಕಣ್ಣ್, ಮೂಂಕು, ಬಾಯಿ, ಕೈ ಮೈಯಿಂದ ಇಳ್ಯವ ಬೆಗರ್‌ನ ಹೆಗ್ಲ್ ಮೇಲೆನ ಬೈರಾಸ್‌ಂದ ಒರ್ಸಿಕಂಡ್, ಇಜ್ಜೆಲ್‌ನ ಪುಡೆಲಿದ್ದ ಬಾಮಿ ಕಟ್ಟೆ ಹಕ್ಕಲೆ ಬಂದ್, ಅಲ್ಲೇ ಕೊಟಿಗೆನ ಚಿಂಟೆ ಮೇಲೆ ಕವುಂಚಿ ಇಸಿದ ಪ್ಲಾಸ್ಟಿಕ್ ಕಂದಲ್‌ನ ತಕಂಡ್ ಬಾಮಿ ಬೊಳ್ಳಿನ ಕೊಂಡಿಗೆ, ಕಂದಲ್‌ನ ಕುತ್ತಿಗೆನ ಕೋಸಿ ಬಿಗ್ದ್ ಬಾಮಿಗೆ ಬೊಳ್ಳಿನ ಇಳ್ಸಿ, ಬೊಗ್ಗಿ ನೋಡಿದೊ. ಬಾಮಿಲಿ ಒಂದಾಳ್ ನೀರ್ ಇದ್ದ್, ಬಾಮಿನ ತಳ ಬಿಸ್ಲ್‌ಗೆ ಪಳ ಪಳ ಹೊಳ್ಯತಿತ್ತ್.

"ಕಳ್ದ ವೊರ್ಸ ಈ ಸಮಯಲಿ ಎರ್ಡಾಳ್ ನೀರ್ ಇತ್ತ್. ಒಂದು ಅಡ್ಡ ಹನಿ ಮಳೆನೂ ಈ ವೊರ್ಸ ಸೋಂಕಿತಿಲ್ಲೆ. ಹೀಂಗೆ ಒಂದು ತಿಂಗ ಮಳೆ ಬಾತ್ಲರೆ, ಬಾಮಿ ನೀರ್‌ನೂ ಆರಿ ಹೋಗಿ ಕುಡ್ಯಕೆ ನೀರ್ ಇಲ್ಲದಾದೆ. ಈ ವೊರ್ಸದ ಅರ್ಗಾಲದಸ್ಟ್ ಕಾಚೆಲ್ ಇಸ್ಟ್ ವೊರ್ಸ ಇತ್ಲೆ. ಅಬ್ಬಾ! ಸೆಕೆನೋ? ಮೈಯೆಲ್ಲಾ ಉರಿ ಉರ್ದಾಳ."– ಎಂತ ಮೊನ್ಸ್‌ಲೇ ಹೇಳಿಕಂಡ್ ನೀರ್‌ಲಿ ಕಂತಿದ ಕಂದಲ್‌ನ ದರ ಬರ ಎಳ್ದ್, ಕೋಸಿದ ಬೊಳ್ಳಿನ ಬುಡ್ಸಿದ್ ದಡದಡಾಂತ ತಲೆಂದಳೇ ಮೈಮೇಲೆ ಹ್ಯೊಯ್ಕೊಂಡೊ.

"ಅಬ್ಬಾ, ಹಂಞ ಹಗುರಾತ್ಂತ ಹೇಳಿಕಂಡ್, ಇನ್ನೊಂದು ಕಂದಲ್ ನೀರ್ನ ಎಳ್ದ್‌ದ್ ತಲೆ ಮೇಲೆ ಹ್ಯೊಯ್ಕೊಂಡೊ. ಆಗ ಮೈಯೆಲ್ಲಾ ತೊಂಪಾತ್. ಅಲ್ಲೇ ಇಜ್ಜೆಲ್‌ಲಿ ಆರಿಕೆ ಹಾಕಿದ, ನೇಕೆಲಿದ್ದ ಅರ್‍ವೆಂದ ಒಂದ್ ಬೈರಾಸ್ ತಕಂಡ್ ಮೈ ಎಲ್ಲಾ ಒರ್‍ಸಿ, ಇನ್ನೊಂದ್ ತೋರ್‍ತುನ ತಕಂಡ್ ಸೊಂಟಕ್ಕೆ ಸುತ್ತಿಕಂಡ್, ಸೊಂಟಲಿದ್ದ ಕಂಬ್ಯಾನ ಬಿಚ್ಚಿ ಹಿಂಡಿ, ಒಣ್ಗಿಕೆ ಹಾಕಿದೊ. ಒಳಗೆ ಇದ್ದ ಚಡ್ಡಿ ಮೈ ಬಿಸಿಗೆ ಅಲ್ಲೆ ಒಣ್ಗುದೂಂತ ನೆನ್ಸಿಕಂಡ್ ಮನೆಗೆ ಬಂದ್ ಮೆಟ್ಲ್ ಹತ್ತಿ ಮೊಗಸಾಲೆಗೆ ಬಂದೊ. ಗೋಡೆಲಿದ್ದ ಫೇನ್‌ನ ಸ್ವಿಚ್ಚ್‌ನ ಒತ್ತಿ ಫೇನ್ ಹಾಕಿ, ತಣ್ಣನೆ, ಸಿಮೆಂಟ್ ಹಾಕಿದ ನೆಲಲಿ, ಅಂಗಾತ ಬಿದ್‌ಕಂಡೊ. ಬಿಸ್ಲ್‌ಲಿ ಬೆಂದ್ ಬಂದ ಅವ್ಕೆ ಈಗ ಹಂಞ ಸಮದಾನ ಆತ್.

ಎಜಮಾನ್ರ್ ಒಳಗೆ ಬಂದ ಸದ್ದ್ ಕೇಳಿ, ಅಡ್ಗೆ ಕೋಣೆಲಿದ್ದ ಎಜಮಾನ್ತಿ ಕಮಲಕ್ಕ ಹೊರಗೆ ಬಂದ್,

"ಇದೇನ್ ಹೀಂಗೆ ಬಿದ್‌ಕೊಂಡೊಳರಿ? ಬಾಳ ಸೆಕೆ ಅಲ್ಲ? ಈ ವೊರ್ಸದಷ್ಟ್ ಸೆಕೆ ಇಷ್ಟರವರೆಗೆ ಇತ್ಲೆ. ಕೆಲ್ಸದೊವು ಬಾತ್ಲೆನೋ?"– ಎಂತ ಇಚಾರ್ಸಿದೊ. ಅದ್ಕೆ ಅಯ್ಯಣ್ಣ ಮಾಸ್ಟ್ರ್,

"ಅವುನೂ ನರ ಮೊಂಯಿಸ್ಸರ್ ಅಲ್ಲನೋ? ಈ ಇಳ್ಯವ ಬೆಗ್‌ರ್‌ಲಿ ಹೇಂಗೆ ಉಂಬೊದು? ಅವೆಲ್ಲಾ ಕೆರೆಲಿ ಮಿಂದ್ ಬಾಕೆ ಹೋಗೊಳೊ. ಈಗ ಬಾವೊ. ಗೈಪು ಎಂತ ಮಾಡ್ಯಳ?" – ಎಂತ ಹೆಣ್ಣ್‌ನ ಕೇಳ್ದೊ.

"ಬೊಳ್ಪುಗೆ ಪಾಚು ಒಂದು ಕೈಕುಕ್ಕೆ ಕಾಡ್ ಮಾಯ್ನ ಹಣ್ಣ್‌ನ ತಂದಿತ್ತ್. ಅದರ ಚಂಡ್ರ್‌ಪುಳಿ ಮಾಡ್ಯಳೆ. ನೀವ್ಗೆ ಬಾಯಿ ಸಾಗರಕ್ಕೆ ಹಾಳೆ ಮೀನ್ ಸುಟ್ಟ್ ಗುದ್ದಿ ಹಾಕಿದ ಗೋಟ್ ಕಾಯಿ ಚಟ್ನಿ ಉಟ್ಟು. ಸಾಕಲೆ?" – ಕಮಲಕ್ಕ ಹೇಳ್ದೊ.

"ದಾರಾಳಾತ್. ಈ ಸೆಕೆಲಿ ಉಂಬಕೆ ಆದ್ಲೆ. ಚಂಡ್ರ್‌ಪುಳಿ ಇದ್ದರೆ ಒಂದು ಷುಂಡಿ ಹೆಚ್ಚ್ ಉಣಕ್. ನೀ ಇಕ್ಕಿಸ್. ನಾ ಬನ್ನೆ."– ಮಾಸ್ಟ್ರ್ ಹೇಳ್ದೊ.

ಕಮಲಕ್ಕ ಒಳಗೆ ಹೋಗಿ, ಮೇಜಿನ ಮೇಲೆ ಸ್ಟೀಲ್‌ನ ಬಟ್ಲ್ ಇಸಿದೊ. ಹಂಞ ಹೊತ್ತ್ ಅದರ ನೋಡಿ,

"ಬೇಡ ಬಟ್ಲ್ ಯೇಕೆ? ತೊಳ್ಯವ ಕೆಲ್ಸ. ಬಾಳೆಲೆನೇ ಸಾಕ್" – ಎಂತ ಏಚನೆ ಮಾಡಿ ಬಟ್ಲ್‌ನ ಕರೆಗಿಸಿ, ದೊಡ್ಡ ಕೊಡಿ ಬಾಳೆ ಎಲೆ ಹಾಸಿ, ಅದರ ಪೊರ್‍ಲುಲಿ ನೀರ್ ಚಿಪ್ಪುಸಿ ಒರ್‍ಸಿದೊ. ಅಷ್ಟಾಕನ ಅಯ್ಯಣ್ಣ ಮಾಸ್ಟ್ರ್ ಒಳಗೆ ಬಂದ್, ಮೇಜಿನ ಪಕ್ಕಲಿದ್ದ ಕುರ್ಸಿನ ಎಳ್ದ್ ಇಸಿ ಕುದ್ದ್, ಬಾಳೆಲೆನ ನೋಡಿ,

"ಒಳ್ಳೆದಾತ್. ಬಾಳೆಲೆಲಿ ಉಂಡರೆ ಕಮ್ಮಂಗೆ ಆದೆ. ಇಕ್ಕ್" – ಎಂತ ಹೇಳ್ದೊ.

ಕಮಲಕ್ಕ ಅಡ್ಗೆ ಕೋಣೆಂದ ತಪಲೆಲಿ ಹುಗ್ಗೆನ ತಂದ್ ಮೂರ್ನಾಕ್ ಸೆಡೆ ಇಕ್ಕಿದೊ.

"ಸಾಕ್ ಸಾಕ್. ಬೇಕರೆ ಮತ್ತೆ ಕೇಳ್ನೆ"– ಎಂತ ಗೌಡ್ರು ಕೈ ಅಡ್ಡ ಹಿಡ್ದೊ. ಅದರ ಮೇಲೆ ಗೋಂಚಿ, ಗೋಂಚಿ, ಎರ್ಡ್ ಸೆಡೆ ಚಂಡ್ರ್‌ಪುಳಿನ ಮೂರ್ನಾಕ್ ಮಾಯ್ನ ಗೊರ್‌ಂಟ್‌ನೊಟ್ಟಿಗೆ ಕಮಲಕ್ಕ ಇಕ್ಕಿದೊ.

ಗೌಡ್ರ್ ಕಣ್ಣ್ ಮುಚ್ಚಿ, ತಿರ್ಪತಿ ತಿಮ್ಮಪ್ಪಾಂತ ನೆನ್ಸಿ, ಒಂದು ಮುದ್ದೆ ಹುಗ್ಗೆನ ಚಂಡ್ರ್‌ಪುಳಿಲಿ ಕಲ್ಸಿ, ಎಲೆನ ಕೊಡಿಲಿ ಇಸಿ, ಉಂಬಕೆ ಸುರು ಮಾಡ್ದೊ. ಮಾಯ್ನ ಗೊರ್‌ಂಟ್‌ನ ಚೀಂಪಿ,

"ಒಳ್ಳೆ ಸಿಂಯಿ ಉಟ್ಟುನೆ. ಚಂಡ್ರ್ ಪುಳಿ ಲಾಯ್ಕಾಗುಟ್ಟು" ಎಂತ ಹೆಣ್ಣ್‌ಗೆ ಹೇಳ್ದೊ.

ಕಮಲಕ್ಕ ಒಳಗೆಂದ ತಂದ ಹಾಳೆ ಮೀನ್ ಸುಟ್ಟ್ ಹಾಕಿದ ಗೋಟ್ ಕ್ಯಾ ಚಟ್ನಿನ ಎರ್ಡ್ ಸವುಂಟು ಇಕ್ಕಿದೊ ಅದರ ತಿಂದ್

"ಇದ್ ನಿನ್ನೆ ಮಾಡ್ದ್ ಅಲ್ಲ? ನಿನ್ನೆಂದ ಇಂದ್ ಲಾಯ್ಕಾಗುಟ್ಟು. ಇನ್ನ್ ಒಂದು ಸೆಡೆ ಹುಗ್ಗೆತಾ"– ಎಂತ ಹೇಳ್ದೊ.

ಕಮಲಕ್ಕ ಹುಗ್ಗೆ ತಂದ್ ಇಕ್ಕಿ ಒಂದು ಚೊಂಬುಲಿ ನೀರ್ ಮಜ್ಜಿಗೆ ತಂದಿಸಿದೊ. ಉಂಡ್, ನೀರ್ ಮೊಜ್ಜಿಗೆ ಕುಡ್ದ್ ಗೌಡ್ರ್ ಎದ್ದ್ ಕೈ ಬಾಯಿ ತೊಳ್ದ್, ನೊಡು ತಿಣೆಗೆ ಬಂದ್ ಫೇನ್ ಹಾಕಿ,

"ಹಂಞ ಕಣ್ಣ್ ಅಡ್ಡ ಹಾಕಿನೆ" – ಎಂತ ಹೇಳಿ ನೆಲಲಿ ಬಿದ್ದ್ ಕೊಂಡೊ. ಅಸ್ಪಾಕನ ತೋಟಂದ ಅಡ್ಕೆ ತೆಗ್ಯತಿದ್ದ ಕೆಲ್ಸದೊವು ಒಬ್ಬೊಬ್ಬನೇ ಬಾಕೆ ಸುರು ಮಾಡ್ದೊ. ಮೂರು ಜನ ತೆಗ್ಯಕೆ, ಆರ್ ಜನ ಹೆರ್ಕಿಕೆ, ನಾಕ್ ಜನ ಹೊರಿಕೇಂತ ಒಟ್ಟು ಹದಿಮೂರು ಜನ ಕೆಲ್ಸದೊವು ಇದ್ದೊ. ಅವೆಲ್ಲಾ ಕೆರೆಲಿ ಮಿಂದ್, ಉಟ್ಟಿ ಅರ್ವೆನ ಹಿಂಡಿ, ಅದರನೇ ಸುತ್ತಿಕಂಡ್, ಮನೆಗೆ ತಾಂಗಿಕಂಡ್ ಇದ್ದ ಕೊಟೆಗೆನ ಕೈ ಸಾಲೆಗೆ ಬಂದೊ.

"ಕುಂಞಣ್ಣ ಮೇಜಿನ ಮೇಲೆ ಹುಗ್ಗೆ ಗೈಪು ಇಸ್ಯಳೆ. ತಕಂಡೋಗು"– ಎಂತ ಕಮಲಕ್ಕ ಕರ್ದ್ ಹೇಳ್ದೊ.

"ಬಂದೆವ್ವಾ"– ಎಂತ ಹೇಳಿ ಕುಂಞಣ್ಣ ಬಂದ್ ಬೆತ್ತದ ಹೆಡೆಗೆಲಿ ಇಸಿದ ಹುಗ್ಗೆನನೂ, ತಪಲೆಲಿ ಇಸಿದ ಚಂಡ್ರ್‌ಪುಳಿನನೂ ತಂಕಂಡೋತ್. ಕೆಲ್ಸದೊವ್ಕೆಲ್ಲಾ ಚಂಡ್ರ್‌ಪುಳಿ ನೋಡಿ ಕುಸಿ ಆತ್. ಇಂದ್ ಒಂದು ಪುಂಡಿ ಹೆಚ್ಚ್ ಉಣಕ್‌ಂತ ನೆನ್ಸಿಕಂಡ್ ಕೆಲ್ಸದೊವು ಬಾಳೆಲೆ ಹಾಕಂಡ್ ಕುದ್ದೊ. ಕುಂಞಣ್ಣ ಅವ್ಕೆಲ್ಲಾ ಇಕ್ಕಿತ್.

ಅಸ್ಪಾಕನ ಕಮಲಕ್ಕ ಒಳಗೆಂದ ಗೋಟ್ ಕ್ಯಾ ಚಟ್ನಿನ ತಂದ್ ಎಲ್ಲೋವ್ಕೂ

ಒಂದೊಂದು ಸವುಂಟು ಇಕ್ಕಿದೊ. ಎಜಮಾನ್ರಿಗೆ ಮಾಡ್ದರ್ಲಿ ನಾವ್ಗನೂ ಪಾಲ್ ಸಿಕ್ಕಿತ್‌ಂತ ಕೆಲ್ಸದೊವ್ಕೆ ಕುಸಿ ಆತ್. ಒಂದು ಸಣ್ಣ ನಿದ್ದೆ ತೆಗ್ಯಕೆ ಅವು ಅಲ್ಲಲ್ಲೇ ಅಡ್ಡಾದೊ.

ಅಯ್ಯಣ್ಣ ಮಾಸ್ಟ್ರ ಎದ್ದ್ ನೋಡಿಕನ ಗಂಟೆ ಎರ್ಡ್‌ವರೆ ಕಳ್ದಿತ್ತ್. ಕೆಲ್ಸದೊವು ತೋಟಕ್ಕೆ ಹೋಗೋಳೊನೋ? ಇಲ್ಲೆ ಇನ್ನೂ ನಿದ್ದೆ ಮಾಡುವೆನೋಂತ ಕೊಟಗೆಗೆ ಹೋಗಿ ನೋಡ್ದೊ. ಅವು ಆಗಳೇ ಎದ್ದ್ ತೋಟಕ್ಕೆ ಹೋಗಿದ್ದೊ. ಮಾಸ್ಟ್ರಿಗೆ ಸಮದಾನ ಆತ್.

"ಕುಂಞಣ್ಣ ಇರಿಕನ ನಂಗ್ಯಾಕೆ ಚಿಂತೆ? ಅಂವ ಕೆಲ್ಸದೊವರ ಸರ‍್ಯಾಗಿ ನೋಡಿಕಂಡದೆ." – ಎಂತ ಮಾಸ್ಟ್ರ ಮೊನ್ಸಿಲ್ ನೆನ್ಸಿಕಂಡ್, ಹೆಣ್ಣ್‌ನೊಟ್ಟಿಗೆ,

"ಇಂದನೆ, ನಾ ತೋಟಕ್ಕೆ ಹೋನೆ" – ಎಂತ ಹೇಳ್ದೊ.

"ನಿಲ್ಲಿ. ಬಂದೆ"– ಎಂತ ಹೇಳಿ ಕಮಲಕ್ಕ ಸೆರ್‌ಂಗ್‌ನ ಕೊಡಿನ ಮೊಡ್ಚಿ, ಅದರ ಮೇಲೆ ಇಸಿದ ಒಂದ್ ಗ್ಲಾಸ್ ಚಾ ತಂದ್ ಗಂಡನ ಮುಂದೆ ಹಿಡ್ದೊ.

"ಒಳ್ಳೆದಾತ್. ನಾನೇ ಕೇಳೊಕೂಂತ ಇದ್ದೆ." – ಎಂತ ಹೇಳಿ ಚಾನ ಉರ್ಗಿ ಉರ್ಗಿ ಕುಡ್ಯಕೆ ಸುರುಮಾಡ್ದೊ.

"ಮನೆ ಎದ್ರ್‌ನ ತೋಟ ಇಂದ್‌ಗೆ ಆದೋ" ಕಮಲಕ್ಕ ಕೇಳ್ದೊ. ಅದಕ್ಕೆ ಮಾಸ್ಟ್ರ,

"ಇಲ್ಲೆನೆ. ನಾಳೆನೂ ತೆಗ್ಯಕಾದು." ಎಂದೊ. "ಹಂಗಾರೆ ಬೈಲ್‌ನ ತೋಟಕ್ಕೆ ಸಾ ಎರ್ಡ್ ದಿನ ಬೇಕಾದು" ಕಮಲಕ್ಕ ಹೇಳ್ದೊ.

"ಹೂಂ. ಏನ್ ಮಾಡ್ದು? ನಾವು ಒಟ್ಟಿಗೆ ಇದ್ದರೇ ಹೀಂಗೆ, ಇನ್ನ್ ಅವ್ರ ಸ್ವಾದೀನ ಬುಟ್ಟರೆ ನಾಕ್ ದಿನ ಮಾಡ್ದೊ" ಎಂತ ಹೇಳಿ ಚಾ ಕುಡ್ದ ಗ್ಲಾಸ್‌ನ ಹೆಣ್ಣ್‌ನಕ್ಕಲೆ ಕೊಟ್ಟ್ ಮಾಸ್ಟ್ರ ತೋಟಕ್ಕೆ ಹೊರ್ಟೋದೊ.

ಅಷ್ಟರ್ಲಿ ಅಡ್ಗೆ ಕೋಣೆಲಿ ಇಸಿದ ಮೊಬ್ಯಾಲ್ ರಿಂಗ್ ಆತ್. ಕಮಲಕ್ಕ ಬೇಗ ಬೇಗ ಹೋಗಿ ಮೊಬ್ಯಾಲ್ ತಕಂಡೊ.

"ಹಲೋ, ಹಲೋ" ಕಮಲಕ್ಕ ಹೇಳ್ದೊ. "ಅವ್ವಾ, ನಾ ಸುರೇಶ ಮಾತಾಡ್ದು. ನಾ ನಾಳ್ದ್ ಐತ್ವಾರ ಬನ್ನೆ. ಒಂದ್ವಾರ ರಜೆ ಮಾಡ್ಯಳೆ. ನಿಮ್ಮ ನೋಡೊಕೂಂತ ಗೇನ ಆದೆ." ಎಂತ ಹೇಳ್ತ್. "ಒಳ್ಳೆದಾತ್ ಮಂಜ. ನಿನ್ನ ಅಪ್ಪನೂ ಹೇಳ್ತಿದ್ದೊ. ಮಕ್ಕ ಬಾರದೆ ಎರ್ಡ್ ಮೂರ್ ತಿಂಗ ಆತಲ್ಲಾಂತ ನಂಗೂ ಆಗಾಗ ನಿನ್ನ ನೆಂಪಾಗ್ತಿತ್ತ್." ಎಂತ ಕಮಲಕ್ಕ ಹೇಳ್ದೊ.

"ಗಿರೀಶ ಫೋನ್ ಮಾಡಿತ್ತಾ? ಅಂವ ಯಾಗ ಬಂದದೆ ಗಡ? ನಾ ಬಾಕನ ಅಂವನೂ ಬಾತಿದ್ದರೆ ನಂಗೂ ನೋಡ್ದಾಂಗೆ ಆಗ್ತಿತ್ತ್."

"ಅಂವ ನಿನ್ನೆ ಫೋನ್ ಮಾಡಿತ್ತ್. ಅಂವಂಗೆ ಈ ತಿಂಗ ಬಾಕೆ ಆದುಲ್ಲೆ ಗಡ. ಬರ್‍ವ ತಿಂಗ ಬನ್ನೇಂತ ಹೇಳ್ತ್ ಹಾಂಗೇ ನೀ ಹೋಕಾಕನ ಅಂವನ ನೋಡಿಕಂಡೇ ಹೋಗು"

"ಆತವ್ವಾ, ಹಾಂಗೇ ಮಾಡ್ನೆ" ಸುರೇಶ ಫೋನ್ ಇಸಿತ್.

ಅಯ್ಯಣ್ಣ ಮಾಸ್ಟ್ರ ಗುತ್ತಿಗಾರ್ ಸಾಲೆಲಿ ಮಾಸ್ಟ್ರ ಆಗಿದ್ದೊ. ಅವರ ಅಪ್ಪ ಚಾಮಯ್ಯ ಗೌಡ್ರ ವಿಟ್ಲ ಕಡೆಂದ ಬಂದೊವು. ಅವರ ಅಣ್ಣ ತಮ್ಮಂದರಿಗೆ ಪಾಲಾಕನ ಇವರ ಪಾಲಿಗೆ ಬಂದ ಆಸ್ತಿನ ಅಣ್ಣಂದರಿಗೆ ಮಾರಿ, ಸುಳ್ಯ ತಾಲೂಕ್‌ನ ಪಂಬೆತ್ತಾಡಿಗೆ ಬಂದ್, ಅಲ್ಲಿ ಆಸ್ತಿ ತೆಗ್ದೊ. ಅದ್ ಬಟ್ರ್‌ಗಳ ಆಸ್ತಿ. ಅವರ ಮಕ್ಕ ಎಲ್ಲಾ ಕಲ್ತ್, ದೊಡ್ಡ ದೊಡ್ಡ ಉದ್ಯೋಗಲಿ ಪರದೇಸಲಿ ಇದ್ದೊ. ಆಸ್ತಿ ನೋಡಿಕಂಬೊವು ಇಲ್ಲದೆ ಅದ್ ಹಡಿಲ್ ಬಿದ್ದಿತ್ತ್. ಅದರ್‌ಂದ ಚಾಮಯ್ಯ ಗೌಡ್ರಿಗೆ ಅಷ್ಟ್ ದೊಡ್ಡ ಆಸ್ತಿ ಸುಲಬಲಿ ಸಿಕ್ಕಿತ್. ಬಟ್ರ್‌ಗ ಕಟ್ಟಿದ ಉಪ್ಪರಿಗೆ ಮನೆ ಹಳೆ ಕಾಲದ್ ಆದರೂ ಒಳ್ಳೆ ಮರ ಮುಟ್ಟು ಹಾಕಿ ಗಟ್ಟಿ ಮುಟ್ಟಾಗಿತ್ತ್. ಇನ್ನ್ ಐವತ್ತ್ ವೊರ್ಸಕ್ಕೆ ಅದರ್ಲಿ ಇರಿಕೆ ಮೋಸ ಇಲ್ಲೆ. ಹಟ್ಟಿ, ಕೊಟಗೆಗೆ ಎಲ್ಲಾ ಬಾರೀ ಲಾಯ್ಕಾಗಿತ್ತ್. ಚಾಮಯ್ಯ ಗೌಡ್ರಿಗೆ ಅಯ್ಯಣ್ಣ ಗೌಡ್ರ ಒಬ್ಬನೇ ಮಂಜ. ಅವರ್‌ಂದ ಮೇಲೆ ಎರ್ಡ್ ಜನ ಹೆಣ್ಣ್ ಮಕ್ಕ. ಪಂಬೆತ್ತಾಡಿಗೆ ಬಾಕಾಕನ ಮಕ್ಕ ಎಲ್ಲಾ ಹೈಸ್ಕೂಲು ಒದ್ತಿದ್ದೊ. ಮಕ್ಕಳ ಪಂಜ ಹೈಸ್ಕೂಲಿಗೆ ಸೇರ್ಸಿ, ಮಗಕ್ಕಳ ಎಸ್.ಎಸ್.ಎಲ್.ಸಿ ಮುಟ್ಟ ಓದಿಸಿ ಮೊದ್ವೆ ಮಾಡ್ಸಿದೊ. ಮಂಜನ ಮಾತ್ರಾ ಸುಳ್ಯದ ನೆಹರೂ ಮೆಮೊರಿಯಮ್ ಕಾಲೇಜಿಗೆ ಪಿ.ಯು.ಸಿಗೆ ಸೇರ್ಸಿದೊ. ಓದದರ್ಲಿ ಆರಕ್ಕೂ ಏರದೆ ಮೂರಕ್ಕೂ ಇಳ್ಯದೆ ಪಾಸಾಗ್ತಿತ್. ಹಂಗಾಗಿ ಇಂವನ ಹೆಚ್ಚಿಗೆ ಓದಿಸಿ ಪ್ರಯೋಜನ ಇಲ್ಲೇಂತ ಪಿ.ಯು.ಸಿ ಆಕನ ಮಂಗ್ಳೂರ್‌ಗೆ ಕಳ್ಸಿ ಟೀಚರ್ ಟ್ರೈನಿಂಗ್ ಮಾಡ್ಸಿ, ಗುತ್ತಿಗಾರ್ ಸಾಲೆಲಿ ಮಾಸ್ಟ್ರ ಕೆಲ್ಸಕ್ಕೆ ಸೇರ್ಸಿದೊ. ಕೆಲ್ಸಕ್ಕೆ ಸೇರ್ಸಿ ಎರ್ಡ್ ವೊರ್ಸಲಿ, ವಿಟ್ಲದ ಕಡೆಂದಳೇ ಹಳೆ ಸಂಬಂದದ ಹೆಣ್ಣ್‌ನೊಟ್ಟಿಗೆ ಮೊದ್ವೆನ ಮಾಡ್ಸಿದೊ. ಕಮಲಕ್ಕನೂ ಎಸ್.ಎಸ್.ಎಲ್.ಸಿ ಮುಟ್ಟ ಓದಿದ ಗೂಡೆನೆ. ಹಳ್ಳಿನ ಕೃಷಿ ಕೆಲ್ಸಲಿ ಪಳ್ಗಿದ ಹೆಣ್ಣ್ ಬೇಗ ಮನೆಗೆ ಹೊಂದಿಕಂಡತ್.

ಇವರ ಸುಕದ ಸಂಸಾರಕ್ಕೆ ದೈವದ ಅಗ್ರಗಣ್ಣ್ ಬೀತ್. ಚಾಮಯ್ಯ ಗೌಡ್ರು ಮತ್ತೆ ಅವರ ಹೆಣ್ಣ್ ಒಮ್ಮೆ ತರವಾಡ್ ಮನೆ ವಿಟ್ಲಕ್ಕೆ ಹೋಗಿ ಬಾಕಾಕನ ಏಕ್ಸಿಡೆಂಟ್ ಆಗಿ ಗಂಡ-ಹೆಣ್ಣ್ ಇಬ್ರೂರೂ ಸತ್ತೋದೊ. ಐಯ್ಯಣ್ಣ ಗೌಡ್ರಿಗೆ ತಲೆ ಮೇಲೆ ಆಕಾಸ ಬಿದ್ದಂಗಾತ್. ಅಪ್ಪ- ಅವ್ವನ ನೆನ್ಸಿಕಂಡ್ ಬಾಳ ಮೊರ್‍ದೊ. ಕಾಲ ಸಂದ ಹಾಂಗೆ ಸಮದಾನ ಆತ್. ಆಸ್ತಿ ಬೊದ್ಕು ನೋಡಿಕಂಬಕೆ ಕಷ್ಟ ಆದೇಂತ ಕೆಲ್ಸಕ್ಕೆ ರಾಜಿನಾಮೆ ಕೊಟ್ಟೊ. ಜಾಗೆ ಏನೊ ಕಾನ ಬಾಣೆ ಸೇರಿ ಇಪ್ಪತ್ತ್ ಎಕ್ರೆ ಇತ್ತ್. ಅದರ್ಲಿ ಪಸ್‌ಲ್ ಬಾವ ಎರ್ಡ್ ಸಾವ್ರ ಕೊಟ್ಟೆ ಕಮ್ಮುಗ ಇದ್ದೊ. ಚಾಮಯ್ಯ ಗೌಡ್ರ

ಬಂದ ಮೇಲೆ ಕೊಟ್ಟೆ ಕಮ್ಮುದ ಎಡೆಲಿ ದೈಕಮ್ಮುಗಳ ಎಡೆದೈ ಹಾಕಿ ಸಾಕಿದೊ. ಈಗ ಅವ್ಕೆ ಇಪ್ಪತ್ತ್ ಕಂಡಿ ಅಡ್ಕೆ ಬಂದದೆ. ಒಂದು ನೂರು ಚಾಳೆ ದೈಗ, ಕೊಕ್ಕೊ, ಬಾಳೆ ಹಾಕಿದೊ. ಖರ್ಚಿಗೆ ಸಾಕಾಗಿ ಮಾರುವಸ್ಟ್ ಒಳ್ಳೆ ಮೆಣ್ಸ್‌ನೂ ಬಾತಿತ್.

ಅಯ್ಯಣ್ಣ ಮಾಸ್ತ್ರಿಗೆ ಇಬ್ಬೊರು ಗಂಡ್ ಮಕ್ಕ. ಸುರೇಶ ಮತ್ತೆ ಗಿರೀಶ. ಮಕ್ಕಳ ಕಾಲೇಜ್ ಶಿಕ್ಷಣ ಸುಳ್ಯದ ನೆಹರೂ ಮೆಮೊರಿಯಲ್ ಕಾಲೇಜ್‌ಲಿ ಆತ್. ದೊಡ್ಡಂವ ಬಿ.ಕಾಂ. ಮಾಡಿ ಮಂಗ್ಳೂರ್‌ಲಿ ಎಂ.ಕಾಂ. ಮಾಡ್ತ್. ಅಂವಂಗೆ ಕೆನರಾ ಬ್ಯಾಂಕ್‌ಲಿ ಕೆಲ್ಸನೂ ಸಿಕ್ಕಿತ್. ಅಂವ ಈಗ ಹುಬ್ಬಳ್ಳಿಲಿ ಉಟ್ಟು. ಎರಡ್ನೇಂವ ಗಿರೀಶ ಬಿ.ಯಸ್ಸಿ ಮಾಡಿ ಧಾರವಾಡಲಿ ಕೃಷಿ ಸಂಬಂಧಪಟ್ಟ ಕೋರ್ಸ್ ಮಾಡಿ ಚಿಕ್ಕಮಗಳೂರ್‌ಲಿ ಕೃಷಿ ಇಲಾಖೆಲಿ ಕೆಲ್ಸಕ್ಕೆ ಸೇರ್ತ್.

* * * * *

2. "ಮಂಜ ಬಾತ್"

ಸೋಮವಾರ ದಿನ ಸುರೇಶ ಬಂದದೇಂತ ಕೇಳಿ ಅಯ್ಯಣ್ಣ ಗೌಡ್ರಿಗೆ ತುಂಬಾ ಸಂತೋಸ ಆತ್. ಹೆಣ್ಣ್‌ನೊಟ್ಟಿಗೆ,

"ಮಂಜ ಬಾಕನ ಆ ದೊಡ್ಡ ಕರಿಬೊಳ್ಳೆ ಹುಂಜನ ಕೊಂದ್ ಗೈಪು ಮಾಡಿಸ್. ಅವಂಗೆ ನಾಟಿ ಕೋಳಿ ಗೈಪುಂತೇಳ್ರೆ ಬಾಳ ಕುಸಿ. ಹಾಂಗೆ ಪೊಕ್ಕುದ ರೊಟ್ಟಿನನೂ ಮಾಡ್. ನಾ ಎಲ್ಯಾದರ್ ಹಂದಿ ಬೊಡ್ಡವೇನೋಂತ ಇಚಾರ್ಸಿನೆ. ಸಿಕ್ಕಿರೆ ಎರ್ಡ್ ಕೆ.ಜಿ. ತನ್ನೆ"– ಎಂತ ಹೇಳ್ದೊ.

ಕಮಲಕ್ಕಂಗೆ ಸಡ್ಗರನೋ ಸಡ್ಗರ. ಮಂಜ ಬಂದದೆ. ಅಂವ ಹೋಕನ ಮುಟ್ಟ ಅಂವನ ಹೊಟ್ಟೆಗೆ ಸರಿಯಾಗಿ ರುಚಿನ ಅಡ್ಗೆ ಮಾಡಿ ಇಕ್ಕೊಕು. ಪಾಪ, ಅಲ್ಲಿ ಹೋಟ್ಲ್‌ಲಿ ತಿಂದ್ ಅಂವನ ಬಾಯಿ ಕೆಟ್ಟ್ ಹೋಗಿರ್‍ದಂತ ನೆನ್ಸಿಕಂಡ್ ಐತ್ವಾರ ಇರ್‍ನೇ ಬೆಳ್ತಕ್ಕಿ, ಕುಸ್ಲಕ್ಕಿ ಸಮ ಸಮ ಎರ್ಡ್ ಸೇರಕ್ಕಿ ನೀರ್‌ಲಿ ಹಾಕಿಸಿದೊ. ಸೋಮಾರ ಅದರ ನುಣ್ಣಂಗೆ ಕಡ್ಡ್ ಮಾಜಿಸಿ ಇಸಿದೊ. ಮಂಜ ಬಂದ ಮೇಲೆ ಬಿಸಿ, ಬಿಸಿ ರೊಟ್ಟಿ ಮಾಡಿ ಕೊಡೊಮೋಂತ ನೆನ್ಸಿಕೊಂಡೊ. ಕೋಳಿ ಮಾಸಕ್ಕೆ ಹುಳಿ ಮೆಣ್ಸ್ ಕಡ್ಯಕೆ ಒಂದು ಇಪ್ಪತ್ತೈದ್ ಒಡ್ಡಿ ಊರ್‌ಮೆಣ್ಸ್‌ನ ತೊಟ್ಟ್ ತೆಗ್ದ್ ಎಣ್ಣೆಲಿ ಹಾಕಿ ಹೊರ್ದ್ ಇಸಿದೊ.

ಕೊತ್ತೆಂಬೆರಿ, ಎರ್ಡ್ ಪುಂಡಿ, ಜೀರಿಗೆ ಹಂಜ ತಕಂಡ್ ಬೇರೆ ಬೇರೆ ಹೊರ್ದಿಸಿದೊ. ಅರ್ಧ ಗಡಿ ಕಾಯೆನ ಹೆರ್ದ್ ಅದರ ಬಾಣೆಲೆಲಿ ಹಂಞಾ ಎಣ್ಣೆ ಹಾಕಿ, ಕೆಂಪಾಕನ ಮುಟ್ಟ ಹೊರ್ಕೊಂಡೊ. ಅದರೊಟ್ಟಿಗೆ ಒಂದು ಗೆಂಡೆ ನೀರುಳ್ಳಿನ ಕೊಯ್ದ್ ಹಾಕಿ ಹೊರ್ದೊ. ನೋಡ್ರೆ ಕರೆಂಟ್ ಕೈ ಕೊಟ್ಟುಟು. ಇನ್ ಕಡ್ಕಲೇ ಗತೀಂತ, ಕಡ್ಕಲ್‌ನ ಪೊರ್‍ಲುಲಿ ತೊಳ್ದ್ ಹುಳಿ ಮೆಣ್ಸ್ ಕಡ್ಯಕೆ ಕುದ್ದೊ. ಹೊರ್ದ ಮೆಣ್ಸ್, ಹೊಡಿ ಹುಳಿ, ಅರ್ಶಿಣ ಸೇರ್ಸಿಕಂಡ್ ಕಡ್ಯಕೆ ಸುರುಮಾಡ್ಡೊ.

ಕುಂಞಣ್ಣ ಹುಂಜನ ಕೊಂದ್, ತೊಪ್ಪು ತೆಗ್ದ್ ನೀರೆಡಿ ಒಲೆಲಿ ಕಾಸಿ, ಕರಿಂಟಿದ ತೊಪ್ಪುಗಳ ಎಲ್ಲಾ ಪೊರ್ಲುಳಿ ತೆಗ್ದ್ ಅಕ್ಕಿ ಹೊಡಿ ಮತ್ತೆ ಅರ್ಶಿಣ ಹೊಡಿ ಒಟ್ಟಿಗೆ ಹಾಕಿ, ಅದರ ಹಂಞಾ ನೀರ್‌ಲಿ ಕಲ್ಸಿ ಅದರ್ಲಿ ಕಾಸಿದ ಕೋಳಿನ ಮೈಗೆ ಉಜ್ಜಿ ಉಜ್ಜಿ ಬೆಳ್ಳಂಗೆ ಮಾಡಿ ಮನಾರ ಮಾಡ್ತ್. ಬೀಸ್ಕತ್ತಿಲಿ ಗೀಸಿ, ಗೀಸಿ, ತೊಳ್ತ್. ಆ ಮೇಲೆ ಕೋಳಿನ ಕೊಯಿದ್ ಮಾಸ ಮಾಡಿ ಪೊರ್ಲ್‌ಲಿ ತೊಳ್ತ್. ಕನು, ಕರ್ಯಟನ ಬೇರೆ ಇಸಿತ್. ಪಲ್ಲೆಕ್ಯಾನ ಬುಡ್ಸಿ, ಅದರೊಳಗಿದ್ದ ತಿನ್ಸ್‌ನ ಚೀಲನ ತೆಗ್ದ್ ಬೀಸಾಡ್ತ್. ತೊಡೆ, ಕಾಲ್, ರೆಂಕೆ, ಬೆನ್ನ ಬಾಗ, ಹೊಟ್ಟೆ ಬಾಗನ ತೆರಿಮಣೆ ಮೇಲೆ ಇಸಿ ತರ್ತ್. ಎಜಮಾನ್ತಿನೇ ಬೇಕಾದಂಗೆ ತುಂಡು ಮಾಡಿಕಣಲೀಂತ ಅದರ ಅಡ್ಕೆ ಹಾಳೆಲಿ ಹಾಕಿ ತಂದ್ ಅಡ್ಗೆ ಕೋಣೆಲಿ ಇಸಿತ್.

"ಅವ್ವಾ, ಮಾಸ ಸಜ್ಜಿ ಮಾಡಿ ತಂದಳೆ. ನೋಡಿಕಣಿ. ಕೊತ್ತಿ, ಗಿತ್ತಿ ಬಾಯಿ ಹಾಕುದು" ಎಂತ ಕರ್ದ್ ಹೇಳ್ತ್. ಕಮಲಕ್ಕ ಹುಳಿ ಮೆಣ್ಸ್ ಕಡ್ಯತಿದ್ದೊವು ಎದ್ದ್ ಬಂದ್, ದೊಡ್ಡ ತಪಲೆನ ಮಾಸದ ಮೇಲೆ ಕಂಕಣಿ ಹಾಕಿ, ಅದರ ಮೇಲೆ ಒಂದು ಮಣೆನ ಇಸಿದೊ. ಕೊತ್ತಿ ಮಾಸದ ಮೂರಿಗೆ ತಪಲೆನ ಹೊಣ್ಕಿಸಿಕೆ ಬೊತ್ತದಲೇಂತ ಏಚನೆ ಮಾಡ್ಡೊ.

ಹುಳಿ ಮೆಣ್ಸ್ ನುಣ್ಣಂಗೆ ಅರ್ದ್ ಕಡ್ದ್ ತೆಗ್ದ್, ಹಂಞಾ ನೀರ್‌ಲಿ ಕಡ್ಕಲ್‌ನ ತೊಳ್ದ್, ಆ ನೀರ್‌ನ ಹುಳಿ, ಮೆಣ್ಸ್ ಪಾತ್ರಕ್ಕೆ ಹಾಕಿಸಿದೊ. ಹೊರ್ದ ಕಾಯಿ ಹೂ, ನೀರುಳ್ಳಿನ ಕಡ್ಕಲಿಗೆ ಹಾಕಿ ಅದರೊಟ್ಟಿಗೆ ಹೊರ್ದ್ ಇಸಿದ ಕೊತ್ತೆಂಬೆರಿ, ಜೀರಿಗೆನನೂ ಹಾಕಿದೊ. ಒಂದು ಐದಾರ್ ಎಸಳ್ ಬೆಳುಳ್ಳಿನ ಚೋಲಿ ತೆಗ್ದ್ ಅದ್ಕೆ ಸೇರ್ಸಿ, ಹನೀಸ್ ಅರ್ಶಿಣ ಹೊಡಿ ಹಾಕಿ ಕಡ್ಯಕೆ ಕುದ್ದೊ. ಅಸ್ಟಾಕನ ಸೊಪ್ಪುಗೆ ಹೋದ ಸುಂದರಿ ಬಾತ್. ಅದ್ ಎಜಮಾನ್ತಿ ಒಟ್ಟಿಗೆ,

"ಅವ್ವಾ, ಹಟ್ಟಿಗೆ ಸೊಪ್ಪು ಹಾಕಳೆ. ನೀವು ಎದ್ರಿನಿ ನಾ ಕಡ್ಡನೆ" ಎಂತ ಹೇಳ್ತ್.

"ಇದರ ನಾ ಕಡ್ದ್ ತೆಗ್ಗನೆ. ನೀ ಎರ್ಡ್ ಕಾಯೆನ ಹೆರ್ದ್ ಕಾಯಿ ಹಾಲ್ ತೆಗಿ. ಆಂಬ್ರಕ್ಕೆ ಬೇಕ್. ಇಂದಾ ನೀ ಹೋಗಿ ಕೈಕಾಲ್ ಪೊರ್ಲು ಸಾಬಾನ್ ಹಾಕಿ

ತೊಳ್ದ್ ಬಾ. ಅರ್ರು ಕಡ್ಯಕನ ಕೈಲಿ ತುಗ್ಯಬಡ. ಇಂದಾ ನೀ ಹಾಳೆ ಕಡ್ಡಿಲಿ ತುಗ್ಯೊಕು ಬಲಾ"– ಎಂತ ಅವು ತುಗ್ಯತಿದ್ದ ಹಾಳೆ ಕಡ್ಡಿನ ಅದ್ಕೆ ತೋರ್ಸಿ ಹೇಳ್ದೊ.

"ನಂಗೆ ಗೊತ್ತಿಲ್ಲೆನೊ ಅವ್ವಾ, ನೀವು ಬಾಳ ಮನಾರದೊವೂಂತ. ನೀವೇಳ್ದಾಂಗೇ ಮಾಡ್ನೆ"– ಎಂತ ಸುಂದರಿ ಹೇಳಿ ಕೊಟಗೆಗೆ ಕೈಕಾಲ್ ತೊಳ್ಯಕೆ ಹೋತ್.

ಕಮಲಕ್ಕ ಹೊರ್ದ ಕಾಯೆ ಅರ್ರುನ ಇನ್ನೊಂದು ಪಾತ್ರಕ್ಕೆ ತೆಗ್ದ್, ಕಡ್ಕಲ್ ತೊಳ್ದ್, ಆ ನೀರ್‌ನಸ ಚೊಂಬುಗೆ ಹಾಕಿ, ಅದರೆಲ್ಲ ತಕಂಡ್ ಅಡ್ಗೆ ಕೋಣೆಗೆ ಹೋದೊ.

ಹಾಳೆಲಿದ್ದ ಮಾಸನ ಬೇಕಾದಂಗೆ ತುಂಡು, ತುಂಡು ಮಾಡಿ ಇಸಿದೊ. ಎರ್ಡ್ ಗೆಂಡೆ ದೊಡ್ಡ ನೀರುಳ್ಳಿನ ಕೊಯ್ದ್ ಒಂದು ತಟ್ಟೆಲಿ ಹಾಕಿಸಿದೊ. ಬೊಳ್ಪುಗೆನೇ ಅಟ್ಟಕ್ಕೆ ಹತ್ತಿ ಕೋಳಿ ಗೈಪು ಮಾಡುವ ಎರ್ಡ್ ಅಳಗೆಗಳ ತೆಗ್ದ್ ತೊಳ್ದ್ ಇಸಿದ್ದೊ. ಅದರ್ಲಿ ದೊಡ್ಡ ಅಳಗೆನ ತೆಗ್ದ್ ಒಲೆ ಮೇಲೆ ಇಸಿ, ಅದ್ಕೆ ಒಂದು ಕೊಂಡೆ ಹಸ್‌ನ ತುಪ್ಪನ ಹೊಯ್ದ್, ಅದ್ ಕಾಯಕನ ಅದ್ಕೆ ನಾಕ್ ಮೆಣ್ಸ್ ಮುರ್ದಾಕಿ, ಒಂದು ಸವುಂಟು ಮೆಂತೆ ಹಾಕಿ ಹೊಟ್ಟಿಸಿದೊ. ಅದ್ಕೆ ಕೊಯ್ದಿಸಿದ ನೀರುಳ್ಳಿನನೂ ಸೇರ್ಸಿ, ಹಂಞ ಉಪ್ಪುನನೂ ಹಾಕಿ, ಕೆಂಪಾಕನ ಮುಟ್ಟ ಹೊರ್ದೊ. ಕೋಳಿ ಮಾಸನ ಅದ್ಕೆ ಹಾಕಿ ಮೊಗ್ಚಿ ಬಾವೊಡೆ ಮುಚ್ಚಿದೊ. ಕೋಳಿಗೈಪು, ಹಂದಿ ಗೈಪುನ ಅವು ಯಾಗೋಳು ಅಳಗೆಲೇ ಮಾಡ್ದು. ಅಳಗೆಲಿ ಮಾಡ್ದ ಗೈಪುನ ರುಚಿನೇ ಬೇರೆ ಗಡ.

ಆಗಾಗ ಬಾವೊಡೆ ತೆಗ್ದ್ ಮಾಸನ ಮೊಗ್ಚಿಕಂಡ್ ಅದಕ್ಕೆ ಇನ್ನ್ ಹಂಞ ಉಪ್ಪುನನೂ ಹಾಕಿ ತುಪ್ಪಲೇ ಬೇಯಕಿಟ್ಟೊ. ಮಾಸದ ನೀರೆಲ್ಲಾ ಬುಟ್ಟ್ ಮಾಸ ಬೇಯಕನ ಅದರ ಪೊರ್ಮಳ ಮನೆ ಎಲ್ಲಾ ಹರ್‌ಂಡಿತ್. ಬಾವೊಡೆ ತೆಗ್ದ್ ನೋಡಿ ಮಾಸದ ನೀರೆಲ್ಲಾ ಆರಿ ಹೋಕನ, ಅದ್ಕೆ ಹುಳಿ ಮೆಣ್ಸ್ ಕಡ್ಡಿಸಿದರ ಸೇರ್ಸಿ, ಹಂಞ ನೀರ್‌ನನೂ ಸೇರ್ಸಿ ಕೊದ್ಯಕೆ ಇಟ್ಟೊ. ನಾಟಿ ಕೋಳಿ ಬೆಂದಸ್ಟ್ ರುಚಿ ಜಾಸ್ತಿ. ಸುಂದರಿ ಕಡ್ಕಲ್‌ಲಿ ಕಾಯೆ ಹೂವುನ ಕಡ್ಯವ ಸದ್ದ್ ಕೇಳ್ಸ್‌ತಿತ್ತ್. ಅದಕ್ಕೆ ಹಾಕಿಕೆ ಹಂಞ ನೀರುಳ್ಳಿ, ಬೆಳ್ಳುಳ್ಳಿ, ಕೊತ್ತಂಬೆರಿ, ಜೀರಿಗೆ ಅರ್ಶಿಣನ ಹಿಡ್ಕಂಡ್ ಅದ್ ಕಡ್ಯವಲ್ಲಿಗೆ ಹೋಗಿ, ಅವು ತಕೊಂಡೋದ ಸಾಮಾನ್‌ನ ಕಡ್ಕಲ್ಲ್‌ಗೆ ಕಾಯೆ ಅರೆಪ್ಪುನೊಟ್ಟಿಗೆ ಹಾಕಿದೊ. ಕಾಯೆ ಹಾಲ್ ತೆಗ್ಯಕೆ ಒಂದು ತಪಲೆನನೂ, ದೊಡ್ಡ ಅರಿಪೆನನೂ ತಕೊಂಡೋಗಿ ಅದರ ಹಕ್ಕಲೆ ಇಸಿ,

"ಇಂದಾ ಸುಂದರಿ ಕಾಯೆ ಹಾಲ್ ಸುರುದರ ತೆಗ್ದ್ ಬೇರೆ ಇಸ್ ಬಲಾ. ಎರಡ್ನೇ ಸಲ ತೆಗ್ದದರ ಈ ಚೆಂಬುಗೆ ಹಾಕಿ ತಾ."– ಎಂತ ಹೇಳ್ದೊ. ಸುಂದರಿ ಅಕ್ಕ್‌ಂತ ತಲೆ ಹಂದಾಡ್ಸಿತ್.

ಒಳಗೆ ಬಂದ್ ಗೈಪುನ ನೋಡ್ದೋ. ಬೆಂದ್ ಒರ್ರಾಗಿ ಮೇಲೆ ತುಪ್ಪ ನೆಡ್ಯಕೆ ಸುರಾತ್. ಆಗ ಅದರ ತೆಗ್ದ್ ಕಣ್ಣೊಲೆಲಿ ಇಸಿದೊ. ಉಪ್ಪು, ಹುಳಿ, ಕಾರ ಹದ ಆಗುಟ್ಟೋಂತ ಒಂದು ತುಂಡು ತೆಗ್ದ್ ತಿಂದ್ ನೋಡ್ದೊ. ಅವರ ಕೈ ಅಂದಾಜ್ ಯಾಗೋಳು ಸರಿ ಆಗ್ತಿತ್ತ್. ಸರಿ ಉಟ್ಟೊಂತ ಮೊನ್ನಿಗೆ ಆಕನ, ಒಲೆ ಮೇಲೆ ಒಂದು ಬಾಣಲೆ ಇಸಿ, ಅದ್ಕೆ ಅರ್ಧ ಕೊಂಡೆ ತುಪ್ಪ ಹ್ಯೊದ್ ಒಣ್ಗಿದ ಎರ್ಡ್ ಮೆಣ್ಸ್‌ನ ಮುರ್ದ್ ಹಾಕಿ, ಹಂಞ ಮೆಂತೆನ ಸಾ ಹಾಕಿ ಅದ್ ಹೊಟ್ಟಿದ ಮೇಲೆ ಇನ್ನೊಂದು ಗೆಂಡೆ ನೀರುಳ್ಳಿನ ಕೊಯ್ದ್ ಹಾಕಿದೊ. ಅದ್ ಕೆಂಪಾಕನ ಅದ್ಕೆ ಅರ್ದ್ದಿಸಿದ ಹೊರ್ದ ಕಾಯೆ ಅರೆಪ್ಪುನ ಹಾಕಿ, ಹಂಞ ಉಪ್ಪು ಹಾಕಿ ಕೊದ್ಯಕೆ ಇಸಿದೊ. ಅದ್ ತುಪ್ಪಲಿ ಹಂಞ ಕೊದ್ಯಲಿಂತ ಬಾವೊಡೆ ಮುಚ್ಚಿಸಿದೊ.

ಅಯ್ಯಣ್ಣ ಮಾಸ್ತ್ರಿಗೆ ಬರೇ ಹುಳಿ ಮೆಣ್ಸ್‌ಲಿ ಮಾಡ್ದ ಕೋಳಿ ಗೈಪುಂತೇಳ್ರೆ ಬಾಳ ಇಷ್ಟ. ಅದಕ್ಕಾಗಿ ಕಮಲಕ್ಕ ಒಂದು ದೊಡ್ಡ ಗುಂಡಿ ಪಿಂಜಾಣಿಲಿ ಹುಳಿ ಮೆಣ್ಸ್‌ಲಿ ಬೆಂದ ಕೋಳಿ ಗೈಪುಂದ ಕನು, ಕರ್ಯಟ, ಪಲ್ಲೆಕ್ಯಾ, ಪಿಲ್ಕಿಕಂಡೆನ ಹುಡ್ಕಿ ಹೆರ್ಕಿ ಹೆರ್ಕಿ ಹಾಕಿಸಿದೊ. ಒಂದೆರ್ಡ್ ಎಲು ಇದ್ದ ತುಂಡುನನೂ ಹೆರ್ಕಿ ಅದ್ಕೆ ಹಾಕಿದೊ. ಅದರ ಒಂದು ತಪಲೆ ಅಡಿಲಿ ಅಡಿಂಗಿಸಿ ಇಸಿದೊ. ಕೊತ್ತಿ ಮುಟ್ಟಿಕೆ ಆಗದಲೆ.

ಒಳ್ದ ಹುಳಿ ಮೆಣ್ಸ್ ಕೋಳಿ ಗೈಪುಂದ ಒಳ್ಳೊಳ್ಳೆ ತುಂಡುಗಳ ನೋಡಿ, ನೋಡಿ ಹೆರ್ಕಿ, ತೊಳ್ದಿಸಿದ ಸಣ್ಣ ಅಳಗೆಗೆ ಹಾಕಿದೊ. ಹಂಞ ಹುಳಿ ಮೆಣ್ಸ್ ಸಾರ್‌ನನೂ ಅದ್ಕೆ ಹಾಕಿದೊ. ಕಾಲ್, ಚೋಲಿ, ರೆಂಕೆ ಎಲುಗಾಂತ ಬೇಡದ ಕಟಾಕುಟಿ ತುಂಡುಗಳ ಹುಳಿ ಮೆಣ್ಸ್‌ಲೇ ಬುಟ್ಟೊ. ಇದ್ ಕಾಯಿಸಾರ್‌ಗೆ ಆತ್. ಕಾಯಾಂಬ್ರಲಿ ಒಂದೆರ್ಡ್ ತುಂಡುಗ ಇತ್ಲರೆ ರುಚಿ ಬಾದ್ಲೇಂತ ಅವ್ಕೆ ಗೊತ್ತುಟು. ಒಳ್ಳೆ ತುಂಡುಗಳ ಹೆರ್ಕಿಸಿದ ಸಣ್ಣ ಅಳಗೆಗೆ ಅಗ್ರಣೆ ಹಾಕಿದ ಕಾಯೆ ಅರ್ಪುನ ಹಾಕಿದೊ. ಬಣಲೆಗೆ ಹಂಞ ನೀರಾಕಿ ಅದರ ತೊಳ್ದಾಂಗೆ ಮಾಡಿ ಆ ನೀರ್‌ನನೂ ಕೋಳಿ ಗೈಪುಗೆ ಸೇರ್ಸಿದೊ. ಸಣ್ಣ ಅಳಗೆನ ಒಲೆ ಮೇಲೆ ಇಸಿ ಗೈಪು ಒರ್ರಾಕನ ಮುಟ್ಟ ಕೊದಿಸಿದೊ. ಕಾಲ್ ಗಂಟೆಲಿ ಲಾಯ್ಕ್‌ಲಿ ಆರ್ಸಿದ ಕೋಳಿ ಗೈಪು ತಯಾರಾತ್. ಇವರ ಆರ್ಸಿದ ಕೋಳಿ ಗೈಪುನ ಕೆಲ್ಸ ಮುಗ್ಯೊದುನೂ, ಸುಂದರಿ ಕಾಯೆ ಹಾಲ್‌ನ ಪಾತ್ರೆಗಳ ತಾದುನೂ ಸರಿ ಆತ್. ಅದ್ ತಂದ ಕಾಯೆ ಹಾಲ್‌ಲಿ ಎರಡ್ನೇ ಸಲ ತೆಗ್ದ ಕಾಯೆ ಹಾಲ್ನ ದೊಡ್ಡ ಅಳಗೆಲಿ ಇದ್ದ ಹುಳಿ, ಮೆಣ್ಸ್, ಸಾರಿಗೆ ಹ್ಯೊದೊ. ಸಣ್ಣ ಅಳಗೆನ ಇಳ್ಸಿ ಇಸಿ, ಕಣ್ಣೊಲೆಲಿದ್ದ ದೊಡ್ಡ ಅಳೆಗೆನ ಒಲೆ ಮೇಲೆ ಇಸಿ ಹಂಞ ಉಪ್ಪು ಹಾಕಿ ಕೊದಿಸಿದೊ. ಅದ್ ಅರ್ದ ಕೊದ್ಯಕಾಕನ ಸುರುಗೆ ತೆಗ್ದ ಕಾಯೆ ಹಾಲ್ನ ಹಾಕಿ ಪೊರ್ಲು ಒರ್ರಾಕನ ಮುಟ್ಟ ಕೊದಿಸಿದೊ. ಅರ್ದ ಗಂಟೆಲಿ ಕಾಯಾಂಬ್ರನೂ ರೆಡಿ ಆತ್. ಹಂಞ ಸೆಡೆಲಿ ತೆಗ್ದ್ ನೆಕ್ಕಿ ನೋಡಿ, ಸರಿ ಉಟ್ಟೊಂತ ಸಮದಾನಪಟ್ಟೊ.

ಹೊರಗೆ ಜೀಪು ಬಂದ ಸದ್ದಾತ್. ಮಂಜ ಬಾತ್‌ಂತ ಹೋಗಿ ನೋಡಿವೆ ಸುರೇಶ ಜೀಪುಂದ ಇಳ್ದದೆ. ಅಯ್ಯಣ್ಣ ಗೌಡ್ರ್ ಬೊಳ್ಪುಗೆನೇ ಜೀಪು ತಕಂಡ್ ಮಂಜನ ಕರ್ಕಂಡ್ ಬಾಕೆ ಪಂಜ ಬಸ್ ಸ್ಟೇಂಡಿಗೆ ಹೋಗಿದ್ದೊ. ಕುಂಞಣ್ಣ ಅಂವನ ಸಾಮಾನ್‌ನ ಒಳಗೆ ತಂದ್ ಇಸಿತ್. ಮಂಜ ಬಂದಂವ ಅವ್ವನ ಕಾಲ್ ಮುಟ್ಟಿ ನಮಸ್ಕಾರ ಮಾಡ್ತ್. ಕಮಲಕ್ಕ ಕಣ್ಣ್‌ಲಿ ನೀರ್ ತುಂಬಿಕಂಡ್, ಮಂಜನ ತಲೆ ಪೂಜಿ, ಎರ್ಡ್ ಕೈಲಿ ಎತ್ತಿ, ಎದ್ರಿಸಿದೊ. ತನ್ನಂದಳೂ ಒಂದು ಮಾರ್ ಎತ್ತರ ಬೆಳ್ದ ಮಂಜನ ನೋಡಿ ಅವ್ಕೆ ಕಣ್ಣ್ ತುಂಬಿ ಬಾತ್. ಸುರೇಶ ಒಯ್ಯಪ್ಪುರೆಲಿ ಇದ್ದ ಕುರ್ಸಿಲಿ ಕುದ್ದತ್. ಕುಂಞಣ್ಣ ಎರ್ಡ್ ಬೆಂಡನ ಒಟ್ಟೆ ಮಾಡಿ, ಒಂದ್ ಪಾಟೆಗೆ ಬೆಂಡದ ನೀರ್‌ನ ಹಾಕಿ ತಂದ್ ಸುರೇಶನ ಮುಂದೆ ಹಿಡ್ತ್. ಸುರೇಶ ಅಂವನ ಕೈಯಿಂದ ಗ್ಲಾಸ್ ತಕಂಡ್ ಅವನ ನೋಡಿ,

"ಎನ್ ಕುಂಞಣ್ಣಣ್ಣಾ , ಸೌಕ್ಯಲಿ ಒಳರಿನೋ?" ಎಂತ ನೆಗಾಡಿಕಂಡ್ ಕೇಳ್ತ್.

"ನೋಡಿ ಹೀಂಗೆ ಒಳೆ ಅಣ್ಣ"– ಎಂತ ಕುಂಞಣ್ಣ ನೊಡು ಬೊಗ್ಗಿಸಿ, ಬೈರಾಸ್‌ನ ಕಂಕುಳ ಸೆರೆಲಿ ಇಸಿ, ಕೈ ಕಟ್ಟಿಕಂಡ್ ನಿಂತ್ ಹೇಳ್ತ್.

ಎರ್ಡ್ ಗ್ಲಾಸ್ ಬೆಂಡದ ನೀರ್‌ನ ಕುಡ್ದ್ ಸುರೇಶ " ಅವ್ವಾ, ನಂಗೆ ತುಂಬಾ ಹೊಟ್ಟೆ ಇಸಿದೆ. ನಾ ಮಿಾದ್ ಬನ್ನೆ. ಉಂಬಕೆ ರೆಡಿ ಮಾಡಿ" ಎಂತ ಹೇಳ್ತ್.

ಕಮಲಕ್ಕ ಒಂದು ತಟ್ಟೆಲಿ ಉಪ್ಪು ಕಾರ ಹಾಕಿದ ಎರ್ಡ್ ಬೇಸಿದ ಮೊಟ್ಟೆನ ತಂದ್ ಮಂಜನ ಎದ್ರ್ ಹಿಡ್ದ್, "ಇಂದಾ, ಈಗ ಇದರ ತಿನ್. ಮತ್ತೆ ಮಿಾದ್ ಬಾ ಉಂಬಕೆ ರೆಡಿ ಮಾಡ್ನೆ." ಎಂತ ಹೇಳ್ದೊ.

ಸುರೇಶ ಒಮ್ಮೆ ಅವ್ವನ ಪ್ರೀತಿಂದ ನೋಡಿ, 'ನಾಟಿಕೋಳಿ ಮೊಟ್ಟೆ ತಿನದೆ ಎಷ್ಟ್ ದಿನ ಆತ್"? ಎಂತ ಹೇಳಿ ಒಂದೆ ಬಾಯಿಗೆ ಎರ್ಡ್ ಮೊಟ್ಟೆನನು ಹಾಕಿ ತಿಂದತ್. ಕಮಲಕ್ಕ ಮಂಜ ತಿಂಬೊದರ ತೃಪ್ತಿಂದ ನೋಡಿ ಒಳಗೆ ಹೋದೊ.

ಮಾಜಿಸಿ ಇಸಿದ ಬಂದನ ಕೈಗೆ ಹಂಞ ನೀರ್ ಹಾಕಿ ಪೊರ್ಲುಲಿ ಪುರುಂಞಿ ಉಂಡೆ ಕಟ್ಟಿದೊ. ಒಲೆ ಮೇಲೆ ಅಡಿ ತಳ ದಪ್ಪ ಇದ್ದ ಮಡ್ಕೆ ಓಡುನ ಇಸಿ, ಕಿಚ್ಚಿ ಸರಿ ಮಾಡ್ದೊ. ಓಡುಕಾಯಕನ, ಬಾಡಿಸಿದ ಬಾಳೆ ಎಲೆ ಮೇಲೆ ಹಂಞ ನೀರ್ ಪೂಜಿ, ಅಕ್ಕಿ ಹಿಟ್ಟ್‌ನ ಉಂಡೆ ಇಸಿ, ರೊಟ್ಟಿ ತಟ್ಟಿ ಓಡಿಗೆ ಹಾಕಿದೊ. ರೊಟ್ಟಿ ಒಂದು ಪುಡೆ ಹಂಞ ಕಾಯಕನ ಅದರ ಹಿಟ್ಟ್‌ನ ಸಟ್ಟ್‌ಗಲಿ ಮೊಗ್ಚಿ ಹಾಕಿ, ಇನ್ನೊಂದು ಉಂಡೆ ಅಕ್ಕಿ ಬಂದ ತೆಗ್ದ್ ರೊಟ್ಟಿ ತಟ್ಟಿದೊ. ಆಗ ಓಡ್‌ಲಿದ್ದ ರೊಟ್ಟಿ ಹದ ಬೆಂದಿತ್ತ್. ಅದರ ತೆಗ್ದ್, ಒಲೆನ ಸೊಯ್ದೆ ಕೊಳ್ಳಿನ ಎಳ್ದ್, ಗೆಂಡಕ್ಕೆ ಹಾಕಿ ಸುಟ್ಟೊ. ಆಗ ರೊಟ್ಟಿ ಉಬ್ಬಿ ಪೊಕ್ಕ ಬಾತ್. ಅದ್ಧರ ತೆಗ್ದ್ ತಪಲೆಗೆ ಹಾಕಿ ಮುಚ್ಚಿ

ಇಸಿದೊ. ಹೀಂಗೆ ಬೇಗ ಬೇಗ ಒಂದ್ ಹತ್ತ್ ರೊಟ್ಟಿ ತಟ್ಟಿ, ತಟ್ಟೆಲಿ ಹಾಕಿ ತಂದ್ ಮೇಜ್ ಮೇಲೆ ತಂದಿಸಿ, ಬಾಡಿಸಿದ ಬಾಳೆಲೆ ಹಾಕಿ, ಅದರ ಹಕ್ಕಲೆ ಒಂದು ಗ್ಲಾಸ್ ನೀರ್ ಇಸಿದೊ. ಅಸ್ಟಾಕನ ಮಂಜ ಮಿಾದ್ ಬಾತ್. ದೇವ್ರ ಕೋಣೆಗೆ ಹೋಗಿ ದೇವ್ರುಗೆ ಕೈ ಮುಗ್ದ್, ಬಂದ್ ಕುರ್ಸಿ ಎಳ್ದ್ ಕುದ್ದತ್.

ಕಮಲಕ್ಕ ನಾಕ್ ರೊಟ್ಟಿನ ಬಾಳೆಲೆಗೆ ಹಾಕಿ, ಅದರ ಮೇಲೆ ಕಾಯಾಂಬ್ರ ಹಾಕಿದೊ. ಎಲೆ ಕೊಡಿಗೆ ಎರ್ಡ್ ಸೆಡೆ ಆರ್ಸಿದ ಕೋಳಿ ಗೈಪುನ ಇಕ್ಕಿದೊ. ಸುರೇಶ ರೊಟ್ಟಿನ ತುಂಡು, ತುಂಡು ಮಾಡಿ ಕಾಯಾಂಬ್ರಲಿ ಪೊರ್ಲು ಕಲ್ಸಿಕಂಡತ್.

"ಅವ್ವಾ, ಹಂಞ ಆಂಬ್ರ ಹಾಕಿ ಇದ್ ಸಾಕಾಕಿಲ್ಲೆ" ಎಂತ ಹೇಳ್ತ್.

ಕಮಲಕ್ಕ ಇನ್ನಷ್ಟ್ ಕಾಯಾಂಬ್ರ ತಂದ್ ಇಕ್ಕಿದೊ. ಅವ್ವ ಇಕ್ಕಿದ ಕೋಳಿ ಗೈಪುನ ಪೊರ್ಮಳಕ್ಕೆ ಸುರೇಶ ಮೂಂಕು ಅರ್ಳಿಸಿ,

"ಹಾಂ, ಅವ್ವನ ಕೋಳಿ ಗೈಪು ತಿನದೆ ಎಸ್ಟ್ ದಿನ ಆತ್." ಎಂತ ಹೇಳಿ ಎರ್ಡ್ ತುಂಡು ರೊಟ್ಟಿ ತಿಂದ್, ಬಾಳೆಲೆ ಕೊಡಿಲಿದ್ದ ಗೈಪುಂದ ಒಂದು ತುಂಡು ತೆಗ್ದ್ ತಿಂದ್,

"ಅವ್ವಾ, ನಿಮ್ಮಸ್ಟ್ ಪೊರ್ಲುಲಿ ಕೋಳಿ ಗೈಪು ಮಾಡೊವು ಯಾರೂ ಇಲ್ಲೆ. ಗೈಪು ಬಾಳ ಲಾಯ್ಕಾಗುಟ್ಟು" ಎಂತ ಹೇಳ್ತ್. ಒಂದು ತುಂಡು ಎಲು ಇದ್ದ ಮಾಸನ ಅಗ್ದ್‌ದ್ ತಿಂದ್ ಅವ್ವನ ಮೋರೆ ನೋಡಿ ನೆಗಾಡ್ತ್. ಕಮಲಕ್ಕಂಗೆ ಬಾಳ ಕುಸಿ ಆತ್. ಮಂಜ ಪೊರ್ಲುಲಿ ಬಾಯಿ ಚಪ್ಪಿಸಿಕಂಡ್, ಹೊಟ್ಟೆ ತುಂಬಾ ಉಂಬೋದರ ನೋಡಿ, ಅವರ ಹೊಟ್ಟೆನೂ ತುಂಬಿತ್. ಅಸ್ಟಾಕನ ಅಯ್ಯಣ್ಣ ಮಾಸ್ತ್ರ ಒಳಗೆ ಬಂದ್,

"ಏನ್, ಮಂಜಂಗೆ ಬಾಳ ಉಪಚಾರ ಮಾಡ್ಯ? ನನ್ನ ಹೊಟ್ಟೆನನೂ ಹಂಞ ನೋಡಿಕ." ಎಂತ ನೆಗಾಡಿಕಂಡ್ ಹೇಳ್ದೊ.

"ಬನ್ನಿ, ಬನ್ನಿ. ನೀವ್ಲೂ ಇಕ್ಕಿನೆ." ಎಂತ ಹೇಳಿ ಇನ್ನೊಂದು ಬಾಳೆಲೆ ಹಾಕಿ, ರೊಟ್ಟಿ, ಕಾಯಾಂಬ್ರ ಕೋಳಿ ಗೈಪು ಇಕ್ಕಿ ಕುಡ್ಯಕೆ ನೀರಿಸಿದೊ.

ಅಯ್ಯಣ್ಣ ಮಾಸ್ತ್ರ ಕುಸಿಂದ ಕೈ ಕಾಲ್ ತೊಳ್ಕಂಡ್ ಬಂದ್ ಉಂಬಕೆ ಕುದ್ದೊ.

ಕಮಲಕ್ಕ ಒಳಗೆ ಹೋಗಿ, ಗಂಡಂಗಾಗಿ ತೆಗ್ದಿಸಿದ ಹುಳಿ ಮೆಣ್ಸ್ ಕೋಳಿ ಗೈಪು ತಂದ್, ಅದರ ಎರ್ಡ್ ಸಮಪಾಲ್ ಮಾಡಿ, ಗಂಡಂಗೂ ಮಂಜಗೂ ಇಕ್ಕಿದೊ. ಅದರ ನೋಡಿ ಅಯ್ಯಣ್ಣ ಮಾಸ್ತ್ರ ಕುಸಿಂದ,

"ನೀ ಮರ್ತ್ತ್ಲೆ. ನಂಗೆ ಬರೇ ಹುಳಿ ಮೆಣ್ಸ್‌ಲಿ ಮಾಡ್ದ ಕೋಳಿ ಗೈಪು ಬಾಳ ಕುಸಿ ಮಂಜ. ಅದ್ ನಿನ್ನ ಅವ್ವಂಗೆ ಗೊತ್ತುಟು. ನೀನೂ ತಿಂದ್ ನೋಡು. ಅದರ

ರುಚಿನೇ ಬೇರೆ" ಎಂತ ಹೇಳ್ದೊ.

ಸುರೇಶ ತಿಂದ್ ನೋಡಿ, "ಹೌದಪ್ಪಾ, ಬಾರೀ ಲಾಯ್ಕುಟ್ಟು" ಎಂತ ಹೇಳ್ತ್.

ಅವಿಬ್ಬೊರು ಉಂಡ್ ಎದ್ದ್, ಕೋಳಿ ಗೈಪುನ ಹೊಗಳ್ದೇ ಹೊಗಳ್ದ್. ಕಮಲಕ್ಕಂಗೆ ಸೊರ್ಗಕ್ಕೆ ಮೂರೇ ಗೇಣ್ ಅಸ್ಟ್ ಕುಸಿ ಆತ್. ಬೊಳ್ಪುಂದ ಕೆಲ್ಸ ಮಾಡ್ದ ಬಂಙ ಎಲ್ಲಾ ಮಾಯ ಆತ್.

ಅಡ್ಕೆ ನಿನ್ನೆನೇ ತೆಗ್ದ್ ಮುಗ್ದ ಕಾರ್ಣ ಕೆಲ್ಸದೊವ್ಕೆ ಇಂದ್ ರಜೆ. ಸುಂದರಿ, ಕುಂಞಣ್ಣ ಮಾತ್ರಾ ಇದ್ದೊ. ಅವ್ರಿಕಿಬ್ಬೊರಿಗೂ ಉಂಬಕ್ಕೆ ಕೊಟ್ಟ್, ಕಮಲಕ್ಕ ಉಂಡ್, ತೊಳ್ಯವ ಪಾತ್ರೆನ ಎಲ್ಲಾ ಹೊರಗೆ ಪಾತ್ರೆ ತೊಳ್ಯವ ನಲ್ಲಿನ ಹಕ್ಕಲೆ ಇಸಿದೊ. ಸುಂದರಿ ಪಾತ್ರಗಳ ತೊಳ್ಯಕೆ ಸುರು ಮಾಡ್ತ್.. ಎಲ್ಲೋವು ನಡು ಒಳಗೆ ಬಂದ್, ಅಲ್ಲಲ್ಲಿ ಫೇನ್ ಗಾಳಿ ಅಡಿಲಿ ನೆಲಲಿ ಬಿದ್ದ್‌ಕಂಡ್ ಸಣ್ಣ ನಿದ್ದೆ ತೆಗ್ದೊ.

ಸುರೇಶ ಬಂದ್‌ದ್ ದಿನ ಹೋದೇ ಗೊತ್ತಾತ್ಲೆ. ನೆರೆ ಕರೆ ಜಾತಿ ಮಕ್ಕ ಎಲ್ಲಾ ಅಂವ ಬಂದದರ ತಿಳ್ದ್‌ದ್ ಅಂವನ ನೋಡಿಕೆ, ಮಾತಾಡ್ಸಿಕೆ ಬಾತಿದ್ದೊ. ಊಟದ ಹೊತ್ತಿಗೆ ಬಂದೋವ್ಕೆ ಊಟ, ಕಾಫಿ ಹೊತ್ತಿಗೆ ಬಂದೋವ್ಕೆ ಕಾಪೀಂತ ಕಮಲಕ್ಕಂಗೆ ಒಂದು ಗಳ್ಗೆ ಪುರ್ಸೊತು ಇತ್ಲೆ. ತೊಳ್ಯಕೆ, ಬೊಳ್ಯಕೆ, ಗುಡ್ಸಿಕೆ, ಒರ್ಸಿಕೆ, ಕರ್ ಬುಡಿಕೆ, ಸೀರೆ ಒಗ್ಯಕೆ, ಸೊಪ್ಪು ಹುಲ್ಲುಗೇಂತ ಪಾಚು, ಸುಂದರೀಂತ ಇಬ್ಬೊರು ಹೆಣ್ಣಾಳ್‌ಗ ಕಾಯಂ ಕೆಲ್ಸಕ್ಕೆ ಇದ್ದೊ. ಆದ್ರೂ ಇವು ಮಾಡ್ವ ಕೆಲ್ಸ ಇವೇ ಮಾಡೊಕೊಲೆ. ಅವರ ಗಡಿ ಬಿಡಿನ ನೋಡಿ, ಸುರೇಶನ ನೋಡಿಕೆ ಬಂದ ನೆರೆಮನೆ ಕುಕ್ಕಪ್ಪಣ್ಣ ಕೇಳ್ದೋ.

"ಕಮಲಕ್ಕಾ, ನೀವು ಎಸ್ಟ್ ದಿನಾಂತ ಹೀಂಗೆ ದುಡ್ದರೆ? ಬೇಗ ಮಂಜಂಗೆ ಒಂದು ಮೊದ್ವೆ ಮಾಡ್ಸಿ. ಸೊಸೆ ಬಂದರೆ ನೀವ್ಗೆ ಹಗುರಾದು." ಎಂತ

"ಸೊಸೆ ಬಂದರೆ ಅದ್ ಇಲ್ಲಿ ನಿತ್ತದೆನೋ? ಅದ್ ಗಂಡನೊಟ್ಟಿಗೆ ಹೋದು. ನಾ ಮಾಡ್ವ ಕೆಲ್ಸ ನಾನೇ ಮಾಡೊಕೊಲೆ" ಕಮಲಕ್ಕ ಹೇಳ್ದೊ.

"ಅದುನೂ ಹೌದು. ಆದರೆ ಮಂಜಂಗೆ ಮೊದ್ವೆ ಮಾಡದೆ ಎಸ್ಟ್ ದಿನಾಂತ ಹೀಂಗೆ ಬುಟ್ಟರೆ? ಅವಂಗೂ ಪ್ರಾಯ ಆತಲೆ?" ಕುಕ್ಕಪ್ಪ ಗೌಡ್ರು ಹೇಳ್ದೊ.

"ಅಂವಂಗೂ ಈ ಕಾರ್ತಿಂಗಕ್ಕೆ ಇಪ್ಪತ್ತೇಳ್ ಕಳ್ದದೆ. ನಾನೂ ಇದರೊಟ್ಟಿಗೆ ಅಂವಂಗೆ ಬೇಗ ಮೊದ್ವೆ ಮಾಡೊಕೂಂತ ಹೇಳ್ತಾ ಒಳೆ"– ಕಮಲಕ್ಕ ಹೇಳ್ದೊ.

ಇವು ಮಾತಾಡ್ದರ ಕೇಳಿಕಂಡ್ ಸುರೇಶ್ ಅಲ್ಲಿಗೆ ಬಂದ್,

"ಏನ್ ದೊಡಪಾ? ಯಾರಿಗೆ ಮೊದ್ವೆ? ಮೊದ್ವೆ ಸುದ್ದಿ ಮಾತಾಡ್ರೆ"– ಎಂತ ಕೇಳ್ತ್.

"ಇನ್ಯಾರ್ದ್? ನಿನ್ನ ಮೊದ್ವೆ ಸುದ್ದಿನೇ ಮಾತಾಡ್ದು ಬೇಗ ಮೊದ್ವೆ ಆಗ್. ನೀನೇ ಎಲ್ಯಾದರ್ ಹೆಣ್ಣ್ ನೋಡ್ಯಳನೋ? ಹೇಂಗೆ." ಕುಕ್ಕಪ್ಪ ಗೌಡ್ರು ಕೇಳ್ದೊ.

"ನಂಗೇನ್ ದೊಡಪಾ? ನಾ ಇನ್ನ್ ಕೂಸು. ಇನ್ ಎರ್ಡ್ ವೊರ್ಸ ಕಳ್ಯಲಿ." – ಸುರೇಶ ನೆಗಾಡಿಕಂಡ್ ಹೇಳ್ತ್.

"ಈಗಳೇ ಇಪ್ಪತ್ತೇಳ್ ಆತ್ ಗಡ. ಇನ್ಯಾಗ? ಅಜ್ಜ ಆದ ಮೇಲೆ ಮೊದ್ವೆ ಆದೋ? ಆಗ ಗೂಡೆಗ ನಿನ್ನ ಒಪ್ಪಿಕಿಲ್ಲೆ" ಕುಕ್ಕಪ್ಪ ಗೌಡ್ರುನೂ ನೆಗಾಡಿಕಂಡ್ ಹೇಳ್ದೊ.

"ಅಜ್ಜಂಗೆ ಎಲ್ಯಾದರೂ ಒಂದು ಅಜ್ಜಿ ಸಿಕ್ಕುದು ದೊಡಪಾ. ನೀವು ಬೆಚ್ಚ ಮಾಡ್ಬೋಡಿ"– ಎಂತ ಸುರೇಶ ಹೇಳ್ತ್.

ಇವರ ಮಾತ್ ಕೇಳಿಕಂಡ್ ಅಯ್ಯಣ್ಣ ಮಾಸ್ಟ್ರನೂ ಅಲ್ಲಿಗೆ ಬಂದ್ ಇವರೊಟ್ಟಿಗೆ ಸೇರಿಕೊಂಡೊ. ಮಂಜಂಗೆ ಮೊದ್ವೆ ಮಾಡ್ವ ವಿಸಯಲಿ ಅವ್ಕನೂ ಬಾಳ ಆಸೆ ಇತ್ತ್. ಆದರೆ ಸುರೇಶ ಈಗಳೇ ನಂಗೆ ಮೊದ್ವೆ ಬೇಡಾಂತ ಹೇಳ್ತ್. ಅಲ್ಲಿಗೆ ಎಲ್ಲೋವು ಸುಮ್ಮನಾದೊ.

"ಕುಕ್ಕಪ್ಪಣ್ಣಾ, ಎಲ್ಯಾದರೂ ಹಂದಿ ಬೊಡ್ದವೆನೋ? ನಂಗೆ ಎರ್ಡ್ ಸೇರ್ ಹಂದಿ ಮಾಸ ಬೇಕಾಗಿತ್ತ್. ಹೇಂಗೂ ಮಂಜ ಬಂದುಟಲೆ. ಹಂದಿ ಗೈಪು ತಿನದೆ ಬಾಳ ಸಮಯ ಆತ್." ಅಚ್ಯುಣ್ಣ ಮಾಸ್ಟ್ರ ಹೇಳ್ದೊ.

"ನಾನೂ ಈ ಇಸಯನ ನೀವ್ಗೆ ಹೇಳಿಕೆನೇ ಬಂದದ್. ಹೇಂಗೂ ಸುರೇಶನ ನೋಡ್ದಾಂಗೆ ಆತ್‌ಂತ ಬಂದೆ. ನಮ್ಮಲ್ಲಿ ಒಂದ್ ವೊರ್ಸದ ಒಂದು ಗಂಡ್ ಹಂದಿ ಉಟ್ಟು. ಅದರ ಬೊಡ್ಯಕೂಂತ ಒಳೆ. ಮಾಸಕ್ಕೆ ಜನ ಆಕೊಲೆ. ಅದ್ಕೆ ನಿಮ್ಮೊಟ್ಟಿಗೆ ಇಚಾರ್ಲೊನೋಂತ ಬಂದೆ" ಕುಕ್ಕಪ್ಪ ಗೌಡ್ರು ಹೇಳ್ದೊ.

ಹಂದಿ ಬೊಡ್ದರೆ ಜನಕ್ಕೆ ಬರನೋ? ಸುದ್ದಿ ಕೇಳ್ರೆ ಸಾಕ್. ಒಂದ್ ಗಂಟೆ ಒಳಗೆ ಮಾಸ ಎಲ್ಲಾ ಕಲಾಸ್. ನಂಗೆ ಎರ್ಡ್ ಸೇರ್ ಇರ್ಲಿ." ಎಂತ ಮಾಸ್ಟ್ರ ಹೇಳಿ ಕಪಾಟ್‌ಂದ ಐನೂರು ರುಪ್ಯಾ ನೋಟುನ ತಂದ್ ಕುಕ್ಕಪ್ಪ ಗೌಡ್ರಿಗೆ ಕೊಟ್ಟ್,

"ಚಿಲ್ಲರೆ ಇಲ್ಲೆ. ನೀವು ಮಾಸ ತಾಕಾಕನ ಚಿಲ್ಲರೆ ತನ್ನಿ." ಎಂತ ಹೇಳ್ದೊ. ಕುಕ್ಕಪ್ಪ ಗೌಡ್ರ್ ಕುಸಿಂದ ನೋಟುನ ತೆಗ್ದ್‌ದ್ ಜೋಬುಗೆ ಹಾಕಿ,

"ನಿಮ್ಮದೇ ಬೋಣಿ"– ಎಂತ ಹೇಳಿ ಬೈರಾಸ್‌ನ ಕೊಡ್ಕಿ ಹೆಗಲ್ ಮೇಲೆ ಹಾಕಂಡ್ ಮನೆಗೆ ಹೋದೊ.

* * * * *

3. "ಮಂಜಂಗೆ ಹಂದಿ ಗೈಪುನ ಸಮ್ಮಾನ"

ಕಮಲಕ್ಕಂಗೆ ಹಂದಿ ಮಾಸ ಸಿಕ್ಕಿದೇಂತ ಕೇಳಿ ಬಾಳ ಕುಸಿ ಆತ್. ಐತ್ವಾರ, ಸೋಮಾರ ಕೋಳಿ ಗೈಪುಲಿ ಸುದಾರ್ಣೆ ಆತ್. ಮಂಗ್ಳಾರ ಹಂದಿ ಮಾಸ ಸಿಕ್ಕಿರೆ ಗೈಪುಗೇನ್ ಮಾಡ್ದುಂತ ಹುಡ್ಕುದು ನಿತ್ತದೆ. ಹಂದಿ ಗೈಪು ತಿನದೆ ಸುಮಾರ್ ಸಮಯ ಆತ್. ಮಂಜನ ಹೆಸ್ರೇಳಿ ನಾವೂ ತಿಮ್ಮೊನೋಂತ ನೆನ್ನಿಕಂಡ್, ಎದ್ದ್ ಅಡ್ಗೆಕೋಣೆಗೆ ಹೋಗಿ ಒಂದು ದೊಡ್ಡ ತಪಲೆಲಿ ಎರ್ಡ್ ಸೇರ್ ಬೆಳ್ತಕ್ಕಿ ನೀರ್‌ಲಿ ನೆನ್ಯಕೆ ಹಾಕಿದೊ. ಅಂಗೈಲಿ ಎರ್ಡ್ ಸೆರೆ ಉದ್ದಿನ ಬೇಳೆನನೂ ಅದರೊಟ್ಟಿಗೆ ನೆನ್ಯಕೆ ಹಾಕಿ, ಅದಕ್ಕೆ ಹಂಞ ಮೆಂತೆನನೂ ಸೇರ್ಸಿದೊ. ಹಂದಿ ಗೈಪುಗೆ ಅಪ್ಪದ ಹಿಟ್ಟ್‌ನೇ ಸಮ. ತಿಂಬಕೆ ಲಾಯ್ಕಾದೆ. ಅಪ್ಪದ ಹಿಟ್ಟ್‌ಗೆ ತೆರಿ ಮಾಡಿಕೆ ಒಂದು ಕೈ ಇದ್ದ ಬಾಣಲೆಲಿ ಒಲೆ ಮೇಲೆ ನೀರಿಸಿ, ಒಂದು ಅಂಗೈ ಸೆರೆ ಬೆಳ್ತಕ್ಕಿ ಅದ್ಕೆ ತೊಳ್ದ್‌ದ್ ಹಾಕಿದೊ. ಅದ್ ಒಳ್ಳೆ ಬೆಂದ ಮೇಲೆ, ತಣ್ಣಂಗಾಕೆ ಇಳ್ಗಿಸಿದೊ. ಇರ್ಳ್ ಕರೆಂಟ್ ಇದ್ದ ಕಾರ್ಣ, ಅಕ್ಕಿ ಉದ್ದ್‌ನ ಬೇಳೆನ ತೊಳ್ದ್ ಗ್ರೈಂಡರ್‌ಗೆ ಹಾಕಿ ಅದರೊಟ್ಟಿಗೆ ಬೆಂದ್ ತಣ್ಣಂಗಾದ ಅಕ್ಕಿ ತೆರಿನನೂ ಸೇರ್ಸಿ, ಗ್ರೈಂಡರ್ ಸುಚ್ಚಿ ಹಾಕಿದೊ. ಬಂದ ಸಣ್ಣ ಆಕನ ತೆಗ್ದ್ ಬಂದದ ಮಡ್ಕೆಲಿ ಬಂದನ ಹಾಕಿ, ಹದ ನೀರ್ ಹಾಕಿ ಕಲ್ಸಿ ಒಲೆ ಚಿಂಟೆಲಿ ಬಂದ ಬಾಕೆ ಇಸಿದೊ.

ಮಾರ್ಣೆ ದಿನ ಬೊಳ್ಪುಗೆ ನೋಡಿಕನ ಬಂದ ಉಕ್ಕಿ ಬಂದಿತ್ತ್. ಕಮಲಕ್ಕ ಕುಸಿಲಿ ಬಂದಕ್ಕೆ ರುಚಿಗೆ ಬೇಕಸ್ಟ್ ಉಪ್ಪು ಹಾಕಿ ಪೊರ್ಲುಲಿ ಕಲ್ಸಿ ಏಳ್ ಗುಂಡಿನ ಬಳೊವುನ ಕಾವೆಲಿನ ಒಲೆ ಮೇಲೆ ಇಸಿ ಅದ್ ಕಾಯಕನ ಅದ್ಕೆ ಬಾಳೆಲಿ ದಂಡ್‌ಲಿ ತುಪ್ಪನ ಪೂಜಿ ದೊಡ್ಡ ಸೆಡೆಲಿ ಒಂದೊಂದೇ ಗುಂಡಿಗೆ ಬಂದನ ಹ್ಯೊದೊ. ಗಳ್ಗೆಲಿ ಹಿಟ್ಟ್ ಉಬ್ಬಿ ಬೆಂದ್‌ಕಂಡ್ ಬಂದ್ ಕರೆ ಬುಟ್ಟತ್. ಒಂದು ಕುಂಞಿಕತ್ತಿ ತಕಂಡ್ ಅದರ ಮುಂಡಲಿ ಒಂದೊಂದೇ ಹಿಟ್ಟ್‌ನ ಕರೆ ಬುಡ್ಸಿ, ಮೊಗ್ಚಿ ಹಾಕಿದೊ. ಹಂಞಾ ಹೊತ್ತಾಕನ ಕತ್ತಿನ ಮುಂಡಲಿ ಹಿಟ್ಟ್ ಬೆಂದುಟೋಂತ ಒಂದು ಹಿಟ್ಟ್‌ನ ಕೊಡ್ಪಿ ನೋಡ್ದೊ. ಕತ್ತಿನ ಮುಂಡಕೆ ಬಂದ ಅಂಟಿತಿಲ್ಲೆ. ಸರಿ, ಬೆಂದಿರ್ದೂಂತ ಒಂದೊಂದೇ ಹಿಟ್ಟ್‌ನ ತೆಗ್ದ್‌ದ್ ಪಕ್ಕಲಿ ಇಸಿದ ಬೆಂಡ್‌ಕುಕ್ಕೆಗೆ ಹಾಕಿಸಿದೊ. ಒಂದು ಗಂಟೆಲಿ ಅಪ್ಪದ ಹಿಟ್ಟ್‌ನ ಹೊಯ್ದ್ ಮುಗ್ಸಿದೊ. ಬೊಳ್ಪುನ ಕಾಫಿಗುನೂ, ಮಧ್ಯಾಹ್ನದ ಹಂದಿ ಗೈಪುಗುನೂ ಆತ್‌ಂತ ನೆನ್ಸಿ ಹಿಟ್ಟ್‌ನ ಕುಕ್ಕೆನ ಒಲೆ ಚಿಂಟೆಲಿ ಇಸಿದೊ.

ಬೊಳ್ಪುನ ಕಾಪಿನ ಅಟ್ಟೈಸ್ರ ಮುಗಿಯಕನನೇ ಗಂಟೆ ಹತ್ತ್ ಆತ್. ಅಸ್ಟರ್ಲಿ ಕುಕ್ಕಪ್ಪಣ್ಣ ಕೆಲ್ಸದವ್ರ ಕೈಲಿ ಹಂದಿ ಮಾಸನನೂ, ಒಳ್ಳ ಚಿಲ್ರೆ ದುಡ್ಡುನನೂ ಕಳ್ಸಿದೊ. ಹಾಳೆಲಿ ಕಟ್ಟಿದ ಹಂದಿ ಮಾಸನ ಬಿಚ್ಚಿ ನೋಡಿಕನ ಮಾಸ ಬಾರಿ ಲಾಯ್ಕಿತ್ತ್. ಒಂದೊಂದು ಸೇರ್‌ನ ಎರ್ಡ್ ಕಟ್ಟ್‌ಗ ಇದ್ದೊ. ಅದರೆಲ್ಲಾ ಒಂದು ಪಾತ್ರಕ್ಕೆ ಹಾಕಿ, ತೊಳ್ದ್ ತುಂಡು ತುಂಡು ಮಾಡಿಸಿದೊ. ಮಾಸದ ಅಂದಾಜಿಗೆ ಮೆಣ್ಸ್‌ನ ಹೊಡಿ, ಉಪ್ಪು, ಅರ್ಸಿಣದ ಹೊಡಿ ಹಾಕಿ ಕಲ್ಸಿ ಹಂಞಾ ಹೊತ್ತು ಎಳ್ಯಲೀಂತ ಇಸಿದೊ. ಒಂದು ಐದಾರ್ ದೊಡ್ಡ ದೊಡ್ಡ ಗೆಂಡೆ ನೀರುಳ್ಳಿ ಕೊಯ್ದ್ ಬಟ್ಲ್‌ಲಿ ಇಸಿದೊ. ಎರ್ಡ್ ಗೆಂಡ್ ಬೆಳ್ಳುಳ್ಳಿ ಎಸಳ್‌ನ ಚೋಲಿ ತೆಗ್ದ್ ಅದರನೂ, ಐದಾರ್ ಹಸಿಮೆಣ್ಸ್, ಎರ್ಡ್ ತುಂಡು ಹಸಿ ಸುಂಠಿನನೂ ಕಡ್ಕಲ್‌ಗೆ ಹಾಕಿ ಮರದ ಕೊದಂಟಿಲಿ ಗುದ್ದಿ ಹೊಡಿ ಮಾಡಿ ತೆಗ್ದೊ. ಉಪ್ಪು, ಮೆಣ್ಸ್ ಎಳ್ದ ಹಂದಿ ಮಾಸನ ಅಳೆಗೆಲಿ ಹಾಕಿ ಒಲೆ ಮೇಲೆ ಇಸಿ ಬಾವೊಡೆ ಮುಚ್ಚಿದೊ. ಆಗಾಗ ಅಡಿ ಮೇಲೆ ಮೊಗ್ಚಿಕಂಬತಿದ್ದೊ. ಅದ್ ಬೇಯಕಾಕನ ಗುದ್ದಿದ ಸುಂಠಿ, ಹಸಿ ಮೆಣ್ಸ್, ಬೆಳ್ಳುಳ್ಳಿನ ಮತ್ತೆ ನೀರುಳ್ಳಿನ ಅದ್ಕೆ ಹಾಕಿದೊ. ಒಂದ್ ಸಣ್ಣ ಗ್ಲಾಸ್ ಕೊತ್ತಂಬೆರಿ ಹೊಡಿನನೂ ಅದ್ಕೆ ಸೇರ್ಸಿದೊ. ಸಣ್ಣ ಉರಿಲಿ ಬೇಸಿದೊ. ಹಂದಿ ಮಾಸ ಬೇಯಿದು ಬೇಗ. ಅರ್ಧ ಗಂಟೆಲಿ ಹಂದಿ ಗೈಪು ಬೆಂದ್ ಒರ್ಪಾತ್. ಹಂದಿನ ಸೆಳ್ಳಿಲಿದ್ದ ತುಪ್ಪಲೇ ಅದ್ ಬೆಂದತ್. ನೀರ್ ಸೇರ್ಸಿತ್ಲೆ. ಅದ್ಕೆ ಹಂಞಾ ಚೆಕ್ಕೆ, ಲವಂಗ, ಐದಾರ್ ಒಳ್ಳೆ ಮೆಣ್ಸ್ ಸೇರ್ಸಿ ಕುಟ್ಟಿ ಹೊಡಿ ಮಾಡಿ ಹಾಕಿದೊ. ಲಾಯ್ಕ್‌ನ ಹಂದಿ ಗೈಪು ತಿಂಬಕೆ ರೆಡಿ ಆತ್. ಅವು ಹಂದಿ ಗೈಪುಗೆ ಹುಳಿ ಹಾಕ್ತಿಲ್ಲೆ. ಉಂಬಕನ ಒಂದೊಂದು ಹೋಳು ನಿಂಬುಳಿ ಕೊಡ್ತಿದ್ದೊ. ಉಂಬೋವು ಅದರ ಗೈಪುಗೆ ಹಿಂಡಿಕಂಡ್ ತಿಂಬತಿದ್ದೊ.

ಅಂದ್ ಮದ್ಯಾಹ್ನನೂ, ಇರ್ಳ್‌ನೂ ಗಡ್ಡನ ಹಂದಿ ಗೈಪು ಅಪ್ಪದ ಹಿಟ್ಟ್‌ನ ಊಟ ಆತ್. ಸುರೇಶಂಗೆ ಬಾರೀ ಕುಸಿ ಆತ್.

ಬುಧವಾರ ದಿನ ಇರ್ಳ್ ಸುರೇಶ ಅವ್ವನೊಟ್ಟಿಗೆ "ಅವ್ವಾ, ನಾಳೆ ಮಾಸ, ಗೀಸ ಗೈಪು ಮಾಡ್ಬಡ. ನಾವು ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಪೋಯಿ. ಅಲ್ಲಿ ಪೂಜೆ ಮಾಡಿ ಬರೊಮೊ. ಮದ್ಯಾಹ್ನದ ಊಟ ಅಲ್ಲಿನೇ ಆಗಲಿ"– ಎಂತ ಹೇಳ್ತ್.

ಕಮಲಕ್ಕಂಗೂ ಕುಸಿ ಆತ್. ಅವ್ಕೆ ತುಂಬಾ ದಿನಂದ ಕೆಲ್ಸದ ಗಡಿಬಿಡಿಲಿ ಮನೆಂದ ಹೊರಗೆ ಹೋಕೆ ಆತ್ಲೆ.

"ಅಕ್ಕ್ ಮಂಜ. ಪೋಯಿ"– ಕುಸಿಂದ ಕಮಲಕ್ಕ ಹೇಳ್ದೊ. ಇಸಯ ಅಯ್ಯಣ್ಣ ಗೌಡ್ರ ಕೆಬಿಗೂ ಬೀತ್. ಅವುನೂ ಸಂತೋಸ ಪಟ್ಟೊ.

ಮಾರ್ನೆ ದಿನ ಬೊಳ್ಪುಗೆ ಸಜ್ಜಿಗೆ, ಬಾಳೆ ಹಣ್ಣ್ ಪಳಾರ ಮಾಡಿ ತಲೆ ಮೈ ಮಿಾದ್ ಮಡಿ ಅರ್ವೆ ಉಟ್ಟ್ ಹೊರ್ಟೊ. ಸುರೇಶನೇ ಜೀಪು ಡ್ರೈವಿಂಗ್ ಮಾಡ್ತ್. ಸುಬ್ರಹ್ಮಣ್ಯಕ್ಕೆ ಪಂಜಂದ ಹಕ್ಕಲೆ ತಾನೆ? ಒಂದು ಗಂಟೆ ದಾರಿ. ದೈವಸ್ಥಾನಲಿ ಜನ ತುಂಬಿ ಹೋಗಿದ್ದೊ. ಪೂಜೆನ ರಶೀದಿ ಮಾಡ್ಸಿ, ದೇವಸ್ಥಾನದ ಒಳಗೆ ಹೋಗಿ ಕ್ಯೂಲಿ ನಿತ್ತ್ ಪೂಜೆ ಮಾಡ್ಸಿ, ಹೊರಗೆ ಬಾಕನ ಗಂಟೆ ಒಂದಾತ್. ಅಯ್ಯಣ್ಣ ಮಾಸ್ಟ್ರಿಗೆ ಅಲ್ಲಿನ ಮೆನೆಜರ್ ಗುರ್ತ ಇದ್ದ ಕಾರ್ಣ, ಊಟಕ್ಕೆ ಅವ್ಕೆ ತೊಂದ್ರೆ ಆತ್ಲೆ. ಕ್ಯೂಗೆ ನಿಲ್ಲದೆ, ವಿಸೇಸ ನೆಂಟ್ರಾಗಿ ಮಾಡ್ದ ಅಡ್ಗೆನೇ ಅವ್ಕೆ ಸಿಕ್ಕಿತ್. ಅವು ಉಂಡ್‌ದ್ ಊರಿಗೆ ಹೊರ್ಟೋ. ಬಾಕನ ದಾರಿಲಿ,

"ನಾಳೆ ಅಡ್ಡಬೈಲ್‌ನ ರಾಮಣ್ಣ ಉಗ್ರಾಣಿನ ಮಂಜನ ಮೊದ್ವೆ, ನೆಂಪುಟ್ಟೋ? ನಾಳೆ ನಂಗೆ ಸುಳ್ಯಕ್ಕೆ ಹೋಕುಟ್ಟು. ನಾ ಬೈಕ್‌ಲಿ ಹೋನೆ. ನೀವಿಬ್ಬೊರು ಅಯ್ಯೆ–ಮಂಜ ಪಂಜ ಮಾಲಿಂಗೇಶ್ವರ ದೇವಸ್ಥಾನಕ್ಕೆ ಮೊದ್ವೆಗೆ ಹೋಗಿ ಬನ್ನಿ" ಮಾಸ್ಟ್ರ ಹೇಳ್ದೊ.

"ಸರಿ" ಎಂತ ಅವಿಬ್ಬೊರು ಒಪ್ಪಿದೊ. ಮಾರ್ನೆ ದಿನ ಶುಕ್ರವಾರ ಕಮಲಕ್ಕ ಬೇಗ ಎದ್ದ್ ಪುಂಡಿ ಮಾಡಿಸಿದೊ. ನಿನ್ನೆ ಮಾಡ್ದ ನೆಟ್ಟಿಕ್ಯಾ ಗೈಪು ತುಂಬಾ ಒಳ್ದಿತ್ತ್. ಅದರನೇ ಕೊದಿಸಿ ಇಸಿದೊ. ಕೆಲ್ಸದೊವ್ಕೆ ಕೊಡಿಕೆ ಸುಂದರಿಗೆ ಹೇಳ್ದೊ. ಮದ್ಯಾನಕ್ಕೆ ಸೋಂತೆ ಕ್ಯಾ ಹಲ್ಸಿನ ಬೀಜ ಹಾಕಿ ಗೈಪು ಮಾಡಿಸಿದೊ. ಅಡ್ಕೆ ಕೀಲೆ ಹೊಡ್ದ್ ಜಾಲ್‌ಲಿ ಹರ್ಗಿಕೆ ಇಬ್ಬೊರು ಗಂಡಾಳ್‌ಗ ಬಂದಿದ್ದೊ. ಬೊಳ್ಪುನ ಕಾಪಿ ಮುಗ್ಸಿ ಅಯ್ಯಣ್ಣ ಗೌಡ್ರು ಸುಳ್ಯಕೆ ಹೋದೊ. ಹನ್ನೆರ್ಡ್ ಗಂಟೆಗಾಕನ ಕಮಲಕ್ಕ ನೇರಳೆ ಬಣ್ಣದ ಜರಿ ಸೀರೆ ಉಟ್ಟ್, ಕುತ್ತಿಗೆಗೆ ಎರ್ಡೆಳೆ ಗುಂಡು ಸರ ಹಾಕಿ, ಕೈಗೆ ಮೂರ್ಮೂರು ಚಿನ್ನದ ಬಳೆ, ಬೆರ್ಳ್‌ಗೆ ಮುತ್ತು ಕಟ್ಟಿದ ಉಂಗ್ರ ಹಾಕಿ ಗಡ್ಡ್‌ಲಿ ಮೊದ್ವೆಗೆ ಹೊರ್ಟೊ. ಸುಂದರಿ ಕೊಯ್ದ್ ಕಟ್ಟಿಕೊಟ್ಟ ಜಾಜಿ ಹೂನನೂ ಮುಡ್ಕೊಂಡೊ.

ಕಮಲಕ್ಕ ಬೆಳ್ಳಂಗೆ ಇದ್ದ್ ಗಟ್ಟಿ ಮುಟ್ಟಾದ ಆರೋಗ್ಯ ತುಂಬಿದ ಸರೀರದ ಸುಮಾರ್ ನಲ್ವತ್ತೇಳ್ ವೊರ್ಸದ, ಐದ್ವರೆ ಅಡಿ ಎತ್ತರದ ಹೆಣ್ಣ್. ಅವು ಹೊರ್ಡಿಕನ ತುಂಬಾ ಪೊರ್ಲು ಕಾಂಬತಿದ್ದೊ.

ಮಂಜಂಗೆ ಅವ್ವನ ಪೊರ್ಲು ನೋಡಿ ಬಾಳ ಕುಸಿ ಆತ್. ಅವ್ವ ಹಳ್ಳಿಲಿ ಇದ್ದರೂ ಯಾವ ಪೇಟೆ ಹೆಂಗ್ಸ್‌ಗೆ ಕಮ್ಮಿ ಇಲ್ಲೆ. ಹಳ್ಳಿ ಕೆಲ್ಸ ಮಾಡ್ರೂ ಕೈ ಮೈ ಮನಾರ ಇಸಿಕೊಂಡೊಳೋಂತ ಅಂವ ಮೊನ್ಸ್‌ಲೇ ನೆನ್ಸಿಕಂಡ್, ನೆಗಾಡಿಕಂಡ್,

"ಏನವ್ವಾ? ಗಡ್ದ್‌ಲಿ ಹೊರ್ಟಳರಿ?"– ಎಂತ ಕೇಳ್ತ್.

" ಮತ್ತೆ ಮಂಜನ ಒಟ್ಟಿಗೆ ಹೋಕನ ಕೋಲ ಕಟ್ಟಿಕಂಡ್ ಇರಿಕೆ ಆದೆನಾ? ನಿನ್ನ ಮೊರ್‍ಯಾದೆ ಉಳ್ಸೊಕಲೆ" ಎಂತ ಅವುನೂ ನೆಗಾಡ್ದೊ.

"ನೀವು ಹೇಂಗಿದ್ದರೂ ನನ್ನ ಅವ್ವನೆ. ನಂಗೆ ಅಂತ ದೊಡ್ಡಸ್ತಿಕೆ ಏನ್ ಇಲ್ಲೆ."– ಎಂತ ಸುರೇಶ ಹೇಳ್ತ್.

ಕಮಲಕ್ಕ, ಸುರೇಶ ಜೀಪುಲಿ ಪಂಜ ಪಂಚಲಿಂಗೇಶ್ವರ ದೇವಸ್ಥಾನಕ್ಕೆ ಹೋದೊ. ಮೊದು ಮಂಜನ ಅಪ್ಪ ಉಗ್ರಾಣಿ ಆದ ಕಾರ್ಣ ಒಂದು ಸಾವಿರದಸ್ಟ್ ಜನ ಸೇರಿದ್ದೊ. ಸುರೇಶನ ಹಳೆ ಜೋಸ್ತಿಗ ಎಲ್ಲಾ ಸಿಕ್ಕಿ ಅಂವನ ಮಾತಾಡ್ಸಿದೇ ಮಾತಾಡ್ಸಿದ್. ಪರವೂರ್‌ಲಿ ಚಾಕ್ರಿಲಿ ಇದ್ದ ಮಂಜಂಗೆ ಊರ್‍ನ ಜನ ಕೊಡುವ ಗೌರವ ನೋಡಿ ಕಮಲಕ್ಕಂಗೆ ಎದೆ ತುಂಬಿ ಬಾತ್. ಎಲ್ಲೋವು ಕಮಲಕ್ಕನ ಕೇಳೋವೇ?

"ಮಂಜಂಗೆ ಮೊದ್ವೆ ಉಟ್ಟೋ? ಹೆಣ್ಣ್ ನೋಡ್ಯಳರಿಯೋ?"– ಎಂತ ಕಮಲಕ್ಕಂಗೆ ಉತ್ತರ ಕೊಟ್ಟ್ ಕೊಟ್ಟ್ ಸಾಕಾತ್. ಮೊದು ಮಕ್ಕಳಿಗೆ ಸೇಸೆ ಹಾಕಿ ಉಂಡ್ ಮನೆಗೆ ಬಾಕನ ಗಂಟೆ ಮೂರು ಕಳ್ತ್.

"ಅವ್ವಾ ನಾಳೆ ನಾ ಹೋನೆ. ಹೋಕಾಕನ ಚಿಕ್ಕ ಮಂಗಳೂರಿಗೆ ಹೋಗಿ ಗಿರೀಶನ ನೋಡಿಕಂಡ್ ಹೋನೆ"– ಸುರೇಶ ಹೇಳ್ತ್.

"ಆದು ಮಂಜ. ನಾ ಅಂವಂಗೆ ಕೋಳಿ ಗೈಪು ಮಾಡಿ ಕೊಟ್ಟನೆ. ನಿಂಗೂ ಆತ್. ತಕಂಡೋಗು"– ಕಮಲಕ್ಕ ಹೇಳ್ದೊ.

"ಆತವ್ವಾ" ಸುರೇಶ ಹೇಳ್ತ್.

ಮನೆಗೆ ಬಂದೊವೇ ಸುರುಗೆ ಮಾಡ್ದ ಕೆಲ್ಸ ಅಯ್ಯಣ್ಣ ಮಾಸ್ತ್ರ ಒಟ್ಟಿಗೆ ಸುರೇಶನ ಮೊದ್ವೆ ಸುದ್ದಿ ಹೇಳ್ದೊಂತ, ಅವು ಗಂಡ ಮನೆಗೆ ಬಾವುದರನೇಕಾದ್‌ಕೊಂಡಿದ್ದೊ. ಏಳ್ ಗಂಟೆಗೆ ಅಯ್ಯಣ್ಣ ಮಾಸ್ಟ್ರ ಬಂದೊ. "ಊರೊವೆಲ್ಲಾ ನನ್ನ ಕೇಳ್ದೇ ಕೇಳ್ದ್. ಸುರೇಶನ ಮೊದ್ವೆ ಯಾಗಾಂತ? ನಂಗೆ ಉತ್ತರ ಕೊಟ್ಟ್ ಕೊಟ್ಟ್ ಸಾಕಾತ್. ಇನ್ನ್ ನಾವು ಸುಮ್ಮಂಗೆ ಕುದ್ರುದು ಸರಿ ಅಲ್ಲ.

ಅಂವಂಗೆ ಬೇಗ ಹೆಣ್ಣ್ ಹುಡ್ಕೊಮೊ." ಗಂಡನೊಟ್ಟಿಗೆ ಕಮಲಕ್ಕ ಹೇಳ್ದೊ.

"ಅಂವ ಈಗಳೇ ಮೊದ್ವೆ ಬೇಡಾಂತ ಹೇಳ್ದೆ" ಅಯ್ಯಣ್ಣ ಮಾಸ್ಟ್ರ ಹೇಳ್ದೊ.

"ಅಂವಂಗೇನ್? ಮೊನ್ಸ್‌ಲಿ ಬೇಕ್‌ಂತ ಇರ್ದು. ನಮ್ಮೊಟ್ಟಿಗೆ ಮಾತ್ರ ಹಾಂಗೆ ಹೇಳ್ದೆ" ಕಮಲಕ್ಕ ಹೇಳ್ದೊ.

"ನೀ ಮೆಲ್ಲಂಗೆ ಅಂವನ ಮೊನ್ಸ್‌ಲಿ ಏನುಟ್ಟೂಂತ ಹಂದಾಡ್ಸಿ ನೋಡು"– ಮಾಸ್ಟ್ರ ಕಮಲಕ್ಕಂಗೆ ಅಂವನ ಮೊದ್ವೆಗೆ ಒಪ್ಪುಸುವ ಕೆಲ್ಸನ ಹೇಳ್ದೊ.

ಅಂದ್ ಇರ್‌ಳ್ ಎಲ್ಲೋವು ಉಂಡಾದ ಮೇಲೆ ಕಮಲಕ್ಕ ಮಂಜನ ಕರ್‌ಕಂಡ್ ಉಪ್ಪರಿಗೆಗೆ ಹೋದೋ. ಅವ್ವ ನನ್ನ ಯಾಕೆ ಇಲ್ಲಿಗೆ ಕರ್‌ಕೊಂಡ್ ಬಂದೋ. ಏನೋ ದೊಡ್ಡ ಜಂಬರನೇ ಇರೊಕೂಂತ ಗ್ರೇಸಿಕಂಡ್ ಅವ್ವನೊಟ್ಟಿಗೆ ಉಪ್ಪರಿಕೆ ಮೆಟ್ಲ್‌ನ ಹತ್ತಿತ್ತ್.

"ಇಂದ್ ಮಂಜ. ನೀ ಇನ್ನ್ ಮೊದ್ವೆ ಆಗದೆ ಇರ್ದು ಸರಿ ಅಲ್ಲ. ನಾವು ಗೂಡೆನ ನೋಡಿವೆ. ನೀ ಒಪ್ಪಿರೆ ಈ ಮಳ್ಗಾಲ ಕಳ್ದ ಕೂಡ್ಲೆ ಮಾರ್ಣಮಿ ಸಮಯಲಿ ಮೊದ್ವೆ ಮಾಡೊಮೊ. ನಂಗೆ ಜನಂಗಳಿಗೆ ಉತ್ತರ ಕೊಟ್ಟ್ ಕೊಟ್ಟ್ ಸಾಕಾತ್." ಎಂತ ಕಮಲಕ್ಕ ಮಂಜನೊಟ್ಟಿಗೆ ಹೇಳ್ದೊ.

ಸುರೇಶ ಹಂಞ ಹೊತ್ತ್ ಮಾತಾಡ್‌ತ್ಲೆ. ಇನ್ ಅವ್ವ ನನ್ನ ಬುಡ್ದುಲ್ಲೇಂತ ಗೊತ್ತಾತ್. ಆಗ ಅಂವ ಮೆಲ್ಲಂಗೆ ಬಾಯ್ಬುಟ್ಟದೆ.

"ಅವ್ವಾ, ನೀವು ಬೊಯ್ಯೊಡಿ. ನಾ ಒಂದ್ ಗೂಡೆನ ನೋಡಿ ಇಸ್ಯಳೆ. ನೀವ್ಗೆ ಒಪ್ಪಿಗೆ ಆದರೆ ಆತ್. ಎಂತ ಹೇಳ್ತ್.

ಕಮಲಕ್ಕಂಗೆ ಮಂಜನ ಮಾತ್ ಕೇಳಿ ಆಕಾಸ ತಲೆ ಮೇಲೆ ಬಿದ್ದಾಂಗಾತ್. ನನ್ನ ಮಂಜ ಸಣ್ಣಂವ, ಅಂವಂಗೆ ಏನೂ ಗೊತ್ತಿಲ್ಲೇಂತ ಇಸ್ಟೊತ್ತ್ ಮುಟ್ಟ ಅವು ನೆನ್ಸಿದೊ. ಈಗ ನೋಡಿಕನ ಕತೆನೇ ಬೇರೆ ಆಗುಟ್ಟು. ಆದರೆ ಅವು ಅವರ ಮೊನ್ಸ್‌ನ ತಳಮಳನ ಹೊರಗೆ ತೋರ್ಸಿಕಂಡತ್ಲೆ ಸಮದಾನಲಿ,

ಯಾರ್ ಮಂಜ ಹೇಳ್. ನಿಂಗೆ ಒಪ್ಪಿಗೆ ಆದರೆ ನಾವ್ಗೂ ಒಪ್ಪಿಗೆನೆ. ನಾ ನಿನ್ನ ಅಪ್ಪನ ಒಪ್ಪಿಸಿನೆ" ಎಂತ ಹೇಳ್ದೊ.

ಸುರೇಶ, "ನಂಗೆ ಫೇಸ್ ಬುಕ್ಕ್‌ಲಿ ಪರ್ಚಯ ಆದ ಗೂಡೆ, ಕೊಡಗ್‌ನ ಮೂರ್ನಾಡ್‌ದ್ ಬೆಂಗ್ಳೂರ್ಲಿ ದೊಡ್ಡ ಕಂಪೆನಿಲಿ ಚಾಕ್ರಿಲಿ ಉಟ್ಟು.

"ಗೂಡೆನ ಪಟಮೆನಿ ನಿನ್ನ ಹಕ್ಕಲೆ ಉಟ್ಟೋ?" ಕಮಲಕ್ಕ ಕೇಳ್ದೊ.

ಸುರೇಶ ಅಂವನ ಮೊಬ್ಯಾಲ್‌ಲಿ ಇದ್ದ ಐದಾರ್ ಪಟಗಳ ತೋರ್ಸಿತ್. ಪೇಂಟ್, ಟೀ ಶರ್ಟ್ ಹಾಕಿದ್, ಚೂಡಿದಾರ್ ಹಾಕಿದ್, ಸೀರೆ ಉಟ್ಟದ್ ಎಲ್ಲಾ ತರದ ಪಟಗ ಇದ್ದೊ. ಪಟಲಿ ಗೂಡೆ ಬಾಳ ಪೊರ್ಲು ಕಾಂಬತಿತ್.

ಪಟಗಳ ನೋಡಿ ಕಮಲಕ್ಕ, " ಆತ್ ಮಂಜ ನಿನ್ನ ಅಪ್ಪನೊಟ್ಟಿಗೆ ಹೇಳ್ನೆ." ಎಂತ ಹೇಳ್ದೊ.

ಮೊಲ್ಗಿಕನ ಅಯ್ಯಣ್ಣ ಗೌಡ್ರ ಒಟ್ಟಿಗೆ ಕಮಲಕ್ಕ ನಡ್ದ ಸಂಗತಿ ಎಲ್ಲಾ ಹೇಳ್ದೊ. ಅದರ ಕೇಳಿ ಅವು,

"ಒಳ್ಳೆದಾತ್ ಬುಡು. ನಾವ್ಗೆ ಹೆಣ್ಣ್ ಹುಡ್ಕುವ ಕೆಲ್ಸ ನಿತ್ತತ್. ಅವ್ಕವ್ಕೆ ಬೇಕಾದರ ಅವವೇ ಹುಡ್ಕುದು ಒಳ್ಳೆದ್. ನಾಳೆ ನಮ್ಮ ದೂರಿಕಿಲ್ಲೆಲ್ಲ" ಎಂತ ಹೇಳ್ದೊ.

"ಅಲ್ಲ, ನಾ ಹೀಂಗೆ ಹೇಳ್ನೇಂತ ನೀವು ಬೇಜಾರ ಮಾಡ್ಬಡಿ. ಕೊಡ್ಗ್‌ನ ಗೂಡೆಗ ನಾವ್ಗೆ ಹೊಂದಿಕೊಂಬೊನೋ? ನಮ್ಮ ಊರ್‍ನ ಗೂಡೆ ಆಗಿದ್ದರೆ ಒಳ್ಳೆದಿತ್ತ್‌ಂತ ನನ್ನ ಅಭಿಪ್ರಾಯ," ಕಮಲಕ್ಕ ಹೇಳ್ದೊ.

"ಅದೇನ್ ನಮ್ಮೊಟ್ಟಿಗೆ ಇರೊಕೊ. ಮೊದ್ವೆ ಆಗಿ ಅಂವ ಹೆಣ್ಣ್‌ನ ಕಟ್ಟಿಕಂಡ್ ಹೋದೆ. ನೀ ಇಲ್ಲದ ಆಸೆನ ಇಸಿಕಂಬಡ. ನಮ್ಮ ತಲೆ ಅಡಿಗೆ ನಮ್ಮ ಕೈ. ಈಗನ ಕಾಲದ ಮಕ್ಕಳ ನಂಬಿಕೆ ಆಕಿಲ್ಲೆ, ಅಕೆರಿಗೆ ನಿಂಗೆ ನಾ, ನಂಗೆ ನೀ. ಯಾರೂ ಸಿಕ್ಕುದ್ಲೆ. ನೆಂಪಿಟ್ಟ್‌ಕಾ.."– ಎಂತ ಅಯ್ಯಣ್ಣ ಮಾಸ್ಟ್ರ ಹೇಳ್ದೊ.

ಕಮಲಕ್ಕ ಮತ್ತೆ ಮಾತಾಡ್ತಿಲ್ಲೆ. ಅವರವರ ಹಣೆಲಿ ಬರ್ದಾಂಗೆ ಆದೇಂತ ನೆನ್ನಿಕಂಡ್ ಗುಡಿಹೊದ್ದ್ ಮೊಲ್ಗಿದೊ. ಅವ್ಕೆ ನಿದ್ದೆನೇ ಬಾತ್ಲೆ. ಅತ್ತ ಇತ್ತ ಹೊಣ್ಕಿ, ಎದ್ದ್ ಫ್ರಿಡ್ಜ್‌ಲಿ ಇಸಿದಕೋಳಿ ಮಾಸನ ಉಗುರು ಬೆಚ್ಚ ನೀರ್‍ಲಿ ಹಾಕಿಸಿದೊ. ನಾಳೆ ಸುರೇಶ ಹೊರ್ಡುದೂಂತ, ಮೊದ್ವೆಂದ ಬಂದೊವೇ ಕುಂಞಣ್ಣನೊಟ್ಟಿಗೆ ಹೇಳಿ, ಮೊಟ್ಟೆ ಇಸುವ ಒಂದು ಹೇಂಟೇನ ಕೊಂದ್ ಮಾಸ ಮಾಡಿಕೆ ಹೇಳಿದ್ದೊ. ಕುಂಞಣ್ಣ ಅವು ಹೇಳ್ದಾಂಗೆ ಮಾಸ ಮಾಡಿ ಕೊಟ್ಟತ್. ಅದರ ಫ್ರಿಡ್ಜ್‌ಲಿ ಇಸಿದ್ದೊ.

ಒಂದು ತಪಲೆ ತಕಂಡ್ ಅದ್ಕೆ ಅವರ ಕಣ್ಣಂದಾಜಿಗೆ ಮೆಣ್ಸ್‌ನ ಹೊಡಿ, ಕೊತ್ತಂಬರಿ ಹೊಡಿ, ಜೀರಿಗೆ, ಅರ್‍ಶಿಣ ಹೊಡಿ ಹಂಞ ಒಳ್ಳೆ ಮೆಣ್ಸ್ ಹೊಡಿ ಹಾಕಿ ಕಲ್ಸಿಸಿದೊ. ಅದ್ಕೆ ಅರ್ಧ ಗ್ಲಾಸ್ ಮೊಸ್ರ್, ರುಚಿಗೆ ಬೇಕಾದಸ್ಟ್ ಉಪ್ಪುನೂ ಹಾಕಿಸಿದೊ.

ಕೋಳಿ ಮಾಸ ನೀರ್‌ಲಿಬುಡಿಕಾಕನ ಅದರ ಪೊರ್ಲುಲಿ ತೊಳ್ದ್ ಹಿಂಡಿ ಹೊಡಿಗ ಇದ್ದ ತಪಲೆಗೆ ಹಾಕಿ ಪೊರ್ಲು ಕಲ್ಸಿ ಇಸಿದೊ. ಮೊಲ್ಗುವ ಕೋಣೆಗೆ ಬಂದ್ ನೋಡ್ದೊ. ಅಯ್ಯಣ್ಣ ಮಾಸ್ಟ್ರ ಗೊರ್ಕೆ ಹೊಡ್ಯತಿದ್ದೊ. ಇವ್ಕೆ ಯಾವ ಚಿಂತೆನೂ ಇಲ್ಲೆ. ಎಲ್ಲಾ ನಂಗೆ ಒಬ್ಬಂಗೇಂತ ನೆನ್ನಿಕಂಡ್ ಅಡ್ಗೆ ಕೋಣೆಗೆ ಬಂದೊ. ಒಲೆಲಿದ್ದ ಕಿಚ್ಚಿನ ಸರಿ ಮಾಡ್ದೊ. ಬೂದಿ ಒಳಗೆ ಗೆಂಡ ಇತ್ತ್. ಅದ್ಕೆ ಒಂದ್ ನಾಕ್ ಒಣ್ಗಿದ ಮಡ್ಲ್‌ನ ಇಸಿ ಮೆಲ್ಲಂಗೆ ಕಬ್ಬಿಣದ ಓಟೆಲಿ ಕಿಚ್ಚಿ ಊರ್‍ಗಿದೊ. ಹಂಞ ಹೊತ್ತ್‌ಲಿ ಕಿಚ್ಚಿ 'ಬೊಗ್' ಎಂತ ಹೊತ್ತಿಕಂಡತ್. ನಾಕಾರ್ ಒಣ್ಗಿದ ಸೊಯ್ದೆ

ಚೆರುಂಬುನ ಒಲೆಗೆ ಇಸಿದೊ. ನಾಳೆ ಬೊಳ್ಪುಗೆ ಅಡ್ಗೆಗೆ ಬೇಕಾದ ಸೌಯ್ದೆನ ಹಿಂಬೊತ್ತ್ ಸುಂದರಿ ತಂದ್ ಒಲೆ ಹಕ್ಕಲೆ ಇಸಿ ಹೋಗಿತ್ತ್. ಹಂಞಾ ಹೊತ್ತ್‌ಲಿ ಕಿಚ್ಚಿ ಹೊತ್ತಿಕಂಡತ್. ತಪಲೆಲಿ ಇದ್ದ ಮಾಸನ ಕೈಲಿ ಮೊಗ್ಚಿ ನೋಡ್ಯೊ. ಅದ್ ಮಾಸಲಿದ್ದ ನೀರ್ ಬುಟ್ಟ್ ಒರ್ಪಾಗಿತ್ತ್. ಈಗ ಮಾಸ ಉಪ್ಪು, ಮೆಣ್ಸ್ ಎಳ್ದಿರ್‍ದೂಂತ ನೆನ್ಸಿ, ಅದರ ಮಾಸ ಮಾಡುವ ಗೈಪುನ ಅಳೆಗೆಗೆ ಹಾಕಿದೊ. ಅವು ಕೋಳಿ ಗೈಪು ಮಾಡಿಕೆ ಎರ್ಡ್ ಅಳಗೆಗಳ, ಮತ್ತೆ ಹಂದಿ ಗೈಪು ಮಾಡಿಕೆ ಒಂದು ಅಳಗೆನ ಬೇರೆ ಇಸಿದ್ದೊ. ಅದರ್‍ಲಿ ಬೇರೆಯಾವ ಗೈಪುನನೂ ಮಾಡ್ತಿತ್ಲೆ. ಕಾಡ್ ಮಾಸಕ್ಕೇಂತ ಬೇರೆ ಒಂದು ಅಳಗೆ ಇತ್ತ್. ಅವರ ಪ್ರತಿ ಒಂದು ಕೆಲ್ಸಲಿನೂ ಒಂದು ಅಚ್ಚ್ ಕಟ್ಟ್ ಇತ್ತ್. ನೆಲುಲಿದ್ದ ಅಂದ್ ಬೊಳ್ಪುಗೆ ಕಡ್ಡ್ ತೆಗ್ದ ಒಂದು ಮುದ್ದೆ ಬೆಣ್ಣೆನ ತಕಂಡ್, ಮಾಸದ ಅಳಗೆನ ನೊಡುಲಿ ಮಾಸನ ಅತ್ತ ಇತ್ತ ಮಾಡಿ ಬೆಣ್ಣೆನ ಇಸಿದೊ. ಈ ಬೆಣ್ಣೆ ಸಾಕಾಕಿಲ್ಲೆಂತ ನಿನ್ನೆ ಕಡ್ಡ್ ತೆಗ್ದ ಬೆಣ್ಣೆನನೂ ಅದ್ಕೆ ಹಂಞಾ ಸೇರ್ಸಿದೊ. ಅದರ ಒಲೆ ಮೇಲೆ ಇಸಿ ಬಾವೊಡೆ ಮುಚ್ಚಿಸಿದೊ. ಹಂಞಾ ಸೆಕೆ ಬಾಕನ ಬಾವೊಡೆ ತೆಗ್ದ್ ಸೆಡೆಲಿ ಮೊಗ್ಚಿ, ಬಾವೊಡೆ ಮುಚ್ಚಿದೊ. ಒಲೆ ಹಕ್ಕಲೆ ಒಂದು ಮುಕ್ಕಾಲ್ ಮಣೆ ಇಸಿಕಂಡ್ ಮಂಞನ ಗೂಡೆನ ಇಸಯನೇ ಏಚನೆ ಮಾಡ್ಯೊ. ಬೆಣ್ಣೆ ಕರ್‍ಗಿ, ಅದರ್‍ಲೇ ಬೇತಿದ್ದ ಮಾಸನ ಆಗಾಗ ಮೊಗ್ಚಿಕಂಡೇ ಇದ್ದೊ. ನೀರ್‌ನ ಪಸೆ ಆರಿಕಾಕನ ಕಿಚ್ಚಿನ ಹಿರ್‍ದ್, ಬರೇ ಗೆಂಡಲೇ ಅದ್ ಬೇಯಕನ ಮುಟ್ಟ ಏಚನೆ ಮಾಡಿಕಂಡೇ ಕುದ್ದೊ.

"ಅಲ್ಲಾ, ನನ್ನ ಮಂಜ ಇಸ್ಟ್ ಉಸಾರ್ ಉಟ್ಟೂಂತ ನಂಗೆ ಗೊತ್ತೇ ಇತ್ಲೆ. ನಾ ನೆನ್ಸಿದೆ, ನಾ ಹೇಳ್ದ ಗೂಡೆನನೇ ಅಂವ ಮೊದ್ವೆ ಆದೂಂತ." ಎಂದೆಲ್ಲಾ ಏಚನೆ ಮಾಡಿಕಂಡ್ ಕುದ್ದೊ. ಹೊತ್ತ್ ಹೋದೆ ಗೊತ್ತಾತ್ಲೆ. ಮೊನ್ಸ್ ಬೇರೆ ಕಡೆ ಇದ್ದರೂ, ಅಬ್ಯಾಸ ಬಲಂದ ಅವರ ಕೈ ಕೆಲ್ಸ ಮಾಡಿಕಂಡೇ ಇತ್ತ್. ಅಡ್ಗೆ ಮಾಡ್ದರ್‍ಲಿ ಅವು ಎತ್ತಿದ ಕೈ. ಅವು ಮಾಡ್ದ ಅಡ್ಗೆ ಒಂದು ದಿನನೂ ಅಡಿ ಹಿಡ್ದತ್ಲೆ. ಉಪ್ಪು ಹೆಚ್ಚಾಗ್‌ತಿತ್ಲೆ. ಅವ್ಕೆ ಅಡ್ಗೆ ಮಾಡಿ ಮಾಡಿ ರೂಢಿ ಆಗಿತ್ತ್.

ಬಾವೊಡೆ ತೆಗ್ದ್ ನೋಡ್ಯೊ. ಬೆಣ್ಣೆ ಹೋಗಿ, ತುಪ್ಪ ಆಗಿ ಅದರ್‍ಲಿ ಬೆಂದ ಮಾಸ ನೀರ್ ಪಸೆ ಆರಿ ಹೊಡಿ ಹೊಡಿ ಆಗಿತ್ತ್. ಒಂದು ತುಂಡು ತೆಗ್ದ್ ಒಂದ್ ತಟ್ಟೆಗೆ ಹಾಕಿ ತಿಂದ್ ನೋಡ್ಯೊ. ಗೈಪು ಉಪ್ಪು, ಹುಳಿ, ಕಾರ ಎಳ್ದ್ ಕೊಟಕ್ಕೆನೆ ಆಗಿತ್ತ್. ಆ ಗೈಪು ಒಂದು ವಾರ ಮುಟ್ಟ ಇಸಿರೂ ಹಾಳಾಗ್ತಿತ್ಲೆ. ಅದಕ್ಕೆ ನೀರುಳ್ಳಿ, ಬೆಳ್ಳುಳ್ಳಿ ಹಾಕ್‌ತಿತ್ಲೆ. ಗರಂ ಮಸಾಲೆನೂ ಹಾಕ್‌ತಿತ್ಲೆ.

ಅಳೆಗೆಲಿ ಒರ್ಪಾಗಿ ಬೆಂದ ಗೈಪುಗೆ ಸೆಡೆ ಹಾಕಿ ಒಂದು ಬಾವೊಡೆನ ಕಂಕಣಿ ಹಾಕಿ ಮುಚ್ಚಿದೊ. ಸೆಡೆ ಹಾಕಿಸಿದ್ದರ್‌ಂದ, ಸೆಕೆಗೆ ಬಾವೊಡೆ ಅಡಿಲಿ ಬೆಗರ್ ನೀರ್ ನಿಲ್ತಿತ್ಲೆ. ಬೆಗರ್ ನೀರ್ ಗೈಪುಗೆ ಬಿದ್ದರೆ ಗೈಪು ಬೇಗ ಹಾಳಾದೇಂತ

ಅವ್ಕೆ ಅನ್ಸವಲಿ ತಿಳ್ದಿತ್ತ್. ಆ ಅಳೆಗೆನ ಮೇಲೆ ಒಂದು ದೊಡ್ಡ ಮಣೆನ ಇಸಿ ಅಡ್ಡೆಗ್ಗೆ ಕೋಣೆಗೆ ಬಾಕಿಲ್ ಹಾಕಿ, ನೀರೆಡಿಗೆ ಹೋಗಿ, ಮೈನೀರ್ ಬುಟ್ಟ್, ಕೈ ಕಾಲ್ ತೊಳ್ದ್ ಮೊಲ್ಲುವ ಕೋಣೆಗೆ ಬಂದ್ ಮೊಲ್ಗಿದೊ. ನೋಡಿಕನ ನಡಿರ್‍ಳ್ ಗಂಟೆ ಹನ್ನೆರ್ಡ್ ಆಗಿತ್ತ್.

ಇರ್‍ಳ್ ಮೊಲ್ಗಿಕನ ಹೊತ್ತಾದರೂ ಬೊಳ್ಪುಗೆ ಅಬ್ಯಾಸ ಬಲಂದ ಎದ್ದ್ ಮಂಜಂಗೆ ಚಾಯ, ತಿಂಡಿ ರೆಡಿ ಮಾಡ್ದೊ. ಬಳ್ಪದ ಕಾವೆಲಿಲಿ ಬಡ್ಡ್ ರೊಟ್ಟಿ ಹೈೂದ್, ಮಂಜಂಗೆ ಕೋಳಿ ಗಸಿನೊಟ್ಟಿಗೆ ತಿಂಬಕೆ ಕೊಟ್ಟೊ. ಉಳ್ದೋವ್ಕೆ ನಿನ್ನೆನ ತರ್ಕಾರಿ ಸಾರ್‌ನ ಕೊದಿಸಿ ಇಸಿದೊ.

ಬೊಳ್ಪುನ ಚಾಯ ಕುಡ್ದ ಮೇಲೆ ಅಯ್ಯಣ್ಣ ಗೌಡ್ರು ಮಂಜನೊಟ್ಟಿಗೆ,

"ಸುರೇಶಾ, ನೀ ನಿನ್ನ ಗೂಡೆಗೆ ಹೇಳ್. ನಾವು ಬರ್ವ ಐತ್ವಾರ ಗೂಡೆನ ಮನೆಗೆ ಹೆಣ್ಣ್ ನೋಡಿಕೆ ಹೋದವೇಂತ. ಅದ್‌ನೂ ಬೆಂಗ್ಳೂರ್‌ಂದ ಊರಿಗೆ ಹೋಗಲಿ. ನೀ ಸನ್ವಾರನೇ ಇಲ್ಲಿಗೆ ಬಾ. ಗೂಡೆನ ಮನೆ ಎಡ್ರಸ್ ಕೊಡು." ಎಂತ ಹೇಳ್ದೊ.

ಸುರೇಶಂಗೆ ಆಕಾಸ ಅಂಗೈಗೆ ಸಿಕ್ಕಿದಂಗಾತ್. ಎದೆ ಉಬ್ಬಿ ಕಣನೀರ್ ತುಂಬಿತ್. ನನ್ನ ಅಪ್ಪ ಅವ್ವ ಎಸ್ಟ್ ಒಳ್ಳೆವು. ಮಕ್ಕಳ ಇಸ್ಟಕೆ ಎದ್‌ರ್ ಹೋದ್ಲೇಂತ ನೆನ್ಸಿಕಂಡ್, ಅಪ್ಪಂಗೆ ಗೂಡೆನ ಮನೆನ ಎಡ್ರಸ್ ಕೊಟ್ಟತ್.

ಬೊಳ್ಪುನ ತಿಂಡಿ ತಿಂದ್ ಸುರೇಶ ಹುಬ್ಬಳ್ಳಿಗೆ ಹೊರ್ಡಿಕೆ ಮಿಾಯಕೆ ಹೋತ್.

ಕಮಲಕ್ಕ ತೊಳ್ದ್ ಒಣ್ಗಿಕೆ ಇಸಿದ ಎರ್ಡ್ ಕಾಲಿ ಹೋರ್ಲಿಕ್ಸ್ ಕುಪ್ಪಿಗಳ ತಕಂಡ್, ಅದರ ಮಡಿ ಅರ್‍ವೆಲಿ ಪೂಜಿ, ಅದರ್ಲಿ ಇಬ್ರೊರು ಮಂಜಂದರಿಗೆ ಸಮಪಾಲ್ ಮಾಡಿ ಕೋಳಿ ಗೈಪುನ ತುಂಬಿಸಿ, ಮುಚ್ಚಳ ಗಟ್ಟಿ ಮಾಡಿ, ಒಂದು ಪ್ಲೇಸ್ಟಿಕ್ ಚೀಲಲಿ ಹಾಕಿ ಬಿಗ್ದ್ ಕಟ್ಟಿ ಅವನ ಬೇಗ್‌ಲಿ ಇಸಿದೊ.

ಸುರೇಶ ಮಿಾದ್ ಟಪ್ ಟಾಪ್ ಆಗಿ ಹೊರ್ಟ್ ನಿಂತ್ ದೇವ್ರಿಗೆ ಕೈ ಮುಗ್ದ್, ಅಪ್ಪ ಅವ್ವನ ಕಾಲಿಗೆ ಅಡ್ಡ ಬಿದ್ದ್ ಜೀಪ್ ಹತ್ತಿತ್. ಕುಂಞಣ್ಣ ಸುರೇಶನ ಸಾಮಾನ್‌ನ ಎಲ್ಲಾ ಜೀಪುಲಿ ಇಸಿತ್. ಅಯ್ಯಣ್ಣ ಮಾಸ್ಟ್ರ ಒಂದು ಕೈ ಚೀಲಲಿ ನಾಕ್ ಬೆಂಡನನೂ ಕೆತ್ತಿ ಹಾಕೊಂಡೊ. ಎರ್ಡ್ ಸುರೇಶಂಗೆ, ಎರ್ಡ್ ಗಿರೀಶಂಗೆ.

ಗೌಡ್ರು ಜೀಪ್ ಹತ್ತಿ ಜೀಪು ಸ್ಟಾರ್ಟ್ ಮಾಡಿ ಬನ್ನೇಂತ ಹೆಣ್ಣ್‌ಗೆ ಕಣ್ ಸನ್ನೆಲೇ ಹೇಳ್ದೊ. ಸುರೇಶನೂ ಕೈ ಬೀಸಿತ್. ಕಮಲಕ್ಕ ಇಬ್ರೊರಿಗೂ ಕೈ ಬೀಸಿ, ಕಣ್ಣ್ ತುಂಬಿದ ನೀರ್‌ನ ಸೀರೆನ ಸೆರ್‌ಂಗ್‌ಲಿ ಒರ್ಸಿಕಂಡ್ ಮನೆ ಒಳಗೆ ಹೋದೊ. ಸುರೇಶನ ಸುಬ್ರಹ್ಮಣ್ಯ ಬಸ್ ಸ್ಟೇಂಡ್‌ಲಿ ಬಸ್ ಹತ್ತಿಸಿ ಅಯ್ಯಣ್ಣ ಮಾಸ್ಟ್ರ ಮನೆಗೆ ಬಂದೊ.

* * * * *

4. "ಹೆಣ್ಣ್ ನೋಡಿಕೆ ನೆಂಟ್ರ ಬಾಕೆ ಹೇಳ್ದೊ"

ಸುರೇಶ ಸನ್ವಾರ ಹುಬ್ಬಳ್ಳಿಗೆ ಹೋದರೆ, ಸೋಮಾರ ದಿನ ಮೂರ್ನಾಡ್‌ಂದ ಅಯ್ಯಣ್ಣ ಮಾಸ್ಟ್ರ್‌ಗೆ ಗೂಡೆನ ಅಪ್ಪ ಬೆಳ್ಯಪ್ಪನವರ್‌ಂದ ಫೋನ್ ಬಾತ್.

"ಹಲೋ, ಹಲೋ, ನಾ ಮೂರ್ನಾಡ್‌ಂದ ಮಾತಾಡ್ತು. ಓಟೆಕಾಡ್ ಎಸ್ಟೇಟ್‌ನ ಬೆಳ್ಯಪ್ಪಾಂತ ನೀವು ಅಯ್ಯಣ್ಣ ಮಾಸ್ಟ್ರ ಅಲ್ಲನೋ?"

"ಹೌದ್ ಹೌದ್. ನಮಸ್ಕಾರ. ನಾ ಅಯ್ಯಣ್ಣ ಮಾಸ್ಟ್ರ ಮಾತಾಡ್ದು. ಹೇಳಿ, ಹೇಳಿ." ಅಯ್ಯಣ್ಣ ಮಾಸ್ಟ್ರ ಇತ್ತಂದ ಹೇಳ್ದೊ.

"ಸುರೇಶ ಮೊನ್ನೆ ಫೋನ್ ಮಾಡ್ತ್. ನೀವು ನಾಳ್ದ ಐತ್ವಾರ ಬಂದರೇಂತ." ಅತ್ತಂದ ಬೆಳ್ಯಪ್ಪನೊವು ಹೇಳ್ದೊ.

"ಹೌದು, ಹೌದು ನಾವು ಐತ್ವಾರ ಗೂಡೆನ ನೋಡಿಕೆ ಒಂದ್ ಹತ್ತ್ ಹನ್ನೆರ್ಡ್ ಜನ ಬಂದವೆ. ನಿಮ್ಮ ಮನೆ ಎಡ್ರಾಸ್ ಮಂಜ ಕೊಟ್ಟುಟ್ಟು." ಅಯ್ಯಣ್ಣ ಮಾಸ್ಟ್ರ ಹೇಳ್ದೊ.

"ನೀವು ಮನೆ ಹುಡ್ಕಿಕೆ ಕಷ್ಟ ಪಡ್ಬೋಡಿ. ನಾ ನನ್ನ ಬಾವ ನೆಂಟನ ಮಡ್ಕೇರಿ ಟೋಲ್ ಗೇಟ್ ಹಕ್ಕಲೆ ನಿಲ್ಸಿನೆ. ಅಂವ ನಿಮ್ಮ ಕರ್ಕಂಡ್ ಬಾದು."– ಬೆಳ್ಯಪ್ಪನೊವು ಅತ್ತಂದ ಹೇಳ್ದೊ.

"ಬಾಳ ಉಪಕಾರ ಆತ್. ನಾವ್ಗೆ ಮನೆ ಹುಡ್ಕುವ ಕೆಲ್ಸ ತೊಪ್ಪಿತ್. ಹಂಗೇ ಮಾಡಿ ನಮಸ್ಕಾರ"– ಅಯ್ಯಣ್ಣ ಮಾಸ್ಟ್ರ ಫೋನ್ ಇಸಿದೊ.

"ಕೊಡ್ಗ್‌ನೊವು ಜನ ಆದುನೆ. ನಮ್ಮ ಇತ್ತನಂವರಾಂಗೆ ಅಲ್ಲ. ನಾವ್ಗೆ ಕಷ್ಟ ಆಕೆ ಬೊತ್ತ್‌ಂತ ಅವು ಮಡ್ಕೇರ್ಲಿ ಜನ ನಿಲ್ಸುವೆ ಗಡ." ಎಂತ ಹೇಳ್ದೊ. ಫೋನ್‌ಲಿ ಮಾತಾಡಿಕನ ಕಮಲಕ್ಕನೂ ಅಲ್ಲೆ ಪಕ್ಕಲಿ ಇದ್ದೊ.

"ಬಾರಿ ಹೊಗ್ಳ್‌ಬೊಡಿ. ಸುರುಗೆ ನಮ್ಮ ಅಟ್ಟಲಿಸುವೆ. ಅವರ ಬೇಳೆ ಬೆಂದ ಮೇಲೆ ನಮ್ಮ ಒಮ್ಮೆನೇ ಕೆಳಗೆ ಕುಕ್ಕಿಕೆ ಉಟ್ಟು"– ಕಮಲಕ್ಕ ಹೇಳ್ದೊ.

ಅಯ್ಯಣ್ಣ ಮಾಸ್ಟ್ರ ಮಾತಾಡ್‌ತ್ಲೆ. ಹೆಣ್ಣ್‌ಗೆ ಮಂಜ ಕೊಡ್ಗ್‌ನ ಗೂಡೆನ ಮೊದ್ವೆ ಆದು ಒಂದು ಚೂರು ಮೊನ್ನಿಲ್ಲೇಂತ ಅವ್ಕೆ ಗೊತ್ತಾಗುಟ್ಟು.

ಬುದ್ವಾರ ದಿನ ಅಯ್ಯಣ್ಣ ಮಾಸ್ಟ್ರ ಹೆಣ್ಣ್‌ನ ಕರ್ಕಂಡ್ ವಿಟ್ಲಕ್ಕೆ ಅತ್ತೆ– ಮಾಂವನ ನೋಡಿಕೆ ಹೋದೊ. ಕಮಲಕ್ಕನೂ ತವುರು ಮನೆಗೆ ಹೋಗದೆ ಮೂರ್ನಾಕ್ ವೊರ್ಸ ಆತ್. ಅಪ್ಪ– ಅವ್ವನ ನೋಡಿಕೆ ಹೋಕನ ಬರಿಗೈಲಿ ಹೋಕೆ ಬೊತ್ತ್‌ಂತ ಮೆಣ್ಸ್‌ನ ಹೊಡಿ ಹಾಕಿ, ಬೆಣ್ಣೆಲಿ ಕೋಳಿ ಗೈಪು ಮಾಡಿ ಒಂದ್ ದೊಡ್ಡ ಹೋರ್ಲಿಕ್ಸ್ ಕುಪ್ಪಿಲಿ ಹಾಕಿ ಹಿಡ್ಕೊಂಡೊ. ಒಂದ್ನೇರಕ್ಕಿನ ನೀರ್ ದೋಸೆನನೂ ಮಾಡಿ ಬುತ್ತಿ ಕಟ್ಟಿಕಂಡೊ. ಪುತ್ತೂರ್ ಪೇಟೆಲಿ ಮಾಸ್ಟ್ರ ದೊಡ್ಡಪ್ಪಂದರ ಎರ್ಡ್ ಮನೆಗಳಿಗೂ, ಅತ್ತೆ ಮನೆಗೂ ಮೂರು ಪೊಟ್ಟ ಸಿಂಯಿ, ಕಾರ ತಿನ್ಸ್‌ನ ಕಟ್ಟಿಸಿಕೊಂಡೊ.

ಹತ್ತ್ ಗಂಟೆ ಸುಮಾರ್‌ಗೆ ಅತ್ತೆ– ಮಾಂವನ ಮನೆಗೆ ಮುಟ್ಟಿದೊ. ಅವ್ಕೆ ಮಗ, ಅಳ್ಯನ ನೋಡಿ ಸಂತೋಸನೂ, ಹೇಳದೆ ಕೇಳದೆ ದಿಡೀರ್‌ಂತ ಒಂದು ಫೋನುನೂ ಮಾಡದೆ ಬಂದದರ ನೋಡಿ ಅಚ್ಚರಿನೂ ಆತ್ ಬಂದೊವ್ಕೆ ಕೈ ಕಾಲ್ ತೊಳ್ಯಕೆ ಅವರ ಸಣ್ಣ ಸೊಸೆ ನೀರ್ ತಕಂಡ್ ಬಾತ್. ದೊಡ್ಡ ಸೊಸೆ ನಿಂಬುಳಿನ ಪಾನಕ ತಂದ್ ಕುಡ್ಯಕೆ ಕೊಟ್ಟತ್. ಗಂಡ– ಹೆಣ್ಣ್ ಇಬ್ರೊರು ಹಿರ್‍ಯರ ಕಾಲ್ ಹಿಡ್ಕಂಡೊ. ಕಮಲಕ್ಕ ಕೋಳಿ ಗೈಪು ಹಿಟ್ಟ್‌ನ ಬುತ್ತಿನನೂ, ಅಂಗ್ಡಿ ತಿನ್ಸ್‌ನನೂ ಅವರ ಅವ್ವ ನಾಗಮ್ಮನವರ ಕೈಲಿ ಕೊಟ್ಟೊ. ಎಲ್ಲೋವು ಸುಕ ದುಕ್ಕ ಇಚಾರ್ಸಿಕೊಂಡೊ.

"ನಾವ್ಗೆ ನಿಲ್ಲಿಕೆ ಆದುಲ್ಲೆ. ಇರ್‍ಳ್ ಮನೆ ಸೇರೊಕು. ಕೆಲ್ಸದವರ ಒಟ್ಟಿಗೆ ಮನೆ ಬುಟ್ಟ್ ಬಂದೊಳೊ. ಮದ್ಯಾನ ಊಟ ಮಾಡಿ, ನಮ್ಮ ದೊಡಪಂದರ ನೋಡಿಕೊಂಡ್ ಹೋಕು."– ಎಂತ ಅಯ್ಯಣ್ಣ ಮಾಸ್ಟ್ರ ಹೇಳ್ದೊ.

"ಏನ್ ಅಸ್ಟೊಂದು ಅಂಬೆರ್ಪು. ಹೇಳದೆ ಕೇಳದೆ ಬಂದೊಳರಿ. ಏನ್ ಇಸೇಸ?"– ಕಮಲಕ್ಕ ಅಪ್ಪ ನಾರ್ಣಪ್ಪ ಗೌಡ್ರು ಕೇಳ್ದೊ.

"ನಮ್ಮ ಸುರೇಶಂಗೆ ಹೆಣ್ಣ್ ನೋಡಿಕೆ ನಾಳ್ದ್ ಐತ್ವಾರ ಹೆಣ್ಣ್‌ನ ಮನೆಗೆ ಹೋದು. ನೀವು, ಅತ್ತೆ, ಬಾವಂದರ್, ಅಕ್ಕಂದರ್ ಮಕ್ಕಳ ಕರ್ಕಂಡ್ ಮನೆ ನೋಡಿಕೆ

ಬರೊಕು. ಇದರ ತಿಳ್ಸಿಕೆ ಬಂದದ್"– ಎಂತ ಅಯ್ಯಣ್ಣ ಮಾಸ್ಟ್ರ ಹೇಳ್ದೊ.

"ಒಳ್ಳೆದಾತ್. ಅಂವಂಗೂ ಪ್ರಾಯ ಆತಲೆ. ಮಕ್ಕ ಈ ಕಡೆ ಬಾರದೆ ವೊರ್ಸ ಎರ್ಡ್ ಕಳ್ತ್. ನಾವ್ಗೂ ಅತ್ತ ಬಾಕೆ ಆತ್ಲೆ. ಮುಂದೆನ ಕಾಲದಾಂಗೆ ಅಲ್ಲಲೆ. ಈಗ ಫೋನ್ ಉಟ್ಟಲೆ. ಬೇಕಾದಾಂಗೆ ಮಾತಾಡಕ್. ಹಾಂಗಾಗಿ ಹೋದು ಬಾದು ಕಮ್ಮಿ ಆಗುಟ್ಟು. ಹೇಳ್ದಾಂಗೆ ಹೆಣ್ಣ್ ಎಲ್ಲಿಂದ? ಯಾವ ಬೊಳಿ ಗೂಡೆ?"– ನಾಗಮ್ಮನೊವು ಕೇಳ್ದೊ.

"ಗೂಡೆ ಮೂರ್ನಾಡ್‌ದ್. ಬೆಂಗ್ಳೂರ್‌ಲಿ ಚಾಕ್ರಿಲಿ ಉಟ್ಟು. ಕಬರ್ ಬಳಿ ಗೂಡೆ"– ಕಮಲಕ್ಕ ಹೇಳ್ದೊ.

"ಕೊಡ್ಗ್‌ನ ಗೂಡೆನೋ? ಅಸ್ಟ್ ದೂರಂದ ಯಾಕೆ? ಕನ್ನಡ ಜಿಲ್ಲೆಲಿ ಗೂಡೆಗಳಿಗೆ ಬರವೋ?"– ನಾಗಮ್ಮನೊವು ಕೇಳ್ದೊ.

"ಗೂಡೆನ ಅಂವನೇ ನೋಡಿ ಮೆಚ್ಚಿಟ್ಟು. ಈಗನ ಮಕ್ಕ ನಾವು ಹೇಳ್ದಾಂಗೆ ಒಳೊನೋ?"– ಕಮಲಕ್ಕ ಹೇಳ್ದೊ.

"ಹಾಂಗೋ. ಹಾಂಗಾರೆ ನಾವ್ಗೆ ಮಾತಾಡ್ಕೆ ಏನ್ ಉಳ್ತ್‌ಲ್ಲೆ. ಏನ್ ಮಾಡ್ದು? ಎಲ್ಲಾ ಅವರವರ ಹಣೆ ಬರ." ನಾರ್ಣಪ್ಪ ಗೌಡ್ರ್ ಹೇಳಿ ಸುಮ್ಮಂಗಾದೊ.

ಮಗ, ಅಳ್ಯ ಉಂಡ್‌ದ್ ಹೊರ್ಟವೇಂತ ತಿಳ್ದ್ ನಾಗಮ್ಮನೊವು ಒಳಗೆ ಹೋಗಿ, ಸೊಸೆಕಳೊಟ್ಟಿಗೆ ಬೇಗ ಬೇಗ ಅಡ್ಗೆ ಮಾಡಿಕೆ ಹೇಳ್ದೊ. ಜಾಲ್‌ಲಿ ಓಡಾಡಿಕಂಡಿದ್ದ ಒಂದ್ ಹೂಂಜನ ತೋರ್ಸಿ, ಕೆಲ್ಸದವ್ರ ಕರ್ದ್

"ಅದರ ಬೇಗ ಕೊಂದ್ ಮಾಸ ಮಾಡಿತಾ"– ಎಂತ ಹೇಳ್ದೊ. ಕೆಲ್ಸದೊವು ಜಟ್‌ಪಟ್‌ಲಿ ಕೋಳಿ ಕೊಂದ್ ಸಜ್ಜ್ ಮಾಡಿ ತಂದೊ. ಸೊಸೆಕ ಇಬ್ಬೊರು ಕೂಡಿಕಂಡ್ ಕೋಳಿ ಗೈಪುನನೂ, ಬಡ್ಡ್ ರೊಟ್ಟಿನನೂ ಮಾಡ್ದೊ.

ಮದ್ಯಾನ ಸಮ್ಮಾನದ ಊಟ ಉಂಡ್ ಮಗ– ಅಳ್ಯ ಅಲ್ಲಿಂದ ನಾಕೈದ್ ಮೈಲ್ ದೂರಲಿದ್ದ ಮಾಸ್ಟ್ರ ತರವಾಡ್ ಮನೆಗೆ ಬಂದೊ.

ಅಯ್ಯಣ್ಣ ಮಾಸ್ಟ್ರ ಅಪ್ಪ ಚಾಮಯ್ಯ ಗೌಡ್ರ ಮೂಲ ಮನೆ ವಿಟ್ಲದ ಅನಿಲಕಟ್ಟೆಲಿದ್ದ ಕುಕ್ಕಪ್ಪಜ್ಜನ ಮನೆ. ಚಾಮಯ್ಯ ಗೌಡ್ರ ಅಪ್ಪ ಕುಕ್ಕಪ್ಪ ಗೌಡ್ರು ಊರೋವ್ಕೆ ಬೇಕಾದ ಮ್ಯೊಂಸ ಆಗಿದ್ದೊ. ಊರ್ಲಿ ಯಾವ ಪಂಚಾತಿಕೆ ಇದ್ದರೂ ಅವರ ಕರ್‍ಯತಿದ್ದೊ. ನ್ಯಾಯ ಒದ್ಗುಸುದರ್ಲಿ ಅವ್ಕೆ ಸಮ ಯಾರೂ ಇತ್ಲೆ. ಹಾಂಗಾಗಿ ಜನ ಅವ್ಕೆ ಗೌರವ ಕೊಡ್ತಿದ್ದೊ. ಅವರ ಮನೆನ ಜನ ಕುಕ್ಕಪ್ಪಜ್ಜನ ಮನೇಂತ ಕರ್‍ಯತಿದ್ದೊ. ಅವುನೂ ಇದ್ದ ಮಟ್ಟಿಗೆ ಗಟ್ಟಿ ಕುಳವಾರಿ. ಹತ್ತ್ ಮುಡಿಗದ್ದೆ ಬೇಸಾಯ ಮಾಡ್ತಿದ್ದೊ. ಹಟ್ಟಿಲಿ ಹೂಡಿಕೆ ಎರ್ಡ್ ಜೊತೆ ಕೋಣಂಗಳ ಸಾಕ್ತಿದ್ದೊ. ಒಂದ್ ಐದಾರ್ ಕಂಡಿ ಅಡ್ಕೆನೂ ಮೇಲ್ಕರ್ಚಿಗೆ ಸಿಕ್ತಿತ್ತ್. ಅವ್ಕೆ ಸೋಮಯ್ಯ, ರಾಮಯ್ಯ, ಚಿನ್ನಮ್ಮ, ಚಾಮಯ್ಯಾಂತ

ನಾಕ್ ಜನ ಮಕ್ಕ ಇದ್ದೊ.

ಅಕೆರಿಯಂವ ಚಾಮಯ್ಯಂಗೆ ಪಂಬೆತ್ತಾಡಿಲಿ ಆಸ್ತಿ ತೆಗ್ದ್ ಕುದ್ರಿಸಿದೊ. ಊರ್ಲಿದ್ದದರ ದೊಡ್ಡ ಎರ್ಡ್ ಗಂಡ್ ಮಕ್ಕಳಿಗೆ ಹಂಚಿದೊ. ಚಾಮಯ್ಯ ಗೌಡ್ರ ಎರ್ಡ್ ಅಣ್ಣಂದರ್ ಪಾಲ್‌ಗೆ ಬಂದ ಪಿತ್ರಾರ್ಜಿತ ಆಸ್ತಿಲಿ, ದೊಡ್ಡಣ್ಣ ಸೋಮಯ್ಯ ಗೌಡ್ರು ತರವಾಡ್ ಮನೆಲಿ ಇದ್ದ್ ದೈವ ದೇವ್ರ ನೋಡಿಕಂಡಿದ್ದೊ. ಎರಡ್ನೇ ಅಂಣ ರಾಮಯ್ಯ ಗೌಡ್ರು ಅಲ್ಲೆ ಹಕ್ಕಲೆ ಬೇರೆ ಮನೆ ಕಟ್ಟಿಕಂಡಿದ್ದೊ. ಅವು ಬೇರೆ ಬೇರೆ ಇದ್ದರೂ ಕಷ್ಟ ಸುಕಕ್ಕೆ ಹೊಂದಿಕಂಡಿದ್ದೊ.

ಅಯ್ಯಣ್ಣ ಮಾಸ್ಟ್ರ ತರವಾಡ್ ಮನೆಗೆ ಹೋಗಿ ದೊಡಪನ ಕಾಲ್ನ ಗಂಡ-ಹೆಣ್ಣ್ ಇಬ್ಬೊರು ಹಿಡ್ಕೊಂಡ್ ಆಶೀರ್ವಾದ ಬೇಡ್ದೊ. ಸೋಮಯ್ಯ ಗೌಡ್ರಿಗೆ ಕಣ್ಣ್ ಸರಿ ಕಾಂಬತಿತ್ಲೆ. ಕೆಬಿನೂ ಹನೀಸ್ ಮಂದ ಆಗಿತ್ತ್. ಈಗ ಅವ್ಕೆ ಹಕ್ಕಲೆ ಹಕ್ಕಲೆ ಎಂಬತ್ತೈದು ವೊರ್ಸ ಆದು. ಅವ್ಕೆ ತಮ್ಮನ ಮಂಜ ಮತ್ತೆ ಅಂವನ ಹೆಣ್ಣ್‌ನ ನೋಡಿ ಬಾಳ ಕುಸಿ ಆತ್. ಸೊಸೆನ ಕರ್ದ್,

"ಸುನಂದ ನೋಡು ಯಾರ್ ಬಂದೊಳೋಂತ"- ಎಂದ್ ಹೇಳ್ದೊ. ಜೀಪುನ ಸದ್ದ್ ಕೇಳಿ ಕಿಡ್ಕೆಲಿ ಬೊಗ್ಗಿ ನೋಡ್ದ ಸುನಂದ, ನೀರ್‌ನ ಚೊಂಬುನ ಹಿಡ್ಕಂಡೇ ಬಂದ್,

"ಏನ್ ಅಯ್ಯಣ್ಣ? ಏನ್ ಕಮಲ"- ಎಂತ ಇಚಾರ್ಸಿ, ಅವ್ಕೆ ನೀರ್ ಕೊಟ್ಟ್, ಸೌಕ್ಯಲಿ ಒಳರಿನೊ" ಇಚಾರ್ಸಿದೊ. ಕಮಲಕ್ಕ ಅವರ ಕೈಗೆ ತಿಂಡಿ ಕಟ್ಟ್‌ನ ಕೊಟ್ಟೊ. ಸುನಂದಕ್ಕ ಒಳಗೆ ಹೋಗಿ ಪುನರ್ಪುಳಿ ಪಾನಕ ಮಾಡಿ ತಂದ್ ಕೊಟ್ಟೊ.

ಸೋಮಯ್ಯ ಗೌಡ್ರ ಹೆಣ್ಣ್ ತೀರಿ ಹೋಗಿ ಐದ್ ವೊರ್ಸ ಕಳ್ತ್. ಆ ಸಮಯಲಿ ಕಮಲಕ್ಕನೂ, ಅಯ್ಯಣ್ಣ ಮಾಸ್ಟ್ರ ಮಕ್ಕಳ ಕರ್ಕಂಡ್ ಬಂದ್ ಸುದ್ದ, ಬೊಜ್ಜದ ಕಾರ್ಯನೆಲ್ಲಾ ಮುಗ್ಸಿಕಂಡ್ ಹೋಗಿದ್ದೊ. ಅದರ್‌ಂದ ಮೇಲೆ ಅವು ಇತ್ತ ಬಾತ್ಲೆ. ಸೋಮಯ್ಯ ಗೌಡ್ರಿಗೆ ಇಬ್ಬೊರು ಮಕ್ಕ ದೊಡ್ಡಂವ ಸತೀಶ. ಸುನಂದಳ ಗಂಡ ಅಂವ ವಿಟ್ಲದ ಸೊಸ್ಯಾಟಿಲಿ ಮೆನೆಜರ್ ಆಗಿ ಉಟ್ಟು. ಎರ್ಡ್‌ನೇದ್ ಗೂಡೆ. ಅದರ ಬೆಟ್ಟಂಪಾಡಿಗೆ ಚಿನ್ನಮ್ಮನ ಮಂಜಂಗೆ ಮೊದ್ವೆ ಮಾಡಿ ಕೊಟ್ಟೊಳೊ. ಅದರ ಗಂಡ ಕೃಷಿಕ. ಅಯ್ಯಣ್ಣ ಮಾಸ್ಟ್ರ ಅಣ್ಣನ ಮನೆಗೆ ಬಂದ ಸುದ್ದಿನ ಕೆಲ್ಸದವರ್‌ಂದ ತಿಳ್ದ್ ತಮ್ಮ ರಾಮಯ್ಯ ಗೌಡ್ರು ಅಲ್ಲಿಗೇ ಬಂದೊ. ಎಲ್ಲೋವು ಕುದ್ದ್ ಮಾತಾಡ್ದೊ.

ಅಯ್ಯಣ್ಣ ಮಾಸ್ಟ್ರ ಸಣ್ಣ ದೊಡಪನೊಟ್ಟಿಗೆ " ದೊಡಪಾ ನಾ ನಿಮ್ಮಲ್ಲಿಗೆ ಬಂದರೆ ಹೊತ್ತಾದೆ. ನಾವ್ಗೆ ಕತ್ತಲಾಕೆ ಮುಂದೆ ಮನೆ ಸೇರೊಕು." ಎಂತ ಹೇಳಿ ಸುರೇಶಂಗೆ ಹೆಣ್ಣ್ ನೋಡಿಕೆ ಹೋಗುವ ವಿಸಯ ಅವ್ಕೆ ಹೇಳ್ದೊ. ಸೋಮಯ್ಯ

ಗೌಡ್ರು,

"ನಾ ಬಾದ್ಲೆ. ನಂಗೆ ಕಣ್ಣುನೂ ಕಾಂಬೊದುಲ್ಲೆ, ಕೆಬಿಬು ಮಂದ. ಮಂಜನ ಸೊಸೆನ ಕಳ್ಸಿನೆ. ರಾಮಯ್ಯನ ಜೀಪುಲಿ ಅವೆಲ್ಲಾ ಬಂದವೆ."– ಎಂತ ಹೇಳ್ಡೊ. ಅಯ್ಯಣ್ಣ ಗೌಡ್ರು ಒಪ್ಪಿದೊ.

ಸುನಂದ ಬೊಳ್ಪುಗೆ ದೋಸೆ ಹೊಯ್ದ್ ಒಳ್ಟ ಬಂದನ ಫ್ರಿಡ್ಜ್‌ಲಿ ಇಸಿತ್ತ್. ಅದರ ತೆಗ್ದ್ ಬೇಗ ಬೇಗ ದೋಸೆ ಹೊಯ್ದ್ ಅವ್ಕೆಲ್ಲವ್ಕೂ ಮಿಾನ್ ಸಾರ್‌ಲಿ ದೋಸೆ ತಿಂಬಕೆ ಕೊಟ್ಟ್, ಚಾ ಮಾಡಿ ಕೊಟ್ಟತ್.

ಅವು ಅಲ್ಲಿಂದ ಹೊರ್ಡಿಕನ ರಾಮಯ್ಯ ಗೌಡ್ರು ಅವರ ಜೀಪುಲಿ ಹತ್ತಿ,

"ನೀವು ಇಷ್ಟ್ ದೂರ ಬಂದೊವು ನಮ್ಮ ಮನೆಗೆ ಬಂದ್ ಒಂದ್ ಗ್ಲಾಸ್ ನೀರ್ ಕುಡ್ಯದೆ ಹೋದರೆ ಹೇಂಗೆ? ಒಂದು ಗಳ್ಗೆ ಬಂದ್ ಹೋಗಿ"– ಎಂತ ಒತ್ತಾಯ ಮಾಡ್ಡೊ. ಅವ್ಕೆ ಬೇಜಾರಾದು ಬೇಡಾಂತ ಅವರ ಮನೆಗೂ ಹೊದೊ. ಅವರ ಹೊಸ ಮನೆ ಟೆರೆಸ್ ಮನೆ ಆಗಿತ್ತ್. ರಾಮಯ್ಯ ಗೌಡ್ರ ಹೆಣ್ಣ್ ಇವರ ನೋಡಿ ಹೊರಗೆ ಬಂದೊ. ಇವು ಗಂಡ –ಹೆಣ್ಣ್ ಇಬ್ಬೊರುನೂ ಅವರ ಕಾಲ್ ಹಿಡ್ಕಂಡೊ. ಅವುನೂ ಪ್ರೀತಿಲಿ ಮಾತಾಡ್ಸಿದೊ. ಕಮಲಕ್ಕ ಅವರ ಕೈಲಿ ಸಿಂಯಿ ಕಾರ ತಿನ್ಸ್‌ನ ತಿಂಡಿ ಪೊಟ್ಟ ಕೊಟ್ಟೊ. ಅವು "ಇದೆಲ್ಲಾ ಯಾಕವ್ವಾ"– ಎಂತ ಹೇಳಿ ತಕಂಡೊ. ಅವ್ಕೆ ಎರ್ಡ್ ಹೆಣ್ಣ್ ಮಕ್ಕಳೇ. ದೊಡ್ಡ ಅಳ್ಯ ಮನೆ ಅಳ್ಯ ಆಗಿ ನಿತ್ತ್. ಆಸ್ತಿ ಬೊದ್ಕ್ ನೋಡ್ತಿತ್ತ್. ದೊಡ್ಡ ಮಗ ಮನೆವಾರ್ತೆ ನೋಡ್ತಿತ್ತ್. ರಾಮಯ್ಯ ಗೌಡ್ರ ಸಣ್ಣ ಮಗಳ ಗಂಡ ಮಂಗ್ಳೂರ್‌ಲಿ ಸಬ್ಬಿನ್ಸ್ ಪೆಕ್ಟರ್ ಆಗಿತ್ತ್. ಗಂಡ ಹೆಣ್ಣ್ ಮಂಗ್ಳೂರ್‌ಲಿ ಬಿಡಾರ ಮಾಡಿಕಂಡಿದ್ದೊ. ಮಗಳ್ ತಿಂಗಳಿಗೊಮ್ಮೆ ಬಂದ್ ಅಪ್ಪ, ಅವ್ವನ ನೋಡಿಕಂಡ್ ಹೋಗ್ತಿತ್ತ್. ಅಳ್ಯ ಮಾತ್ರಾ ಯಾಗಾದರೊಮ್ಮೆ ಜಂಬರ ಜಟ್ಟಿಗೆ ಬಾತಿತ್ತ್.

ಅವರೊಟ್ಟಿಗೆಲ್ಲಾ ಹೆಣ್ಣ್ ನೋಡಿಕೆ ಹೋವ ಶಾಸ್ತ್ರಕ್ಕೆ ಮನೆವೆಲ್ಲವ್ರೂ ಬರೊಕೂಂತೇಳಿ ಅಲ್ಲಿಂದ ಹೊರ್ಟೊ. ರಾಮಯ್ಯ ಗೌಡ್ರ್ ಜಾಲ್‌ಲಿ ಇದ್ದ ಬಾಳೆಂದ ಗಳೆಲಿ ಬೆಂಡ ಎಳ್ದ್ ಹಾಕಿ, ಅದರ ಕೆತ್ತಿ ಒಟ್ಟೆ ಮಾಡಿ ಇವ್ಕೆ ಕುಡ್ಯಕೆ ಕೊಟ್ಟೊ. ಒಂದು ಪಾಡ ನೇಂದ್ರ ಬಾಳೆ ಹಣ್ಣ್ ತಿಂಬಕೆ ತಂದ್ ಇಸಿದೊ.

"ನಾವ್ಗೆ ಹೊಟ್ಟೆಲಿ ಸೆರೆ ಇಲ್ಲೆ. ಎಲ್ಲಿಗೆ ತಿಂಬೊದು ಮಾಂವಾ?"– ಕಮಲಕ್ಕ ಹೇಳ್ಡೊ.

"ನೀವು ಈಗ ತಿಂಬೊಡಿ. ಮನೆಗೆ ಹೋಗಿ ತಿನ್ನಿ"– ಎಂತ ಹೇಳಿ ರಾಮಯ್ಯ ಗೌಡ್ರು ಒಳಗೆ ಹೋಗಿ, ಇನ್ನ್ ಒಂದ್ ಪಾಡ ಬ್ಬಾಳೆಹಣ್ಣ್‌ನ ತಂದ್, ಎರ್ಡ್ ಪಾಡಗಳ ಒಂದ್ ಪಾಸ್ಟಿಕ್ ತೊಟ್ಟೆಗೆ ಹಾಕಿ ಜೀಪುಲಿ ಇಸಿದೊ. ಅವರ

ಪ್ರೀತಿನ ನೋಡಿ,

"ಛೇ, ನಾವು ವೊರ್ಸಕ್ಕೊಮ್ಮೆ ಆದರೂ ಬಂದ್ ಇವರ ಮಾತಾಡ್ಸಿಕಂಡ್ ಹೋಕು"–ಎಂತ ಮೊನ್ಸ್‌ಲೇ ಕಮಲಕ್ಕ ನೆನ್ಸಿಕೊಂಡೊ. ಅತ್ತೆ–ಮಾಂವನ ಕಾಲ್ ಹಿಡ್ದ್ ಜೀಪು ಹತ್ತಿದೊ. ರಾಮಯ್ಯ ಗೌಡ್ರ ಮಗ ವಾರಿಜ ಜೀಪು ಹಕ್ಕಲೆ ಬಂದ್ ತಮ್ಮ, ತಮ್ಮನ ಹೆಣ್ಣ್‌ನ ಕಳ್ಸಿಕೊಟ್ಟತ್.

"ನಾಳ್ದ್ ಅತ್ತೆ ಮಾಂವನೊಟ್ಟಿಗೆ ನೀವುನೂ ಅಣ್ಣನೂ ಬನ್ನಿ ಅತ್ತಿಗೆ"– ಎಂತ ಕಮಲಕ್ಕ ಹೇಳ್ದೊ.

"ಆತ್ ಬಂದವೆ"–ಎಂತ ವಾರಿಜ ತಲೆ ಹಂದಾಡ್ಸಿತ್. ಅಯ್ಯಣ್ಣ ಮಾಸ್ಟ್ರನೂ ಕಮಲಕ್ಕನೂ ಪಂಬೆತ್ತಾಡಿಗೆ ಬಂದ್ ಮುಟ್ಟಿಕಾಕನ ಗಂಟೆ ಎಂಟಾಗಿತ್ತ್.

ಬೇಸ್ತುವಾರ ಅಯ್ಯಣ್ಣ ಮಾಸ್ಟ್ರ ಹೆಣ್ಣ್‌ನೊಟ್ಟಿಗೆ,

"ಇಂದನೆ ಇಂದ್ ನಂಗೆ ಬೇಗ ಕಾಪಿ ಕೊಡು. ನಾ ಕಡಬಕ್ಕೆ ವಸಂತಿನ ಮನೆಗೆ ಹೋಗಿ, ಅಲ್ಲಿಂದ ಪುತ್ತೂರು ಬಲ್ನಾಡ್‌ಗೆ ಜಯಂತಿ ಮನೆಗುನೂ ಹೋಗಿ ಹೆಣ್ಣ್ ನೋಡಿಕೆ ಹೋಗಿ ಬಾಕೆ ಹೇಳಿ ಬನ್ನೆ"– ಎಂತ ಹೇಳ್ದೊ.

"ಚಿನ್ನಮ್ಮ ದೊಡವ ಮನೆಗೆ ಹೋದ್ಲೆನೋ?"– ಕಮಲಕ್ಕ ಕೇಳ್ದೊ.

"ಪುರ್ಸತ್ತಾದರೆ ಹೋನೆ"– ಮಾಸ್ಟ್ರ ಹೇಳ್ದೊ.

"ಸರಿ ಬನ್ನಿ. ನಾ ಎಲ್ಲಾ ರೆಡಿ ಮಾಡಿ ಇಸ್ಯಳೆ"–ಎಂತ ಕಮಲಕ್ಕ ಹೇಳಿ ಅವ್ಕೆ ಚಾ, ಗೆಂಡದ ಹಿಟ್ಟ್‌ನ ತಿಂಬಕೆ ಕೊಟ್ಟೊ. ಕಾಯೆ ಪೊಜ್ಜಿಲಿ ಹಿಟ್ಟ್‌ನ ತಿಂದ್ ಚಾ ಕುಡ್ದ್ ಅಯ್ಯಣ್ಣ ಮಾಸ್ಟ್ರ ಜೀಪು ಸ್ಟಾರ್ಟ್ ಮಾಡ್ದೊ.

ಕಡಬ ಪೇಟೆಂದ ತಂಗೆ ವಸಂತಿನ ಮನೆಗೆ ಸಿಂಯಿ, ಕಾರ ತಿಂಡಿ ಕಟ್ಟಿಸಿಕಂಡ್ ಹೋದೊ. ಅಪ್ರೂಪಕ್ಕೆ ಬಂದ ಅಣ್ಣನ ನೋಡಿ ವಸಂತಿಗೆ ಬಾಳ ಕುಸಿ ಆತ್. ಕುಡ್ಯಕೆ ಮೊಜ್ಜಿಗೆ ನೀರ್ ಕೊಟ್ಟ್ ಅಣ್ಣನ ಉಪ್ಚಾರ ಮಾಡ್ತ್. ಅದ್ಕೆ ಒಂದ್ ಹೆಣ್ಣ್, ಒಂದ್ ಗಂಡ್ ಎರ್ಡ್ ಮಕ್ಕ. ಹೆಣ್ಣ್ ಗೂಡೆನ ಮಿಲಿಟ್ರಿಯಂವಂಗೆ ಕೊಟ್ಟಿತ್ತ್. ಅದ್ ಗಂಡನೊಟ್ಟಿಗೆ ಜಲಂಧರಲಿ ಇತ್ತ್. ಗಂಡ್ ಮಂಜ ವಿಠಲ ಹೈಸ್ಕೂಲ್ ಮಾಸ್ಟ್ರ ಆಗಿ ಪುತ್ತೂರ್ಲಿ ಇತ್ತ್. ದಿನಾ ಮನೆಂದಳೇ ಕೆಲ್ಸಕ್ಕೆ ಹೋಗ್ತಿತ್ತ್. ಮಗಳಿಗೆ ಎರ್ಡ್ ಮಕ್ಕ. ಮಂಜಂಗೆ ಒಂದು ಮಗ. ವಸಂತಿ ಅಣ್ಣ ಬಂದೋಂತ ಕೋಳಿನ ನಾಳಿ ಚಿರಿಂಬಿಕೆ ಕೆಲ್ಸದವರೊಟ್ಟಿಗೆ ಹೇಳ್ತ್. ಆಗ ಅಯ್ಯಣ್ಣ ಮಾಸ್ಟ್ರ,

"ವಸಂತಿ, ನಾ ಉಂಬೊಕೆ ನಿಲ್ಲುದ್ಲೆ. ನಂಗೆ ಬಲ್ನಾಡ್‌ಗೆ ಜಯಂತಿನ ಮನೆಗೆ ಹೋಕು. ನಾ ಅಲ್ಲಿ ಉಂಡನೆ. ನೀ ಕೋಳಿ, ಗೀಳಿ ಮಾಡಿಕೆ ಹೋಗ್ಬಡ." ಎಂತ ಹೇಳ್ದೊ.

"ಹಂಗದರೆ ಹೇಂಗಣ್ಣ? ನೀ ಬಾದೇ ಅಪ್ರೂಪ. ನಿಂಗೆ ಒಂದು ತಂಗೆ

ಉಟ್ಟೊಂತ ಮರ್ತೇ ಹೋಗುಟ್ಟು."–ಎಂತ ಬೇಜಾರ್ ಮಾಡ್ತ್.

"ನಿಂಗೇ ಗೊತ್ತುಟ್ಟಲೆ ಹಳ್ಳಿ ಕೆಲ್ಸ. ಒಂದು ಮಾಡ್ರೆ ಒಂದು ಮುಗ್ಯಕಿಲ್ಲೆ. ಸರ್ಕ್ಕಾರಿ ಚಾಕ್ರಿಯೊವ್ಕೆ ರಜೆ ಸಿಕ್ಕಿದೆ. ನಾವ್ಗೆ ಎಲ್ಲಿಟು ರಜೆ? ಯಾಗೋಳೂ ಕೆಲ್ಸ ಮುಗ್ಯೋದೇ ಇಲ್ಲೆ. ನಿನ್ನ ಅತ್ತಿಗೆ ತೌರ್ ಮನೆಗೆ ಹೋಗದೆ ನಾಕೈದ್ ವೊರ್ಸ ಆತ್. ಅಂದ್ ದೊಡ್ಡ ದೊಡವನ ಬೊಜ್ಜಕ್ಕೆ ಹೋದೊವು. ಆ ಮೇಲೆ ಅತ್ತ ತಲೆ ಹಾಕಿತ್ಲೆ. ಅಣ್ಣ ತಂಗೆಗೆ ಹೇಳ್ದೊ.

"ಅದೇನಣ್ಣ ಇಸ್ಟ್ ಅಂಬೇರ್ರುಲಿ ನೆಂಟ್ರ ಮನೆಗೆಲ್ಲಾ ಹೋದು? ಜಂಬರ ಗಿಂಬರ ಉಟ್ಟೋ ಹೇಂಗೆ?"– ತಂಗೆ ಅಣ್ಣನ ಕೇಳ್ತ್.

"ಅದ್ಕೇ ನಾ ಬಂದದ್. ಸುರೇಶಂಗೆ ಹೆಣ್ಣ್ ನೋಡಿಕೆ ನಾಳ್ದ್ ಐತ್ವಾರ ಗೂಡೆನ ಮನೆಗೆ ಹೋದು. ಬಾವ ಎಲ್ಲಿ ಕಾಂಬೊದುಲ್ಲೆ." ಅಯ್ಯಣ್ಣ ಮಾಸ್ಟ್ರ ಕೇಳ್ದೊ.

"ಅವು ಒಂದು ದನ ತೆಗ್ಯೊಕೂಂತ ಪುತ್ತೂರಿಗೆ ಹೋಗೊಳೊ. ಈಗ ಕರ್ ಬುಡ್ವ ದನ ಬಚ್ಚೇಲ್ ಆಕಂಡ್ ಬಾತ್. ಹಾಲ್ ಮೊಜ್ಜಿಗೆ ಇತ್ಲರೆ ಆದುಲ್ಲೆಲೆ."– ವಸಂತಿ ಹೇಳ್ತ್.

"ನಿನ್ನ ಸೊಸೆ ಕಾಂಬೊದುಲ್ಲೆ" ಮಾಸ್ಟ್ರ ಕೇಳ್ದೊ.

"ಅದ್ ತೋಟಕ್ಕೆ ಹೋಗುಟ್ಟು. ಈಗ ಬಾದು." ಎಂತ ವಸಂತಿ ಹೇಳಿಕನ ಒಂದು ಕೈ ಕುಕ್ಕೆಲಿ ಅಡ್ಕೆ ತುಂಬಿಸಿಕಂಡ್ ಸೊಸೆ ಬಾತ್. ಬಂದದೇ ಅಡ್ಕೆನ ಜಾಲ್‌ಲಿ ಹರ್ಗಿ, ಕೈಕಾಲ್ ತೊಳ್ದ್ ಒಳಗೆ ಬಂದ್,

"ಏನ್ ದೊಡಪಾಂ"ಂತ ಹೇಳಿ ಅವರ ಕಾಲ್ ಹಿಡ್ಕಂಡತ್ ಅದರ ಕೈಗೆ ಅಯ್ಯಣ್ಣ ಮಾಸ್ಟ್ರ ತಿಂಡಿ ಕಟ್ಟ್ ಕೊಟ್ಟ್,

"ಇಂದಾ ಗೀತಾ ನಾಳ್ದ್ ಐತ್ವಾರ ನೀನೂ, ನಿನ್ನ ಗಂಡನೂ, ಅತ್ತೆ ಮಾಂವನೊಟ್ಟಿಗೆ ಬರೊಕು ಬಲಾ"– ಎಂತ ಹೇಳ್ದೊ.

ಸುರೇಶಂಗೆ ಮೊದ್ವೆನೋ ದೊಡಪಾ? ನಾ ಕಂಡಿತ ಬನ್ನೆ ನಂಗೆ ಸುರೇಶನ ಹೆಣ್ಣ್‌ನ ನೋಡೊಕು. ಗೂಡೆ ಏನ್ ಮಾಡ್ದ?" ಗೀತ ಕೇಳ್ತ್.

ಅಯ್ಯಣ್ಣ ಮಾಸ್ಟ್ರ ವಸಂತಿಗೂ, ಗೀತಂಗೂ ಎಲ್ಲಾ ಇಸಯ ತಿಳ್ಸಿದೊ. ಅಣ್ಣ ಉಂಬಕೆ ನಿಲ್ಲುದುಲ್ಲೇಂತ ತಿಳ್ದ್, ಗೀತನ ಕರ್ದ್ ಅದರ ಕೆಬಿಲಿ ಏನೋ ಹೇಳ್ದೊ. ಅದ್ ತಲೆ ಹಂದಾಡ್ಸಿ ಒಳಗೆ ಹೋತ್.

ವಸಂತಿ ಅಣ್ಣನೊಟ್ಟಿಗೆ ಸುಕ ದುಃಖ ಮಾತಾಡಿ, ವಿಟ್ಲದವರ ಸುದ್ದಿ ಎಲ್ಲಾ ಕೇಳಿ ತಿಳ್ದ್, ಹರ್ಷಿಕಂಡಿತ್. ಅಸ್ಟಾಕನ ಗೀತ ಒಳಗೆಂದ ಬಂದ್ ಒಂದು ಚೊಂಬು ನೀರ್ ತಂದ್,

"ದೊಡಪಾ, ಚಾ ಕುಡ್ಯನಿ. ನೀವು ಉಂಬಕೆ ನಿಲ್ಲುದಿಲ್ಲೇಂತ ಅತ್ತೆ ಹೇಳ್ದೊ"– ಎಂತ ಹೇಳಿ ನೀರ್ ಕೊಟ್ಟತ್. ಅಯ್ಯಣ್ಣ ಮಾಸ್ಟ್ರ ನೀರ್ ತಕಂಡ್ ಜಾಲ್‌ಗೆ ಹೋಗಿ ಕೈ, ಮೋರೆ ತೊಳ್ದ್, ಉಂಬೊಳಗೆ ಹೋದೊ.

ಅಲ್ಲಿ ಮೇಜಿನ ಮೇಲೆ ಒಂದ್ ಸ್ಟೀಲ್‌ನ ತಟ್ಟೆಲಿ ಐದಾರ್ ಪುಂಡಿ ಹಾಕಿ, ಅದರ ಮೇಲೆ ಮೊಟ್ಟೆ ಸಾರ್ ಹೊಯ್ತ್. ಅಯ್ಯಣ್ಣ ಮಾಸ್ಟ್ರ ಕುರ್ಸಿ ಎಳ್ದ್ ಕುದ್ದ್‌ಕಂಡ್,

ನೀ ಯಾ ಮಾಯೆಲಿ ಇಸ್ಟ್ ಬೇಗ, ಮೊಟ್ಟೆ ಸಾರ್ ಮಾಡ್ದ? ಬಾಳ ಗೆಟ್ಟಿಗಿತ್ತಿ"–ಎಂತ ಹೊಗಳ್ದೊ.

"ಅಂತದೇನಿಲ್ಲೆ ದೊಡಪಾ ಬೊಳ್ಪುನ ನೀರುಳ್ಳಿ ಹಾಕಿದ ಕಾಯೆ ಸಾರ್ ಇತ್ತ್. ಅದ್ಕೆ ಹಂಞ ಅರ್ಸಿಣ ಹೊಡಿ ಹಾಕಿ, ಎರ್ಡ್ ಮೊಟ್ಟೆ ಒಡ್ದ್‌ದ್ ಹಾಕಿ ಕೊದಿಸಿದೆ."– ಎಂತ ಗೀತ ಹೇಳ್ತ್. ಅದರ ಜಾಣತನಕ್ಕೆ ಅಯ್ಯಣ್ಣ ಮಾಸ್ಟ್ರ ಕುಸಿಪಟ್ಟೊ. ಮೊಟ್ಟೆ ಸಾರ್‌ಲಿ ಪುಂಡಿನ ತಿಂದ್, ಅದ್ ಮಾಡಿಕೊಟ್ಟ ಚಾಯನ ಕುಡ್ದ್, ಎದ್ದ್ ಕೈ ತೊಳ್ದೊ.

ತಂಗೆನೊಟ್ಟಿಗೆ, "ಬಾವಂಗೆ ಹೇಳ್. ನೀವೆಲ್ಲಾ ನಾಳ್ದ್ ಏಳ್ ಗಂಟೆಗೇ ಬನ್ನಿ. ಎಂಟ್ ಗಂಟೆಗೆಲ್ಲಾ ನಾವು ಮನೆ ಬುಡೊಕು."– ಎಂತ ಹೇಳ್ದೊ.

"ಆತಣ್ಣ, ಕಂಡಿತಾ ಹೇಳ್ನೆ, "– ಎಂತ ಹೇಳಿ ಅತ್ತೆ, ಸೊಸೆ ಇಬ್ರೊರೂ ಅಯ್ಯಣ್ಣ ಮಾಸ್ತ್ರ ಕಾಲ್ ಹಿಡ್ಕಂಡೊ. ಗಂಟೆ ನೋಡಿಕನ ಹನ್ನೊಂದಾಗಿತ್ತ್. ಅಲ್ಲಿಂದ ಅವು ಪುತ್ತೂರು ಬಲ್ನಾಡ್‌ಗೆ, ಸಣ್ಣ ತಂಗೆ ಜಯಂತಿನ ಮನೆಗೆ ಹೊರ್ಟೊ.

ಜಯಂತಿ ಅಯ್ಯಣ್ಣ ಮಾಸ್ತ್ರ ಪ್ರೀತಿನ ತಂಗೆ. ತಂಗೆ ಮನೆಗೆ ಬಾಕನ ಜೀಪುನ ಸದ್ದ್ ಕೇಳಿ ಜಯಂತಿ ಓಡ್ಯೋಡಿ ಬಾತ್. ಅಣ್ಣ ಬಂದದರ ನೋಡಿ, ಸಡ್ಗರಲಿ ಒಳಗೆ ಓಡಿ ಹೋಗಿ ಒಂದ್ ಚೆಂಬು ನೀರ್ ತಂದ್, ಅಣ್ಣಂಗೆ ಕೊಟ್ಟ್,

"ಏನಣ್ಣಾ, ಸೌಕ್ಯಲಿ ಒಳರಿನೊ. ಅತ್ತಿಗೆ, ಮಕ್ಕ ಎಲ್ಲಾ ಹೇಂಗೊಳೊ." ಎಂತ ಸುಕ ದುಕ್ಕ ವಿಚಾರ್ಸಿ ಕುದ್ರಿಕೆ ಸೋಪನ ತೋರ್ಸಿತ್. ಜಯಂತಿಗೆ ಒಬ್ಬ ಮಂಜ ಮನೋಹರ, ಸುರೇಶಂದ ಒಂದ್ ವೊರ್ಸಕ್ಕೆ ದೊಡ್ಡಂವ ಅಂವ ಪುತ್ತೂರ್‌ಲಿ ಕಾಲೇಜ್ ಲೆಕ್ಚರರ್. ಅದೇ ಕಾಲೇಜಿಲಿ ಕೆಲ್ಸ ಮಾಡ್ತಿದ್ದ ಗುಣವತಿನ ಪ್ರೀತಿ ಮಾಡಿ ಮೊದ್ವೆ ಆತ್. ಅದ್ಕೆ ಅಂವನ ಅಪ್ಪ, ಅವ್ವನೂ ಒಪ್ಪಿದೊ. ಅಂವಂದ ಎಂಟ್ ವೊರ್ಸಕ್ಕೆ ಸಣ್ಣದ್ ಮಾಲಿನಿ. ಅದ್ ಮಂಗ್ಳೂರ್‌ಲಿ ಎಗ್ನಿಸ್ ಕಾಲೇಜಿಲಿ ಓದ್ತಿತ್ತ್. ಮನೋಹರ, ಗುಣವತಿ ಬೊಳ್ಪುಗೆ ಬುತ್ತಿ ತಕಂಡ್ ಬೈಕ್‌ಲಿ ಹೋದರೆ ಹಿಂಬೊತ್ತು ಬಾಕನ ಆರ್ ಗಂಟೆ ಆದೆ. ಮಾಲಿನಿ ವಾರಕ್ಕೊಮ್ಮೆ ಮನೆಗೆ ಬಂದದೆ. ಜಯಂತಿನ ಗಂಡ ಗೌರಿಶಂಕರ ಗ್ರಾಮ ಕರ್ಣಿಕ ಕೆಲ್ಸ ಮಾಡ್ತಿದ್ದೊ. ಸಂಪಾದ್ನೆನೂ ಜೋರಾಗಿತ್ತ್. ಅವರ ಮನೆನೂ ಬಾಳ ಲಾಯ್ಕಿತ್ತ್. ಈಗನ ಕಾಲದ ಎಲ್ಲಾ ಸೌಕರ್ಯ ಇದ್ದ ಟೆರೆಸ್

ಮನೆ. ಓಡಾಡಿಕೆ ಕಾರ್, ಬೈಕ್ ಇಸಿಕಂಡಿದ್ದೊ. ಮನೆಲಿ ತಂಗೆ ಮಾತ್ರಾ ಇದ್ದದರ ನೋಡಿ, ಅದರ ಕೈಗೆ ತಿಂಡಿ ಕಟ್ಟ್‌ನ ಕೊಟ್ಟೊ.

"ಇದೆಲ್ಲಾ ಯಾಕಣ್ಣಾ, ನಾ ಏನ್ ಸಣ್ಣ ಕೂಸುನೋ?"– ಎಂತ ತಂಗೆ ಅಣ್ಣನ ಕೇಳ್ತ್.

ತಂಗೆ ಮನೆಗೆ ಬಾಕನ ಬೊರಿ ಕೈಲಿ ಬಾದೊ. ನಂಗೆ ನೀ ಕೂಸುನೆ. ತಕ ಒಳಗಿಸ್. ಮಂಜ– ಸೊಸೆ ಬಾಕನ ಎಲ್ಲೋವ್ಕು ಕೊಡ್"– ಎಂತ ಹೇಳ್ದೊ.

ಮದ್ಯಾನದ ಹೊತ್ತ್. ಅಮ್ಸರಲಿ ಅಡ್ಗೆ ಮಾಡಿಕೆ ಪುರ್ಸೋತ್ ಇಲ್ಲೆ. ಇದ್ದದರ್ಲೆ ಸುದಾರ್ಸುದೂಂತ ಅಣ್ಣನ ಊಟಕ್ಕೆ ಕರ್‍ದೊ.

ಗೌರಿಶಂಕರಂಗೆ, ಮನೋಹರಂಗೆ ಯಾಗೋಳು ಇರ್ಲ್ ಒಂದು ತುಂಡಾದರ್ ಮಾಸ ಬೇಕೇ ಬೇಕ್ ಹಂಗಾಗಿ ಒಂದಲ್ಲ ಒಂದು ಮಾಸದ ಸಾರ್ ದಿನಾ ಮಾಡ್ತಿದ್ದೊ. ಏನಿತ್ಲರೆ ಹಸಿಮೀನ್ ಸಾರ್ ಆದರೂ ಅವ್ಕೆ ನೆಂಜಿಕೆ ಬೇಕಾಗ್ತಿತ್. ಹಂಞ ಹಂಞ ಕುಡ್ಯವ ಅಬ್ಯಾಸನು ಇತ್ತ್. ಬೀಜದ ಸಮಯಲಿ ಬೀಜದ ಹಂಣ್‌ನ ಸರಾಯಿ ಮಾಡ್ಸಿ, ಮಳೆಗಾಲಕ್ಕೇಂತ ಮೊಣ್ಣಡಿಲಿ ಹೂತಿಸ್ತಿದ್ದೊ. ನೆಂಟ್ರ್‌ಗ ಬಾಕನ ಸಮ್ಮಾನಕ್ಕೂ ಆತ್. ತಂಗೆ ಅಣ್ಣಂಗೆ ಒಂದು ಕೊಂಡೆ ಸರಾಯಿ ಕೊಟ್ಟತ್. ಅಣ್ಣ.

"ನಂಗೆ ಇದೆಲ್ಲಾ ಬೇಡ ಬಲಾ. ನಾ ಕುಡ್ಯೋದು ಬುಟ್ಟ್ ತುಂಬಾ ವೊರ್ಸ ಆತ್.ಇದರ ಮೂರಿ ಮಾರುದ್ದಕ್ಕೆ ಬಂದದೆ." ಎಂತ ಹೇಳಿ ಗ್ಲಾಸ್‌ನ ಬೊದಿಗೆ ಸರ್‍ಸಿದೊ. ತಂಗೆನೂ ಒತ್ತಾಯ ಮಾಡ್ತಿಲ್ಲೆ. ಅಣ್ಣಂಗೆ ಇದೆಲ್ಲಾ ಅಭ್ಯಾಸ ಇಲ್ಲೇಂತ ಗೊತ್ತುಟು. ಆದರೂ ಬಂದೋವ್ಕೆ ಉಪ್ಚಾರ ಮಾಡ್ಡಿದ್ದರೆ ಹೇಂಗೆ? ಹಿಂದೆನ ದಿನ ಮಾಡ್ದ ಹಂದಿ ಮಾಸದ ಗೈಪು ಇತ್ತ್. ಕುಡು ಬಸಳೆ ಸಾರುನೂ ಇತ್ತ್. ಅದರ್ಲೆ ಅಣ್ಣಂಗೆ ಸುದಾರ್ಣೆ ಮಾಡ್ತ್. ಜಯಂತಿಗೆ ಸುರೇಶನ ಮೊದ್ವೆ ವಿಚಾರ ಎಲ್ಲಾ ಹೇಳಿ ನಾಳ್ದ್ ಗಂಡನ ಮಂಜ– ಸೊಸೆನ ಕರ್‍ಕಂಡ್ ಹೆಣ್ಣ್ ನೋಡಿಕೆ ಹೋಕೆ ಬರಕೂಂತ ಹೇಳಿ ಪಂಬೆತ್ತಾಡಿಗೆ ಹಿಂತಿರ್ಗಿದೊ.

* * * * *

5. "ಮೂರ್ನಾಡ್‌ಲಿ ಹೆಣ್ಣ್ ನೋಡ್ವ ಸಾಸ್ತ್ರ"

ವಿಟ್ಲಂದ ನಾರ್ಣಪ್ಪ ಗೌಡ್ರು, ನಾಗಮ್ಮನೊವು ಸನ್ವಾರ ಹಿಂಬೊತ್ತ್ ಬಂದೊ. ಐತ್ವಾರ ಬೊಳ್ಪುಗೆ ಏಳ್ ಗಂಟೆಗೆನೇ ಜಯಂತಿ ಮತ್ತೆ ಅದರ ಗಂಡ, ಮಂಜ– ಸೊಸೆ ಕಾರ್‌ಲಿ ಬಂದೊ. ಏಳೂವರೆಗೆ ವಸಂತಿ ಅದರ ಗಂಡ, ಮಂಜ– ಸೊಸೆ ಬಂದೊ. ರಾಮಯ್ಯ ದೊಡ್ಡಪ್ಪ, ದೊಡ್ಡಮ್ಮ, ಮಗಳ್ ವಾರಿಜನೊಟ್ಟಿಗೆ ಸುಳ್ಯಲಿ ಕಾದ್ ನಿತ್ತವೇಂತ ಫೋನ್ ಮಾಡಿ ತಿಳ್ಸಿದೊ. ಸುನಂದ, ಸತೀಶನೂ ಅವರೊಟ್ಟಿಗೆ ಬಂದವೇಂತ ಹೇಳ್ದೊ.

ಪಂಬೆತ್ತಾಡಿಂದ ಕಮಲಕ್ಕ, ಅಯ್ಯಣ್ಣ ಮಾಸ್ಟ್ರ, ಕುಕ್ಕಪ್ಪ ಗೌಡ್ರ ಮತ್ತೆ ಅವರ ಹೆಣ್ಣ್ ಹೊರ್ಟೊ. ಸುರೇಶ ಸನ್ವಾರನೇ ಬಂದಿತ್ತ್. ಎಲ್ಲೋವು ಸೇರಿಕನ ಜನ ಹತ್ತೊಂಬತ್ತಾತ್. ಬೊಳ್ಪುಗೆ ಎಂಟ್ ಗಂಟೆಗೆ ಮನೆ ಬುಟ್ಟೊ. ಹೊರ್ಡಿಕಾಕನ ದೇವ್ರಿಗೆ ದೀಪ ಹೋಸಿ, ತಿರ್ಪತಿ ತಿಮ್ಮಪ್ಪಂಗೆ ಒಂದ್ರುಪಾಯಿ ದುಡ್ಡ್‌ನ ತೊಳ್ದ್ ಮಡಿ ಅರ್ವೆಲಿ ಸುತ್ತಿ ಸುರೇಶನ ತಲೆ ಸುತ್ತು ಮೂರು ಸುತ್ತು ತಂದ್ ಈಡ್ ಕಟ್ಟಿ, ದೇವ್ರಿಗೆ ಕೈ ಮುಗ್ದ್ ಎಲ್ಲೋವು ಹೊರ್ಟೊ. ಸುರೇಶ ಹಿರ್‍ಯರ ಕಾಲ್ ಹಿಡ್ಕಂಡತ್, ಸುಳ್ಯಲಿ ಕಾದ್ ನಿತ್ತವರ ಕರ್ಕಂಡ್ ಮಡ್ಕೇರಿ ಟೋಲ್‌ಗೇಟ್ ಮುಟ್ಟಿಕಾಕನ ಗಂಟೆ ಹನ್ನೊಂದಾಗಿತ್ತ್.

ಟೋಲ್‌ಗೇಟ್ ಹಕ್ಕಲೆ ಒಂದು ಕಾರ್ ನಾಕ್ ಜೀಪು ನಿತ್ತತ್. ಅಯ್ಯಣ್ಣ ಮಾಸ್ಟ್ರ ಜೀಪುಂದ ಕೆಳಗೆ ಇಳ್ದ್ ಸುತ್ತೋಳು ನೋಡಿಕನ, ಎದ್ರ್‌ನ ಅಂಗ್ಡಿಲಿ ಇವರ್ನೇ ನೋಡ್ತಿದ್ದ, ಪೇಂಟ್, ಕೋಚ್ ಹಾಕಿ ಕೊಡ್ಗ್‌ನವರಾಂಗೆ ಕಾಂಬತಿದ್ದ ಮ್ಯೊಂಸ ಒಬ್ಬ ಇವರ ಜೀಪುನ ಹಕ್ಕಲೆ ಬಂದ್,

"ನೀವು ಪಂಬೆತ್ತಾಡಿಯೊವೋ?" ಎಂತ ಇಚಾರ್ಸಿದೊ.

"ಹೌದು. ನಾ ಅಯ್ಯಣ್ಣ ಮಾಸ್ಟ್ರಂತ. ನೀವು ಬೆಳ್ಯಪ್ಪನವರ ಬಾವ ನೆಂಟನೋ?" ಎಂತ ಕೇಳ್ದೊ.

"ಹೌದೌದ್. ನಮಸ್ಕಾರ ನಾ ಪಾಂಡನ ಮಾದಪ್ಪ ಬೆಳ್ಯಪ್ಪನವರ ಬಾವ ನೆಂಟ" ಎಂತ ಹೇಳಿ ಅಯ್ಯಣ್ಣ ಮಾಸ್ಟ್ರ ಕೈ ಕುಲ್ಕಿ, ಉಳ್ದೋವರ್ನೆಲ್ಲಾ "ನಮಸ್ಕಾರಾ" ಎಂತ ಮಾತಾಡ್ಸಿದೊ. ಮಾದಪ್ಪನೊವು ಅಯ್ಯಣ್ಣ ಮಾಸ್ಟ್ರ ಜೀಪು ಹತ್ತಿ ದಾರಿ ತೋರ್ಸಿದೊ.

ಮೂರ್ನಾಡ್‌ಲಿ ಕಾಪಿ ತೋಟದ ನೊಡುಲಿ ಇದ್ದ ಅಂಕ್ ಡೊಂಕಾದ ಮಾರ್ಗಲಿ ಜೀಪುಗ, ಕಾರ್ ಹೋಕಾಕನ ಒಳಗೆ ಕುದ್ದವ್ಕೆಲ್ಲಾ ಸುತ್ತು ಮುತ್ತು ನೋಡಿಕಾಕನ ಬಾಳ ಕುಸಿ ಆತ್. ಕೊಡ್ಗ್‌ನ ಮೊಣ್ಣ್‌ನ ಪೊರ್ಲೇ ಬೇರೆ. ನೋಡ್ದಸ್ಟ್ ಇನ್ನೂ ನೋಡೋಕೂಂತ ಎಲ್ಲೋವ್ಕ ಆಗಿತ್ತ್. ಇಲ್ಲಿ ಸೆಕೆನೇ ಇಲ್ಲೆ. ಅವ್ಕೆ ಮನೆ ಬಂದದೇ ಗೊತ್ತಾತ್ಲೆ.

ಬೆಳ್ಯಪ್ಪನವರ ಮನೆ ಎತ್ತರದ ಜಾಗೆಲಿತ್ತ್. ಮನೆ ಎದ್ರ್ ದೊಡ್ಡ ಇಜ್ಜೇಲ್, ಅದರ ಒಂದು ಮೂಲೆಲಿ ಆರ್ ಕಂಬಗ ಇದ್ದ ಸಣ್ಣ ಸಣ್ಣ ಹಂಚ್ ಹೊದಿಸಿದ ಒಂದು ಉಯ್ಯಾಲೆ ಮಂಟಪ, ಅದರ್ಲಿ ಕುದ್ರಿಕೆ ಕಲ್ಲ್ ಬೆಂಚ್‌ಗ ಎಲ್ಲರ ಗಮನ ಸೆಳ್ತ್. ಇಜ್ಜೇಲ್‌ನ ಸುತ್ತೋಳು ಬಣ್ಣ ಬಣ್ಣದ ಸೇವಂತಿಗೆ, ಗುಲಾಬಿ, ಬೊಗನ್‌ವಿಲ್ಲಾದ ಹೂ ತುಂಬಿದ ದೈಗ ನೋಡೋವ್ಕೆ ಎರ್ಡ್ ಕಣ್ಣ್ ಸಾಲದ್‌ಂತ ಹೇಳ್ತಿತ್ತ್. ದೊಡ್ಡ ಹಳೆಕಾಲದ ಹಂಚಿನ ಕಟ್ಟೋಣ, ಒಂದು ಬಂಗ್ಲೆನ ಹಾಂಗೆ ಕಾಂಬತಿತ್ತ್.

ಜೀಪು, ಕಾರ್ನ ಸದ್ದ್ ಕೇಳಿ, ಮನೆಲಿದ್ದೋವೆಲ್ಲಾ ಓಡೋಡಿ ಬಂದ್, ನೆಂಟ್ರ್‌ಗಳಿಗೆ ಕೈ ಮುಗ್ದ್ ಕೈಕಾಲ್ ತೊಳ್ಯಕೆ ನೀರ್ ಕೊಟ್ಟ್, "ಬಂದೊರಿಯಾ ನೆಂಟ್ರೇ" ಎಂತ ಹೇಳಿಕಂಡ್ ಉಪಚಾರ ಮಾಡ್ದೊ. ಹೆಣ್ಣ್‌ಗ, ಮಕ್ಕ, ಗಂಡ್‌ಗಾಂತ ಸುಮಾರ್ ಹತ್ತ್- ಹದ್ನೈದ್ ಜನ ಅಲ್ಲಿ ಇದ್ದೊ. ಬಂದವರ ದೊಡ್ಡ ಕೈ ಸಾಲೆಲಿ ಸೋಪಾಲಿ, ಕುರ್ಸಿಲಿ ಕುದ್ರಿಸಿದೊ. ಎಲ್ಲೋವ್ಕ ಕುಡ್ಯಕೆ ದೊಡ್ಡ ದೊಡ್ಡ ಗ್ಲಾಸ್‌ಲಿ ತಾಜಾ ಚಿತ್ತುಳಿ ರಸಕ್ಕೆ ಹದ ಸಕ್ರೆ ಸೇರ್ಸಿ ಮಾಡ್ದ ಪಾನಕನ ಕೊಟ್ಟೊ, ಹಂಞ ಹೊತ್ತ್‌ಲಿ ಹೆಮ್ಮಕ್ಕ ಎಲ್ಲಾ ನಾಕೈದ್ ಟ್ರೇಲಿ ತರತರದ ಸಿಂಯಿ ತಿನ್ಸ್, ಕಾರ ತಿನ್ಸ್ ತಂದ್ ಎಲ್ಲೋವ್ಕ ಕೊಟ್ಟೊ. ಅದರೊಟ್ಟಿಗೆ ಬಿಸಿ, ಬಿಸಿ ಕೊಡ್ಗ್‌ನ ಕಾಪಿನೂ ಬಾತ್.

ಅವರ ಉಪಚಾರ ನೋಡಿ, ಕನ್ನಡ ಜಿಲ್ಲೆವ್ಕೆ ಬಾಯಿಕಟ್ಟಿ ಹೋತ್. ಅಷ್ಟೊತ್ತಿಗೆ ಒಳಗೆಂದ ಮದೋಳ್ಗೆ ಗೂಡೆನೂ ಬಾತ್. ಕೆಂಪು ಮೈಸೂರ್ ಸಿಲ್ಕ್ ಸೀರೆ ಉಟ್ಟ್, ಕೈಗೆ ಎರ್ಡೆರ್ಡ್ ಚಿನ್ನದ ಬಳೆ, ಕೆಬಿಗೆ ಚಿನ್ನದ ಕೊಡಂಗೆ, ಕುತ್ತಿಗೆಗೆ ಒಂದೆಳೆ ಪದಕದ ಚೈನ್ ಹಾಕಿದ ಗೂಡೆ ನೋಡಿಕೆ ಸಂಪಗೆ ಬಣ್ಣದ ಹಾಂಗಿತ್ತ್. ಪಟಲಿದ್ದ ಲಕ್ಷ್ಮಿದೇವಿನ ನೋಡ್ದ ಹಾಂಗಾತ್. ಎಲ್ಲೊವು ಸುರೇಶನ ಗೂಡೆನ ನೋಡಿ ಮೆಚ್ಚಿದೊ. ಗೂಡೆನೂ ಬಂದ ಹಾಂಗೆ, ಹಿರ್‍ಯರ ಕಾಲ್ ಹಿಡ್ಕಂಡ್, ಉಳ್ದೊವ್ಕೆ ನಮಸ್ಕಾರ ಹೇಳಿಕಂಡ್ ಎಲ್ಲರೊಟ್ಟಿಗೆ ಪ್ರೀತಿಂದ ಮಾತಾಡ್ತ್. ಬೆಳಿಯಪ್ಪ ದಂಪತಿಗ ಎಲ್ಲರ್‍ನೂ ಇಚಾರ್ಸಿಕೊಂಡೊ.

ಬೆಳ್ಯಪ್ಪನೊವು ನೆಂಟ್ರ್‌ಗಳ ಮನೆ ತೋರ್ಸಿಕೆ ಒಳಗೆ ಕರ್‍ದೊ. ಒಳಗೆ ಹೋಕನ ದೊಡ್ಡ ಹಜಾರ. ಅದರ ಎರ್ಡ್ ಮಡೆಲಿ ಎರ್ಡೆರ್ಡ್ ಮೊಲ್ಗುವ ಕೋಣೆಗ. ಮತ್ತೊಂದು ಮಡೆಲಿ ಉಪ್ಪರಿಗೆಗೆ ಹತ್ತಿಕೆ ಮೆಟ್ಲ್‌ಗ. ಉಪ್ಪರಿಗೆಲಿ ಒಂದು ಸಣ್ಣ ಜಗಲಿ, ಒಳಗೆ ಎರ್ಡ್ ಕೋಣೆ. ಒಂದು ಕೋಣೆ ಮೊಲ್ಗಿಕೆ. ಇನ್ನೊಂದು ಪುಸ್ತಕಗಳ ಕಪಾಟ್ ಸಲಾಗಿ ಇಸಿದ ಓದುವ ಕೋಣೆ. ಅಲ್ಲಿ ಒಂದ್ ಮೇಜ್, ಎರ್ಡ್ ಕುರ್ಸಿಗ ಇದ್ದೊ. ಉಪ್ಪರಿಗೆನ ಜಗಲಿಲಿ ನಿತ್ತ್ ನೋಡಿಕೆ ಕೆಳಗೆ ಗುಂಡಿಲಿ ಕಾಪಿ ತೋಟದ ಪೊರ್ಲು ಕಾಂಬತಿತ್ತ್. ಉಪ್ಪರಿಗೆಂದ ಕೆಳಗಿಳ್ದ್ ಬಾಕನ ಹಜಾರದ ಮೂಲೆಲಿ ಉದ್ದದ ಸಣ್ಣ ಜಗಲಿ ಇತ್ತ್. ಆ ಜಗಲಿಲಿ ಹೋಕನ ನಾಕ್ ಸಣ್ಣ ಸಣ್ಣ ಕೋಣೆಗ ನೆಂಟ್ರ್‌ಗಳಿಗಾಗಿ ಕಟ್ಟಿಸಿದ್ದ್, ಮಂಚ, ಹಾಸಿಗೆ, ಡ್ರೆಸಿಂಗ್ ಟೇಬಲ್, ಸಣ್ಣ ಮಿಂವ ಕೋಣೆ, ಟ್ಯಾಲೆಟ್ ಪ್ರತಿ ರೂಮ್‌ಲಿ ಇತ್ತ್. ಅಂತೂ ಕೊಡ್ಗ್‌ನೊವು ಜೀವನಲಿ ಕನ್ನಡ ಜಿಲ್ಲೆಯವರ್‌ಂದ ಮೇಲ್ಮಟ್ಟಲಿ ಇದ್ದೊ. ಗಂಡ್‌ನ ಕಡೆಯೊವ್ಕೆ ಇದರೆಲ್ಲಾ ನೋಡಿ, ಇವು ಗಟ್ಟಿ ಕುಳವರೀಂತ ಮೊನ್ಸ್‌ಲೇ ನೆನ್ಸಿಕೊಂಡೊ.

ಒಂದ್ ಗಂಟೆಗೆ ಸರಿಯಾಗಿ ಎಲ್ಲೋವ್ಕು ಉಂಬಕೆ ನೀರ್ ಕೊಟ್ಟೊ ದೊಡ್ಡ ಊಟದ ಕೋಣೆಲಿ ಇಪ್ಪತ್ತ್ ಜನ ಒಮ್ಮೆಗೆ ಕುದ್ದ್ ಉಂಬಸ್ಟ್ ಸೌಕರ್‍ಯ ಇತ್ತ್. ಉಂಬಕೆ ಹಂದಿ ಗೈಪು, ಕಡ್‌ಂಬಿಟ್ಟ್, ರೊಟ್ಟಿ, ಕೋಳಿ ಗಸಿ, ಒಳ್ಳೆ ಮೆಣ್ಸ್, ಉಪ್ಪಿನ ಹೊಡಿ ಹಾಕಿದ ಬೇಸಿದ ಮೊಟ್ಟೆ, ಕಾಸಿದ ಮೀನ್, ಕುರಿ ಮಾಸದ ಸಾರ್, ತುಪ್ಪದನ್ನ ಇತ್ತ್. ಕುಡ್ಯವ್ಕೆ ಕಳ್ಳ್, ವೈನ್ ಇತ್ತ್. ಬೇಕಾದೊವು ಕುಡ್ಕೊಂಡೊ. ಬೇಕಾದರ ತಿಂದ್‌ಕೊಂಡೊ.

ಇನ್ನೊಂದ್ ಐತ್ವಾರ ಹೆಣ್ಣ್‌ನ ಕಡೆ ನೆಂಟ್ರ್‌ಗ ಗಂಡ್‌ನ ಮನೆಗೆ ಬಾದೂಂತ ನಿಶ್ಚಯ ಮಾಡ್ದೊ. ಅಯ್ಯಣ್ಣ ಮಾಸ್ಟ್ರ ಏಟ್ಲದ ನೆಂಟ್ರ್‌ಗೆ, ತಂಗೆಕಳಿಗೆ ನೆಂಟ್ರ್ ಬಾಕನ ನೀವೆಲ್ಲಾ ಬರೊಕೂಂತ ಹೇಳ್ದೊ. ಅವುನೂ ಒಪ್ಪಿಕೊಂಡೊ.

* * * * *

6. "ಗಂಡ್‌ನ ಮನೆಲಿ ಕೊಡ್ಗ್‌ನವ್ಕೆ ಸತ್ಕಾರ"

ಊರಿಗೆ ಬಂದ ಮೇಲೆ ಗಂಡ್‌ನ ಕಡೆಯವ್ಕೆ, ನೆಂಟ್ರ್‌ಗ ಬಾಕನ ಉಪಚಾರ ಮಾಡ್ದರ್ಲಿ ನಾವು ಯಾರಿಗೂ ಕಮ್ಮಿ ಆಕೆ ಬೊತ್ತ್‌ಂತ ಸಿದ್ಧತೆ ಮಾಡ್ದೊ. ಪಂಜಂದ ಶಾಮಿಯಾನ ತರ್ಸಿದ್ ಮನೆ ಇಜ್ಜೆಲ್‌ಗೆ ಶಾಮಿಯಾನ ಹಾಕ್ಸಿದೊ. ನೂರ್ ಕುರ್ಚಿಗಳ ತರ್ಸಿದ್ ಕುದ್ರಿಕೆ ಏರ್ಪಾಡ್ ಮಾಡ್ದೊ. ಉಂಬಕೆ ಮೇಜ್ ತರ್ಸಿದೊ. ಅಡ್ಗೆಗೆ ಮಂಗ್ಳೂರ್‌ಂದ ಜನ ತರ್ಸಿದ್ ಬರ್ಜರಿ ಅಡ್ಗೆ ಮಾಡ್ಸಿದೊ. ಸುರೇಶ ಮತ್ತೆ ಗಿರೀಶ ಶನಿವಾರ ಮನೆಗೆ ಬಂದೊ.

ಕೊಡ್ಗ್‌ಂದ ಏಳೆಂಟ್ ಕಾರ್‌ಲಿ ಹತ್ತಿಪ್ಪತ್ತ್ ಜನ ಹೆಣ್ಮಕ್ಕ, ಗಣ್ಮಕ್ಕ, ಮಕ್ಕಾಂತ ಬಂದೊ. ಬಂದೋವ್ಕೆಲ್ಲಾ ಕಡ್ಪ್, ಕಡ್ಪ್ ಬೆಂಡನ ಒಟ್ಟೆ ಮಾಡಿ, ಪೈಪ್ ಹಾಕಿ ಕುಡ್ಯಕೆ ಕೊಟ್ಟೊ. ಬೆಣ್ಣೆ ಕಾಸಿದ ಹಸ್‌ನ ತುಪ್ಪಲಿ ಮಾಡ್ದ ಕೇಸರಿ ಬಾತ್, ಬೀಜದ ಬೆಂಡ್, ದ್ರಾಕ್ಷೆನೇ ಅದರ್ಲಿ ಎದ್ದ್ ಕಾಂಬತಿತ್ತ್. ಕಡ್ಲೆ ಬೇಳೆ ಹೋಳಿಗೆ, ಅದರ ಮೇಲೆ ತುಪ್ಪ, ಅಗ್ರಣೆ ಅವ್ಲಕ್ಕಿ, ಬಟಾಟೆ ಬೋಂಡ ಬಂದೊವ್ಕೆ ಪಳಾರ ಆತ್. ಅದರ್ಲೆ ಅವರ ಹೊಟ್ಟೆ ತುಂಬಿ ಹೋತ್. ಮದ್ಯಾನದ ಊಟಕ್ಕೆ ಕೋಳಿ ಬಿರ್‍ಯಾನಿ, ಇಡ್ಲಿ, ಕುರಿ ಮಾಸದ ಸಾರ್, ಕಾಸಿದ ಅಂಜಲ್ ಮೀನ್, ಬೇಸಿದ ಮೊಟ್ಟೆ, ಕೋಳಿ ಮಾಸದ ಕಬಾಬ್, ಟೊಮೊಟೊ, ನೀರುಳ್ಳಿ ಎಳ್ತ್ ಮುಳ್ಳು ಸೋಂತೆನ ಕೊಚ್ಚಿ ಮಾಡ್ದ ಕಚ್ಚಂಬ್ರಿ, ಬೀಜದ ಬೆಂಡ್, ತೊಂಡೆಕ್ಯಾ ಹಾಕಿ ಮಾಡ್ದ ಆರ್ಸಿದ ಗೈಪು, ಎಳ್ತ್ ಸೋಂತೆನ ಮಜ್ಜಿಗೆ ಹುಳಿ, ಸುಂಠಿ ಮತ್ತೆ ಹಸಿ ಮೆಣ್ಸ್ ಕೊತ್ತಂಬ್ರಿ ಸೊಪ್ಪು

ಹಾಕಿ, ಅಗ್ರಣೆ ಹಾಕಿದ ಮೊಜ್ಜಿಗೆ ನೆಂಟ್ರ್‌ಗೆ ಸಮ್ಮಾನಕ್ಕೆ ಮಾಡಿದ್ದೊ. ಕೊಡ್ಗ್‌ನೊವ್ಕೆ ಕುಸಿ ನೋ ಕುಸಿ. ಗೂಡೆನ ಅಪ್ಪ, ಅವ್ವಂಗೆ, ಸೋದರ ಮಾಂವ, ಸೋದರತ್ತೆಗೆ ದೊಡಪ, ಸಣಪಂದರಿಗೆ ಎಲೋವ್ಕು ಸುರೇಶನ ಮನೆ, ಆಸ್ತಿ, ಬೊದ್ಕು ನೋಡಿ ತುಂಬಾ ಕುಸಿ ಆತ್. ಹೈದನೂ ನೋಡಿಕೆ ಎತ್ತರ, ತೋರ, ಬಣ್ಣ ಯಾವ್ದರ್ಲಿನೂ ಕಮ್ಮಿ ಇತ್ಲೆ. ಆದರೆ ಒಂದು ಇಸಯಲಿ ಮಾತ್ರ ಹೆಣ್ಣ್ ನೊವ್ಕೆ ಬೇಜಾರ ಆತ್. ಇಸ್ಟ್ ಲಾಯ್ಕ್‌ನ ಊಟ ಕೊಡಿಕನ, ಅದರೊಟ್ಟಿಗೆ ಹಂಞ ಹಂಞ ಕಳ್ಳ್, ಸರಾಯಿನೂ ಕೊಡಲಾಗಿತ್ತ್‌ಂತ ನೆನ್ಸಿದೊ. ಕನ್ನಡ ಜಿಲ್ಲೆವು ಅವು ಕುದ್ದರೂ, ಜಂಬರಲಿ ಕಳ್ಳ್, ಸರಾಯಿ ಕೊಡ್ದರ್ಲಿ ಓಂದೆಂತ ಅವ್ಕೆ ಗೊತ್ತುಟ್ಟು. ಅಯ್ಯಣ್ಣ ಮಾಸ್ಟ್ರನೂ ಕುಡ್ಯಕೆ ಕೊಟ್ಟರೆ ಜಂಬರ ಹಾಳಾದೂಂತ ಅದರ ಏರ್ಪಾಡ್ ಮಾಡ್‌ತ್ಲೆ.

ಜೂನ್ 22ಕ್ಕೆ ಮೂರ್ನಾಡ್‌ನ ಕಲ್ಯಾಣ ಮಂಟಪಲಿ ಲಗ್ನ ಪತ್ರಿಕೆ, ಉಂಗುರ ಹಾಕುದೂಂತ ನಿಶ್ಚಯ ಮಾಡಿ, ಹೆಣ್ಣ್‌ನ ಕಡೆವು ಹೋದೊ. ವೀಳ್ಯಸಾಸ್ತ್ರಕ್ಕೆ ಇನ್ ಇಪ್ಪತ್ತ್ ದಿನ ಇರ್ದು ಅದರೆಡೆಲಿ ಗೂಡೆಗೆ ಹೊಸ ಸೀರೆ, ರವ್ಕೆ, ಉಂಗ್ರ ಮಾಡ್ಲೊಕೂಂತ ಅಯ್ಯಣ್ಣ ಮಾಸ್ಟ್ರ ಹೆಣ್ಣ್‌ನೊಟ್ಟಿಗೆ ಹೇಳ್ದೊ. ಆಗ ಸುರೇಶ

"ಸೀರೆ ತೆಗ್ಯವ ಕೆಲ್ಸಕ್ಕೆ ನೀವು ಹೋಗ್ಬಡಿ. ನಾನೇ ಬೆಂಗ್ಳೂರ್‌ಗೆ ಹೋಗಿ ಗೂಡೆಗೆ ಬೇಕಾದ ಸೀರೆನ ತೆಗ್ದ್ ತನ್ನೆ" – ಎಂತ ಹೇಳ್ತ್.

ಅದ್ಕೆ ಕಮಲಕ್ಕ 'ಹೌದೌದು. ಈಗನ ಗೂಡೆಗಳಿಗೆ ನಾವು ತೆಗ್ದ ಬಟ್ಟೆ ಬರೆ ಆಕಿಲ್ಲೆ. ನೀನೆ ಅದರ ಕರ್ಕಂಡ್ ಹೋಗಿ ಅಡ್ಕೆ ಬೇಕಾದರ ತೆಗ್ಸಿಕೊಡು. ಹಾಂಗೇ ನಿಂಗೆ ಬೇಕಾದ ಡ್ರೆಸ್‌ನನೂ ನೀನೇ ಅಲ್ಲಿ ತಕ. ನಿನ್ನ ಅಪ್ಪ ದುಡ್ಡು ಕೊಟ್ಟವೆ" ಎಂತ ಹೇಳ್ದೊ.

"ಆತವ್ವಾ, ಹಾಂಗೇ ಮಾಡೊಮೊ" – ಸುರೇಶ ಹೇಳ್ತ್ ಅದಕ್ಕೆ ಅಯ್ಯಣ್ಣ ಮಾಸ್ಟ್ರ, "ಉಂಗ್ರನನೂ ಬೆಂಗ್ಳೂರ್‌ಲೇ ಅವ್ಕೆವ್ಕೆ ಬೇಕಾದರ ತೆಗ್ಯಲಿ. ನಾವು ದುಡ್ಡು ಕೊಟ್ಟರೆ ಆತ್ ಎಂತ ಹೇಳ್ದೊ. ಸುರೇಶ ಹೊರ್ಟ್‌ನಿಲ್ಲಿಕನ ಅಯ್ಯಣ್ಣ ಮಾಸ್ಟ್ರ ಒಂದು ಲಕ್ಷ ರುಪಾಯಿನ ಮಂಜನ ಕೈಲಿಸಿಕಳ್ಸಿದೊ. ಸುರೇಶಂಗೆ ಒಳಗೊಂದಳಗೆ ಮೊನ್ಸ್‌ಲಿ ಬಾಳ ಅಳ್ಕ್ ಇತ್ತ್. ಅಂವಂಗೆ ಗೊತ್ತುಟು. ಅವ್ವಂಗೆ ನಾನೇ ಹೆಣ್ಣ್ ಹುಡ್ಕಿಕಂಡದ್ ಒಂದು ಚೂರೂ ಇಷ್ಟ ಆತ್ಲೇಂತ. ಅದ್ಕಾಗಿ ಗೂಡೆನ ಮನೆಲಿ ಹೆಣ್ಣ್ ನೋಡಿಕೆ ಹೋಕಾಕನ ಬಾಳ ಗಂಬೀರಲಿ ಇತ್ತ್. ಗೂಡೆನೊಟ್ಟಿಗೆ ಮಾತೂ ಆಡ್ತಿಲ್ಲೆ. ಅವ್ವನ ದೃಷ್ಠಿಲಿ ಸಂಣಂವ ಆಕೆ ಬೊತ್ತಲೆ. ಗೂಡೆನೂ ಅಷ್ಟೆ ಇಂವನೊಟ್ಟಿಗೆ ಎಸ್ಟ್ ಬೇಕೋ ಅಸ್ಟರ್ಲೆ ಇತ್ತ್. ಅಯ್ಯಣ್ಣ ಮಾಸ್ಟ್ರ ಕಡೆವ್ಕೆಲ್ಲಾ ಅಚ್ಚರಿ. ಹೈದ ಗೂಡೆ ಒಬ್ಬಂದೊಬ್ಬ ಮಾತಾಡ್ತ್‌ಲ್ಲೇಂತ. ಅಂವನೇ ನೋಡ್ದ ಗೂಡೆಗಡ, ಅದೇನ್ ಅವಿಬ್ಬೊರು ಪರ್ಚಯನೇ ಇಲ್ಲದವರಾಂಗೆ ಇದ್ದೋಂತ್ ಎಲ್ಲೋವ್ಕು ಸೋಜಿಗ.

7. "ಈಳ್ಯ ಸಾಸ್ತ್ರ ಮತ್ತೆ ಉಂಗಿಲ ಮೊದ್ವೆ"

ಅಯ್ಯಣ್ಣ ಮಾಸ್ಟ್ರ ಮತೊಮ್ಮೆ ಎಲ್ಲಾ ನೆಂಟ್‌ರ ಮನೆಗಳಿಗೆ ಹೋಗಿ ಈಳ್ಯ ಸಾಸ್ತ್ರಕ್ಕೆ ಬಾಕೆ ಈಳ್ಯ ಕೊಟ್ಟ್ ಬಂದೊ. ಅವರ ಸೋದರತ್ತೆ ಚಿನ್ನಮ್ಮನವರ ಮನೆಗೆ ಬೆಟ್ಟಂಪಾಡಿಗೂ ಹೋಗಿ ಬಂದೊ. ಚಿನ್ನಮ್ಮಕ್ಕನ ಮಂಙಂಗೆ ಸೋಮಯ್ಯ ದೊಡಪನ ಮಗ ಲಲಿತಕ್ಕನ ಕೊಟ್ಟಿದ್ದೊ. ಅಕ್ಕ–ಬಾವನನೂ, ಅತ್ತೆ–ಮಾಂವನನೂ ಈಳ್ಯ ಸಾಸ್ತ್ರಕ್ಕೆ ಕರ್ದ್ ಬಂದೊ. ರಾಮಯ್ಯ ದೊಡಪನ ಮಗ ಗಿರಿಜಕ್ಕನ ಗಂಡ ಮಂಗ್ಳೂರ್‌ಲಿ ಸಬ್ಬಿನೆಸಿಟ್ರ್ ಆಗಿದ್ದೊ. ಅವರ ಮನೆಗೂ ಹೋಗಿ ಕುಟುಂಬ ಸಮೇತ ಎಲ್ಲೋವು ಈಳ್ಯ ಸಾಸ್ತ್ರಕ್ಕೆ ಬರೊಕೂಂತ ಈಳ್ಯ ಕೊಟ್ಟ್‌ದ್ ಹೇಳ್ದೊ. ಪಂಬೆತ್ತಾಡಿಲಿ ಇದ್ದ ನೆರೆ ಕರೆ ಗೌಡ್ರ್‌ಗಳಿಗೂ ಹೇಳಿಕೆ ಕೊಟ್ಟೊ, ಅಂತೂ ಇಂತೂ ಎಲ್ಲೋವು ಸೇರಿಕನ ಸುಮಾರ್ ಮುಟ್ಟ ಮುಟ್ಟ ನೂರು ಜನ ಆದೂಂತ ಲೆಕ್ಕ ಹಾಕಿ, ಒಂದ್ ಬಸ್‌ನವೇ ಬಾಡಿಗೆಗೆ ಮಾಡ್ದೊ. ಜಯಂತಿ ಅಕ್ಕನ ಕಾರ್ ಮತ್ತೆ ಅತ್ತೆ– ಮಾಂವನ ಜೀಪು ಹೇಂಗೂ ಸಿಕ್ಕಿದೇಂತ ಅವ್ಕೆ ಗೊತ್ತಿತ್. ಸುರೇಶ, ಗಿರೀಶ ಸನಿವಾರನೇ ಬಂದೊ.

ಸುರೇಶ ಅಂವನ ಹೆಣ್ಣ್ ರೇಷ್ಮಾಂಗೆ ತೆಗ್ದ ಸೀರೆ ಎಲ್ಲೋವ್ಕ ಕುಸಿ ಆತ್. ಅದರ ಕ್ರಯ ಎಸ್ಟ್‌ಂತ ಕೇಳ್ರೆ ಅಂವ ಹೇಳ್ತೇ ಇಲ್ಲೆ.

"ನೀವ್ಗೆಲ್ಲಾ ಸೀರೆ ಕುಸಿ ಆತೋ ಹೇಳಿ. ಕ್ರಯ ಕಟ್ಟಿ ಕಂಡ್ ಏನಾಕು?" ಎಂತ ಅಂವ ನೆಗಾಡಿಕಂಡ್ ಹೇಳ್ತ್. ಕೆಂಪು ಅಬ್ಬಂತಿಕೆ ಬಣ್ಣದ ಸೀರೆಗೆ ಪಚ್ಚೆ ಕಂಬಿನ ಜರಿ ಇದ್ದ ಕಂಚಿಸೀರೆ ಎಲ್ಲೋವ್ಕ ಕುಸಿ ಆತ್. ಹೇಂಗೂ ಅದ್ಕೆ ಇಪ್ಪತ್ತೈದ್ ಸಾವ್ರಂದ ಮೇಲೆನೇ ಇರ್ದೂಂತ ಎಲ್ಲೋವು ಹೇಳಿಕೊಂಡೊ. ಅಂವ ಗುಟ್ಟು ಬುಟ್ಟತ್ಲೆ.

ಕಮಲಕ್ಕನ ಹಕ್ಕಲೆ ಹಳೆ ಕಾಲದ ಚಿನ್ನ ತುಂಬಾ ಇದ್ದೊ. ಅವರ ಅತ್ತೆ ಇದೇ ಪಂಬೆತ್ತಾಡಿನೊವು. ಒಬ್ಬಳೇ ಮಗ ಆದ ಕಾರ್ಣ ಚಾಮಯ್ಯನೊವು ಮನೆ ಅಳ್ಯ ಆಗಿದ್ದೊ. ಅವ್ಕೆ ವಿಟ್ಲಂದ ಅಪ್ಪನ ಕಡೆಂದ ಪಾಲ್‌ಲಿ·ಬಂದ ಆಸ್ತಿನ ಅಣ್ಣಂದರಿಗೆ ಮಾರಿ, ಮಾಂವನ ಆಸ್ತಿಗೆ ಲಗ್ತಿ ಆಗಿ ಇದ್ದ ಬಟ್ರ್‌ಗಳ ಆಸ್ತಿನ ಕ್ರಯಕ್ಕೆ ತಕಂಡೊ, ಕಳ್ಳ್ ಸರಾಯಿ ಕುಡ್ಯವ ಚಟ ಇಲ್ಲದರ್‌ಂದ ಆಸ್ತಿ ಬೊದ್ಕ್‌ನ ವೃದ್ಧಿ ಮಾಡ್ದೊ. ಕೂಡ್ಸಿದೇ ಅಲ್ಲದೆ ಕಳ್ದತ್ಲೆ. ಚಾಮಯ್ಯ ಗೌಡ್ರ ಅತ್ತೆನ ಹಕ್ಕಲೆ ಒಂದು ತಾಮ್ರದ ಕರ್ಡಿಗೆ ತುಂಬಾ ಚಿನ್ನಗ ಇದ್ದೊ. ಹಳೆ ಕಾಲದ ಮಿಸ್ರಿಮಾಲೆ, ಗೆಜ್ಜೆಟಿಕ್ಕಿ, ಚಕ್ರಸರ, ಮಿರಿಣಿ, ಕಾಸ್ತಾಳಿಂತ ಎಳೆಂಟ್ ಮಾಲೆಗ ಇದ್ದೊ. ಮೊದೊಳ್ಗಿಗಳಿಗೆ ಇಸುವ ಜಡೆಗೊಂಡೆ, ರಾಕುಟಿ, ಕೇದಗೆ, ಚಿನ್ನದ ಹೂಗ ಏಳೆಂಟ್ ಇದ್ದೊ. ಅದೆಲ್ಲಾ ಅವರ ಅತ್ತೆ ಸತ್ತ ಮೇಲೆ ಮಗಳಿಗೆ ಬಾತ್. ಅವು ಅದರ ಮೂರು ಪಾಲ್ ಮಾಡಿ ವಸಂತಿ, ಜಯಂತಿ ಮತ್ತೆ ಅಯ್ಯಣ್ಣ ಗೌಡ್ರಿಗೆ ಕೊಟ್ಟೊ. ಕಮಲಕ್ಕ ಅವರ ಅತ್ತೆನ ನಗಗಳ ಜೋಪಾನಲಿ ಇಸಿಕಂಡೊ. ಯಾವುದರ್‌ನ್ನೂ ಹಾಕ್ ತಿತ್ಲೆ. ಜಂಬರ, ಜಟ್ಟಿಗೆ ಹೋಕಾಕನ ತವುರು ಮನೆಂದ ಕೊಟ್ಟ ಎರ್ಡೆಳೆ ಗುಂಡು ಸರನ ತಾಳಿ ಚೈನ್‌ನೊಟ್ಟಿಗೆ ಹಾಕ್ತಿದ್ದೊ. ಒಮ್ಮೊಮ್ಮೆ ಅವ್ಕೆ ಈ ಚಿನ್ನನೆಲ್ಲ ನೋಡಿಕನ, "ನಂಗೆ ಒಂದು ಹೆಣ್ಣ್‌ಗೂಡೆ ಇರ್ತಿದ್ದರೆ ಇದರೆಲ್ಲಾ ಅದ್ಕೆ ಹಾಕಿ ಕುಸಿ ಪಡ್ತಿದ್ದೇ" ಎಂತ ನೆನ್ಸ್‌ತಿದ್ದೊ. ಈಗ ಮಂಜನ ಮೊದ್ವೆ ಬಾತಲೆ. ಈಗನ ಕಾಲದೊವು ಈ ಹಳೆಕಾಲದ ಚಿನ್ನನೆಲ್ಲ ಹಾಕಿಕಿಲ್ಲೆಂತ ಅವ್ಕೆ ಗೊತ್ತುಟು. ಅವು ಚಿನ್ನ ಇಸಿದ ತಾಮ್ರದ ಕರ್ಡಿಗೆನ ಕಪಾಟ್‌ಂದ ತೆಗ್ದ್ ಒಂದೊಂದೇ ನೋಡ್ದೊ. ಅದರ್ಲಿದ್ದ ಹತ್ತ್ ಪವನ್‌ನ ಗೆಜ್ಜೆಟಿಕ್ಕಿನ ತಕಂಡ್, ಪುತ್ತೂರಿಗೆ ಗಂಡನ ಕರ್ಕಂಡ್ ಹೋದೊ. ಅವ್ಕೆ ಗುರ್ತ ಇದ್ದ ಚಿನ್ನದ ಆಚಾರಿನಕ್ಕಲೆ ಅದರ ತೂಕ ಮಾಡ್ಸಿ, ಅದರ್ಲಿ ನಾಕ್ ಬಳೆ, ಒಂದು ಪದಕದ ಚೈನ್ ಮಾಡಿಕೊಡಿಕೆ ಹೇಳ್ದೊ. ಈಗ ಇಸ್ಟ್ ಸಾಕ್. ಇನ್ ಮೊದ್ವೆಗಾಕನ ಹೇಂಗೂ ಕೆಬಿಗೆ ಓಲೆ, ತಾಳಿ ಚೈನ್, ಕೈ ಬಳೆ ಬಣ್ಣ ಬಂಗಾರಲಿ ಇಸೊಕೊಲೆಆಗ ಉಳ್ದ ಚಿನ್ನನ ಮಾಡ್ಸೊಮೊಂತ ನೆನ್ಸಿಕಂಡ್ ಊರಿಗೆ ಬಂದೊ.

ಇಪ್ಪತ್ತೆ ತಾರೀಕಿಗೆ ಚಿನ್ನ ಎಲ್ಲಾ ಮನೆಗೆ ಬಾತ್. ಇಪ್ಪತ್ತೊಂದಕ್ಕೆ ಸುರೇಶ, ಗಿರೀಶರೂ ಬಂದೊ. ಚಿನ್ನನ ಮತ್ತೆ ಸೀರೆನ ದೇವ್ರ ಎದ್ರ್ ಇಸಿ ಪೂಜೆ ಮಾಡಿ,

ಮೊದೊಳ್ಗಗೆ ತಕಂಡೋದ ಹೂ, ಪಿಂಗಾರದೊಟ್ಟಿಗೆ ಸೂಟ್ ಕೇಸ್‌ಲಿ ಇಸಿದೊ.

ಐತ್ವಾರ ದಿನ ಬೊಳ್ಪುಗೆ ಎಂಟ್ ಗಂಟೆಗೆ ಎಲ್ಲೋವು ಪಂಬೆತ್ತಾಡಿಂದ ಹೊರ್ಟೊ. ಸುಮಾರ್ ಹನ್ನೊಂದುವರೆ ಗಂಟೆಗೆ ಮೂರ್ನಾಡ್‌ನ ಕಲ್ಯಾಣ ಮಂಟಪಕ್ಕೆ ಎತ್ತಿದೊ. ಗಂಡ್‌ನ ಕಡೆವ್ಕೆ ಗೂಡೆನ ಕಡೆವು ಬಾರೀ ಉಪಚಾರ ಮಾಡ್ಡೊ. ಕಾಪಿ, ತಿಂಡಿಂದ ಹೊಟ್ಟೆ ತುಂಬಸಿದೊ. ಮೂರ್ತಕ್ಕೆ ಸರಿಯಾಗಿ ಮೊದು ಮಕ್ಕಳ ಸಿಂಗಾರ ಮಾಡಿ ಮಂಟಪಕ್ಕೆ ಕರ್ಕಂಡ್ ಬಂದೊ. ಮೊದುಮಕ್ಕ ಬಾಳ ಪೊರ್ಲು ರತಿ-ಮನ್ಮತರಾಂಗೆ ಕಾಂಬೊತಿದ್ದೊ. ಸುರೇಶನೂ ಆರಡಿ ಎತ್ತರದ ಕೈ ಮೈ ತುಂಬಿಕಂಡ ಸೊಗ್ಸ್‌ಗಾರ ಗಂಡ್. ಗೂಡೆ ಅಂವಂದಳೂ ಪೊರ್ಲು ಇದ್ದ್. ಅಂವನ ಹೆಗ್ಲ್‌ಗೆ ಮುಟ್ಟ ಎತ್ತರ ಇತ್ತ್. ಎಲ್ಲೋವೂ ಜೊತೆ ಲಾಯ್ಕುಟ್ಟೂಂತ ಹೊಗಳ್ದೇ ಹೊಗಳ್ದ್. ಎರ್ಡ್ ಕಡೆ ನೆಂಟ್ರ್‌ಗ ಊರ್ ಗೌಡ್ರ್‌ಗ ಸೋದರ ಮಾಂವಂದರ್ ಎದ್ರ್ ಬದ್ರ್ ಕುದ್ದ್ ಸಾಸ್ತ್ರ ಹೇಳಿ ಈಳ್ಯ ಕಟ್ಟಿದೋ. ಲಗ್ನ ಪತ್ರಿಕೆನೂ ಬರ್ಕೊಂಡೊ. ಗೂಡೆಗೆ ಹೈದ ಉಂಗ್ರ ತೊಡ್ಸಿತ್. ಗೂಡೆನೂ ಹೈದಂಗೆ ಉಂಗ್ರ ಹಾಕಿತ್. ಎಲ್ಲೋವೂ ಕೈ ಬೊಟ್ಟಿದೊ. ಸುತ್ತೋಳು ಇದ್ದೋವೆಲ್ಲಾ ಅವರವರ ಮೊಬೈಲ್‌ಲಿ ಪಟ ತೆಗ್ದ್ ಕೊಂಡೊ. ಗೂಡೆನ ಕಡೆನ ಪಟ ತೆಗ್ಯೋವು, ವೀಡಿಯೊ ಶೂಟಿಂಗ್ ಮಾಡೋವು ಎಲ್ಲಾ ತರ ತರದ ಪಟಗಳ ತೆಗ್ದೊ. ಎಲ್ಲೋವೂ ಗೂಡೆ, ಹೈದಂಗೆ ಕೈ ಕುಲ್ಕಿ ಶುಭಾಶಯ ಹೇಳ್ದೊ ಹೆಣ್ಣ್‌ನ ಕಡೆವು ಗಡ್ದ್‌ನ ಊಟನ ಕೊಟ್ಟೊ. ಕುಡ್ಯೋವ್ಕೆ ಬೇಕಾದಸ್ಟ್ ಬ್ರಾಂಡಿ, ವಿಸ್ಕಿ, ವೈನ್ ಇತ್ತ್. ಅಯ್ಯಣ್ಣ ಮಾಸ್ಟ್ರ ಮನೆಂದ ಹೊರ್ಡಿಕನನೇ ಎಲ್ಲಾ ನೆಂಟ್ರೋಟ್ಟಿಗೆ,

"ಕೊಡ್ಗ್‌ಲಿ ಜಂಬರಲಿ ಕುಡ್ಯಕೆ ಬೇಕಾದಸ್ಟ್ ಕೊಟ್ಟವೆ. ನೀವು ಮೊತಿ ತೊಪ್ಪುಬೊಡಿ. ಕನ್ನಡ ಜಿಲ್ಲೆನ ಮಾನ ಮೊರ್ಯಾದಿ ಒಳ್ಸಿಕಣಿ" ಎಂತ ಹೇಳಿದ್ದೊ. ಹಂಗಾಗಿ ಯಾರೂ ಮೊತಿ ತೊಪ್ಪುವಸ್ಟ್ ಕುಡ್ತ್‌ಲ್ಲೆ. ಹೆಣ್ಮಕ್ಕ ಅಂತೂ ಆ ಕಡೆ ಹೋತೇ ಇಲ್ಲೆ. ಗಡ್ದ್‌ನ ಊಟ ಆತ್. ಕೋಳಿ, ಕುರಿ, ಹಂದಿ, ಮೀನ್, ಮೊಟ್ಟೆಂತ ತರತರದ ಅಡ್ಗೆ ಮಾಡಿದ್ದೊ, ಮಾಸ ತಿನದೊವ್ಕೂ ಬೇರೆ ಬೇರೆ ತರದ ಅಡ್ಗೆ ಇತ್ತ್. ಎರ್ಡ್ ಮೂರು ಬಗೆ ತಿಂಡಿ, ತಿನ್ಸ್ ಇತ್ತ್. ಎಲ್ಲೋವ್ಕೆ ಊಟ ಉಪಚಾರಲಿ ಯಾವ ಕುಂದು ಕೊರ್ತೆ ಕಂಡತ್ಲೆ.

ಉಂಗ್ರ ಸಾಸ್ತ್ರ ಮುಗ್ಸಿ, ಉಂಡ್, ಎಲ್ಲೋವ್ಕು ಹೋಗಿ ಬನ್ನೇಂತ ಹೇಳಿ ಮೊದ್ವೆಲಿ ತಿರ್ಗಿ ಬೇಟಿಯಾಗೋಮೋಂತ ಹೇಳಿ ಗಂಡ್‌ನ ಕಡೆವು ಊರಿಗೆ ಬಂದೊ.

* * * * *

8. "ಜಂಬರ ತೆಗ್ಯವ ಗೌಜಿಲಿ"

ಅಯ್ಯಣ್ಣ ಮಾಸ್ತ್ರಗೆ ಒಂದು ಗಳ್ಗಿ ಪುರ್ಸೋತ್ತೇ ಇಲ್ಲೆ. ಮೊದ್ವೆ ನವಂಬರ ಆರಕ್ಕೆ ಇಸಿದ್ದೊ. ಇನ್ ಐದ್ ತಿಂಗ ಇದ್ದರೂ ಮಾಡ್ವ ಕೆಲ್ಸ ಬೇಕಾದಸ್ಟ್ ಇತ್ತ್. ಅದರೆಡೆಲಿ ಮಳೆನೂ ಸುರಾತ್. ತೋಟಕ್ಕೆ ಮೊದ್ದ್ ಬುಡೊಕು. ಸೊಪ್ಪು ಮಾಡೋಕು, ಗೊಬ್ಬರ ಹಾಕೋಕು. ಇದೆಲ್ಲಾ ಮಾಡ್ರೆನೇ ಬರ್ವ ವೊರ್ಸ ನಾವು ಬೊದ್ಕುದು. "ನಮ್ಮ ಹೊಟ್ಟೆ ತುಂಬಿರೆ ಸಾಕೋ? ದೈಗ ಸಾ ನಮ್ಮ ಮಕ್ಕ ಅಲ್ಲಮೋ? ಇಂದ್ ಅದರ ಸಾಕಿರೆ ನಾಳೆ ನಾವ್ಗೆ ಅದ್ ಫಸಲ್ ಕೊಟ್ಟದೆ" ಎಂತೆಲ್ಲಾ ಮೊನ್ಸ್‌ಲಿ ನೆನ್ಸಿಕಂಡ್, ಅಯ್ಯಣ್ಣ ಮಾಸ್ತ್ರ ಸುರುಗೆ ತೋಟದ ಕೆಲ್ಸಾಂತ ನಾಕಾಳ್ ಜನ ಕರ್ಕಂಡ್ ತೋಟಕ್ಕೆ ಮೊದ್ದ್ ಬುಡಿಕೆ ಸುರು ಮಾಡ್ದೊ.

ಮೂರ್ ನಾಕ್ ದಿನಲಿ ಆ ಕೆಲ್ಸ ಮುಗ್ತ್. ಈ ವೊರ್ಸ ಅವು ತೋಟಕ್ಕೆ ಮೊಣ್ಣ್ ಹಿಡ್ಸೊಕೂಂತ ಮಾಡಿದ್ದೊ. ಕಮ್ಮನ ಬೇರ್‌ಗ ಎಲ್ಲಾ ಮೇಲೆ ಪೊಕ್ಕಿಕಂಡ್ ಕಂಡದೆ. ಒಂದೊಂದರ ಬುಡಕೆ ನಾಕ್ ನಾಕ್ ಹೆಡಗೆ ಮೆಣ್ಣಾದರೂ ಹಾಕ್ಸೋಕೂಂತ ಅರ್ಗಾಲನೇ ನೆನ್ಸಿದ್ದೊ. ಆದರೆ ಈಗ ನೆನ್ಸದೆ ಮೊದ್ವೆ ಬಾತ್. ಇದರ್‍ನೂ ಹಿಂದಕೆ ಹಾಕಿಕೆ ಆದ್ಲೆ. ಮುಂದೆ ಮೊದ್ವೆ ಮುಗ್ಯಲಿ. ಬರ್ವ ವೊರ್ಸ ಮೊಣ್ಣ್ ಹಿಡ್ಸೊಮೊ. ಈ ವೊರ್ಸ ಎರ್ಡ್ ಎರ್ಡ್ ಹೊರೆ ಸೊಪ್ಪು ಹಾಕ್ಸೊಮೊ ಎಂತ ನೆನ್ಸಿಕೊಂಡೊ. ಸೊಪ್ಪುನ ಕೆಲ್ಸನೂ ಭರಲಿ ಸಾಗಿತ್. ಅದರೆಡೆಲಿ ಹಟ್ಟಿಲಿ ಗೊಬ್ಬರ ತುಂಬಿ ಕಾಲಿಸಿಕೆ ಆದ್ಲೆ. ಅದರನೂ ಎರ್ಡ್ ದಿನಲಿ

ತೆಗ್ಸಿ ತೋಟಕ್ಕೆ ಹಾಕ್ಸಿದೊ. ಮನೆಗೆ ಸುಣ್ಣ ಬಣ್ಣ ಮಾಡ್ಸದೆ ಹತ್ತ್ ವೊರ್ಸ ಆತ್. ಮೊದ್ವೆ ನೆವನಂದ ಸುಣ್ಣ ಬಣ್ಣ ಮಾಡ್ಸದೆ ನಿಮುರ್ತಿನೇ ಇಲ್ಲೆ. ಸುಳ್ಯದ ಜನ ತರ್ಸಿದೊ. ನಾಕೈದ್ ದಿನ ನಾಕಾಳ್‌ಗ ಗೋಡೆನ ಪೊಯ್ಯೆಕಾಗ್ದಲಿ ಉಜ್ಜಿ ದೂಳು ತೆಗ್ಯೊದೇ ಆತ್. ಬಣ್ಣ ಹಾಕೊವು ಕೊಟ್ಟ ಪಟ್ಟಿನ ಹಿಡ್ಕಂಡ್ ಪುತ್ತೂರಿಗೆ ಹೋಗಿ ಡಿಸ್ಟೆಂಪರ್, ಬ್ರೆಷ್ ಎಲ್ಲಾ ತಂದೊ. ಸುಣ್ಣ ಬಣ್ಣದ ಕೆಲ್ಸ ಬರಂದ ಸಾಗಿತ್. ಆಟಿ, ಸೋಣ ಇಡೀ ಸುಣ್ಣ ಬಣ್ಣ ಹಾಕುದರ್ಲೇ ಕಳ್ತ್. ಅದರೆಡೆಲಿ ಸಣ್ಣ ಸಣ್ಣ ರಿಪೇರಿ ಕೆಲ್ಸಗಳೂ ಇದ್ದೊ. ಎಲ್ಲಾ ಮುಗ್ಯಕಾಕನ ಎರ್ಡ್ ಲಕ್ಷ ಮುಗ್ತ್. ದುಡ್ಡು ಹುಣ್ಸೆ ಬೀಜದ ಹಾಂಗೆ ಕರ್ಚಾತ್. ಈಗ ಕೆಲ್ಸದವರ ಸಂಬಳ ಆಕಾಸಕ್ಕೆ ಏರಿಟ್ಟು, ಆಸ್ಟ್ ದೊಡ್ಡ ಮನೆಗೆ ಸುಣ್ಣ ಬಣ್ಣ ಮಾಡ್ಸುದು ಏನ್ ಸಮಾನ್ಯ ಕೆಲ್ಸ ಅಲ್ಲ. ಆದರೆ ಅಯ್ಯಣ್ಣ ಗೌಡ್ರಿಗೆ ಇದೆಲ್ಲಾ ಕ್ಯಾರೇ ಇಲ್ಲ. ಅವು ದುಂದು ವೆಚ್ಚ ಮಾಡೊವು ಅಲ್ಲ. ಸ್ವತಹ ಆಳ್‌ಗಳೊಟ್ಟಿಗೆ ಅವುನೂ ದುಡ್ಯೋತಿದ್ದೊ. ಹಾಂಗಾಗಿ ಸಾಲ ಸೋಲ ಇಲ್ಲೆ. ಕಟ್ಟಿಸಿದ ಹಣ ಕರ್ಗಿಕಂಡ್ ಬಾಕೆ ಸುರಾತ್. ಆದರೆ ತೊಂದರೆ ಇಲ್ಲೆ ಹಳೆ ಅಡ್ಕೆನೇ ಹತ್ತಿಪ್ಪತ್ತ್ ಕಂಡಿ ಅವರಲ್ಲಿ ಸ್ಟೋಕ್ ಇತ್ತ್.

ಕಮಲಕ್ಕ ಮಂಜನೊಟ್ಟಿಗೆ ಫೋನ್‌ಲಿ ಮಾತಾಡ್ದೊ. "ಮೊದೋಳ್ಗೆಗೆ ಜವುಳಿ ತೆಗೆಕ್ಕೋಲೆ" ಎಂತ ಅದ್ಕೆ ಸುರೇಶ ಹೇಳ್ತ್.

"ಅವ್ವ ಜವುಳಿ ಚಿಂತೆ ನೀವು ಮಾಡ್ಬೋಡಿ ರೇಶ್ಮನ ಅಪ್ಪ ಅವ್ವ ಜವುಳಿ ತೆಗ್ಯಕೆ ಕಂಚಿಗೆ ಹೋದವೆಗಡ. ನಾ ಅವರೊಟ್ಟಿಗೆ ಹೋಗಿ ನೀವುಗೆ ಮತ್ತೆ ನಿಮ್ಮ ತವುರು ಮನೆವ್ಕೆ, ಸೋದರ ಅತ್ತೆಕಳಿಗೆ ನಾ ಕಂಚಿಂದ ಸೀರೆ ತನ್ನೆ"– ಎಂತ ಹೇಳ್ತ್. "ಆತ್ ಮಂಜ. ನನ್ನ ಅಪ್ಪ, ಅವ್ವಂಗೆ ನಾ ಮಂಗ್ಳೂರ್‌ಂದ ಜವುಳಿ ತೆಗ್ದನೆ. ಅವು ಹಳೆಕಾಲದೊವು. ನಿಂಗೆ ಗೊತ್ತಾಕಿಲ್ಲೆ. "ಕಮಲಕ್ಕ ಹೇಳ್ದೊ.

"ಆತವ್ವಾ, ಹಂಗೇ ಮಾಡೊಮೊ" – ಸುರೇಶ ಹೇಳ್ತ್. ಸುರೇಶ ಗಿರೀಶನ ಕರ್ಕಂಡ್ ಅಂವನ ಅತ್ತೆ– ಮಾಂವನೊಟ್ಟಿಗೆ ಕಂಚಿಗೆ ಹೋಗಿ ದಾರೆ ಸೀರೆ, ಪಚಾರದ ಸೀರೆ, ಮತ್ತೆ ಗೂಡೆಗೆ ಮಾಪು ಸೀರೆ ನಾಕ್ ತೆಗ್ತ್. ಅತ್ತೆಕಳಿಗೆ ಉಡ್ಲೊಗ್ರೆ ಕೊಡಿಕೇಂತ ಆರ್. ಸೀರೆ ತೆಗ್ತ್. ಒಟ್ಟು ಅಂವಂಗೆ ಒಂದೂವರೆ ಲಕ್ಷ ರೂಪ್ಯಾ ಖರ್ಚಾತ್, ಅಂವ ಅಪ್ಪನೊಟ್ಟಿಗೆ,

"ಅಪ್ಪ, ನೀವು ಬಟ್ಟೆ ಬರೆಗೆ ಹಣ ಕೊಡ್ಬೋಡಿ ನನ್ನ ಹಕ್ಕಲೆ ಉಟ್ಟು. ನೀವ್ಗೂ ಅಲ್ಲಿ ಬೇಕಾದಸ್ಟ್ ಕರ್ಚ್ ಉಟ್ಟಲೇ?" ಎಂತ ಫೋನ್‌ಲಿ ಹೇಳ್ತ್. ಅಯ್ಯಣ್ಣ ಗೌಡ್ರುನೂ ಅದ್ಕೆ ಒಪ್ಪಿದೊ.

ಕಮಲಕ್ಕ ಅಯ್ಯಣ್ಣ ಮಾಸ್ಟ್ರ ಕರ್ಕಂಡ್ ಮಂಗ್ಳೂರ್‌ಗೆ ಹೋಗಿ ಅಪ್ಪಂಗೆ, ಅವ್ವಂಗೆ, ದೊಡ್ಡ ಮಾಂವಂದರಿಗೆ, ವಿಮಲತ್ತೆಗೆ, ಚಿನ್ನಮ್ಮ ದೊಡವಂಗೆ ಮತ್ತೆ ಕೆಲ್ಸದೊವ್ಕೆ

ಎಲ್ಲಾ ಸೇರ್ಸಿಕಂಡ್ ಒಂದ್ ಹದ್ನೈದ್ ಸೀರೆ ತಕಂಡೊ. ಒಂದ್ ಹತ್ತ್ ಹೊದ್ಯವ ಒಲ್ಲಿಗ, ಒಂದು ಡಜನ್ ಬೈರಾಸ್‌ಗಳನೂ ತಕಂಡೊ. ಹೆಚ್ಚಿಗೆ ಇದ್ದರೆ ಅರ್ಜೆಂಟಿಗೆ ಕೊಡೊವ್ಕೆ ಕೊಡಕಲೇಂತ ಅವರ ನೆನ್ಸಿಕೆ. ಅಂತೂ ಅವ್ಕನೂ ಒಂದ್ ಅರುವತ್ತ್ ಸಾವ್ರದಸ್ಟ್ ಹಣ ಜವುಳಿಗೆ ಕರ್ಚಾತ್.

ಜಂಬರದ ಪಾತ್ರೆ, ಪಡಗಗಳಿಗೆ ಅವ್ಕೆ ತೊಂದ್ರೆ ಇಲ್ಲೆ. ಹಿರಿಯರ್ ಎಲ್ಲಾ ಮಾಡಿಸಿದ್ದೊ. ಐದಾರ್ ಕಂಚಿನ ಗಿಂಡಿಗ, ಕೊಂಬು, ಗಿಂಡಿಗ, ಕಂಚಿನ ಬಟ್ಲ್‌ಗ, ಹಿತ್ತಾಳೆ ಹರ್ವಾಣಗ, ಕಾಲ್ದೀಪಗ, ಸರ್ಮಾಲೆದೀಪಗ ಎಲ್ಲಾ ಅವರಕ್ಕಲೆ ಇತ್ತ್. ಬೇರೆವರ ಮನೆಂದ ತಾವ ಅಗತ್ಯ ಅವ್ಕಿತ್ತಿಲ್ಲೆ. ದಾರೆ ಎರ್ಯಕನ ಕೊಂಬು ಗಿಂಡಿ ಬೇಕೇ ಬೇಕ್, ಅರ್ಸಿಣ ಎಂಣೆ ಕಲ್ಸಿಕೆ, ಮೊದ್ರಂಗಿ ಅರ್ದ್ದ ಇಸಿಕೆ, ಆರತಿ ಎತ್ತಿಕೆ ಬೇಕಾದ ಕಂಚ್‌ನ ಬಟ್ಲ್‌ಗ ಎಲ್ಲಾ ಅವರಕ್ಕಲೆ ಇದ್ದೊ. ಅದರೆಲ್ಲಾ ಅಟ್ಟಕೆ ಹತ್ತಿ ತೆಗ್ದ್ದ ಪೊರ್ಲ್ಲಲಿ ಪಳಪಳ ಹೊಳ್ಯವ ಹಾಂಗೆ ಉಮಿಕರಿ ಹಾಕಿ ತೊಳ್ಸಿ, ಒಂದು ಕೋಣೆಲಿ ಸಾಲಾಗಿ ಒಟ್ಟಿ ಇಸಿದೊ. ಒಂದು ಐದಾರ್ ಹುಲ್ಲು ಮೊಂದ್ರಿಗಳನೂ, ಹಸೆ ಹಾಸಿಕೆ, ಜೋಡಿ ಒಲಿಮೊಂದ್ರಿಗಳನು ಹೊಸ್ತಾಗಿ ತೆಗ್ದ್‌ದ್ ಇಸಿಕೊಂಡೊ. ದಿನ ಓಡ್ತ್.

ಮೊದ್ವೆಲಿ ಅಡ್ಗೆ ಒಂದು ಲಾಯ್ಕಾಕು. ಅಡ್ಗೆ ಲಾಯ್ಕಾತ್ಲರೆ, ಬಂದವೊರ ಹೊಟ್ಟೆ ತೊಂಪಾತ್ಲರೆ, ಎಸ್ಟ್ ಕರ್ಚ್ ಮಾಡ್ರೂ ಎನ್ ಸುಕಾಂತ, ಅಯ್ಯಣ್ಣ ಮಾಸ್ತ್ರ ಅಡ್ಗೆಗೆ ಯಾರ ಮಾಡ್ದೂಂತ ಎಚ್ನೆ ಮಾಡ್ದೊ. ಅಡ್ಗೆಗೆ ವಿಟ್ಲದ ಬಟ್ರ್‌ಗಳೇ ಸರಿ. ಅವರಸ್ಟ್ ಲಾಯ್ಕ್‌ಲಿ ಅಡ್ಗೆ ಮಾಡೊವು ಈ ಕಡೆ ಇಲ್ಲೇಂತ ನೆನ್ಸಿಕಂಡ್ ಒಂದಿನ ಬೊಳ್ಪುಗೆನೇ ವಿಟ್ಲಕ್ಕೆ ಹೋದೊ. ಅಲ್ಲಿ ರಾಮಯ್ಯ ದೊಡವನೊಟ್ಟಿಗೆ.

"ದೊಡಪಾ, ನಂಗೆ ನೀವು ಒಳ್ಳೆ ಒಂದು ಅಡ್ಗೆವ್ರ ಮಾಡಿಕೊಡೊಕು. ಅಡ್ಗೆ ಎಸ್ಟ್ ಲಾಯ್ಕ್ ಆ ಕೂಂತೇಳ್ರೆ ಉಂಡ್ ಕೈತೊಳ್ದರೆ ಮೂರ್ ದಿನ ಆದರೂ ಅದರ ಪೊರ್ಮಳ ಹೋಕೆ ಬೊತ್ತ್. ಅಸ್ಟ್ ಲಾಯ್ಕ್‌ನ ಅಡ್ಗೆ ಆಕು" ಎಂತ ಹೇಳ್ದೊ.

"ಅದ್ಕೇನ್ ಮಂಜ, ಇಲ್ಲಿ ಮಂಜಯ್ಯ ಐತಾಳ್ರ್ ಒಳೊ. ಅವರೊಟ್ಟಿಗೆ ಏಳೆಂಟ್ ಜನರ ಒಂದು ಸೆಟ್ಟೇ ಉಟ್ಟು, ನಾ ನಿನ್ನ ಅಲ್ಲಿಗೆ ಕರ್ಕೊಂಡೋನೆ. ನೀನೇ ಮಾತಾಡ್". ಎಂತ ಹೇಳಿ, ಒಳಗೆ ಹೋಗಿ ಉಟ್ಟ ಕಂಬ್ಯಾನ ಮಾಪಿ, ಒಂದ್ ಬೆಳ್ದ್ ಮುಂಡುನನೂ, ತುಂಡ್‌ಕೈ ಅಂಗಿನನೂ ಹಾಕಂಡ್, ಹೆಗ್ಲ್ ಮೇಲೆ ಒಂದು ಬೈರಾಸ್ ಕೋಸಿಕಂಡ್, ಅಯ್ಯಣ್ಣ ಮಾಸ್ತ್ರ ಅವರಲ್ಲಿಗೆ ಕರ್ಕೊಂಡೋದೊ. ಇವರಿಬ್ಬರ ದೂರಂದಳೇ ನೋಡಿ, ಮಂಜಯ್ಯ ಐತಾಳ್ರ್ ಅವರ ಹೆಣ್ಣ್‌ನ ಕರ್ದ್ದ.

"ಓ ಹೋಯ್, ರಾಮಯ್ಯ ಯಾರ್ನೋ ನೆಂಟನ ಕರ್ಕಂಡ್ ಬಂದದೆ. ಅವ್ಕೆ ಆಸರೆಗೆ ಮೊಜ್ಜಿಗೆ ತಾ" ಎಂತ ಹೇಳ್ದೊ.

ರಾಮಯ್ಯ ಗೌಡ್ರ್, ಅಯ್ಯಣ್ಣ ಮಾಸ್ತ್ರ ಇಜ್ಜೆಲಲಿ ಮೆಟ್ಟ್‌ನ ಕಳ್ಚಿಸಿ, ಮನೆ

ಚಿಂಟೆಗೆ ಬಂದ್ ಐತಾಳ್‌ರಿಗೆ ಕೈ ಮುಗ್ದೊ.

“ಇಂವ ನನ್ನ ತಮ್ಮ ಚಾಮಯ್ಯನ ಮಂಜ. ಪಂಜದ ಪಂಬೆತ್ತಾಡಿಲಿ ಇರ್ದು, ಇಂವನ ಮಂಜಂಗೆ ಮೊದುವೆ ನಿಗಂಟ್ ಆಗುಟ್ಟು. ಅಡ್ಗೆಗೆ ನಿಮ್ಮ ಸಾಯಬೇಕ್” ಎಂತ ಹೇಳ್ದೊ. ಐತಾಳ್ರ್‌ಗೆ ಗೌಡ್ರ ಅರೆಕನ್ನಡ ಬಾಸೆ ಲಾಯ್ಕಲಿ ಬಾತಿತ್ತ್.

“ನಿಂಗೆ ನೆಂಪಿಲ್ಲೆನೂ ಅಯ್ಯಣ್ಣ ನಾನು ನೀನು ವಿಟ್ಲ ಎಲಿಮೆಂಟ್ರಿ ಸಾಲೆಲಿ ಒಟ್ಟಿಗೆ ಓಡ್ತಿದ್ದೊ. ನೀ ಅಪ್ಪನೊಟ್ಟಿಗೆ ಪಂಜಕ್ಕೆ ಹೋದ. ನಾ ಇಲ್ಲಿ ಸಾಲೆ ಬುಟ್ಟು ಅಡ್ಗೆ ಕೆಲ್ಸ ಕಲ್ತೆ.”– ಎಂತ ಮಂಜಯ್ಯ ಐತಾಳ್ರ್ ಹಿಂದೆದರ ನೆಂಪು ಮಾಡ್ದೊ.

“ಓ ಮಂಜುನಾಥ ಅಲ್ಲ. ಈಗ ನೀವು ಮಂಜಯ್ಯ ಐತಾಳ್ರ್ ಆಗೋಳೊರಿ. ಮತ್ತೆ ನಂಗೆ ಹೇಂಗೆ ಗೊತ್ತಾದು?”– ಹಿಂದೆದರ ನೆನ್ಸಿಕಂಡ್ ಅಯ್ಯಣ್ಣ ಮಾಸ್ಟ್ರ ಹೇಳ್ದೊ.

“ಜನರ ಬಾಯಲಿ ನಾ ಅಯ್ಯ ಆದೆ. ನಮ್ಮ ಬಟ್ರ್‌ಗಳ್‌ಲಿ ಅಯ್ಯಂತ ಹೇಳ್ಸಿಕೊಂಬೊದು ಒಂದು ಹೆಗ್ಗಳಿಕೆ ಅಲ್ಲನೋ?” ಎಂತ ಹೇಳಿ ನೆಗಾಡ್ದೊ.

“ಈಗ ನಿನ್ನ ಅಪ್ಪ ಇರಕಾಯ್ತ್. ಮಂಜನ ಬಿರ್ಸತಿಕೆ ನೋಡಿ ಕುಸಿ ಪಡ್ತಿದ್ದೊ. ಛೆ ಛೆ ಹಿಂಗಾಕೆ ಬೊತ್ತಾಗಿತ್ತ್. ಸಣ್ಣ ಪ್ರಾಯಲೇ ದೇವ್ರು ಅವರ ಕರ್ಕೊಂಡೋ” ಎಂತ ಹೇಳಿ ಐತಾಳ್ರ್ ಬೇಜಾರ ಮಾಡಿಕೊಂಡೊ. ಅಸ್ಟಾಕನ ಅವರ ಹೆಣ್ಣ್ ಅಗ್ರಣೆ ಹಾಕಿದ ಮೊಜ್ಜಿಗೆ ತಂದ್ ಕುಡ್ಯಕೆ ಕೊಟ್ಟೊ. ಮೊಜ್ಜಿಗೆ ಕುಡ್ದ್ ಆಕನ ಐತಾಳ್ರ್ ಕೆಲ್ಸ ದಂವನ ಕರ್ದ್.

“ಇಂದಾ ‘ಸಣ್ಣ’ ಈ ಗ್ಲಾಸ್ ತಕಂಡೋಗು” ಎಂತ ಹೇಳ್ದೊ. ಕೆಲ್ಸದಂವ ಅವು ಕುಡ್ದ ಗ್ಲಾಸ್‌ನ ತೊಳ್ಯಕೆ ತಕೊಂಡೋತ್, ಅಯ್ಯಣ್ಣ ಮಾಸ್ಟ್ರಿಗೆ ಸಮದಾನ ಆತ್. ಅವು ಬಟ್ರ್‌ಗಳ ಮನೆಗೆ ಹೋದರೆ ಊಟ ತಿಂಡಿ ಮಾಡಿಕೆ ನಿಲ್ಲುದುಲ್ಲೆ. ಬಟ್ರ್‌ಗಳ ಮನೆಲಿ ಕೆಳ ಜಾತಿಯೊವು ಹೋದರೆ ಉಂಡ ಪಾತ್ರನ, ಕುಡ್ದ ಗ್ಲಾಸ್‌ನ ಅವವೇ ತೊಳ್ಯಕು. ಇದ್ ಅವ್ಕೆ ಕಷ್ಟ ಆಗ್ತಿತ್ತ್. ಆದರೆ ಈಗೀಗ ಬಟ್ರ್‌ಗಳೂ ಸುದಾರ್ಸಿಯೊಳೊ. ಗೌಡ್ರ್‌ಗಳಿಗೆ ಅವು ಮೊರ್ಯಾದೆ ಕೊಟ್ಟವೆ.

“ಈಗ ಹೇಳಿ ನೀವ್ಗೆ ಯಾವ ತರದ ಅಡ್ಗೆ ಆಕು?” ಎಂತ ಹೇಳಿ ಐತಾಳ್ರ್ ಒಳಗೆ ಹೋಗಿ ಅವು ಅಡ್ಗೆ ಮಾಡ್ವ ಐಟಂಗಳ ಒಂದು ಪಟ್ಟಿ ನನೇ ತಕಂಡ್ ಬಂದೊ.

ರಾಮಯ್ಯ ಗೌಡ್ರು ಮತ್ತೆ ಅಯ್ಯಣ್ಣ ಮಾಸ್ಟ್ರ ಪಟ್ಟಿ ನೋಡಿ, ಬೇಕಾದಕ್ಕೆ ಗುರ್ತ ಹಾಕಿ ಕೊಟ್ಟೊ. ಐತಾಳ್ರ್ ಕೇಳ್ದೊ, ಅಡ್ಗೆ ಮಾಡಿಕೆ ಪಾತ್ರಗ ಎಲ್ಲಾ ಒಳನೋ? ನಾವೇ ತರೋಕೋ?.

“ಪಂಜ ಪಂಚಲಿಂಗೇಶ್ವರ ದೇವಸ್ಥಾನಲಿ ಮೊದ್ವೆನ ಪಚಾರದ ಊಟ. ಅಲ್ಲಿ

ಎಲ್ಲಾ ಸೌಕರ್ಯ ಉಟ್ಟು. ನೀವು ಜನಕರ್ಕಂಡ್ ಬಂದರೆ ಆತ್" ಅಯ್ಯಣ್ಣ ಮಾಸ್ಟ್ರ ಹೇಳ್ದೊ. "ಬಾಳ ಒಳ್ಳೆದಾತ್ ಹಾಂಗೇ ಮಾಡೊಮೊ" ಐತಾಳ್ ಹೇಳ್ದೊ. ನವಂಬರ ಆರಕ್ಕೆ ಮಡ್ಕೇರಿಲಿ ಗೌಡ ಸಮಾಜ ಕಲ್ಯಾಣ ಮಂಟಪಲಿ ಮೊದ್ವೆ, ನವಂಬರ ಏಳಕ್ಕೆ ಪಂಜ ಪಂಚಲಿಂಗೇಶ್ವರ ದೇವಸ್ಥಾನದ ಕಲ್ಯಾಣ ಮಂಟಪಲಿಪಚಾರ. ಒಂದೂವರೆ ಸಾವಿರ ಜನಕ್ಕೆ ಊಟದ ಏರ್ಪಾಡ್ ಆಕು. ಬೊಳ್ಪುಗೆ ದಿಬ್ಬಣದವ್ಕೆ ಒಂದು ಐನೂರ್ ಜನಕ್ಕೆ ಚಾ, ಕಾಪಿ, ತಿಂಡಿ ಆಕು." – ಅಯ್ಯಣ್ಣ ಮಾಸ್ಟ್ರ ಹೇಳ್ದೊ.

"ಬೊಳ್ಪುನ ಕಾಪಿಗೆ ಅಗ್ರಣೆ ಅವ್ಲಕ್ಕಿ, ಕೇಸರಿ ಬಾತ್ ಮಾಡ್ದುಂತ ನಿಶ್ಚಯ ಮಾಡ್ದೊ. ಮಧ್ಯಾಹ್ನದ ಊಟಕ್ಕೆ ತರ್ಕಾರಿ ಪಲಾವು, ಎಳ್ತ್ ಸೋಂತೆ ಕಚ್ಚಂಬ್ರ, ಬೀಜದ ಬೆಂಡ್, ಅಲ್ಸಂಡೆ ಬಾಳ್ ಹಾಕಿದ ಆರ್ಸಿದ ಗೈಪು, ಜೀಗುಜ್ಜೆ ಪೋಡಿ, ನುಗ್ಗೆ ಬದ್ನೆ ಸಾಂಬಾರ್, ತೊಗ್ರಿ ಬೇಳೆ ದಪ್ಪತೊವ್ವೆ, ಅನಾನಸ್ ಪಸೆಂಗ್ರಿ, ತೊಂಡೆಕ್ಯಾಗಸಿ, ಸೋಂತೆ ಕ್ಯಾ ಹುಳಿ ಮಾಡಿನಿ" ಮಾಸ್ಟ್ರ ಹೇಳ್ದೊ.

"ಕುಂಬಳ ಕಾಯಿ ಹುಳಿ ಬಾಳ ಲಾಯ್ಕಾದೆ" ಐತಾಳ್ರ ಹೇಳ್ದೊ.

"ನಮ್ಮ ಜಾತಿಲಿ ನಾವು ಮೊದ್ವೆಗೆ ಕುಂಬಳಕಾಯಿ ಮಾಡ್ದುಲ್ಲೆ" ಅಯ್ಯಣ್ಣ ಮಾಸ್ಟ್ರ ಹೇಳ್ದೊ.

"ಒಳ್ಳೆ ತುಪ್ಪ ಸಿಕ್ಕರೆ ತುಪ್ಪದ ದೋಸೆ ಮಾಡೊಮೊ ಐತಾಳ್ರ ಹೇಳ್ದೊ.

"ಅದ್ಕೇನ್? ನಮ್ಮಲ್ಲಿ ಧಾರಾಳ ತುಪ್ಪ ಉಟ್ಟು ಎತ್ತಿತ್ಲರೆ, ದೊಡಪಂದರ್, ತಂಗೆಕ ಒಳ್ಗೊಲೆನೆ, ಅವು ಬುಟ್ಯಾಕಿಕಿಲ್ಲೆ" ಮಾಸ್ಟ್ರ ಹೇಳ್ದೊ.

"ನಿಂಗೆ ತುಪ್ಪ ಎಸ್ಟ್ ಬೇಕ್ ಹೇಳ್, ತುಪ್ಪದ ಜವಾಬ್ದಾರಿ ನಂಗೆ ನೀ ಬೆಚ್ಚ ಮಾಡ್ಬಡ" ರಾಮಯ್ಯ ಗೌಡ್ರು ಹೇಳ್ದೊ.

"ನೀವಿರಿಕನ ನಂಗೇನ್ ಬೆಚ್ಚ ದೊಡಪಾ. ನಾ ನಿಮ್ಮೆಲ್ಲರ ನಂಬಿವೆ ಜಂಬರ ತೆಗ್ದದ್" ಮಾಸ್ಟ್ರ ನೆಗಾಡಿ ಕಂಡ್ ಹೇಳ್ದೊ.

"ಸಿಂಯಿ ಏನ್ ಮಾಡ್ದು?" ಐತಾಳ್ರ ಕೇಳ್ದೊ. ಹೋಳಿಗೆ, ಕೆರೆಟ್ ಹಲ್ವ, ಪದಂಜಿ ಬೇಳೆ ಪ್ಯಾಸ ಮಾಡಿ. ಸೇಮಿಗೆ ಪ್ಯಾಸ ತಿಂದ್ ತಿಂದ್ ಸಾಕಾತ್. ಈಗನ ಕಾಲಲಿ ಪದಂಜಿ ಬೇಳೆ ಪ್ಯಾಸ ಮಾಡೊವೇ ಇಲ್ಲೆ" ರಾಮಯ್ಯ ಗೌಡ್ರ ಹೇಳ್ದೊ.

"ನಾವು ಕಾಯೆ ಹಾಲ್ ಹಾಕಿ ಪದಂಜಿ ಪ್ಯಾಸ ಲಾಯ್ಕ್‌ಲಿ ಮಾಡ್ವೆ, ಅದ್ಕೆ ಬೀಜದ ಬೆಂಡ್ ಒಂದ್ ನಾಕ್ ಸೇರ್ ಇರ್ಲಿ. ಗೈಪುಗುನೂ ಆದೆ."– ಐತಾಳ್ರ ಹೇಳ್ದೊ.

"ಆತ್, ನಾವ್ಗೆ ಬೀಜಕ್ಕೇನ್ ದುಡ್ಡು ಕೊಡೊಕೊ? ಅದರ ಏರ್ಪಾಟ್ ಮಾಡಿನೆ."

"ಉಪ್ಪಿನ ಕಾಯಿ ?"

"ನಮ್ಮಲ್ಲಿ ಮಾಯ್ನ ಮಿಡಿ ಉಪ್ಪಿನ ಕಾಯಿ ಉಟ್ಟು. ನನ್ನ ಹೆಣ್ಣ್ ಬಾರಿ ಲಾಯ್ಕ್‌ಲಿ ಉಪ್ಪಿನ ಕಾಯಿ ಹಾಕಿದೆ" ಮಾಸ್ಟ್ರ ಹೇಳ್ದೊ.

"ಅದೇ ಒಳ್ಳೇದ್ ಮನೆಲಿ ಮಾಡ್ದ ಉಪ್ಪಿನ ಕ್ಯಾನ ರುಚಿನೇ ಬೇರೆ" ಐತಾಳ್ರ್ ದನಿ ಗೂಡ್ಸಿದೊ.

"ಹಪ್ಪಳ ಇತ್ಲರೆ ಹೇಂಗೆ?" ರಾಮಯ್ಯ ಗೌಡ್ರು ಕೇಳ್ದೊ.

"ಅದನೂ ಇರ್ಲಿ" ಮಾಸ್ಟ್ರ ಒಪ್ಪಿದೊ.

"ಅಕೆರಿಗೆ ಒಂದೊಂದು ಐಸ್‌ಕ್ರೀಂ ಕೊಡಿನಿ. ಅದರ ನೀವೇ ಮಂಗ್ಳೂರ್‌ಂದ ತರ್ಸಿನಿ" ಐತಾಳ್ರ್ ಹೇಳ್ದೊ.

"ಅದು" ಮಾಸ್ಟ್ರ ಒಪ್ಪಿದೊ.

"ನಾ ಸಾಮಾನ್‌ನ ಪಟ್ಟಿ ಮಾಡಿ ರಾಮಯ್ಯ ಗೌಡ್ರ ಹಕ್ಕಲೆ ಕೊಟ್ಟವೆ. ನಾವು ಇಲ್ಲಿಂದ ಹತ್ತ್ ಜನ ಆರ್ನೇ ತಾರೀಕ್ ಐತ್ವಾರ ಇರ್ಳ್ ಬಂದವೆ. ನೀವು ಸಾಮಾನ್ ರೆಡಿಮಾಡಿ ಇಸಿನಿ" ಐತಾಳ್ರ್ ಹೇಳ್ದೊ.

"ನಿಮ್ಮ ಅಡ್ಗೆ ರೇಟ್ ಹೇಂಗೆ?" ಮಾಸ್ಟ್ರ ಕೇಳ್ದೊ. ನಾವ್ಗೆ ಹೋವ ಬಾವ ಖರ್ಚ್ ಕೊಡೊಕು. ನಾ ಎಲ್ಲರ ಹಕ್ಕಲೆ ಒಂದು ಎಲೆಗೆ ಐವತ್ತ್ ರೂಪ್ಯಾನಂಗೆ ತಕಣೆ. ಆದರೆ ನೀವನ್ನ ಕ್ಲಾಸ್‌ಮೇಟ್‌ಂತ ಐದ್ ರೂಪ್ಯಾ ಕಮ್ಮಿ ಮಾಡ್ನೆ. ನಲ್ವತ್ತೈದ್ ಒಂದ್ ಎಲೆಗೆ ಕೊಟ್ಟರೆ ಸಾಕ್.

"ಅಡ್ಗೆ ಲಾಯ್ಕಾಕು, ಕೊಡ್ಗ್‌ನವರಕ್ಕಲೆ ನಮ್ಮ ಮೊರ್ಯಾದೆ ಉಳ್ಯೊಕು. ದುಡ್ಡು ಎಸ್ಟ್ ಖರ್ಚಾದರೂ ಚಿಂತೆ ಇಲ್ಲೆ" ಎಂತ ಅಯ್ಯಣ್ಣ ಮಾಸ್ಟ್ರ ಹೇಳಿ, ಐತಾಳ್ರ್ ಹೇಳ್ದಕ್ಕೆ ಒಪ್ಪಿಕಂಡೊ.

ಇಷ್ಟರವರೇಗೆ ಯಾವ ಜಂಬರಲಿನೂ ನನ್ನ ಅಡ್ಗೆ ಹಾಳಾತ್ಲೆ. ನೀವು ಹೆದ್ರ್‌ಬೊಡಿ ನಾ ಲಾಯ್ಕ್‌ಲಿ ಸುದಾರ್ಸಿಕೊಟ್ಕನೆ" ಐತಾಳ್ರ್ ಬರವಸೆ ಕೊಟ್ಟೊ.

ಅಂತೂ ಅಡ್ಗೆನ ತಲೆ ಬಾರ ಇಳ್ತ್‌ಂತ ಅಲ್ಲಿಂದ ಹೊರ್ಟ್ ಅಯ್ಯಣ್ಣ ಮಾಸ್ಟ್ರ ಪಂಬೆತಾಡಿಗೆ ಬಂದ್ ಕಮಲಕ್ಕಂಗೆ ಎಲ್ಲಾ ವರದಿ ಒಪ್ಪಿಸಿದೊ. ಕಮಲಕ್ಕ ಸುರೇಶಂಗೆ ಫೋನ್‌ಲಿ ಎಲ್ಲಾ ವಿಷಯ ತಿಳ್ಸಿದೊ.

ಕೆರೆಟ್ ಹಲ್ವ ಬೇಡವ್ವ, ನಾ ಇಲ್ಲಿಂದ ಒಂದೂವರೆ ಸಾವಿರ ಚಿರೋಟಿ ಮಾಡ್ಸಿ ತನ್ನೆ. ನನ್ನ ಸ್ನೇಹಿತರ್ ಪಚಾರದ ದಿನ ಬೊಳ್ಪುಗೆ ತಲ್ಪುವಾಂಗೆ ತಂದವೇಂತ ಹೇಳ್ವೊಳೊ. ನೀವು ಅದಕ್ಕೆ ಬಟ್ರ್‌ಗೆ ಹೇಳಿ ಬಾದಾಮಿ ಹಾಲ್ನ ಏರ್ಪಾಡ್ ಮಾಡ್ಸಿ" ಎಂತ ಸುರೇಶ ಅವ್ವಂಗೆ ಹೇಳ್ತ್. ಕಮಲಕ್ಕ ಈ ವಿಸಯನ ಅಯ್ಯಣ್ಣ ಮಾಸ್ಟ್ರ ಕೆಬಿಗೆ ಹಾಕಿದೊ. ಮಂಜನ ಮೊನ್ಸ್‌ಗೆ ಏಕೆ ಬೇಜಾರ್‌ಂತ ಅವು ಒಪ್ಪಿಕಂಡ್, ಐತಾಳ್ರ್‌ಗೆ ಫೋನ್ ಮಾಡಿ ತಿಳ್ಸಿದೊ.

9. "ಮೊದ್ವೆಗೆ ಹೇಳಿಕೆ ಕೊಡಿಕೆ ಹೊರ್ಟೊ"

ಕಮಲಕ್ಕನೂ, ಅಯ್ಯಣ್ಣ ಮಾಸ್ತ್ರನೂ ಮಾರ್ಣೆಮಿ ಸುರಾಕನ ಪುತ್ತೂರಿಗೆ ತಾಳಿ ಚೈನ್ ಮಾಡ್ಸಿಕೆ ಮತ್ತೆ ಮೊದ್ವೆ ಕಾಗ್ದ ಪ್ರಿಂಟ್ ಮಾಡ್ಸಿಕೆ ಹೋದೊ. ಬಣ್ಣ ಬಂಗಾರಲಿ ಇಸಿಕೆ ತಾಳಿ, ಮೂಂಕುತಿ, ಓಲೆ, ಕಡಗ, ಕಾಲುಂಗ್ರ ಆಕೊಲೆ, ಆರ್ ಪವನಿನ ಎರ್ಡೆಳೆ ಕರಿಮಣಿ ಮುಷ್ಟಿಗಂಟ್ ಚಿನ್ನದ ತಾಳಿ ಮಾಡಿಕೆ ಹಾಕಿದೊ. ತಾಳಿನ ಅತ್ತ ಇತ್ತ ಎರ್ಡ್ ಅಷ್ಟ ಪಟ್ಟಿ ಗುಂಡು, ಎರ್ಡ್ ಹವಳ ಹಾಕಿಕೆ ಆಚಾರಿನೊಟ್ಟಿಗೆ ಹೇಳ್ದೊ. ನಾಲ್ಕು ಪವನಿಗೆ ಎರ್ಡ್ ಚಿನ್ನದ, ಕೆಂಪು ಕಲ್ಲ್ ಇಸಿದ ಕಡಗಗಳ ಮಾಡಿಕೆ ಹಾಕಿದೊ. ಮೂಂಕಿಗೆ ವಜ್ರದ ಮೂಂಕು ಬೊಟ್ಟ್, ಕೆಬಿಗೆ ಮುತ್ತುನ ಜುಮ್ಕಿ ಬೆಂಡೋಲೆ ಮಾಡಿಕೆ ಹಾಕಿದೊ. ಕಾಲ್‌ಗೆ ಗೆಜ್ಜೆ ಇದ್ದ ಗಟ್ಟಿನ ಕಾಲ್ಚೈನ್ ಮಾಡಿಸಿದರ ತೆಗ್ದೊ. ಹಾಂಗೇ ಕಾಲುಂಗ್ರನನೂ ತಕಂಡೊ ಕಮಲಕ್ಕ ಚಿನ್ನದ ಅಂಗ್ಡಿಲಿ ಇರಿಕನ, ಅಯ್ಯಣ್ಣ ಮಾಸ್ಟ್ರ ಪ್ರೆಸ್‌ಗೆ ಹೋಗಿ ಮೊದ್ವೆಕಾಗ್ದ ಅಚ್ಚ್ ಹಾಕ್ಸಿಕೆ ಕೊಟ್ಟ್ ಬಂದೊ.

ಎರ್ಡ್ ದಿನಲಿ ಮೊದ್ವೆ ಕಾಗ್ದ ಮನೆಗೆ ಬಾತ್. ಮಾಸ್ಟ್ರ ಸಣ್ಣ ತಂಗೆ ಜಯಂತಿಗೆ ಫೋನ್ ಮಾಡಿ,

"ಇಂದಾ ಜಯಂತಿ ನಿನ್ನ ಮಂಜ ಅಲ್ಲಿ ಉಟ್ನೋ" ಎಂತ ಕೇಳ್ದೊ.

"ಏಕಣ್ಣಾ ಇಲ್ಲೇ ಉಟ್ಟು ಕೊಟ್ಟನೆ" ಜಯಂತಿ ಮಂಜನ ಕೈಲಿ ಫೋನ್ ಕೊಟ್ಟೊ.

"ಹಲೋ ಹಲೋ, ಮಾಂವ ಹೇಳಿ" ಮನೋಹರ ಮಾತಾಡ್ತ್.

"ಇಂದಾ ಮನು, ನಿಂಗೆ ಈಗ ಮಾರ್ಣೆಮಿ ರಜೆ ಅಲ್ಲಮೋ?"

"ಹೌದು ಮಾಂವ"

"ಹಂಗಾರೇ ನೀ ನಿನ್ನ ಹೆಣ್ಣ್‌ನ ಕರ್ಕಂಡ್ ಇಲ್ಲಿಗೆ ಬಾ. ನೀವಿಬ್ಬೊರು ನಂಗೊಂದು ಉಪಕಾರ ಮಾಡೊಕು" ಮಾಸ್ಟ್ರ ಹೇಳ್ದೊ.

"ಹೇಳಿ ಮಾಂವ"

"ನೀವಿಬ್ಬೊರು ಒಂದು ವಾರದ ಮಟ್ಟಿಗೆ ನಮ್ಮಲ್ಲಿ ಬಂದ್ ನಿಲ್ಲೊಕು. ಮೊದ್ವೆ ಕಾಗ್ದ ಬಟ್ವಾಡೆ ಮಾಡಿಕೆ ಎಲ್ಲರ ಎಡ್ರಸ್ ಬರ್ದ್ದ ಕೊಡೊಕು. ನಂಗೆ ಒಬ್ಬಂಗೇ ಕೈಕಾಲ್ ಬಿದ್ದೋದೆ." ಮಾಸ್ಟ್ರ ಹೇಳ್ದೊ.

"ಅದಕ್ಕೇನ್ ಮಾಂವಾ ನಾವು ನಾಳೆನೇ ಬಂದವೆ"

"ಅಸ್ಟ್ ಮಾಡ್ ಬಲಾ. ನಂಗೆ ಬಾಳ ಉಪಕಾರ ಆತ್" ಮಾಸ್ಟ್ರ ಫೋನ್ ಇಸಿದೊ.

ಮಾರ್ಣೆದಿನ ಮನೋಹರನೂ, ಗುಣವತಿನೂ ಕಾರ್‌ಲಿ ಬಂದ್ ಇಳ್ದೊ. ಕಮಲಕ್ಕ ಅಯ್ಯಣ್ಣ ಮಾಸ್ಟ್ರ, ಜಯಂತಿನ ಮಂಜ, ಸೊಸೆ ಕೂಡಿಕಂಡ್ ಒಂದು ಪುಸ್ತಕಲಿ ಎಲ್ಲಾ ನೆಂಟ್ರ್‌ಗಳ ಹೆಸ್ರ್‌ನ ಬರ್ದ್ದೊ. ಆ ಮೇಲೆ ನೆರ ಕರೆವು, ಜಾತಿ ಮಕ್ಕಾಂತೇಳಿ, ಹುಡ್ಕಿ, ಹುಡ್ಕಿ, ಹೆಸ್ರ್ ಬರ್ದ್ಸಿದೊ. ಎರ್ಡ್ಡ್ ಸಲ ಅದರೆಲ್ಲಾ ಓದಿಕಂಡ್ ಯಾರ್ದ್ದ ಬುಟ್ಟು ಹೋಗುಟ್ಟೊಂತ ನೆನ್ಸಿಕಂಡ್ ನೆಂಪಾದಾಂಗೆ ಅದಕ್ಕೆ ಹೆಸ್ರ್‌ನ ಸೇರ್ಸಿಕಂಡ್ ಬರ್ದ್ಸಿದೊ. ನಾಕೈದ್ ದಿನಲಿ ನೆಂಟ್ರ ಪಟ್ಟಿ ಒಂದ್ ಒತ್ತರೆ ಆತ್. ಇನ್ನ್ ಬಟ್ವಾಡೆ ಮಾಡ್ವ ಕೆಲ್ಸ.

ಅಯ್ಯಂಣ ಮಾಸ್ಟ್ರ ಮತ್ತೆ ಕಮಲಕ್ಕ ಒಂದ್ ಒಳ್ಳೆದಿನ ನೋಡಿ, ಪಂಜ ಪಂಚಲಿಂಗೇಶ್ವರ ದೇವಸ್ಥಾನಕ್ಕೆ ಹೋಗಿ, ಲಗ್ನ ಪತ್ರಿಕೆನ ದೇವ್ರ ಎದ್‌ರ್ ಒಂದು ಹರ್ವಾಣಲಿ ಇಸಿ, ಬಟ್ರ ಒಟ್ಟಿಗೆ ಹೇಳಿ ಪೂಜೆ ಮಾಡ್ಸಿದೊ. ಸುರುನ ಕಾಗ್ದನ ಧರ್ಮಸ್ಥಳ ಹೆಗ್ಗಡೆಯವ್ಕೆ ಕಳ್ಸಿದೊ. ಅದರ ಮೇಲೆ ಒಳ್ದದರ ಹಂಚಿಕೆ ಸುರು ಮಾಡ್ದೊ. ಮನು ಮತ್ತೆ ಗುಣನ ಹಕ್ಕಲೆ ಅವರ ನೆಂಟ್ರ್‌ಗಳಿಗೆ ಕೊಡಕಾದ ಮೊದ್ವೆ ಕಾಗ್ದಗಳ ಕೊಟ್ಟ್ ಕಳ್ಸಿದೊ. ಅವ್ಕಿಬ್ಬೊರಿಗೆ ಗಡ್ದ್‌ನಕೋಳಿ ಗೈಪು, ಪೊಕ್ಕ ರೊಟ್ಟಿನ ಸಂಮಾನನೂ ಆತ್.

ಅಯ್ಯಂಣ ಮಾಸ್ಟ್ರ ಮತ್ತೆ ಕಮಲಕ್ಕ ಒಂದ್ ದಿನ ವಿಟ್ಲಕ್ಕೆ ಮೊದುವೆ ಹೇಳಿಕೆಗೆ ಹೊರ್ಟೊ, ಹೊರ್ಡಿಕಾಕನ ಒಂದು ಚೀಲಲಿ ಉಡ್ಗೊರೆ ಕೊಡ್ವ ಸೀರೆನನೂ,

ಒಂದ್ ನಾಕ್ ಸೂಡಿ ಎಲೆ, ಇಪ್ಪತ್ತೈದ್ ಹಣ್ಣಡ್ಕೆನ ಒಂದು ಚೀಲಲಿ ಹಾಕಂಡ್, ಬೆಳ್ಳಿ ಹರಿವಾಣ, ಅರ್ಸಿಣ, ಕುಂಕುಮದ ಕರ್ಡಿಗೆನನೂ ಅದರೊಟ್ಟಿಗೆ ತಕಂಡ್, ಸುರುಗೆ ಕಮಲಕ್ಕನ ತವುರು ಮನೆಗೆ ಹೋದೊ. ಅಲ್ಲಿ ಅಪ್ಪ ಅವ್ವನ ಕಾಲ್ ಹಿಡ್ದ್, ಹರಿವಾಣಲಿ ಮೊದ್ವೆ ಕಾಗ್ದ ಇಸಿ, ಅದರ ಮೇಲೆ ಐದೆಲೆ ಒಂದಡ್ಕೆನ ಇಸಿ ಮೊದ್ವೆ ಹೇಳಿಕೆ ಕೊಟ್ಟ್,

"ನೀವು ಸಂಸಾರ ಸಮೇತ ದಿನ ಮುಂದಾಗಿ ಬಂದ್, ನಿಮ್ಮ ಪುಳ್ಳಿನ ಮೊದ್ವೆನ ಎಲ್ಲಾ ಸಾಸ್ತ್ರಗಳ ಮಾಡಿ ಮೊದ್ವೆನ ಸುದಾರ್ಸಿ ಕೊಡೊಕು: – ಎಂತ ಹೇಳಿ ಅವರಿಬ್ರೊರ ಕಾಲ್ ಹಿಡ್ಕಂಡೊ. ಅವು ಇಬ್ರೊರು ಇವರ ತಲೆ ಪೂಜಿ,

"ದೇವ್ರು ಒಳ್ಳೆದ್ ಮಾಡ್‌ಲಿ" ಎಂತ ಹೇಳ್ರೊ. ಕಮಲಕ್ಕನ ಅವ್ವಂಗೆ, ಅತ್ತಿಗೆ ಕಳಿಗೆ ಒಂದೊಂದು ಸೀರೆನ ಉಡ್ಗೊರೆ ಕೊಟ್ಟ್ ಅರ್ಸಿಣ– ಕುಂಕುಮ ಕೊಟ್ರೊ. ಅವರ ಅಪ್ಪಂಗೂ ವೇಸ್ಟಿ ಮತ್ತೆ ಅಂಗಿ ಅರ್ವೆನ ಕೊಟ್ರೊ. ತವುರ್ ಮನೆಲಿ ಸಂಮಾನದ ಊಟ ಉಂಡ್ ಅವರ ಆದಿ ಮನೆಗೆ ಬಂದೊ.

ಸೋಮಯ್ಯ ದೊಡಪನಲ್ಲಿ ದೊಡಪಂಗೆ ವೇಸ್ಟಿ, ಅಂಗಿ ಅರ್ವೆ ಉಡ್ಗೊರೆ ಕೊಟ್ಟ್ ಸುನಂದ ಅತ್ತಿಗೆಗೂ ಸೀರೆ ಕೊಟ್ರೊ. ದೊಡಪಂಗೆ ವೀಳ್ಯದೊಟ್ಟಿಗೆ ಕಾಗ್ದನ ಹರಿವಾಣಲಿ ಇಸಿ,

"ನೀವು ಮನೆ ಸರ್ವರೂ ಎರ್ಡ್‌ದಿನ ಮುಂದೆನೇ ಬಂದ್ ಮೊದ್ವೆ ಕಾರ್ಯನ ಸುದಾರ್ಸಿ ಹರ್ರೊಕೂಂತ ಕೇಳಿಕಣೆ"– ಎಂತ ಹೇಳಿ ಕಾಲ್ ಹಿಡ್ಕಂಡೊ. ದೊಡ್ಡಪ್ಪ ಆಶೀರ್ವಾದ ಮಾಡಿ ಕಾಗ್ದ ತಕಂಡೊ. ಅಲ್ಲಿಂದ ಅಯ್ಯಣ್ಣ ಮಾಸ್ಟ್ರ ಕಮಲಕ್ಕ, ರಾಮಯ್ಯ ದೊಡಪನಲ್ಲಿಗೆ ಬಂದೊ. ದೊಡಪಂಗೂ, ದೊಡವಂಗೂ ವಾರಿಜಕ್ಕಂಗೂ ಉಡ್ಗೊರೆ ಕೊಟ್ರೊ ವೀಳ್ಯ ಕೊಟ್ಟ್ ಹೇಳಿಕೆ ಕೊಟ್ರೊ. ರಾಮಯ್ಯ ದೊಡಪನೊಟ್ಟಿಗೆ ಬಂದ್ ಹತ್ತಿಪ್ಪತ್ತ ಕಾಗ್ದ ಕೊಟ್ಟ್,

"ದೂರದ ನೆಂಟ್ರ್‌ಗೆ ನೀವೇ ಎಡ್ರಸ್ ಬರ್ದ್ ಪೋಸ್ಟ್‌ಲಿ ಕಾಗ್ದ ಕಳ್ಸಿನೀ." ಎಂತ ಹೇಳಿ ನೂರು ರೂಪ್ಯಾ ಅಂಚೆ ಚೀಟ್‌ಗೇಂತ ಅವರ ಕೈಲಿಸಿದೊ.

"ನಾನಿಂಗೆ ದೂರದಂವನೋ? ಇಂದಾ ಈ ದುಡ್ಡು ನೀನೇ ಇಸಿಕಾ"– ಎಂತ ದೊಡಪ ಆ ದುಡ್ಡ್‌ನ ಮಾಸ್ಟ್ರ ಜೋಬುಗೆ ಹಾಕಿದೊ.

ಅಲ್ಲಿಂದ ಅವು ಸೀದಾ ಬೆಟ್ಟಂಪಾಡಿಗೆ, ಅಯ್ಯಣ್ಣ ಮಾಸ್ಟ್ರ ಸೋದರತ್ತೆ ಚಿನ್ನಮ್ಮತ್ತೆನ ಮನೆಗೆ ಹೋದೊ ಚಿನ್ನಮ್ಮತ್ತೆಗೆ ಈಗ ಹಕ್ಕಲೆ ಹಕ್ಕಲೆ ಎಂಬತ್ತೊಂದು ವೊರ್ಸ ಪ್ರಾಯ. ಆದರು ಅವು ಗಟ್ಟಿ ಮುಟ್ಟಾಗಿದ್ರೊ. ಚಿನ್ನಮ್ಮತ್ತೆಗೆ ಅವರ ತಮ್ಮ ಚಾಮಯ್ಯಂತೇಳ್ರೆ ಬಾಳ ಪ್ರೀತಿ. ಅಂವ ಅರ್ದಲೇ ಮಕ್ಕಳ ತೊಬ್ಬೆಲಿ ಮಾಡಿ ಕೈ ಬುಟ್ಟ್ ಹೋದ ಮೇಲೆ ಅಂವನ ತೊಬ್ಲಿ ಮಕ್ಕಳ ನೆನ್ಸಿಕಂಡ್ ಸುಮಾರ್ ವೊರ್ಸ

ಮುಟ್ಟ ಬೇಜಾರ ಮಾಡ್ತಿದ್ದೊ. ಅಳಿಯ ಅಯ್ಯಣ್ಣಂತೇಳ್ರಿ, ಅಂವ ಸಣ್ಣದಿರಕಾಕನವೇ ಚಿನ್ನಮತ್ತೆಗೆ ಬಾಳ ಕೊಂಡಾಟ. ಅವು ತವುರು ಮನೆ ಕಡೆ ಮೊದ್ವೆಗಳಿಗೆ ಹೋಕಾಕನೆಲ್ಲಾ ನಾಗಮ್ಮನವ್ರ ಮಗಳ್ ಚೆಂದುಳ್ಳೆ ಚೆಲುವೆ ಕಮಲನ ಚಿನ್ನಮ್ಮ ನೋಡ್ತಿದ್ದೊ. "ದೊಡವಾ, ದೊಡವ"- ಎಂತ ಕಮಲಗೂಡೆ ಮೊದ್ವೆ ಮನೆಲಿ ಚಿನ್ನಮ್ಮ ನೊವ್ರ ಮಾತಾಡ್ಸ್‌ತಿತ್. ಈ ಗೂಡೆನ ನನ್ನ ತೊಮ್ಮನ ಮಂಜಗೇ ತರಕೂಂತ ಅವು ಮೊನ್ಸ್‌ಲೇ ಗ್ರೇಸ್‌ತಿದ್ದೊ. ಚಾಮಯ್ಯ ಗೌಡ್ರು ಮಂಜಂಗೆ ಹೆಣ್ಣ್ ಹುಡ್ಕುವ ಸುದ್ದಿ ಚಿನ್ನಮ್ಮಕ್ಕನ ಕೆಬಿಗೆ ಬೀಳಿಕಾಕನ,

"ಇಂದಾ ಚಾಮು, ನಾಗಮ್ಮನ ಮಗ ಕಮಲ ನಿನ್ನ ಮಂಜಂಗೆ ಸರಿಯಾದ ಜೋಡಿ. ಗೂಡೆನೂ ಓದಿಟ್ಟು, ನಿಂಗೆ ಮೊನ್ಸಿದ್ದರೆ ಅವರ ಕೆಬಿಗೆ ಈ ಸುದ್ದಿನ ಮುಟ್ಟಿಸಿನೆ" ಎಂತ ತಮ್ಮನೊಟ್ಟಿಗೆ ಹೇಳ್ದೊ. ಅಕ್ಕ ನೋಡ್ದ ಗೂಡೇಂತೇಳ್ರೆ ಅದ್ ಒಳ್ಳೆ ಗೂಡೆನೇ ಆಗಿರೋಕೂಂತ ಚಾಮಯ್ಯ ಗೌಡ್ರು ಒಪ್ಪಿದೊ. ಎರ್ಡ್‌ಕಡೆ ಒಮ್ಮತ ಆಗಿ, ಜಾತಕನೂ, ಸಾಲಾವಳಿನೂ ಕೂಡಿ ಬಂದ್ ಮೊದ್ವೆ ನಡ್ತ್. ಕಮಲಕ್ಕ ಬಂದ ಮೇಲೆ ಅಯ್ಯಂಣ ಮಾಸ್ತ್ರ ಸಂಪತ್ತ್ ದಿನಂದ ದಿನಕ್ಕೆ ಏರ್ತ್. ಈಗ ಪ್ರೀತಿನ ಅಳ್ಯ ಅಯ್ಯಂಣನೂ, ಅಂವನ ಹೆಣ್ಣ್ ಕಮಲನನೂ ನೋಡಿ ಚಿನ್ನಮ್ಮತ್ತೆಗೆ ಸಂತೋಷನೋ ಸಂತೋಸ. ಚಿನ್ನಮ್ಮತ್ತೆಗೆ ಒಬ್ಬನೇ ಮಂಜ. ಗಂಡ ತೀರಿ ಹೋಗೋಳೊ. ಮಂಜ ಈಶ್ವರಂಗೆ ದೊಡ್ಡಣ್ಣ ಸೋಮಯ್ಯ ಗೌಡ್ರ ಮಗ ಲಲಿತನ ತಂದೊಳೊ. ಲಲಿತಂಗೆ ಮೊದ್ವೆ ಆಗಿ ಏಳೆಂಟ್ ವೊರ್ಸ ಮುಟ್ಟ ಮಕ್ಕಳೇ ಆತ್ಲೆ. ಊರ್ಲ್ ಇದ್ದ ಎಲ್ಲಾ ಮೊದ್ದ್ ಮಾಡಿ ಮಾಡಿ ಅಕೇರಿಗೆ ಒಂದ್ ಗಂಡ್ ಕೂಸು ಆತ್. ಈಗ ಅವಂಗೆ ಹದ್ನೆಂಟ್ ವೊರ್ಸ. ಅಂವನ ಉಜ್ರೆ ಕಾಲೇಜಿಗೆ ಓದಿಕೆ ಹಾಕೊಳೊ. ಮಾರ್ಣೆಮಿ ರಜೆಲಿ ಅಂವನೂ ಮನೆಲಿತ್ತ್. ಲಲಿತಂಗೆ ಅಣ್ಣ- ಅತ್ತಿಗೆನ ನೋಡಿ ಬಾಳ ಕುಸಿ ಅತ್. ಅದರ ಮಂಜ ಅಶೋಕನೂ ಅತ್ತೆ- ಮಾಂವನ ನೋಡಿ ಕಾಲ್ ಹಿಡ್ಕಂಡತ್. ಅಲ್ಲಿಗೆ ಎತ್ತಿಕನನೇ ಹಿಂಬೊತ್ತು ಗಂಟೆ ಆರಾಗಿತ್ತ್. ಅಪ್ರೂಪಕ್ಕೆ ಬಂದ ನೆಂಟ್ರ್‌ಗೆ ಸಂಮಾನದ ಊಟ ಆತ್. ಅವ್ಕೂ ವೀಳ್ಯ ಕೊಟ್ಟ್.

"ಅತ್ತೆ ನೀವು ನಾಕ್ ದಿನಕ್ಕೆ ಮುಂದೆನೆ ಬರೊಕು. ಎಲ್ಲಾ ಸಾಸ್ತ್ರನ ನೀವು ನಿತ್ತ್ ಮಾಡ್ಲೊಕು" ಎಂತ ಹೇಳಿ ಉಡ್ಗೊರೆ ಕೊಟ್ಟ್ ಅಲ್ಲಿಂದ ಹೊರ್ಟ್ ಪಂಬೆತ್ತಾಡಿಗೆ ಬಂದ್ ಮುಟ್ಟಿಕಾಕನ ಗಂಟೆ ಹನ್ನೊಂದಾಗಿತ್ತ್.

ಅದರ ಎರ್ಡ್ ದಿನಂದ ಮೇಲೆ ತಂಗೆಕಳ ಮನೆಗೆ ಹೇಳಿಕೆ ಕೊಡಿಕೆ ಹೋದೊ. ಅಲ್ಲಿನೂ ಅವ್ಕೆಲ್ಲಾ ಸೀರೆನ ಉಡ್ಗೊರೆ ಕೊಟ್ಟ್ ವೀಳ್ಯ ಕೊಟ್ಟ್ ಹೇಳಿಕೆ ಕೊಟ್ಟ್ ಬಂದೊ.

ಹಕ್ಕಲೆನ ನೆಂಟ್ರ್‌ಗಳಿಗೆಲ್ಲಾ ಹೇಳಿಕೆ ಕೊಟ್ಟ್ ಆತ್. ಇನ್ ಒಳ್ದದ್ ರಾಮಯ್ಯ

ದೊಡಪನ ಸಣ್ಣ ಮಗ ಗಿರಿಜಕ್ಕನ ಮನೆ. ಅವು ಮಂಗ್ಳೂರ್‌ಲಿ ಇದ್ದೊ. ವಾರಿಜಕ್ಕಂಗೆ ಗಿರಿಧರ, ಶಶಿಧರ ಇಬ್ಬೊರು ಅವುಳಿ ಮಕ್ಕ. ಅವು ಸುರೇಶಂದ ಒಂದು ವೊರ್ಸಕ್ಕೆ ದೊಡ್ಡೊವು. ಅವಿಬ್ಬೊರು ಐ.ಟಿ.ಐ. ಮಾಡಿ ವಿಟ್ಲ ಪೇಟೆಲಿ ಒಂದ್ ಗೇರೇಜ್ ಇಸಿಕಂಡ್ ಒಳ್ಳೆ ಸಂಪಾದ್ನೆ ಮಾಡಿಕೊಂಡೊಳೊ. ಅವುಕೆ ಅವುಳಿ ಮಕ್ಕಳನೇ ತರಕೂಂತ ಗೂಡೆಗಳ ಹುಡ್ಕಿಕಂಡೇ ಒಳೊ. ಎಲ್ಲೂ ಸರಿಕಟ್ಟ್ ಆತ್ಲೆ. ಗಿರಿಜಕ್ಕಂಗೇ ಒಬ್ಬಳೇ ಮಗಸುಧಾ. ಅದ್ ಎಂ.ಎಸ್.ಡಬ್ಲ್ಯು (ಒ.ಖ.ಫ) ಮಾಡಿ ಬೆಂಗ್ಳೂರ್‌ಲಿ ಕೆಲ್ಸಲಿ ಉಟ್ಟು. ಅದ್ಕೆ ಮೊದ್ವೆ ಪ್ರಾಯ ಆದರು ಸರಿಯಾದ ಗಂಡ್‌ಗ ಸಿಕ್ಕಿತ್ಲೆ.

ಮಂಗ್ಳೂರ್‌ಗೆ ಅಯ್ಯಣ್ಣ ಮಾಸ್ತ್ರ ಒಬ್ಬನೇ ಹೋದೊ. ತಂಗೆಗೆ ಅತ್ತಿಗೆ ಬಾತ್ಲೇಂತ ತುಂಬಾ ಬೇಜಾರಾತ್. "ದಿನಾ ಮನೆ ಬುಟ್ಟ್‌ತಿರ್ಗಿ ಮನೆ ಹರಾಂತರಿ ಆಗುಟ್ಟು. ಅದ್ಕೆ ಒಂದ್ ಗಳ್ಗೆ ಪುರ್ಸೊತ್ತ್ ಇಲ್ಲೆ. ಮಂಜಂಗೆ ಮೊದ್ವೆ ಆಗಲಿ. ನಾಕ್ ದಿನ ನಿನ್ನ ಹಕ್ಕಲೆ ನಿಲ್ಲಕೆ ಕಳ್ಸಿನೇ" ಎಂತ ತಂಗೆ ಗಿರಿಜಂಗೆ ಅಯ್ಯಣ್ಣ ಮಾಸ್ತ್ರೆ ಸಮಾದಾನ ಹೇಳ್ದೊ. ತಂಗೆಗೆ ಭಾವಂಗೆ ವೀಳ್ಯ ಕೊಟ್ಟ್‌ನಾಕ್‌ದಿನ ಮುಂದೆನೇ ಬಾಕೆ ಹೇಳ್ದೊ. ಗಿರಿಜಂಗೆ ಒಂದು ಸೀರೆನನೂ ಉಡ್ಗೊರೆ ಕೊಟ್ಟ್ ಊರ್‌ಗೆ ಬಂದೊ.

* * * * *

10. "ಸೋದರ ಮಾತಾಡ್ಸಿ, ಗುರುಕಾರ್ನೂರಿಗೆ ಇಸಿಕೆ ಹೊದೋ"

ವಿಟ್ಲಂದ ಕಮಲಕ್ಕನ ಅವ್ವ ನಾಗಮ್ಮನೊವು ಮಗಳಿಗೆ ಫೋನ್ ಮಾಡಿ,

"ಏನ್ ನೀ ಮರ್ತಳನಾ ಹೇಂಗೆ? ಸೋದರ ಮಾತಾಡ್ಸಿ, ಗುರುಕಾರ್ನೂರಿಗೆ, ಕೊಲೆಗಳಿಗೆ ಇಸಿಕೆ ಹೈದನ ಕರ್ಕಂಡ್ ಯಾಗ ಬಂದ್ಯ? ಮೊದ್ವೆದಿನ ಹಕ್ಕಲೆ ಬಾತ್" ಎಂತ ಹೇಳ್ದೊ.

"ಸುರೇಶಂಗೆ ರಜೆ ಸಿಕ್ಕಿತ್ಲೆ ಗಡ. ಅಂವ ಇದೇ ಇಪ್ಪತ್ತೆಂಟ್ ತಾರೀಖಿಗೆ ಬಂದದೆ. ನಾವು ಮೂವತ್ತಕ್ಕೆ ನಿಮ್ಮಲ್ಲಿಗೆ ಬಂದವೆ. ಆದೋ?" ಮಗ ಕಮಲಕ್ಕ ಅಯ್ಯೆಗೆ ಹೇಳ್ದೊ.

"ಆತ್–ಇನ್ನೇನ್ ಮಾಡ್ದು? ನಿಮ್ಮ ಅನ್ಕೂಲನೂ ನೋಡಕಲೆ, ನಿನ್ನ ಅಪ್ಪಂಗೆ ಹೇಳ್ನೆ" – ನಾಗಮ್ಮನೊವು ಅಸ್ಟ್ ಹೇಳಿ ಫೋನ್ ಇಸಿದೊ.

ಒಕ್ಟೋಬರ ಇಪ್ಪತ್ತೆಂಟಕ್ಕೆ ಸುರೇಶ ಬಾತ್. ಕಮಲಕ್ಕ ಗಂಡನೊಟ್ಟಿಗೆ,

"ಸೋದರ ಮಾತಾಡ್ಸಿ, ಕೊಲೆಗಳಿಗಿಸಿಕೆ ವಿಟ್ಲಕ್ಕೆ ಹೋಕಲೆ, ಅವ್ವ ಮೊನ್ನೆ ಫೋನ್ ಮಾಡ್ದೊ. ಗೂಡೆನ ಮನೆಂದ ಯಾರಾದರೊಬ್ಬರ್ ಬೇಕಲೆ?" ಎಂತ ಕೇಳ್ದೊ.

ಅಯ್ಯಣ್ಣ ಮಾಸ್ಟ್ರ ಬೆಳ್ಯಪ್ಪನೊವುಕೆ ಫೋನ್ ಮಾಡಿ ವಿಸಯ ತಿಳ್ಸಿದೊ. ಅವು,

"ನಮ್ಮ ಮನೆಂದ ಯಾರೂ ಬಾಕೆ ಆದ್ಲೆ. ನೀವೇ ಸುದಾರ್ಸಿಕಣೆ. ನಮ್ಮ ಕಡೆ ಈ ರೀತಿ ರಿವಾಜ್ ಇಲ್ಲೆ" ಎಂತ ಹೇಳ್ದೊ.

ಸರೀಂತ ಹೇಳಿಕಂಡ್ ಮಾಸ್ಟ್ರ ಹೆಣ್ಣ್‌ನೊಟ್ಟಿಗೆ,

"ಅವು ಬಾದ್ಲೆ ಗಡ. ನೀ ಸುರೇಶನ ಕರ್ಕಂಡೋಗಿ ಸುದಾರ್ಸಿ ಬಾ. ನಂಗೆ ಇಲ್ಲಿ ಬೇಕಾದಸ್ಟ್ ಕೆಲ್ಸ ಉಟ್ಟು" ಎಂತ ಹೇಳ್ದೊ.

ಮೂವತ್ನೇ ತಾರೀಕ್ ಐತಾರದಿನ ಅಯ್ಯೆ ಮಂಜ ಇಬ್ಬೊರು ವಿಟ್ಲಕ್ಕೆ ಹೊರ್‍ಟೊ. ಜಾತಿ ಪದ್ಧತಿ ಪ್ರಕಾರ ತವುರು ಮನೆಗೆ ಸೋದರ ಮಾತಡ್ಸಿಕೆ ಹೋಕಾಕನ ಒಂದ್ಸೇರಕ್ಕಿ, ಒಂದ್ ಕಾಯೆ, ಒಂದ್ ಹೇಂಟೆಲಾಕಿ, ಒಂದ್ ಕುಪ್ಪಿ ಸರಾಯಿ, ಒಂದು ಕುಡ್ತೆ ಎಂಣೆ, ಒಂದು ಸೂಡಿ ವೀಳ್ಯದೆಲೆ ತಕಂಡೋಕು. ಅದರನೇ ಅವು ಇರ್‍ಳ್ ಅಡ್ಗೆ ಮಾಡಿ, ಕೊಲೆಗಳಿಗಿಕ್ಕಿ, ಹಿರಿಯರ್ ಆಶೀರ್ವಾದ ಮಾಡ್ದು ಕ್ರಮ. ನಾಗಮ್ಮನೊವು ಮಗಳಿಗೆ,

"ನೀ ಬಾಕನ ಅಕ್ಕಿ, ಕಾಯೆ, ಕೋಳಿ ಯಾವ ಸಾಮಾನ್‌ನನೂ ತರ್‍ಬಡ. ನಾ ಎಲ್ಲಾ ಇಲ್ಲಿ ರೆಡಿ ಮಾಡ್ನೆ" ಎಂತ ಮುಂದೆನೇ ಹೇಳಿದ್ದೊ. ಆದರೆ ಬರೀ ಕೈಲಿ ಹೇಂಗೆ ಹೋದೂಂತ ಅವು ಪುತ್ತೂರು ಪೇಟೆಂದ ಒಂದು ಬಾಟ್ಲಿ ತುಂಬಾ ಕ್ರಯದ ವಿಸ್ಕಿನ ತಕಂಬಕೆ ಮಂಜಂಗೆ ಹೇಳ್ದೊ. ಸುರೇಶ ಅವು ಹೇಳ್ದಾಂಗೇ ಮಾಡ್ತ್. ಅವಿಬ್ಬೊರು ಹಿಂಬೊತ್ತು ಐದ್ ಗಂಟೆಗೆ ತವುರು ಮನೆಗೆ ಬಂದೊ. ಇರ್‍ಳ್ ಗುರು ಕಾರ್ನೋರಿಗೆ ಬಡ್ಸಿ, ಬಿನ್ನ ಹೇಳಿ ಕೈಮುಗ್ದ್ ಉಂಬಕೆ ಎದ್ದೊ. ಸುರೇಶ ಗುರು ಹಿರ್‍ಯರ ಕಾಲ್ ಹಿಡ್ಕಂಡತ್. ಎಲ್ಲಾ ಮುಗ್ಯ ಕಾಕನ ಗಂಟೆ ಹನ್ನೊಂದ್‌ಕಳ್ತ್. ಅವಿಬ್ಬೊರು ಇರ್‍ಳೇ ಪಂಬೆತ್ತಾಡಿಗೆ ಬಂದೊ.

* * * * *

11. "ಮೊದ್ವೆ ಸುರಾತ್"

ಮೊದ್ವೆಗೆ ಎಂಟ್ ದಿನಕ್ಕೆ ಮುಂದೆ ತಾಳಿ, ಕಡಗ, ಓಲೆ, ಮೂಂಕುತಿ ಚಿನ್ನಗ ಮನೆಗೆ ಬಂದೊ. ಗಂಡ– ಹೆಣ್ಣ್ ಅದರ ದಾರೆ ಸೀರೆನ ಮೇಲೆ ಇಸಿ, ತಕಂಡ್ ಪಂಜ ಪರಿವಾರ ಪಂಚಲಿಂಗೇಶ್ವರ ದೇವಸ್ಥಾನಕ್ಕೆ ಹೋಗಿ, ಅದರ ಬಟ್ರ ಕೈಗೆ ಕೊಟ್ಟ್ ಪೂಜೆ ಮಾಡಿಕೆ ಹೇಳ್ದೊ. ಪೂಜೆ ಬಟ್ರ್ ಅದರ ದೇವ್ರ ಎದ್ರ್ ಇಸಿ ಪೂಜೆ ಮಾಡಿ, ಗಂಧ ಪ್ರಸಾದದೊಟ್ಟಿಗೆ ಅದರ ಕಮಲಕ್ಕನ ಕೈಗೆ ಕೊಟ್ಟೊ. ಅದರ ಮನೆಗೆ ತಂದ್ ಬಣ್ಣ ಬಂಗಾರದ ಸಾಮಾನ್ ಇಸುವ ಪೆಟ್ಟಿಗೆಲಿ ಬದ್ರಲಿ ಮುಚ್ಚಿಸಿದೊ.

ಮನೆ ಎದ್ರ್ ಗಡ್ಸ್‌ನ ಚಪ್ಪರ ಎದ್ದತ್. ಮಡ್ಲ್‌ನ ಮೆಡ್ದ್ ದೊಡ್ಡ ಚಪ್ಪರ ಬಾಳ ಪೊರ್ಲು ಕಾಂಬತಿತ್ತ್. ಚಪ್ಪರದ ಕಂಬಕ್ಕೆಲ್ಲಾ ಹಣ್ಣಡಿಕೆನ ಸುರ್ದ್ ಕಟ್ಟಿ ಅಲಂಕಾರ ಮಾಡ್ದೊ. ಬಣ್ಣ ಬಣ್ಣದ ಕಾಗ್ದಗಳ ಕತ್ರಿಸಿ, ಮಲ್ಲಿಗೆ ನಾಂಗೆ ಮಾಡಿ ನೆಯ್ದು ಮಾಲೆಗಳ ಚಪ್ಪರಲಿ ತೂಂಗಿ ಹಾಕಿದೊ. ಅದರ ಕೆಲ್ಸ ಮಾಡಿಕೆ ಗೊತ್ತಿದ್ದ ಇಬ್ಬೊರು ಗಂಡಾಳ್‌ಗ ಸುಳ್ಯಂದ ಬಂದಿದ್ದೊ. ಅಷ್ಕೆ ಮೂರ್‍ನಾಕ್ ದಿನ ಚಪ್ಪರ ಸಿಂಗಾರ ಮಾಡ್ದೇ ಆತ್. ಮೊಡ್ಯಾಳ ಬಾತ್. ಮೇಲ್ಕಟ್ಟ್ ಕಟ್ಟಿತ್. ಮೇಲ್ಕಟ್ಟ್ ಅಡಿಲಿ ಸಾಸ್ತ್ರಗಳ ಮಾಡಿಕೆ ಮಂಟಪದಾಂಗೆ ಮಾಡಿ ಸಿಂಗಾರ ಮಾಡ್ದೊ. ಪಂಜಂದ ಐನೂರು ಕುರ್ಸಿಗಳ ತರ್ಸಿ ಬಂದೊವ್ಕೆ ಕುದ್ರಿಕೆ ಏರ್ಪಾಡ್

ಮಾಡ್ದೊ. ಮೇಲೆನ ಜಾಲ್‌ಲಿನೂ ಚಪ್ಪರ ಹಾಕಿ ಅದರಡಿಲಿ ಉಂಬಕೆ ಮೇಜಿ, ಕುರ್ಸಿ ಇಸಿದೊ. ಅರ್ನಿನೆಂಟೆ, ಮೊದ್ರಂಗಿ ಸಾಸ್ತ್ರದ ದಿನ ಬಂದೊವ್ಕೆ ಬೊಳ್ಪುನ ಕಾಪಿ, ತಿಂಡಿ, ಮದ್ಯಾನದ, ಇರ್ಳ್‌ನ ಊಟಕ್ಕೆ ಊರ್‌ನ ಜಾತಿಮಕ್ಕಳ ಅಡ್ಗೆಯವರ್ನ ಗೊತ್ತ್ ಮಾಡ್ದೊ. ಮೊದ್ವೆ ಸಮಯಲಿ ಒಂದ್‌ವಾರ ಮುಟ್ಟ ದುಡ್ಯಕೆ ನಾಕ್ ಜನ ಹೊಂತಗಾರರ ಕಾಯಂ ಕೆಲ್ಸಕ್ಕೆ ಮಾಡಿಕೊಂಡೊ.

ಗುರು ಕಾರ್ನೋರಿಗೆ ಇಕ್ಕುದು

ವಸಂತಿ, ಜಯಂತಿ ತಂಗೆಕ್ಕ ನಾಕ್ ದಿನಕ್ಕೆ ಮುಂದೇನೇ ಅಣ್ಣನ ಮನೆಗೆ ಬಂದ್ ಅತ್ತಿಗೆಗೆ ಸಾಯಕ್ಕೆ ಸೆರಂಗ್ ಕಟ್ಟಿ ನಿತ್ತೊ. ವಿಟ್ಲಂದ ರಾಮಯ್ಯ ದೊಡಪನ ಮಗ ವಾರಿಜಕ್ಕನೂ ಎರ್ಡ್ ದಿನಕ್ಕೆ ಮುಂದೆ ಬಂದ್ ಇವರೊಟ್ಟಿಗೆ ಸೇರಿಕೊಂಡೊ.

ನವಂಬರ ನಾಕ್‌ನೇ ತಾರೀಕಂದ್ ಸುಕ್ರವಾರ ಬೊಳ್ಪುಗೆ ಕಮಲಕ್ಕನ ದೊಡ್ಡಣ್ಣ ಅವರ ಅಪ್ಪ– ಅವ್ವನ ಕರ್ಕಂಡ್ ಬಂದ್ ಬುಟ್ಟ್ ಹೊದೊ. ಹಿಂಬೊತ್ ವಿಟ್ಲಂದ ರಾಮಯ್ಯ ದೊಡಪನು, ದೊಡವನೂ, ಸೋಮಯ್ಯ ಗೌಡ್ರ ಮಂಜ ಸತೀಶನೂ, ಸುನಂದನೂ ಬಂದೊ.

ಅಯ್ಯಣ್ಣ ಮಾಸ್ಟ್ರ ತಲೆ ಮೈ ಮಿೂದ್, ಕನ್ನಿಮೆ ಹೇಂಟೆನ ನಾಳಿ ಚಿರಿಂಬಿ ಇಜ್ಜೆಲು ಹಾಕಿದೊ. ಅದ್ ಹೊರ್ಳಾಡಿ ಬೀತ್. ಅದರ ತಲೆ ಮೂಡು ದಿಕ್ಕ್‌ಲಿ ಬೀತ್‌ಂತ ಎಲ್ಲೋವ್ಕೂ ಕುಸಿ ಆತ್. ಕೋಳಿನ ಹಜರ್ ಮಾಡಿ ಅವೇ ಮಡಿಲಿ ಗೈಪು ಮಾಡ್ದೊ. ಐದ್ ನೀರ್ ದೋಸೆನನೂ ಕೊಲೆಗಳಿಗಿಸಿಕೆ, ಅವೇ ಹೊಯ್ದಿಸಿದೊ. ನೀರ್ ದೋಸೆ ಇಡೀ ಆಗಿ ಇಸಿದೊ. ಕೊಲೆಗಳಿಗಿಸುವ ನೀರ್ ದೋಸೆನ ಮೊಡ್ಚಿಕೆ ಆಗದ್ ಗಡ. ಕನ್ನೆ ಕಂಬದ ಹಕ್ಕಲೆ ಎರ್ಡ್ ಮಣೆನ ಇಸಿ, ಒಂದು ಮಣೆ ಮೇಲೆ ಕಾಲ್ದೀಪ ಹೋಸಿ ಇಸಿ, ಇನ್ನೊಂದು ಮಣೆ ಮೇಲೆ ಎರ್ಡ್ ಕೊಡಿ ಬಾಳೆಲೆನ ಒಂದರ ಮೇಲೆ ಒಂದು ಇಸಿ, ನೀರ್ ಹಾಕಿ ಬಾಳೆನ ಪೂಜೆ, ಐದ್ ಇಡಿ ನೀರ್ ದೋಸೆನ ಇಕ್ಕಿ, ಅದರ ಮೇಲೆ ಕೋಳಿ ಗೈಪುನ ಕನು, ಕರ್ಳ್ಯಟ, ಪಲ್ಲೆಕ್ಯಾನ ಹುಡ್ಕಿ, ಹುಡ್ಕಿ ಇಕ್ಕಿದೊ. ಆ ಬಾಳೆಲೆ ಕೊಡಿಲಿ ಐದ್ ವೀಳ್ಯದೆಲೆ, ಒಂದ್ ಅಡ್ಕೆ, ದಳಿಯಂದ ಮಾಡ್ದ, ನೆಣೆನ ಎಂಣೆಲಿ ಪದಾನಿಸಿ ಇಸಿ, ಅದರ ಹೋಸಿ, ಗಂಧನ ಅದರ ಕೊಡಿಲಿಸಿ, ಸೇರ್ದ್ ಕುಟುಂಬದವರ ನೆಂಟ್ರಗಳ ಕರ್ದ್, ಎಲ್ಲರ ಕೈಗೆ ಹಂಞ ಹಂಞ ಬೆಳ್ತಕ್ಕಿ ಕೊಟ್ಟ್ ರಾಮಯ್ಯ ದೊಡಪನೊಟ್ಟಿಗೆ,

"ದೊಡಪಾ, ನೀವು ಪ್ರಾರ್ಥನೆ ಮಾಡಿ, ಬಿನ್ನ ಹೇಳಿನಿ"– ಎಂತ ಹೇಳ್ದೊ.

ರಾಮಯ್ಯ ಗೌಡ್ರ್ ಸುರೇಶನ ಎದ್ರ್ ನಿಲ್ಸಿಕಂಡ್ ಗುರುಕಾರ್ನೋರ್‌ರಿಗೆ ಕೈ ಮುಗ್ದ್ ಬಿನ್ನ ಹೇಳಿಕೆ ಸುರು ಮಾಡ್ದೊ.

"ನಾವು ನಮ್ಮ ತಮ್ಮ ಚಾಮಯ್ಯನ ಮಂಜ ಅಯ್ಯಣ್ಣನ ದೊಡ್ಡಮಂಜ ಸುರೇಶಂಗೆ ಮೊದ್ವೆತೆಗ್ದೊಳೊ. ಈ ಶುಭ ಕಾರ್ಯ ಮಾಡಿಕಾಕನ, ನಮ್ಮ ಹಿರಿಯರ್ ನಂಬಿಕೊಂಡ್ ಬಂದ ಪದ್ಧತಿ ಪ್ರಕಾರ, ಇಂದ್ ನಾವು ಎಲ್ಲೊವು ಸೇರಿಕಂಡ್ ನಿಮ್ಮಲ್ಲಿ ಪ್ರಾರ್ಥನೆ ಮಾಡಿವೆ. ಇಂದ್ ನಾವು ಮಿೂದ್, ಮಡಿಲಿ ಕೋಳಿ ಕೊಂದ್, ಅಡ್ಗೆ ಮಾಡಿ, ಎಡೆ ಇಕ್ಕಿಯೊಳೊ. ಮಿೂದ ನೀರಲಿ, ಕೊಂದ ಕೋಳಿಲಿ ಆಗಲಿ, ಮಾಡ್ದ ಅಡ್ಗೆಲಿ ಆಗಲಿ, ಇಕ್ಕಿದ ಅಗೆಲ್‌ಲಿ ಆಗಲಿ, ಸಾವಿರ ತೊಪ್ಪುಗ ಇದ್ದರೂ. ಅದರೆಲ್ಲಾ ಒಪ್ಪ ಮಾಡಿಕಂಡ್, ಈ ಮೊದುವೇ ಕಾರ್ಯಲಿ ಏನೊಂದು ಕುಂದು ಕೊರ್ತೆ ಬಾರದಾಂಗೆ ಮಾಡಿ ಈ ಮೊದುಮಕ್ಕಳ ಮುಂದೆನ ಸಂಸಾರ ಜೀವನಲಿ ಸುಕಂದ ಇರ್ಲಿ ನಮ್ಮ ಮನೆಗೆ ಬಾವ ಗೂಡೆ ನಮ್ಮ ಹಿರ್‍ಯರ ಆಚಾರ ವಿಚಾರಕ್ಕೆ ಹೊಂದಿಕಂಡ್, ಒಳ್ಳೆ ಗಂಡ್ - ಹೆಣ್ಣ್ ಮಕ್ಕಳ ಹೆತ್ತ್ ಮನೆತನದ ಗೌರವನ ಒಳ್ಸಲಿ. ನನ್ನ ಪುಳ್ಳಿನ ಸಂಸಾರ ಉತ್ತರೋತ್ತರ ಅಭಿವೃದ್ಧಿ ಆಗಲೀಂತ, ನಾವು ನಂಬಿಕಂಡ್ ಬಂದ ಗುರು ಕಾರ್ನೋರ್‌ಗೆ ಬೇಡಿಕೊಂಡವೆ", -ಎಂತ ಬಿನ್ನ ಹೇಳ್ದೊ. ಅಗೆಲ್‌ಗೆ ದೀಪಕ್ಕೆ ಅಕ್ಕಿ ಹಾಕಿ ಕೈ ಮುಗ್ದೊ. ಎಲ್ಲೋವು ಅವು ಮಾಡ್ದಾಂಗೆ ಅಕ್ಕಿ ಹಾಕಿ ಕೈ ಮುಗ್ದೊ. ಮೊದ್ಮಂಜ ಎಲ್ಲರ ಕಾಲ್ ಹಿಡ್ಕಂಡತ್.

"ಎಂಣೆ ಅರ್ರಿಣ ಮೊದ್ರಂಗಿ ಸಾಸ್ತ್ರ"

ನವಂಬರ ಐದ್ನೆ ತಾರೀಕ್ ಸನಿವಾರ ಬೊಳ್ಪುಗೆನೇ ವಾಲಗದೊವು ಬಂದ್ ಮಂಗಳ ವಾದ್ಯ ಊದಿದೊ. ಹತ್ರದ ಎಲ್ಲಾ ನೆಂಟ್ರ್‌ಗ ಬಂದ್ ಸೇರ್ದೊ. ಬೊಳ್ಪುನ ಚಾಯ, ಕಾಪಿ, ತಿಂಡಿ ಮುಗ್ಸಿ, ಮೊದ್ಮಂಜನ ಒಂದು ಬಿಳಿ ತೋರ್ತ್ ಉಡ್ಸಿ, ಚಪ್ಪರದಡಿಗೆ ಅಡುಳಿ ಕರ್ಕಂಡ್ ಬಾತ್. ಅಡುಳಿ ಆಗಿ ಲಲಿತಕ್ಕನ ಮಂಜ ಅಶೋಕ ನಿತ್ತತ್. ಅಂವ ನೇರಲಿ ಸುರೇಶಂಗೆ ಬಾವ ಆಕು. ಅಡುಳಿ ನಿಲ್ಲೋವು ಬಾವಂದರೇ ಆಕು. ಸುರುಗೆ ಚೌರಿಂಜ ಸುರೇಶಂಗೆ ಮುಕ ಚೌರ ಮಾಡ್ತ್. ಆ ಮೇಲೆ ಸುರೇಶನ ಮಂಟಪಕ್ಕೆ ಕರ್ಕಂಡ್ ಕುದ್ರಿಕೆ ಒಂದು ಹೊಸ ಮಣೆ ಇಸಿ, ಅದರ ಎದ್ರ್ ನಿಲ್ಸಿದೊ. ಊರ್ ಗೌಡ್ರ್,

"ಹತ್ತ್ ಕುಟುಂಬ ಹದ್ನೆಂಟ್ ಗೋತ್ರದ ಜಾತಿ ಸಮಸ್ತರಲ್ಲಿ ಕೇಳಿ ಕಾಸ್ತಾಳಿ ಕಟ್ಟುವೇಂತ ಮೂರ್ಮೂರ್ ಸಲ ಹೇಳಿ ಮೊದ್ಮಂಜನ ಸೋದರ ಮಾಂವ ಶಿವರಾಮನ

ಕೈಲಿ ಕಾಸ್ತಾಳಿ ಕಟ್ಟಿಸಿದೊ. ಕಾಸ್ತಾಳಿ ಕಟ್ಟಿದ ಮೇಲೆ ಸುರೇಶ ಮೊದ್ಮಂಜ ಆತ್. ಇನ್ನ್ ಅಂವ ದಾರೆ ಆಕನ ಮುಟ್ಟ ಉಂಬಕೆ ಬೊತ್ತ್. ಬರೇ ಪಳಾರಲೇ ಇರೊಕು, ಕಾಸ್ತಾಳಿ ಕಟ್ಟಿ ಊರ್ ಗೌಡ್ರ್ ಜಾತಿ ಸಮಸ್ತರ ಒಪ್ಪಿಗೆ ಪಡ್ದ್.

ಮೊದ್ಮಂಜನ "ಎಂಣೆ ಅರ್ಸಿಣಕ್ಕೆ ಕುದ್ರುಸುವೇ" ಎಂತ ಕರ್ದ್ ಹೇಳಿ ಮಣೆ ಮೇಲೆ ಕುದ್ರಿಸಿದೊ. ಅಂವನ ಎದ್ರ್ ಎರ್ಡ್ ದೊಡ್ಡ ದೊಡ್ಡ ಮಣೆಗಳ ಇಸಿ, ಒಂದರ ಮೇಲೆ ಕಾಯೆ ಹಾಲ್‌ಲಿ ಕಡ್ಸ ಹಸಿ ಅರ್ಸಿಣನ ಕಾಯೆಂಣೆ ಸೇರ್ಸಿ, ಒಂದ್ ಕಂಚಿನ ಬಟ್ಲ್‌ಲಿ ತಂದ್‌ದ್ ಇಸಿದೊ. ಇನ್ನೊಂದು ಮಣೆಲಿ ಬೆಳ್ತಿಗೆ ಅಕ್ಕಿನನೂ, ಐದೆಲೆ ಒಂದಡ್ಕೆ, ಏಳ್ ಕೊಡಿ ಗರ್ಕೆ ಹುಲ್ಲುನ ಇಸಿದೊ. ಮುತ್ತೈದೆ ಹೆಣ್ಮಕ್ಕ ಚಪ್ಪರಕ್ಕೆ ಸರ್ಮಾಲೆ ದೀಪನ ಕೋಸಿ ಇಸಿದೊ. ಮೊದ್ಮಂಗಜಂಗೆ ಅರ್ಸಿಣ ಎಂಣೆ ಪೂಜಿಕೆ ಸುರು ಮಾಡ್ದೊ. ಸುರುಗೆ ಮೊದ್ಮಂಜನ ಅವ್ವ, ಕಮಲಕ್ಕ ದೀಪಕ್ಕೆ ಅಕ್ಕಿ ಹಾಕಿ ಕೈ ಮುಗ್ದ್, ಐದೆಲೆ ಮೇಲೆ ಒಂದಡ್ಕ್‌ನ ಇಸಿ, ಅದರ ಮೊದ್ಮಂಜನ ಬೊಗಸೆಲಿ ಇಸಿ, ಅಂವಂಗೆ ಬೆಳ್ತಕ್ಕಿಲಿ ಸೇಸೆ ಹಾಕಿದೊ. ಆ ಮೇಲೆ ಅಂವನ ಕೈಯಿಂದ ಎಲಾಡ್ಕೆನ ತೆಗ್ದ್ ಹರ್ವಾಣಿಲಿ ಇಸಿ, ಏಳ್ ಕೊಡಿ ಗರ್ಕೆ ಹುಲ್ಲುನ ಎರ್ಡ್ ಕೈಲಿ ಪಾಲ್ ಮಾಡಿ ಹಿಡ್ಕಂಡ್, ಅದರ ಕೊಡಿನ ಎಂಣೆ ಅರ್ಸಿಣಕ್ಕೆ ಮುಣ್‌ಂಗಿಸಿ ಮೊಣ್ಕಾಲ್, ಭುಜ, ತಲೆಗೆ ಅದರ ಮುಟ್ಟಿಸಿ ಕೈ ಮುಗ್ದ್ ಅದರ ಬಟ್ಲ್‌ಲಿ ಇಸಿ, ಎರ್ಡ್ ಕೈಯಿಂದ ಅರ್ಸಿಣ ಎಂಣೆ ತೆಗ್ಡ್, ಮೋರೆ, ಕೈ ಕಾಲ್, ಪಾದ ಬೆನ್ನ್‌ಗೆ ಮೂರ್ಮೂರು ಸಲ ಪೂಜಿದೊ. ಕೈಲಿ ಅಂಟಿಕೊಂಡಿದ್ದ ಜಿಡ್ಡ್‌ನ ಚಪ್ಪರದ ಕಂಬಲಿ ಕಟ್ಟಿಸಿದ ಅರ್ವೆಗೆ ಒರ್ಸಿ ಕಂಡ್, ಕೈತೊಳ್ಯಕೆ ನೀರ್ನಕ್ಕಲೆ ಹೋದೋ. ಮೊಡ್ಯಾಳ್ತಿ ಮಂಟಪದ ನಾಕ್ ಕಂಬಗಳ್ಗೆ ಮಡಿದಳಿಯದ ಅರ್ವೆನ ಮುಂದೆನೇ ಸುತ್ತಿ ಇಸಿತ್ತ್. ಹೆತ್ತವ್ವ ಸುರುನ ಸಾಸ್ತ್ರ ಮಾಡ್ದ ಮೇಲೆ ವಿಮಲ ದೊಡವ, ದೊಡಪಂದರ ಮಗಕ್ಕ, ಸೋದರತ್ತೆ ಕಾಂತ ಬಂದ ಮುತ್ತೈದೆಗ ಎಲ್ಲಾ ಒಬ್ಬೊಬ್ಬನೇ ಬಂದ್ ಮೊದ್ಮಂಜಂಗೆ ಅರ್ಸಿಣ ಎಂಣೆ ಪೂಜಿದೊ. ಊರು ಗೌಡ್ರು ಎಸ್ಟ್ ಪೂಜಿದೋಂತ ಲೆಕ್ಕ ಮಾಡಿಕಂಡೇ ಇದ್ದೊ. ಮುಗುಳಿ ಜನ ಪೂಜಿನಿ, ಎಲ್ಲೋವು ಆತೋ? ಇನ್ ಮೊದ್ಮಂಜನ ಎದ್ರ್ ಸಕೋ" ಎಂತ ಊರ್ ಗೌಡ್ರು ಸಭೆಲಿ ಕರ್ದ್ ಕೇಳ್ದೊ. ಸುಮಾರ್ ಎಲ್ಲಾ ಹೆಣ್ಮಕ್ಕ ಅರ್ಸಿಣ ಎಂಣೆ ಪೂಜಿ ಆತ್‌ಂತ ತಿಳ್ಡ್, ಮೊದ್ಮಂಜನ

"ಹತ್ತ್ ಕುಟುಂಬ ಹದ್ನೆಂಟ್ ಗೋತ್ರದ ಜಾತಿ ಸಮಸ್ತರಲ್ಲಿ ಕೇಳಿ ಮೊದ್ಮಂಜನ ಅರ್ಸಿಣ ಎಂಣೆ ಸಾಸ್ತ್ರಂದ ಎದ್ರ್‌ಸುವೆ" ಎಂತ ಮೂರ್ಮೂರ್ ಸಲ ಹೇಳಿ ಕಂಡ್ ಅಂವನ ಎರ್ಡ್‌ಕೈ ಹಿಡ್ಕಂಡ್ ಊರ್ ಗೌಡ್ರು ಎದ್ರಿಸಿದೊ. ಅಡುಳಿ ಮೊದ್ಮಂಜನ ಮಿಂಯಕೆ ಕರ್ಕೊಂಡೋತ್. ಅಲ್ಲಿ ಹೆಣ್ಮಕ್ಕ ಎಲ್ಲಾ ಸೇರಿಕಂಡ್ ಮೊದ್ಮಂಜನ ತಲೆಗೆ ನೀರ್ ಹೊಯ್ದೊ. ಅಕೆರಿಗೆ ಅಡುಳಿ ಒಬ್ಬನೇ ಅಲ್ಲಿ ಉಳ್ತ್. ಕೆಲವು ಹೆಣ್ಮಕ್ಕ ಗಂಗೆ

ಪೂಜೆಗೆ ರೆಡಿ ಮಾಡಿಕೆ ಹೋದೊ. ಕೆಲವು ಹೆಣ್ಮಕ್ಕ ಮೊದ್ರಂಗಿ ಕ್ಯೊಯ್ಯಕೆ ಮೊದ್ರಂಗಿ ದೈ ಹಕ್ಕಲೆ ಹೋದೊ.

ಕಮಲಕ್ಕ ಮೇಲೆನ ಇಜ್ಜೆಲ್ ಪುಡೆಲಿ ಮೊದ್ರಂಗಿ ದೈ ನೆಟ್ಟ್ ಬೆಳ್ಸಿದ್ದೊ. ದೈನ ಸುತ್ತೊಳು ಕಟ್ಟೆ ಕಟ್ಟಿ ಸೆಗಣಿ ಸಾರ್ಸಿ ಇಸಿದ್ದೊ. ಮೊದ್ರಂಗಿ ಕ್ಯೊಯ್ಯಕ್ಕೆ ಅತ್ತಿಗೆಕ–ನಾದ್ನಿಕ ಹೋಕುಗಡ. ಹಾಂಗಾಗಿ ಗಿರಿಜಕ್ಕನ ಮಗಳ್ ಸುಧನೂ, ವಸಂತಿನ ಮಗಳ್ ಸುಮತಿನನೂ ಕರ್ಕಂಡ್ ಮುತ್ತೈದೆಗ ಮೊದ್ರಂಗಿದೈನ ಹಕ್ಕಲೆ ಹೋದೊ. ಮುತ್ತೈದೆಗ ಒಂದು ಕಂಚಿನ ಚೊಂಬುಲಿ ನೀರ್, ಒಂದು ಕೊಡಿ ಬಾಳೆಲೆ, ಹರಿವಾಣಲಿ ಐದೆಲೆ ಒಂದಡ್ಕೆ ಅದರ ಮೇಲೆ ಒಂದು ಪಾವೆಲಿ ಇಸಿ ಮೊದ್ರಂಗಿ ದೈಗೆ ಐದ್ ಜನ ಹೆಣ್ಮಕ್ಕ ಮೂರ್ಮೂರು ಸುತ್ತು ಬಂದ್, ಸುಧನ ಕೈಲಿ ಮೊದ್ರಂಗಿ ದೈಗೆ ನೀರ್ ಹಾಕ್ಸಿದೊ. ಸುಮತಿ ಹರಿವಾಣಲಿದ್ದ ಐದೆಲೆ ಒಂದಡ್ಕೆ, ಒಂದ್ ಪಾವೆಲಿನ ಮರದ ಬುಡಲಿ ಇಸಿತ್. ಅವಿಬ್ಬೊರು ಸುರುಗೆ ಕೈ ಮುಗ್ದ್ ಮೂರ್ಮೂರ್ ಸರ್ತಿ ಮೊದ್ರಂಗಿ ಸೊಪ್ಪುನ ಉರ್ಂಬಿ ಕೊಯ್ದ್ ಹರಿವಾಣಲಿದ್ದ ಕೊಡಿಬಾಳೆಲೆ ಹಾಕಿದೊ. ಆ ಮೇಲೆ ಉಳ್ದೊವುನೂ ಹರಿವಾಣ ತುಂಬಾ ಮೊದ್ರಂಗಿನ ಕೊಯ್ದೊ. ಅದರ ತಂದ್ ಸುರೇಶನ ಅತ್ತಿಗೆ, ನಾದ್ನಿಕ ಕಡ್ದ್ ಬಾಳೆಲೆಲಿ ಹಾಕಿ ಹರಿವಾಣಲಿ ಇಸಿ ಮೇಲ್ಕಟ್ಟ್ ಅಡಿಗೆ ತಂದೊ.

ಇತ್ತ ಮೊದ್ಮಂಜ ಸುರೇಶನ ಅಡುಳಿ ಮೀಸಿ, ಮೊದ್ರಂಗಿ ಸಾಸ್ತ್ರಕ್ಕೆ ಕುದ್ರಿಸಿಕೆ ಸಿಂಗಾರ ಮಾಡಿಕೆ ಸುರು ಮಾಡ್ದೊ. ವಾರಿಜಕ್ಕನ ಮಂಜಂದರ್ ಶಶಿಧರ, ಗಿರಿಧರ, ಜಯಂತಿ ಅಕ್ಕನ ಮಂಜ ಮನೋಹರ ಎಲ್ಲಾ ಸೇರಿಕಂಡ್ ಮೊದ್ವಂಜಂಗೆ ಹೊಸ ಉಡ್ಗೆ ತೊಡ್ಸಿಕೆ ಸುರು ಮಾಡ್ದೊ. ಎಂಟ್ ಮೊಳದ ವೇಸ್ಟಿನ ಕಚ್ಚೆ ಹಾಕಿ ಉಡ್ಸಿ, ಉದ್ದ ಕೈನ ಬಿಳಿ ಅಂಗಿ ಹಾಕಿಸಿದೊ. ಕುತ್ತಿಗೆಗೆ ಐದೆಳೆ ಚಕ್ರ ಸರ, ಮಿಸ್ರಿಮಾಲೆ ಹಾಕಿ ಸಿಂಗಾರ ಮಾಡ್ದೊ. ಕಣ್ಣ್‌ಗೆ ಕಣ್‌ಕೊಪ್ಪು, ಹಣೆಗೆ ಕುಂಕುಮದ ಬೊಟ್ಟು, ಕೆನ್ನೆಗೆ ದೃಷ್ಟಿ ಬೊಟ್ಟು ಇಸಿದೊ. ಕೈಗೆ ಒಂದೊಂದು ಚಿನ್ನದ ಕಡಗನ ಹಾಕಿದೊ. ಎರ್ಡ್ ಕೈ ಬೆರ್ಳ್‌ಗೆ ಐದಾರ್ ಉಂಗ್ರಗಳ ತೊಡ್ಸಿದೊ. ಕಾಲ್ ಬೆರ್ಳ್‌ಗೆ ಬೆಳ್ಳಿ ಕಾಲುಂಗ್ರ ಹಾಕಿದೊ. ತಲೆಗೆ ರುಮಾಲ್ ಸುತ್ತಿ, ಒಂದ್ ದೊಡ್ಡ ಎಲಸ್ತ್ರನ ಅದರ ಮೇಲೆ ಗುಡಿ ಹಾಕಿದೊ. ಆ ಮೇಲೆ ಮುತ್ತೈದೆಗ ಅವನ ಗಂಗೆ ಪೂಜೆಗೆ ಕರ್ಕೊಂಡೋದೊ.

ಗಂಗೆ ಪೂಜೆಗೆ ರೆಡಿ ಮಾಡಿಕೆ ಹೋದ ಹೆಣ್ಮಕ್ಕ ಬಾಮಿ ಹಕ್ಕಲೆ ಹೋಗಿ, ಅಲ್ಲಿ ಬಾಮಿ ಚಿಂಟೆಲಿ ಚಿಬುಳೆ ದೀಪ ಉರ್ಸಿಸಿದ್, ಗಂಧದ ಕಡ್ಡಿಲಿ ಬಾಮಿಗೆ ಪೂಜೆ ಮಾಡಿ ಒಂದು ಕೊಡ್ಪಾಣ ನೀರ್ ಎಳ್ದ್ ಐದ್ ಕಳಸದ ಚೊಂಬುಗಳಿಗೆ ನೀರ್‌ನ ಹೊಯ್ದ್ ಇಸಿದೊ. ಮೊದ್ಮಂಜನ ಬಾಮಿ ಹಕ್ಕಲೆ ಕರ್ಕೊಂಡೋಗಿ ಗಂಧದ ಕಡ್ಡಿಲಿ ಗಂಗೆ ಪೂಜೆ ಮಾಡ್ಸಿ, ಮುತ್ತೈದೆಗ ಕಳ್ಸನ ಹೊತ್ತ್‌ಕಂಡ್ ಜಾಲ್‌ಲಿ ಇದ್ದ

ಚಾಳೆ ಹಕ್ಕಲೆ ಬಂದ್, ಮೊದ್ಮಂಜನೊಟ್ಟಿಗೆ ಚಾಳೆಗೆ ಮೂರು ಸುತ್ತ್ ಬಂದ್, ಕಳಸನ ಚಾಳೆನ ಎದ್ರ್ ಹಾಸಿದ ಹೊಸ ಮೊಂದ್ರಿಲಿ ಮೂಡು ದಿಕ್ಕಿಗೆ ಮೋರೆ ಮಾಡಿ ಇಸಿದೊ. ಮೊಂದ್ರಿಲಿ ಸಾಲಾಗಿ ಐದ್ ಕೊಡಿ ಬಾಳೆ ಹಾಸಿ, ಅದ್ಕೆ ಮೊದ್ಮಂಜನ ಕೈಲಿ ಹೊದ್ಲ್, ಅವುಲು ಇಕ್ಕಿಸಿ, ಅದರ ಮೇಲೆ ಕದೊಳಿ ಬಾಳೆ ಹಣ್ಣ್‌ನ ಬೆಲ್ಲನ ಇಸಿ, ಕಾಯೆಣ್ಣೆಲಿ ನೆನ್ಸಿದ ದಳಿಯದ ನೆಣೆನ ಅವನ ಕೈಲಿ ಹೊತ್ತಿಸಿ, ಗಂಧದ ಕಡ್ಡಿಲಿ ಪೂಜೆ ಮಾಡಿದೊ. ಕಳಸದ ನೀರ್‌ನ ಚಾಳೆಗೆ ಹೊಯ್ದೊ. ಈ ಎಲ್ಲಾ ಕಾರ್ಯಕ್ರಮಗಳ ಮಾಡಿಕನ ಮೊದ್ಮಂಜನ ಒಟ್ಟಿಗೆ ಕಳಸ ಕನ್ನೆಟಿ ಹಿಡ್ಕಂಡ್ ಸತೀಶನ ಮಗ ಭಾರತಿ ಸುರೇಶನೊಟ್ಟಿಗೆ ಇತ್ತ್.

ಸುರೇಶಂಗೆ ಅಡುಳಿ ಬಿಳಿ ಹೊದಿಕೆ ಹೊದಿಸಿದ ಕೊಡೆನ ಬುಡ್ಸಿ ಹಿಡ್ಕಂಡ್, ಕಂಚಿಮೆ ನೊಟ್ಟಿಗೆ ಚಪ್ಪರದ ಮುಖ್ಯ ಬಾಗಿಲ್‌ಗೆ ಬಾತ್. ಅವರೊಟ್ಟಿಗೆ ಉಳ್ದೋವೂ ಬಂದೊ.

ಮೊದ್ಮಂಜ ಸಿಂಗಾರ ಮಾಡಿ ಅವು ಚಪ್ಪರದ ಮುಖ್ಯ ಬಾಗಿಲ್‌ಗೆ ಬಂದ್ ನಿಲ್ಲಿಕಾಕನ, ವಸಂತಿ ಅದರ ಪುಳ್ಳಿ ಮಿಥುನನೊಟ್ಟಿಗೆ ಬಂದ್ ಚೊಂಬು ನೀರ್ ಕೊಟ್ಟ್, ಇದರ ನೀ ಮೊದು ಮಂಜನ ಕಾಲಿಗೆ ಹ್ಯೊಯ್ಯೊಕೂಂತ ಹೇಳಿ, ಅವನ ಬೊಗ್ಗಿಸಿ, ಅಂವನ ಕೈಲಿದ್ದ ನೀರ್‌ನ ಮೊದ್ಮಂಜನ ಎರ್ಡ್ ಪಾದಗಳಿಗೆ ಹ್ಯೊಸಿತ್. ಆಗ ಅಂವನ ಚೊಂಬುಗೆ ಐದೆಲೆ, ಒಂದು ಇಡೀ ಅಡ್ಕೆ, ಒಂದು ರುಪ್ಯಾ ನಾಣ್ಯನ, ಊರು ಗೌಡ್ರು ಸುರೇಶನ ಕೈಲಿ ಹಾಕ್ಸಿದೊ.

ವಸಂತಿ, ಜಯಂತಿ, ಸುನಂದ, ವಾರಿಜ, ಗಿರಿಜ ಅಕ್ಕಂದರ್ ಕೂಡಿಕಂಡ್ ಕಂಚಿನ ಬಟ್ಲ್‌ಲಿ ಕುರ್ದಿ ನೀರ್ ತಂದ್ ನೆಣೆ ಹೋಸಿ, ದೃಷ್ಟಿ ತೆಗ್ದ್, ಮೊದ್ಮಂಜಂಗೆ ಸೋಬಾನೆ ಹೇಳಿಕಂಡ್ ಆರತಿ ಎತ್ತಿ, ಮೊದ್ಮಂಜನ ಮುಂಡಕ್ಕೆ ಕುರ್ದಿ ನೀರ್‌ನ ಬೊಟ್ಟು ಇಸಿ, ನೀರ್‌ನ ಅಂವನ ಕಾಲ್ನ ಎರ್ಡ್ ಪುಡೆಗೆ ಚೆಲ್ಲಿದ್, ಬಟ್ಲ್‌ನ ಮೊದ್ಮಂಜನ ಎದ್ರ್ ಹಿಡ್ದೊ. ಊರು ಗೌಡ್ರು ಮೊದ್ಮಂಜನ ಕೈಲಿ ಒಂದು ರೂಪ್ಯಾ ಪಾವೆಲಿನ ಐದೆಲೆ ಒಂದ್ ಅಡ್ಕೆನ ಕೊಟ್ಟ್ ಅದರ ಬಟ್ಲ್‌ಗೆ ಹಾಕಿಕೆ ಹೇಳ್ದೊ. ಮೊದ್ಮಂಜ ಅದರ ಬಟ್ಲ್‌ಗೆ ಹಾಕಿಕನ ಇದ್ ಸಾಲದ್‌ಂತ ಹೆಣ್ಮಕ್ಕ ಹೇಳ್ದೊ. ಕಡೆಗೆ ಐದ್ ರೂಪ್ಯಾ ನಾಣ್ಯನ ಹಾಕಿತ್. ಅದರ ಮುತ್ತೈದೆಗ ಮೊದ್ಮಂಜನ ಮುಸ್ಕುನ ಅರ್ದ್ವೆನ ಕೊಡಿಗೆ ಕಟ್ಟಿದೊ. ಊರ್ ಗೌಡ್ರು ನಾಕ್ ವೀಳ್ಯದೆಲೆ, ನಾಕ್ ಹೋಳು ಅಡ್ಕೆನ ಮೊದ್ಮಂಜನ ತಲೆ ಸುತ್ತು ಮೂರು ಸಲ ತಂದ್, ನಾಕ್ ದಿಕ್ಕ್‌ಗೆ ಅದರ ಬಿಸಾಡ್‌ದೊ. ಒಂದ್ ತೆಂಗಿನ ಕಾಯೆನ ಮೊದ್ಮಂಜನ ತಲೆ ಸುತ್ತು ತಂದ್ ಭೂಮಿಗೆ ಒಡ್ದೊ. ಊರು ಗೌಡ್ರು ಮೊದ್ಮಂಜನ ಕಳಸ ಕನ್ನೆಟಿ, ಅಡುಳಿನೊಟ್ಟಿಗೆ ಮೇಲ್ಕಟ್ಟ್ ಅಡಿಗೆ, ಮಂಟಪಕ್ಕೆ ಕರ್ಕಂಡ್ ಬಂದ್, ಜಾತಿ ಸಮಸ್ತರ ಕೇಳುವ ಒಕ್ಕಣೆ ಮೂರ್ಮೂರು ಸಲ

ಹೇಳಿ, ಅವನ ಕೈ ಹಿಡ್ದ್ ಹಾಸಿದ ಹೊಸ ಮೊಂದ್ರಿ ಮೇಲೆ ಕುದ್ರಿಸಿದೊ.

ಮೊದ್ಮಂಜನ ಎದ್‌ರ್ ಮಣೆ ಇಸಿ, ಅದರ ಮೇಲೆ ಹರಿವಾಣಲಿ, ಕೊಡಿ ಬಾಳೆಲೆಲಿ ಅತ್ತಿಗೆ ನಾದ್ನಿಕ ಕಡ್ಡ ಮೊದ್ರಂಗಿನದ ಇಸಿದೊ. ಊರ್ ಗೌಡ್ರು ಸೋದರ ಮಾಂವ ಶಿವರಾಮನ ಕರ್ದ್, ಅಂವನ ಕೈಲಿ ಮೊದ್ಮಂಜನ ಬಲ್ದ ಕೈಗೆ ಐದ್ ಬೊಟ್ಟು ಮೊದ್ರ್‌ಂಗಿನ ಇಸಿಕೆ ಹೇಳ್ದೊ. ಸೋದ ಮಾಂವ ಮೊದ್ರಂಗಿ ಸಾಸ್ತ್ರ ಸುರು ಮಾಡ್ದ ಮೇಲೆ, ಮೊದ್ಮಂಜನ ಬಲ್ದ ಕೈಗೆ ಗಿರಿಜಕ್ಕನ ಮಗ ಸುಧ, ಎಡ್ದ ಕೈಗೆ ಜಯಂತಿ ಅಕ್ಕನ ಮಗ ಮಾಲಿನಿಗೂ ಮೊದ್ರಂಗಿ ಇಸಿಕೆ ಕುದ್ದೊ. ಬಲ್ದ ಕೈಗೆ ಸೂರ್ಯನ ಚಿತ್ರ ಬುಡ್ಸಿ, ಸುತ್ತೊಳು ಪೊರ್ಲುನ ಚಿತ್ರ ಬುಡ್ಸಿದೊ. ಎಡ್ದ ಕೈಗೆ ಚಂದ್ರನ ಚಿತ್ರ ಬುಡ್ಸಿ, ಅದರ ಸುತ್ತ ಚಿತ್ರ ಬುಡ್ಸಿದೊ. ವಾರಿಜ, ಗಿರಿಜ, ವಸಂತಿ, ಜಯಂತಿ, ಸುನಂದ, ಅಕ್ಕಂದರ್ ಕೂಡಿಕಂಡ್ ಮೊದ್ರಂಗಿ ಇಸುವ ಸೋಬಾನೆ ಹಾಡ್ದೊ.

ಇಲ್ಲಿ ಮೊದ್ರಂಗಿ ಸಾಸ್ತ್ರ ಮಾಡಿಕನ ಅಯ್ಯಣ್ಣ ಗೌಡ್ರು ಊರ್ ಗೌಡ್ರಿಗೆ ಒಂದು ಚೊಂಬು ನೀರ್ ಕೊಟ್ಟ್ ಹಸೆ ಬರ್‍ಯಕೆ ಕೇಳೊಕೊಂಡೊ. ಊರು ಗೌಡ್ರು ಕಮಲಕ್ಕನ ತವರು ಮನೆಯವರಕ್ಕಲೆ ಹಸೆ ಬರ್‍ಯಕೆ ಹೇಳ್ದೊ. ಕಮಲಕ್ಕನ ಅಣ್ಣಂದರ್ ರಘುರಾಮ ಮತ್ತೆ ಶಿವರಾಮ ಗೌಡ್ರ್ ಕೂಡಿಕಂಡ್ ನಡೊಳಗೆ ಪೂರ್ವಕ್ಕೆ ಮುಖ ಮಾಡಿಕಂಡ್ ಹಸೆ ಬರ್‍ಯಕೆ ಸುರು ಮಾಡ್ದೊ. ಬಲ್ದಪುಡೆಗೆ ಸೂರ್ಯನ ಚಿತ್ರ ಬುಡ್ಸಿ, ಅದರ ಕೆಳಗೆ ಗಂಡ್‌ನ ಹೆಸ್ರ್ ಚಿ। ಸುರೇಶ ಎಂತ ಬರ್ದೊ. ಎಡ್ದ ಪುಡೆಗೆ ಚಂದ್ರನ ಚಿತ್ರ ಬುಡ್ಸಿ, ಅದರ ಕೆಳಗೆ ಸೌ। ರೇಶ್ಮಎಂತ ಬರ್ದೊ. ಹಸೆ ಬರ್ದ್ ಮುಗ್ಯಕಾಕನ ವಾರಿಜ, ಗಿರಿಜ, ಸುನಂದ, ವಸಂತಿ, ಜಯಂತಿ ಐದ್ ಜನ ಮುತ್ತೈದೆಕ ಹಸೆನ ಎದ್ರ್ ಸಾಲಗಿ ನಿತ್ತ್‌ಕಂಡ್, ಬೊಗಸೆ ತುಂಬಾ ಅಕ್ಕಿನ ತಕಂಡ್, ಬೊಗ್ಗಿದ್ ನೆಲಲಿ ಐದ್‌ಸಾಲ್ ಹಾಕಿದೊ. ಅದರ ಎರ್ಡ್ ಪುಡೆಲಿ ಐದೆಲೆ ಒಂದಡ್ಕೆ ಇಸಿದೊ ಹಸೆ ಹಾಸುವ ಸೋಬಾನೆ ಹೇಳಿಕಂಡ್ ಜೋಡು ಒಲಿ ಮೊಂದ್ರಿನ ಕೈಲಿ ಹಿಡ್ಕಂಡ್ ಅದರ ಐದ್ ಸಲ ಹಾಸಿ, ಅದರ ಮೇಲೆ ಕುದ್ದೊ. ಅವ್ಕೆ ಕಮಲಕ್ಕ ತಲೆಗೆ ಎಂಣೆ ಕೊಟ್ಟ್, ಹಸೆ ಮೊಂದ್ರಿನ ಬುಟ್ಟ್ ಕೊಡೊಕೂಂತ ಕೇಳ್ದೊ. ಒಗ್ಗಿ ಹಾಕಿದ ತೆಂಗಿನ ಕಾಯೆನ ಹಸೆ ಮೊಂದ್ರಿ ಮೇಲೆ ಇಸಿ ಅವು ಎದ್ದೊ.

ಇತ್ತ ಮೇಲ್ಕಟ್ಟ್ ಅಡಿಲಿ ಕುದ್ದ ಮೊದ್ಮಂಜಂಗೆ ಮೊದ್ರಂಗಿ ಹಾಕಿದ್ ಮುಗ್ತ್, ಅದ್ ಒಣ್‌ಂಗಿಕಾಕನ ವಸಂತಕ್ಕ ಮತ್ತೆ ಸುನಂದಕ್ಕ ಒಂದು ಪಾತ್ರೆನ ಅಂವನ ಎದ್ರ್ ಇಸಿ, ಒಂದು ಚೊಂಬು ನೀರ್‌ಲಿ ಅಂವನ ಕೈಗಳ ತೊಳ್ಸುವೆ, ಕೈ ತೊಳ್ದ ನೀರ್‌ನ ಚಾಳೆ ಬುಡಕ್ಕೆ ತಕೊಂಡೋಗಿ ಸೂಸಿದೊ. ಅಂವನ ಎರ್ಡ್ ಅಂಗೈಗೆ ಹಂಜ ಕಾಯೆಂಣೆ ಹಾಕಿ ಪೂಜಿದೊ. ಊರ್ ಗೌಡ್ರು ಬಂದ್ ಒಕ್ಕಣೆ ಹೇಳಿ

ಮೊದ್ಮಂಜನ ಎದ್ರಿಸಿದೊ.

ಅಸ್ವಾಕನ ಉಂಬ ಹೊತ್ತಾತ್. ಅಯ್ಯಂಣ ಮಾಸ್ಟ್ರ ಒಂದು ಚೊಂಬು ನೀರ್ ತಂದ್ ಸಭೆಗೆ ಉಂಬಕೆ ಎದ್ರಿ ಎಂತ ಅಪ್ಪಣೆ ಕೊಟ್ರೊ. ಬಂದ ನೆಂಟ್ರ್‌ಗ ಎಲ್ಲಾ ಮೇಲೆನ ಜಾಲ್‌ಲಿ ಹಾಕಿದ ಚಪ್ಪರಕ್ಕೆ ಉಂಬಕೆ ಹೋದೋ. ಮೊದ್ರಂಗಿ ಸಾಸ್ತ್ರದ ಊಟಕ್ಕೆ ಅಕ್ಕಿ ಪ್ಯಾಸ ಮಾಡುವ ಕ್ರಮ. ಒಳ್ಳೆ ಗಂಧಸಾಲೆ ಅಕ್ಕಿ ಹಾಕಿ, ಹಸಿಕಾಯೆನ ಹಾಲ್ ತೆಗ್ದ್‌ದ್, ಸಕ್ಕರೆ, ಏಲಕ್ಕಿ, ಬೀಜದ ಬೆಂಡ್ ಹಾಕಿ ಮಾಡ್ದ ಪ್ಯಾಸನ ಎಲ್ಲೋವು ತಿಂದದೇ ತಿಂದದ್. ತೊಂಡೆಕ್ಯಾ, ಬೀಜದ ಬೆಂಡ್ ಹಾಕಿ ಗೈಪು, ಕಡ್ಲೆ ಗಸಿ, ಕೇನೆ ಗೆಂಡೆನ ಆರ್ಲಿದ ಗೈಪು, ಸೋಂತೆಕಾಯಿ ಹುಳಿ, ಕಾಯೆ ಹೋಳಿಗೆ, ತುಪ್ಪ, ಹಪ್ಪಳ ಉಪ್ಪನ ಕ್ಯಾ, ಊಟಕ್ಕೆ ಮಾಡಿದ್ರೊ. ಎಲ್ಲೋವು ಹೊಟ್ಟೆ ತುಂಬಾ ಉಂಡ್ ಎದ್ದ್ ಕೈ ತೊಳ್ದೊ.

ಮೊದ್ರಂಗಿ ಸಾಸ್ತ್ರ ಆದ ಮೇಲೆ ಮೊದು ಮಂಜನ ಕಳಸ ಕನ್ನೆಟಿ ಸಮೇತ ಮನೆ ಒಳಗೆ ಕರ್‍ಕೊಂಡೋಗಿ, ಹಸೆ ಮಣೆ ಮೇಲೆ ಊರು ಗೌಡ್ರು ಒಕ್ಕಣೆ ಹೇಳಿ ಕುದ್ರಿಸಿದೊ. ಮೊದ್ಮಂಜನ ಎದ್ರ್ ಎರ್ಡ್ ಮಣೆ ಇಸಿ, ಒಂದು ಮಣೆ ಮೇಲೆ ಒಂದು ಹರಿವಾಣಲಿ ಅಕ್ಕಿ, ಐದೆಲೆ, ಒಂದು ಇಡಿ ಅಡ್ಕೆ ಇಸುವೆ. ಇನ್ನೊಂದು ಹರಿವಾಣಲಿ, ಹಾಲು, ತುಪ್ಪ, ಬಾಳೆ ಹಣ್ಣ್ ಹಾಕಿ ಪುರುಂಚಿ ಇಸುವೆ. ಕಾಲ್ದೀಪ ಹೋಸಿ ಇಸಿ ಒಂದು ಚೊಂಬು ನೀರ್ ಇಸುವೆ. ಊರು ಗೌಡ್ರು ಮೊದ್ಮಂಜನ ಕೈಲಿ ಐದೆಲೆ ಒಂದಡ್ಕೆ ಇಸಿ, ಸೇಸೆ ಹಾಕಿದೊ. ಸುರುಗೆ ಕಮಲಕ್ಕ ದೀಪಕ್ಕೆ ಅಕ್ಕಿ ಹಾಕಿ ಮೊದ್ಮಂಜನ ಬೊಗಸೆಲಿದ್ದ ವೀಳ್ಯದೆಲೆ ಅಡ್ಕೆನ ತೆಗ್ದ್ ಹರಿವಾಣಲಿಸಿ ಸೇಸೆ ಹಾಕಿ, ಅಂವನ ಬಲ್ದ ಕೈನ ಉಂಗುರ ಬೆರ್‍ಳ್‌ನ ಒಂದ್ ಸಲ ನೀರ್‌ಗೆ ಮತ್ತೊಂದ್ ಸಲ ಹಾಲಿಗೆ ಐದ್ ಸಲ ಮುಟ್ಟಿಸಿದೊ. ಆ ಮೇಲೆ ಹರಿವಾಣಲಿಸಿದ ವೀಳ್ಯದೆಲೆನ ಅಂವನ ಕೈಲಿಸಿದೊ. ಅದಾದ ಮೇಲೆ ಸುನಂದ, ವಾರಿಜ, ಗಿರಿಜ, ಜಯಂತಿ ಅಕ್ಕಂದರ್ ಹಾಲ್ತುಪ್ಪ ಕುಡ್ಸುವ ಸಾಸ್ತ್ರ ಮಾಡ್ದೊ, ಅಕೆರಿಗೆವಿಮಲ ದೊಡವ ಒಂದ್ ಕುಡ್ತೆ ಹಾಲ್‌ನ ಮೊದ್ಮಂಜಂಗೆ ಕುಡ್ಯಕೆ ಕೊಟ್ರೊ. ಮೊದ್ಮಂಜ ಹಾಲ್ ಕುಡ್ದ್ ಲೋಟನ ವಿಮಲ ದೊಡವಂಗೆ ಕೊಡಿಕಾಕನ ಊರ್ ಗೌಡ್ರು,

"ಅದರ್ಲಿ ಐದೆಲೆ, ಒಂದಡ್ಕೆ ಹಾಕಿ ಕೊಡು. ಕಾಲಿ ಗ್ಲಾಸ್ ಕೊಡಿಕಾಗದ್" ಎಂತ ಹೇಳ್ದೊ. ಅಂವ ಅವು ಹೇಳ್ದಾಂಗೆ ಮಾಡ್ತ್, ಹಾಲ್ತುಪ್ಪ ಕುಡ್ಸುವ ಸಾಸ್ತ್ರ ಮುಗ್ದ ಮೇಲೆ ಊರು ಗೌಡ್ರು ಒಕ್ಕಣೆ ಹೇಳಿಕಂಡ್ ಮೊದ್ಮಂಜನ ಹಸೆ ಮೇಲೆಂದ ಎರ್ಡ್ ಕೈ ಹಿಡ್ದ್ ಎಬ್ರಿಸಿದೊ.

ಎಂಣೆರ್ಲಿಣ– ಮೊದ್ರಂಗಿ ಸಾಸ್ತ್ರ ಪೊರ್ಲುಲಿ ಮುಗ್ದ್ ಬಂದೊವು ಹೊಟ್ಟೆ ತುಂಬಾ ಉಂಡೋಂತ ಕಮಲಕ್ಕಂಗೂ, ಅಯ್ಯಣ್ಣ ಮಾಸ್ಟ್ರಿಗೂ ಬಾಳ ಕುಸಿ ಆತ್.

ಸತೀಶ, ಸುನಂದ, ರಾಮಯ ದೊಡಪ, ವಿಮಲ ದೊಡವ ವಿಟ್ಲಕ್ಕೆ ಹೊರ್ಟ್ ನಿಂತೊ. "ನಾವು ನಾಳೆ ದಿಬ್ಬಣ ಹೋಕೆ ಸುಳ್ಯಲಿ ಬಂದ್ ನಿತ್ತವೆ. "– ಎಂತ ಹೇಳ್ದೊ ಉಳ್ದೋವೆಲ್ಲಾ ಉಂಡ್ ಅಲ್ಲೆ ಉಳ್ದೊ.

ಇರ್ಳ್ ಚಿನ್ನಮ್ಮತ್ತೆ ಕಮಲಕ್ಕನೊಟ್ಟಿಗೆ, "ನಾಳೆ ದಿಬ್ಬಣ ಹೊರ್ಡಿಕನ ಹರಿಕೆ ಹಣ ಕಟ್ಟಿಕೆ ಇಂದೇ ಎಲ್ಲಾ ತಯಾರ್ ಮಾಡಿ ದೇವ್ರ ಕೋಣೆಲಿ ಇಸ್‌ಬಲಾ" ಎಂತ ಹೇಳ್ದೊ.

"ಎಂತದೆಲ್ಲಾ ಬೇಕ್ ದೊಡವ?" ಕಮಲಕ್ಕ ಕೇಳ್ದೊ.

"ಕಂಚಿನಕ್ಕಿ, ಬೆಂಡ್ ಕುಕ್ಕೆ, ಎರ್ಡ್ ಬಾಳೆಲೆ, ಹೊದುಳು ಒಂದು ಸೇರ್, ಒಂದು ಕಾಯೆ, ಒಂದು ಚೊಂಬು ನೀರ್, ಬಾಳೆಹಣ್ಣ್ ಒಂದ್ ಪಾಡ, ಒಂದು ದೊಡ್ಡ ಅಚ್ಚು ಬೆಲ್ಲ, ಎರ್ಡ್ ಬೆದ್ರ್‌ನ ಗುತ್ತಿಗ, ಒಂದು ಪುಂಡಿ ಒಳ್ಳೆಮೆಣ್ಸು, ಒಂದೂಕಾಲ್ ರೂಪಾಯಿ ಪಾವೆಲಿ, ಧೂಪದ ಆರತಿ ಮಾಡಿಕೆ ಸಣ್ಣ ಬಾಳೆ ರೆಂಬೆ, ಗಂಧ–ಧೂಪ, ಎಲೆ– ಅಡಿಕೆ, ಇಷ್ಟ್ ಬೇಕ್ ಬಲಾ" ಎಂತ ಚಿನ್ನಮ್ಮತ್ತೆ ಹೇಳ್ದೊ.

ಕಮಲಕ್ಕ ಅವು ಹೇಳ್ದಾಂಗೆ ಎಲ್ಲಾ ಜೋಡನೆ ಮಾಡಿ, ದೇವ್ರ ಕೋಣೆ ಒಳಗೆ ಇಸಿ, ಸಂಕೋಲೆ ಕೋಸಿದೊ.

* * * * *

12. "ಕುಲದೇವ್ರಿಗೆ ಹರಿಕೆ ಹಣ ಕಟ್ಟಿದೊ"

ಐತ್ವಾರ ಬೆಳ್ಳಾರ್‌ಗೆ ಮೂರು ಗಂಟೆಗೆ ಎಲ್ಲೋವು ಎದ್ದೊ. ಕಾಲಿ ಹೊಟ್ಟೆಲಿ ಹೋಕೆ ಆಗದ್‌ಂತ ಎಲ್ಲೋವ್ಕು ಚಾಯ, ಅಗ್ರಣೆ ಹಾಕಿದ ಅವ್ಲಕ್ಕಿ, ಬಾಳೆಹಣ್ಣ್ ಪಳಾರ ಕೊಟ್ಟೊ. ಬೇಕಾದೊವು ತಿಂದೊ. ಬೇಡದೊವು ಚಾಯ ಮಾತ್ರ ಕುಡ್ದೊ.

ದಿಬ್ಬಣ ಹೊರ್ಡಿಕೆ ಮುಂದೆ, ಮೊದ್ಮಂಜ ಮಿದ್ ಬಾತ್. ಅಂವಂಗೆ ಸಿಂಗಾರ ಮಾಡಿ ಕುಲದೇವ್ರು ತಿರ್ಪತಿ ತಿಮ್ಮಪ್ಪಂಗೆ ಹರಿಕೆ ಹಣ ಕಟ್ಟಕೆ ದೇವ್ರ ಕೋಣೆಗೆ ಕರ್ಕಂಡ್ ಹೋದೋ ಊರು ಗೌಡ್ರು ಕಮಲಕ್ಕನೊಟ್ಟಿಗೆ,

"ಕವುಲಕ್ಕಾ ಹರಿಕೆ, ಹಣ ಕಟ್ಟಿಕೆ ಎಲ್ಲಾ ಸಾವಮಾನ್ ಸಿದ್ಧ ಮಾಡ್ಯೊಳರಿಯೋ?" ಎಂತ ಕೇಳ್ದೋ

"ಎಲ್ಲಾ ಇಲ್ಲೆ ಇಸ್ಯಳೆ ತಕಣಿ" – ಕಮಲಕ್ಕ ಹೇಳ್ದೊ.

ಊರು ಗೌಡ್ರು ಸುರುಗೆ ಕಾಲ್ದೀಪ ಹೋಸಿ, ಒಂದ್ ಮಣೆ ಮೇಲೆ ಬೆಂಡ್ ಕುಕ್ಕೆ ಇಸಿ, ಅದರೊಳಗೆ ಜೋಡು ಬಾಳೆಲೆನ ಹಾಸಿ, ಮೊದ್ಮಂಜನ ಕೈಲಿ ಆ ಬಾಳೆಲೆಗೆ ಐದ್ ಸರ್ತಿ ಹೊದ್ಲುನ ಇಕ್ಕಿಸಿ, ಒಂದು ಪಾಡ ಬಾಳೆ ಹಣ್ಣ್, ಒಂದು ಅಚ್ಚ್ ಬೆಲ್ಲ, ಐದೆಲೆ ಒಂದಡ್ಕೆನ ಇಸಿಸಿದೊ. ಆ ಮೇಲೆ ಊರು ಗೌಡ್ರು ಕುಲದೇವ್ರುಗೆ ಹರಿಕೆ ಹಣ ಕಟ್ಟುವೇಂತ ಒಕ್ಕಣೆ ಹೇಳಿಕಂಡ್, ಮೊದ್ಮಂಜನ ಕೈಲಿ ಒಂದ್ ಬೆದ್ರ್‌ನ ಗೊಟ್ಟಕೊಟ್ಟ್, ಅದರ್ಲಿ ಸುರುಗೆ ಮಾಯ್ನ ಸೊಪ್ಪು, ಹಂಞಾ ಒಳ್ಳೆ ಮೆಣ್ಸ್ ಮತ್ತೆ ಒಂದು ಕಾಲ್ ರೂಪಾಯಿ ಪಾವೆಲಿ ಹಾಕಿಸಿ, ಅದರ ಸೊಪ್ಪುಲಿ ಮುಚ್ಚಿದೊ. ಅದಾದ ಮೇಲೆ ಇನ್ನೊಂದು ಗೊಟ್ಟಲಿ ಮಾಯ್ನ ಸೊಪ್ಪು ಮತ್ತೆ ಹಂಞಾ ಒಳ್ಳೆ ಮೆಣ್ಸ್ ಅಂವನ ಕೈಲಿ ಹಾಕ್ಸಿ, ಮುಚ್ಚಿ ಈ ಎರ್ಡ್ ಗೊಟ್ಟಗಳ ಮೊದ್ಮಂಜನ ಕೈಲಿ ಬೆಂಡ್ ಕುಕ್ಕೆಲಿ ಇಸಿಸಿದೊ. ಒಂದ್ ಕಾಯೆನ ಒಡ್ದ್ ಅದರ ನೀರ್ನ ಬೆಂಡ್ ಕುಕ್ಕೆ ಸುತ್ತೋಳು ಮೂರು ಸುತ್ತು ಚೆಲ್ಲಿಕಂಡ್, ಒಳ್ದ ನೀರ್ನ ಚೊಂಬುಗೆ ಹೊಯ್ದ್ ಕಾಯೆ ಗಡಿಗಳ ಬೆಂಡ್ ಕುಕ್ಕೆ ಒಳಗೆ ಇಸಿದೊ. ಒಂದ್ ಬಾಳೆ ಪಂಬೆಲಿ ದೂಪ ಹೋಸಿ, ಹಾಕಿ ಚೆಂಬುನ ಕೈಲಿ ಹಿಡ್ಕಂಡ್ ದೂಪದ ಆರತಿ ಮಾಡ್ದೊ. ಒಕ್ಕಣೆ ಹೇಳಿಕಂಡ್ ತಿರ್ಪತಿ ವೆಂಕಟ್ರಮಣ ದೇವರ ಈ ಹರಿಕೆ ಹಣ ಇಸಿದ ಬೆಂಡು ಕುಕ್ಕೆನ ಊರ್ ಗೌಡ್ರು ತೆಗ್ದ್ ಮೊದ್ಮಂಜನ ತಲೆ ಮೇಲೆ ಇಸಿದೊ. ಅಂವ ಅದರ ಅಟ್ಟಕೆ ಹತ್ತುವ ಕೇರ್ಪುಗೆ ಮುಟ್ಟ ಹೊತ್ತ್‌ಕಂಡ್ ಹೋತ್. ಕೇರ್ಪುನ ಹಕ್ಕಲೆ ಅಂವನ ತಲೆಂದ ಈ ಬೆಂಡ್ ಕುಕ್ಕೆನ ಅಯ್ಯಣ್ಣ ಮಾಸ್ಟ್ರು ತಕಂಡ್ ಅಟ್ಟಕೆ ಹತ್ತಿ ಅಟ್ಟದ ಈಶಾನ್ಯ ದಿಕ್ಕ್‌ಲಿ ಇಸಿ ಬಂದೊ. ಇಲ್ಲಿಗೆ ಕುಲದೇವ್ರ್‌ಗೆ ಹರ್ಕೆ ಹಣ ಕಟ್ಟುವ ಸಾಸ್ತ್ರ ಮುಗ್ತ್.

13. "ಸುರೇಶನ ಮೊದ್ವೆ ದಿಬ್ಬಣ ಹೊರ್ಟತ್"

ಚಿನ್ನಮ್ಮತ್ತೆ ಭಾರತಿನ ಕರ್ದ್ ಕಳಸ ಕನ್ನೆಟಿ ಸರಿಮಾಡಿಕೆ ನಿತ್ತೊ. ಕಂಚಿನ ಬಟ್ಲ್‌ಲಿ ಐದ್ ಕೊಂಡೆ ಅಕ್ಕಿ ಹಾಕಿ, ಅದರ ಮೇಲೆ ಕೊಂಬುಗಿಂಡಿ ಇಸಿ, ಗಿಂಡಿನ ಒಳಗೆ ಹಾಲು, ನೀರ್, ತುಪ್ಪ ಹಾಕಿ ಮಾಯ್ನ ಎಲೆನ ಕೊಡಿ ಮೇಲೆ ಕಾಂಬಾಂಗೆ ಇಸಿ, ಪಿಂಗಾರನ ಸಣ್ಣ ಸಣ್ಣ ಎಸಳ್ ಮಾಡಿ ಮಾಯ್ನ ಸೊಪ್ಪುನ ಎಡೆಲಿಸಿ, ಜುಟ್ಟು ಇದ್ದ ತೆಂಗಿನ ಕಾಯೆನ ಗಿಂಡಿ ಮೇಲೆ ಇಸಿದೊ. ಕೊಂಬು ಗಿಂಡಿಗೆ ಮಲ್ಲಿಗೆ ಹೂವು ಸುತ್ತಿದೊ. ತಾಳಿ ಚೈನ್‌ನ ಕೊಂಬು ಗಿಂಡಿಗೆ ಸುತ್ತಿ ಇಸುದು ಕ್ರಮ. ಆದರೆ ಈಗನ ಕಾಲಲಿ ಅದರ ಧಾರೆಗೆ ಆಕನ ಮಾತ್ರ ಸುತ್ತಿ ಇಸುವೆ. ಗಿಂಡಿನ ಸುತ್ತೋಳು, ಐದೆಲೆ ಒಂದಡ್ಕೆ, ಒಂದು ನಾಣ್ಯ, ಮರದ ಬಾಚಣಿಕೆ ಬಿಚ್ಚೋಲೆ, ಕರಿಮಣಿ, ಕನ್ನಡಿ ಇದ್ದ ಕುಂಕುಮ ಕರ್ಡಿಗೆ, ಸಣ್ಣ ಹಿತ್ತಾಳೆನ ಚಿಬುಳೆ ಇಸುದೊ. ಚಿಬುಳೆಲಿ ನೆನ್ಸಿದ ನೆಣೆನ ಇಸಿದೊ. ಈ ರೀತಿ ಕಳ್ಯಕನ್ನೆಟಿ ಮಾಡಿ ಅದರ ಒಂದು ದೊಡ್ಡ ಬಿಳಿ ಬೈರಾಸ್‌ಲಿ ಇಸಿ, ಬಿಗ್ದ್ ಕಟ್ಟಿ ಮಳ್ಳಿನೊಟ್ಟಿಗೆ,

"ಇಂದಾ, ಇದರ ಜಾಗ್ರತೆಲಿ, ನಿನ್ನ ತೊಡೆಮೇಲೆನೇ ಇಸಿಕ" ಎಂತ ಹೇಳ್ದೊ, ಭಾರತಿ ಕೈ ತುಂಬಾ ಬಳೆ ಇಸಿಕಂಡ್, ಅರ್ಸಿಣ ಬಂಣದ ಜರಿ ಸೀರೆ ಉಟ್ಟ್‌ಕಂಡ್, ತಲೆ ತುಂಬಾ ಹೂ ಮುಡ್ಕಂಡ್ ಕಂಚಿಮೆ ಹಿಡ್ಕಕೆ ಹೊರ್ಟತ್.

ದಿಬ್ಬಣ ಹೊರ್ಡಿಕೆ ಮುಂದೆ ಊರ್ ಗೌಡ್ರು ಹಸೆ ಮಣೆ ಮುಂದೆ ಕಾಲ್ದೀಪ ಹೋಸಿ, ಒಕ್ಕಣೆ ಹೇಳಿ ಕುದ್ರಿಸಿದೊ. ಐದ್ ಜನ ಮುತ್ತೈದೆಗ ಹಾಲ್ತುಪ್ಪ ಕುಡ್ಸಿದೊ. ಕಮಲಕ್ಕ ಮೊದ್ಮಂಜಂಗೆ ಒಂದ್ ಗ್ಲಾಸ್ ಹಾಲ್ ತಂದ್ ಕೊಟ್ಟೊ. ಅಂವ ಕುಡ್ದ್ ಕಾಲಿ ಗ್ಲಾಸ್‌ಲಿ ಐದೆಲೆ ಒಂದಡ್ಕೆ ಹಾಕಿ, ಅವ್ವಂಗೆ ಕೊಟ್ಟತ್. ಊರ ಗೌಡ್ರು ಸೋದರ ಮಾಂವ ಶಿವರಾಮನ ಕರ್ದ್ ಮೊದ್ಮಂಜಂಗೆ ಹರ್ಕೆ ಹಣ ಕಟ್ಟಿಕೆ ಹೇಳ್ದೊ. ಊರ್ ಗೌಡ್ರ್ ಒಕ್ಕಣೆ ಹೇಳಿಕನ ಶಿವರಾಮ ಗೌಡ್ರು ಮೊದ್ಮಂಜನ ಮುಸ್ಕುನ ಅರ್ವೆನ ಕೊಡಿಗೆ ಒಂದೂಕಾಲ್ ರೂಪಾಯಿ ಹರ್ಕೆ ಹಣ ಕಟ್ಟಿವೆ. ಅಲ್ಲಿಂದ ಮೊದ್ಮಂಜನ ಒಕ್ಕಣೆ ಹೇಳಿ ಹಸೆ ಮೊಂದ್ರಿಂದ ಎದ್ರಿಸಿದೊ. ಅಂವ ಎಲ್ಲಾ ಹಿರಿಯರ ಕಾಲ್ ಹಿಡ್ಕಂಡತ್. ಅಯ್ಯಣ್ಣ ಮಾಸ್ತ್ರ ಮಂಜನ ಕೈ ಹಿಡ್ದ್, ಮನೆ ಮೆಟ್ಲ್ ಇಳ್ಸಿ, ಮೇಲ್ಕಟ್ಟ್‌ನ ಅಡಿಗೆ ತಂದ್ ಅಂವನ ಕೈನ ಊರ ಗೌಡ್ರ ಕೈಲಿಸಿ, ಮೊದ್ವೆ ಕಾರ್ಯನ ಲಾಯ್ಕ್‌ಲಿ ಸುದಾರ್ಸಿ ಕಂಡ್ ಬರೊಕೂಂತ ಹೇಳಿ ಅವ್ಕೆ ಎಲ್ಲಾ ಜವಾಬ್ದಾರಿನ ಒಪ್ಪಿಸಿದೊ. ಆಗ ಐದಾರ್ ಗರ್ನಾಲ್‌ಗಳ ಹೊಡ್ಸಿದೊ. ಓಲಗದೊವು ಮಂಗಳ ವಾದ್ಯ ಊದಿದೊ. ಮೊದ್ಮಂಜಂಗೆ ಧಾರೆಗೆ ಹಾಕುವ ಅರ್ವೆ, ಪಚಾರ ಆಕನ ಹಾಕುವ ಸೂಟು, ಎಲ್ಲಾ ದೊಡ್ಡ ಎರ್ಡ್ ಸೂಟ್ ಕೇಸ್‌ಲಿ ಹಾಕಿ, ಕಾರ್‌ನ ಡಿಕ್ಕಿಲಿ ಇಸಿದೊ. ಅಡುಳಿ ಅಶೋಕನೂ, ಮೊದ್ಮಂಜ ಸುರೇಶನೂ ಕಾರ್‌ನ ಎದ್ರ್ ಸೀಟ್‌ಲಿ ಕುದ್ದೊ. ಕಂಚಿಮೆ ಭಾರತಿ, ವಸಂತಿ ಅಕ್ಕ, ಜಯಂತಿ ಅಕ್ಕ, ಹಿಂದೆನ ಸೀಟ್‌ಲಿ ಕುದ್ದೊ. ಅಯ್ಯಣ್ಣ ಮಾಸ್ತ್ರ ಜೀಪುಲಿ ಕಮಲಕ್ಕ, ಅಯ್ಯಣ್ಣ ಮಾಸ್ತ್ರ್, ಊರು ಗೌಡ್ರು, ಕುಕ್ಕಪ್ಪ ಗೌಡ್ರು, ಅವರ ಹೆಣ್ಣ್, ಸತೀಶನ ಮಂಜ ಭಾಸ್ಕರ ಕುದ್ದೊ. ವಾರಿಜಕ್ಕನ ಮಂಜ ಗಿರಿಧರ ಜೀಪು ಡ್ರೈವಿಂಗ್ ಮಾಡ್ತ್. ಶಶಿಧರ ಜೀಪು ಹಿಂದೆ ಕುದ್ದತ್. ಕಮಲಕ್ಕನ ಅಪ್ಪ ನಾರ್ಣಪ್ಪ ಗೌಡ್ರ ಜೀಪುಲಿ ಅವರ ಸಂಸಾರ ಎಲ್ಲಾ ಹತ್ತಿದೊ. ಉಳ್ದೋವೆಲ್ಲಾ ಬಸ್ಸ್‌ಲಿ ಹತ್ತಿಕೊಂಡೊ. ಸುಳ್ಯಲಿ ಸತೀಶ, ಸುನಂದ, ರಾಮಯ್ಯ ದೊಡಪ, ವಿಮಲ ದೊಡವ ಕಾದ್ ನಿತ್ತಿದ್ದೊ. ಬಸ್ಸ್‌ಲಿ ಅವರ ಹತ್ತಿಸಿಕಂಡ್ ಕೊಡ್ಗ್‌ನ ಕಡೆ ದಿಬ್ಬಣನ ಹೊರ್ಟತ್.

ಎಂಟ್ ಗಂಟೆಗೆ ದಿಬ್ಬಣ ಮಡಿಕೇರಿ ಗೌಡ ಸಮಾಜದ ಕಲ್ಯಾಣ ಮಂಟಪಕ್ಕೆ ಮುಟ್ಟಿತ್, ಹೆಣ್ಣ್‌ನ ಕಡೆವು ಎರ್ಡ್ ಸಾಲ್‌ಲಿ ಕಳಸ ಹಿಡ್ದ್ ನಿತ್ತ್ ಕಂಡ್ ಕೊಂಬು ವಾಲಗಲಿ ದಿಬ್ಬಣದವರ ಎದ್‌ರ್‌ಗೊಂಡೊ. ಮುತ್ತೈದೆ ಹೆಣ್ಮಕ್ಕ ಮೊದುಮಂಜಂಗೆ ಆರತಿ ಎತ್ತಿದೊ. ದಿಬ್ಬಣದೊವ್ಕೆಲ್ಲಾ ನಮಸ್ಕಾರ ಹೇಳಿಕಂಡ್, ತೊಬ್ಬಿಕಂಡ್ ಪ್ರೀತಿಂದ ಉಂಬ ಹಾಲ್‌ಗೆ ಕರ್ಕೊಂಡೋಗಿ ಬೊಳ್ಪುನ ಕಾಪಿನ ಕೊಟ್ಟೊ. ಇಡ್ಲಿ ಸಾಂಬಾರ್, ಪೂರಿ ಬಾಜಿ, ಕೇರೆಟ್ ಹಲ್ವ ಬೊಳ್ಪುನ ಕಾಪಿಗೆ ಮಾಡಿದ್ದೊ. ಗಡ್ದ್‌ನ ಪಳಾರ ತಿಂದಾದ ಮೇಲೆ ಮೊದ್ಮಂಜನ ಕಡೆವ್ಕೆ ಬುಟ್ಟುಕೊಟ್ಟ ದೊಡ್ಡ ಹಾಲ್‌ಗೆ ಕರ್ಕೊಂಡೋಗಿ, ಧಾರೆಗೆ ಸಿಂಗಾರ ಮಾಡಿಕೆ ಹೇಳ್ದೊ. ಮೊದ್ಮಂಜನ ಎಲ್ಲೋವು ಕೂಡಿ ಬಿಳಿ ರೇಶ್ಮೆ

ಜರಿಇದ್ದ ಎಂಟ್ ಮೊಳದ ವೇಸ್ಟಿನ ಕಚ್ಚೆ ಹಾಕಿ ಉಡ್ಸಿ, ಬಿಳಿ ರೇಶ್ಮೆ ಉದ್ದಕೈನ ಅಂಗಿ ಹಾಕಿ, ರೇಶ್ಮೆ ಶಾಲ್‌ನ ಎದೆ ಮೇಲೆ ಕತ್ರಿ ಹಾಕಿ, ಹೆಗ್ಲ್ ಸುತ್ತ್ ತಂದ್, ಪಿನ್ ಹಾಕಿದೊ. ತಲೆಗೆ ರುಮಾಲ್ ಸುತ್ತಿ ಹರ್ಕೆ ಹಣ ಕಟ್ಟಿದ ಮುಸ್ಕುನ ಅರ್ವೆನ ಗುಡಿ ಹೊದಿಸಿದೊ. ಕುತ್ತಿಗೆಗೆ ಮಿಸ್ರಿಮಾಲೆ, ಚಕ್ರಸರ ಹಾಕಿ, ಸಿಂಗಾರ ಮಾಡಿ, ಹಣೆಗೆ ಕುಂಕುಮ, ಗಂಧದ ಬೊಟ್ಟ್, ಇಸಿ ಕಣ್ಣ್‌ಗೆ ಕಣ್ಣ್ ಕೊಪ್ಪು ಹಾಕಿ, ಕೆನ್ನೆ ಮೇಲೆ ದೃಷ್ಠಿ ಬೊಟ್ಟು ಇಸಿ ಸಿಂಗಾರ ಮಾಡ್ದೊ.

ಇತ್ತ ಧಾರೆ ಮಂಟಪಲಿ ನಾಕ್ ಮೊಂಧ್ರಿನ ಚೌಕಕಾರಲಿ ಹಾಕಿ ಗಂಡ್‌ನ ಕಡೆವು, ಹೆಣ್ಣ್‌ನ ಕಡೆವು ಎಧ್ರಿ ಬದ್ರ್ ಆಗಿ ಕುದ್ದೊ. ಎರ್ಡ್ ಕಡೆನ ಊರ್ ಗೌಡ್ರ್‌ಗ ಸೋದರ ಮಾಂವಂದರ್ ಯಜಮಾನ ಗೌಡ್ರ್‌ಗ ಅಕ್ಕ, ಪಕ್ಕದ ಮೊಂಧ್ರಿಲಿ ಕುದ್ದ್ ಬಣ್ಣ ಬಂಗಾರ ಇಸುವ ಕಾರ್ಯಕ್ರಮ ಸುರು ಮಾಡ್ದೊ. ಮೊದ್ಮಂಜನ ಕಡೆನ ಊರ್ ಗೌಡ್ರ್ ಒಕ್ಕಣೆ ಹೇಳಿಕಂಡ್ ಕಾರ್ಯಕ್ರಮಗಳೆಲ್ಲನ ಸುದಾರ್ಸಿ ಕೊಡೊಕೂಂತ ಮೊದೊಳಿಗೆನ ಊರ್ ಗೌಡ್ರ್‌ಗೆ ಹೇಳಿ ಎಲೆ, ಅಡ್ಕೆ, ಹೂ, ವೀಳ್ಯನ ಹರಿವಾಣಲಿ ಇಸಿ ಎಲ್ಲೋವ್ಕೂ ಸುತ್ತು ತಂದ್ ಕೊಟ್ಟೊ. ಹೀಂಗೆ ಚೌಕಿ ವೀಳ್ಯ, ದೇವ್ರ ವೀಳ್ಯ, ತೆರವುನ ವೀಳ್ಯ, ಬಣ್ಣ ಬಂಗಾರದ ವೀಳ್ಯ, ದೇಶಮಾನ್ಯ ವೀಳ್ಯಾಂತ ಐದ್ ತರದ ವೀಳ್ಯನ ಹರಿವಾಣಲಿಸಿ ಎಲ್ಲೋವ್ಕ ಕೊಟ್ಟ್ ಸಾಸ್ತ್ರನ ಒಕ್ಕಣೆ ಹೇಳಿಕಂಡ್ ಸುರುಮಾಡಿವೆ. ದೊಡ್ಡ ಹರಿವಾಣಲಿ ಬಣ್ಣ ಬಂಗಾರ ಇಸಿ, ಚೌಕಿನ ನೊಡುಲಿ ಅಯ್ಯಣ್ಣ ಮಾಸ್ಟ್ರ ತಂದಿಸಿದೊ. ಅದರ ಅಲ್ಲಿಕುದ್ದ ಎಲ್ಲಾ ಗೌಡ್ರ್‌ಗ ಸರಿ ಉಟ್ಟೋಂತ ನೋಡ್ದೊ. ಧಾರೆಸೀರೆ ಬಿಳಿ ಬಣ್ಣದೇ ಆಕು. ಅದಕ್ಕೆ ಕಂಬಿ ಇರೊಕು, ಕಪ್ಪು ಬಣ್ಣದ ಕಂಬಿ ಇರಿಕಾಗದ್. ಅವ್ ಅಪಸಕುನ. ಐದೆಲೆ, ಒಂದಡ್ಕೆ, ಧಾರೆ ಸೀರೆ, ರವಿಕೆ, ಒಳ ಉಡುಪುಗ ಕೈಲಿ ಹಿಡಿವ ಟುವಾಲ್, ಓಲೆ, ಮೂಂಕುತಿ, ಕಡಗ, ಕಾಲುಂಗ್ರ, ಡಾಬು, ಪಟ್ಟೆ, ಬಾಸಿಂಗ, ಕನ್ನಡಿ, ಬಾಷಣಿಕೆ, ಕುಂಕುಮ ಕರಡಿಗೆ, ಕುಪ್ಪಿ ಬಳೆಗ, ಹೂ ಪಿಂಗಾರ ಎಲ್ಲಾ ಬಣ್ಣ ಬಂಗಾರಲಿ ಇತ್. ಇನ್ನೊಂದು ಹರಿವಾಣಲಿ ಐದ್ ಕವುಳೆ ವೀಳ್ಯದೆಲೆ, ಐದ್ ಅಡ್ಕೆ ಇಸಿದೊ. ಆ ಎರ್ಡ್ ಹರಿವಾಣಗಳ ಎರ್ಡ್ ಕಡೆನ ಐದ್ ಜನ ಮುತ್ತೈದೆಗ, ಹೆಗ್ಲ್‌ಗೆ ಬಿಳಿ ಸಾಲ್ ಹೊದ್ದ್ ಕಂಡ್, ಊರು ಗೌಡ್ರು ಒಕ್ಕಣೆ ಹೇಳಿಕಂಡ್ ಇರಿಕಾಕನ, ಹರಿವಾಣಕ್ಕೆ ಕೈ ಮುಗ್ದ್, ಅದರ ಮೂರ್ಮೂರು ಸಲ ಅದಲ್ ಬದಲ್ ಮಾಡಿಕಂಡವೆ. ಅಕೆರಿಗೆ ಗಂಡ್‌ನ ಕಡೆನ ಮುತ್ತೈದೆಗ ಹರಿವಾಣಗಳ ತಕಂಡ್ ಮೊದುಮಗಳ ಸಿಂಗಾರ ಮಾಡಿಕೆ ಹೋದವೆ. ಅದರ ಮೊದ್ಮಗಳ ಎದ್ರ್ ಇಸಿ, ಗೂಡೆನ ಕಡೆವ್ಕೆ ಸಿಂಗಾರ ಮಾಡಿಕೆ ಹೇಳಿವೆ. ಬೆಳ್ಳಪ್ಪನೊವು ಮೊದ್ಮಗಳ ಸಿಂಗಾರ ಮಾಡಿಕೆ ಬ್ಯೂಟಿ ಪಾರ್ಲರ್‌ನವರ ಕರ್ಸಿದ್ದೊ. ಅದ್ ಆಗಳೇ ಗೂಡೆನ ಸಿಂಗಾರ ಮಾಡಿ ಕುದ್ರಿಸಿತ್. ಹಾಂಗಾಗಿ ತಲೆ ಸಿಂಗಾರ

ಮಾಡಿಕೆ ಹೋತ್ಲೆ. ಬರೇ ಸೀರೆ ಬದ್ಲಾಯ್ಸಿ, ಗಂಡ್‌ನ ಕಡೆವು ತಂದ ಚಿನ್ನಾಭರಣಗಳ ತೊಡ್ಸಿದೊ. ಸುರುಗೆ ಕಾಲುಂಗ್ರನ ಗೂಡೆನ ಹೆತ್ತವ್ವ ಬಂದ್ ಗೂಡೆನ ಬಲ್ದ ಕಾಲ್ನ ತೋರು ಬೆರಳಿಗೆ ತೊಡ್ಸಿದೊ. ಆ ಮೇಲೆ ಎಡ್ದ ಕಾಲ್ನ ತೋರ್ಬೆರ್ಳ್‌ಗೆ ತೊಡ್ಸಿದೊ. ಆ ಮೇಲೆ ಉಳ್ದೋವು ಉಳ್ದದರ ಸಿಂಗಾರ ಮಾಡ್ದೊ. ಹಂಞ ಹೊತ್ತ್‌ಲಿ ಹೈದನ ಕಡೆನ ಊರ್ ಗೌಡ್ರ್ ಬಂದ್ ಗೂಡೆನ ಸಿಂಗಾರ ಆತೋಂತ ಕೇಳ್ದೊ.

"ಮೊದ್ಮಂಜ ಗೂಡೆಗೆ ತಾಳಿ ಕಟ್ಟಿತ್"

ಮೊದ್ಮಂಜನ ಕಳಸ ಕನ್ನೆಟಿ ಹಿಡ್ದ ಭಾರತಿನ ಮುಂದೆ ಮಾಡಿಕಂಡ್, ಅಡುಳಿ ಅಶೋಕ ಬಿಳಿ ಕೊಡೆನ ಬುಡ್ಸಿ ಹಿಡ್ಕಂಡ್, ಸೋದರ ಮಾಂವ ಶಿವರಾಮ ಗೌಡ್ರು ಮೊದ್ಮಂಜನ ಕೈ ಹಿಡ್ಕಂಡ್ ದಿಬ್ಬಣ ಮುಖ್ಯ ಬಾಕಿಲ್‌ಗೆ ಬಾಕನ ಗೂಡೆನ ಕಡೆನ ಮುತ್ತೈದೆಗ ಆರತಿ ತಟ್ಟೆ ಹಿಡ್ಕಂಡ್ ಬಂದೊ. ಸುರುಗೆ ಮೊದೊಳಿಗೆನ ಅವ್ವ ಅಳ್ಯನ ಕಾಲ್ ತೊಳ್ದೊ. ಕಾಲ್ ತೊಳ್ದ ನೀರ್‌ನ ಚೊಂಬುಗೆ ಐದೆಲೆ ಒಂದಡ್ಕೆ, ಒಂದು ರೂಪ್ಯಾನ ಮೊದ್ಮಂಜ ಹಾಕಿತ್. ಐದ್ ಜನ ಮುತ್ತೈದೆಗ ಸೋಬಾನೆ ಹೇಳಿ ಕಂಡ್, ಕುರ್ದಿ ನೀರ್‌ಲಿ ಮೊದ್ಮಂಜಂಗೆ ದೃಷ್ಟಿ ತೆಗ್ದ್, ಆರತಿ ಎತ್ತಿದೊ. ಮುಂಡಕ್ಕೆ ಕುರ್ದಿ ನೀರ್‌ನ ಬೊಟ್ಟು ಇಸಿದೊ. ಅವರ ಹರಿವಾಣಕ್ಕೂ ಮೊದ್ಮಂಜ ಐದೆಲೆ, ಒಂದಡ್ಕೆ, ರೂಪ್ಯಾ ನಾಣ್ಯ ಇಸಿತ್. ಅಲ್ಲಿಂದ ಮೊದ್ಮಂಜನ ಕರ್ಕಂಡ್ ಧಾರೆ ಮಂಟಪಕ್ಕೆ ಬಂದೊ. ಇನ್ನೊಂದ್ ದಿಕ್ಕ್‌ಂದ ಮೊದೋಳ್ಗೆ ಗೂಡೆನ, ಕಳಸ ಕನ್ನಟಿನ ಮುಂದೆ ಇಸಿಕಂಡ್ ಗೂಡೆನ ಸೋದರ ಮಾಂವ ಧಾರೆ ಮಂಟಪಕ್ಕೆ ಕರ್ಕಂಡ್ ಬಂದೊ. ಎರ್ಡ್ ಕಡೆನ ಸೋದರ ದೊವು ಬಿಳಿ ಅರ್ವೆಂದ ತೆರೆ ಹಿಡ್ದೊ. ಮೊದ್ಮಂಜ ಮತ್ತೆ ಮೊದೊಳಿಗೆನ ಧಾರೆ ಮಂಟಪಲಿ ಮಣೆ ಮೇಲೆ ನಿಲ್ಲಿಸಿದೊ. ಎರ್ಡ್ ಕಡೆನ ಐದ್ ಜನ ಮುತ್ತೈದೆಗ ಕಂಚಿಮೆಗೆ ಅಕ್ಕಿ ಹಾಕಿ ಕೈ ಮುಗ್ದೊ. ಗೂಡೆನ ಕಡೆನ ಕಂಚಿಮೆಗೆ ಹೈದನ ಕಡೆನ ಹೆಣ್ಮಕ್ಕ, ಹೈದನ ಕಡೆನ ಕಂಚಿಮೆಗೆ ಗೂಡೆನ ಕಡೆನ ಹೆಣ್ಮಕ್ಕ, ಅಕ್ಕಿ ಸೇಸೆ ಹಾಕಿ ಕೈಮುಗ್ದೊ. ಎರ್ಡ್ ಕಡೆನ ಊರು ಗೌಡ್ರು ಕೊಂಬು ಗಿಂಡಿಲಿ ಇದ್ದ ಹಾಲ್ನ, ಮೊದ್ಮಂಜನ ಕಡೆನ ಕೊಂಬುಗಿಂಡಿಂದ, ಮೊದೊಳಿಗೆನ ಕೊಂಬು ಗಿಂಡಿಂದ ಒಂದಕ್ಕೊಂದು ಮೂರು ಸಲ ಹ್ಯೊದೊ. ಕಂಚಿನಕ್ಕಿನ ಮೇಲೆ ಇಸಿದ, ತೆಂಗಿನ ಕಾಯೆನ ಬದ್ಲಿಸಿಕೊಂಡೊ. ಗೂಡೆನ ಅಪ್ಪ ಬೆಳ್ಯಪ್ಪನೊವು, ಎರ್ಡ್ ಕೊಂಬು ಗಿಂಡಿಲಿದ್ದ ಹಾಲ್ನ ಧಾರೆ ಎರ್ಯವ ಚೊಂಬುಗೆ ಹಾಕಂಡ್, ತಾಳಿ ಕಂಟಿನ ಹಿಡ್ಕಂಡ್ ಸಭೆಲಿ ಕುಡ್ದವರ ಕೈಲಿ ಮುಟ್ಟಿಸಿಕೆ

ತಕೊಂಡೋದೊ. ಸಭೆಲಿದ್ದೊವು ಚೊಂಬುನ ಮುಟ್ಟಿ ಕೈಮುಗ್ದ್, ಒಳ್ಳೆದಾಗಲೀಂತ ಹಾರೈಸಿದೊ. ಮೂರ್ತದ ಸಮಯ ಹಕ್ಕಲೆ ಬಾಕನ ಗೂಡೆನ ಕೈಲಿ ಹೂಮಾಲೆ ಕೊಟ್ಟ್ ಹೈದನ ಕುತ್ತಿಗೆಗೆ ಹಾಕ್ಸಿದೊ. ಹೈದನೂ ಗೂಡೆಗೆ ಹೂಮಾಲೆ ಹಾಕಿತ್. ಅಯ್ಯಣ್ಣ ಮಾಸ್ತ್ರ ಧಾರೆ ಹಿಡ್ಯಕೆ ಕಂಚಿನ ಬಟ್ಲ್ ತಕಂಡ್, ಮೊದ್ಮಂಜನ ಕೈಲಿ, ಕಳಸ– ಕನ್ನೆಟಿಲಿ ಇಸಿದ ಐದೆಲೆ ಒಂದಡ್ಕೆನ ಇಸಿದೊ ಹಾಂಗೆನೆ ಬೆಳ್ಯಪ್ಪನೊವೂ ಗೂಡೆನ ಕೈಲಿ ಐದೆಲೆ ಒಂದಡ್ಕೆನ ಇಸಿದೊ. ಮೊದ್ಮಂಜನ ಕೈ ಮೇಲೆ ಮೊದೋಳ್ಗೆನ ಕೈನ ಇಸಿ ಎರ್ದ್ ಕಡೆ ಊರ್ ಗೌಡ್ರ್‌ಗ ಗುರು ಮನೆ, ಕಟ್ಟೆ ಮನೆ, ಸೀಮೆ ಮನೆ, ಮಾಗಣಿಮನೆ ಗುರು ಹಿರ್ಯರಲ್ಲಿ ಕೇಳಿ, ಕನ್ನಡ ಜಿಲ್ಲೆನ ಪಂಬೆತ್ತಾಡಿ ಗ್ರಾಮದ ಅಯ್ಯಣ್ಣ ಮಾಸ್ತ್ರ ದೊಡ್ಡ ಮಂಜ ನಂದರ ಗೋತ್ರದ ಸುರೇಶ ಎಂಬ ಹೈದಂಗೆ, ಕೊಡಗ್ ಜಿಲ್ಲೆನ ಮೂರ್ನಾಡ್ ಬೆಳ್ಯಪ್ಪನವರ ಮಗ ಕಬರ್ ಗೋತ್ರದ ರೇಶ್ಮ ಎಂಬ ಗೂಡೆನ ಕೈ ಮುಟ್ಟಿ ಕನ್ಯಾದಾನ ಎರ್ದ್ ಕೊಟ್ಟವೇ ಎಂತ ಮೂರ್ಮುರು ಸಲ ಕರ್ದ್ ಹೇಳ್ದೊ. ಆಗ ಬೆಳ್ಯಪ್ಪನೊವು ಧಾರೆ ಚೊಂಬುಲಿದ್ದ ಹಾಲ್‌ನ ಮೊದು ಮಕ್ಕಳ ಕೈ ಮೇಲೆ ಧಾರೆ ಎರ್ದೊ. ಆಗ ಸಭೆಲಿದ್ದೊವು. "ಒಳ್ಳೆ ಕಾರ್ಯಾಂತ ಹೇಳುವೆ" ಎಂತ ಹೇಳ್ದೊ. ಸುರುಗೆ ಗೂಡೆನ ಕೈ ಮೇಲೆ, ಎರಡ್ನೆ ಸಲ ಗೂಡೆನ ಕೈ ಕೆಳಗೆ, ಮೂರ್ನೇ ಸಲ ಗೂಡೆನ ಕೈ ಮೇಲೆ ಇಸಿ ಧಾರೆ ಎರ್ದೊ. ಮೂರ್ನೇ ಸಲ ಧಾರೆ ಎರ್ಯಕನ, ಮೊದುಮಕ್ಕ ಅವರ ಕೈಲಿಸಿದ್ದ ಎಲೆ, ಅಡ್ಕೆನ ಧಾರೆ ಬಟ್ಲ್‌ಗೆ ಬುಡಿಕೆ ಊರು ಗೌಡ್ರು ಹೇಳ್ದೊ. ಧಾರೆ ಬಟ್ಲನ ಕೈ ಕೆಳಗೆ ಹಿಡ್ಕಂಡಿದ ಅಯ್ಯಣ್ಣ ಮಾಸ್ತ್ರ ಅದರ ತಕೊಂಡೋಗಿ ಬಾಳೆ ಬುಡಕ್ಕೆ ಹೊಯ್ಯಕೆ ಸಣ್ಣ ಮಂಜ ಗಿರೀಶನ ಕೈಲಿ ಕೊಟ್ಟೊ. ಮೂರ್ತಕ್ಕೆ ಸರಿಯಾಗಿ ಸುರೇಶ, ರೇಶ್ಮನ ಕುತ್ತಿಗೆಗೆ ತಾಳಿ ಕಟ್ಟಿತ್. ಆಗ ಸತ್ ಊರು ಗೌಡ್ರ್‌ಗ ಮೂರು ಸಲ ಒಕ್ಕಣೆ ಹೇಳ್ದೊ. ಗಂಡ್‌ನ ಕಡೆನ ಕಳಸ ಕನ್ನೆಟಿ ಬಟ್ಲ್‌ಂದ ಕುಂಕುಮ ಕರ್ಡಿಗೆಲಿ ಇದ್ದ ಕುಂಕುಮನ ಮೊದೊಳಿಗೆನ ಹಣೆಗೆ ಇಸಿಕೆ ಮೊದ್ಮಂಜಂಗೆ ಹೇಳ್ದೊ. ಕುಂಕುಮದ ಬೊಟ್ಟು ಇಸಿದ ಮೇಲೆ, ಮೊದ್ಮಂಜನ ಸಾಲ್‌ನ ಕೊಡಿಗೆ ಮೊದೊಳಿಗೆನ ಸೆರ್‌ಂಗ್‌ನ ಕೊಡಿನ ಊರ್ ಗೌಡ್ರು ಕಟ್ಟಿದೊ. ಮೊದ್ಮಂಜನ ಕೈನ್ ಅಯ್ಯಣ್ಣ ಮಾಸ್ತ್ರೂ, ಮೊದೊಳಿಗೆನ ಕೈನ್ ಬೆಳ್ಯಪ್ಪನೊವೂ ಹಿಡ್ಕಂಡ್ ಧಾರೆ ಮಂಟಪಲಿ ಮೂರು ಸುತ್ತು ಬಂದೊ. ಅವರೊಟ್ಟಿಗೆ ಕಳಸ ಕನ್ನೆಟಿ ಹಿಡ್ದೋವೂ ಹೈದ ಗೂಡೆನ ಅವ್ವಂದರೂ ಸುತ್ತು ಬಂದೊ. ಕಲ್ಯಾಣ ಮಂಟಪ ಆದ ಕಾರ್ಣ, ಇಲ್ಲಿ ಹಾಲುತ್ಪ ಕುಡ್ಸಿತ್ಲೆ. ಮನೆಲಿ ಧಾರೆ ಮಾಡ್ರೆ ಹಸೆ ಮಣೆಲಿ ಕುದ್ರಿಸಿ ಹಾಲುತ್ಪ ಕುಡ್ಸ್‌ತಿದ್ದೊ.

* * * * *

14. "ಪಚಾರಕ್ಕೆ ಕುದ್ರಿಸಿ ಹೆಣ್ಣುಳ್ಳಿ ಕೊಟ್ಟೊ"

ಮೊದು ಮಕ್ಕಳ ಪಚಾರಕ್ಕೆ ಕುದ್ರಿಸಿಕೆ ಸಿಂಗಾರ ಮಾಡಿಕೆ ಒಳಗೆ ಕರ್ಕಂಡ್ ಹೋದೊ. ಮೊದ್ಮಂಜ ಕಾಸ್ತಾಳಿ ಬುಟ್ಟ್ ಒಳ್ದ ಚಿನ್ನನೆಲ್ಲಾ ತೆಗ್ಟ್ ಸೂಟ್– ಬೂಟ್ ಹಾಕಿತ್. ಮೊದೊಳ್ಗೆಗೆ ಭರ್ಜರಿ ನೆತ್ತರ್ ಕೆಂಪು ಬಣ್ಣದ ಸೀರೆಗೆ ನಾಕ್ ಬೆರ್ಳ್ ಅಗಲದ ಕೆಂಡ ಸಂಪಿಗೆ ಬಣ್ಣದ ಕಂಬಿ, ಸೆರಂಗ್ ಇದ್ದ ಜರಿ ಕಂಚಿ ಸೀರೆನ ಉಡ್ಸಿದೊ. ಸೀರೆನ ಮೈಮೇಲೆ ಜರಿ ಬೊಟ್ಟುಗ ಇದ್ದೊ. ಕೈ ತುಂಬಾ ಚಿನ್ನದ ಬಳೆಗ, ಅದರೆಡೆಲಿದ್ದ ಗಾಜಿನ ಬಳೆಗ, ತಲೆ ತುಂಬಾ ಹೂ, ಸೊಂಟಕ್ಕೆ ಡಾಬು, ಕೈ ರಟ್ಟೆಗೆ ತೋಳ ಬಂದಿ, ತಲೆಗೆ ಮುತ್ತು ಬೊಗ್ತಲೆ, ಕೆಬಿಗೆ ಜುಮ್ಕಿಗ, ಕುತ್ತಿಗೆ ತುಂಬಾ ಪದಕದ ಹಾರಗ, ಅದರೆಡೆಲಿ ಎದ್ದ್ ಕಾಂಬ ಕರಿಮಣಿ ಸರಲಿ ಗೂಡೆ ಸಾಕ್ಷಾತ್ ಲಕ್ಷ್ಮಿದೇವಿನಾಂಗೆ ಕಾಂಬತಿತ್ತ್.

ಮೊದುಮಕ್ಕಳಿಗೆ ಸಿಂಗಾರ ಮಾಡಿಕಾಕನ, ಬಂದ ಸಭೆಗೆ ಬೇಜಾರಾಕೆ ಬೊತ್ತ್‌ಂತ ಗೂಡೆನ ಕಡೆನ ನೆಂಟ್ರ್‌ಗ ಕೊಂಬು ವಾಲಗಲಿ ಕೊಣ್ಯಕೆ ಸುರು ಮಾಡ್ದೊ. ಅವರ ತರ ತರದ ಕೊಣ್ತನ ನೋಡಿ ಎಲ್ಲೋಮ್ಮಾ ಬಾರೀ ಕುಸಿಆತ್.

ಪಚಾರಕ್ಕೆ ಮೊದು ಮಕ್ಕಳ ಕುದ್ರಿಸಿಕನ ಗಂಟೆ ಒಂದಾಗಿತ್ತ್. ಜನ ಸಾಗರ ನೆರ್ದಿತ್ತ್.

ಎಲ್ಲೋವೂ ಸಾಲಾಗಿ ನಿತ್ತ್ ಗೂಡೆ ಹೈದಂಗೆ ಸೇಸೆ ಹಾಕಿಕೆ ಹೊರ್‍ಚೊ.

ಸೇಸೆಗೆ ಕುದ್ರಿಸಿಕಾಕನ ಸುರುಗೆ ಮೊದೊಳ್ಗೆನ ಅವ್ವ ಅಪ್ಪ ಸೇಸೆ ಹಾಕಿದೊ. ಆ ಮೇಲೆ ಒಬ್ಬೊಬ್ಬನೇ ಸೇಸೆ ಹಾಕಿಕೆ ಸುರು ಮಾಡ್ದೊ.

ಅಯ್ಯಣ್ಣ ಮಾಸ್ಟ್ರ ಬೆಳಿಯಪ್ಪನವರೊಟ್ಟಿಗೆ, "ನಾವು ಒಂದು ಜೀಪು ಜನ ಮುಂದೆ ಹೋದವೆ. ಅಲ್ಲಿ ಗೂಡೆನ ಮನೆ ತುಂಬುಸುವ ಕಾರ್ಯ ಕ್ರಮಕ್ಕೆ ಸಿದ್ಧ ಮಾಡೊಕೊಲೆ" ಎಂತ ಹೇಳ್ದೊ.

"ಆತ್, ನೀವು ಮುಂದೆ ಉಂಡ್ ಕಣಿ. ನೀವ್ಗೆ ಊಟದ ಏರ್ಪಾಡ್ ಮಾಡ್ನೆ" ಎಂತ ಬೆಳ್ಯಪ್ಪನೊವು ಹೇಳಿ ಬಾವ ನೆಂಟನ ಕರ್‍ದ್,

"ನೆಂಟ್ರ್‌ಗ ಬೇಗ ಹೋದವೆ ಗಡ, ಅವ್ಕೆ ಐದಾರ್ ಜನಕ್ಕೆ ಊಟದ ಏರ್ಪಾಡ್ ಮಾಡ್" ಎಂತ ಹೇಳ್ದೊ. ಮಾದಪ್ಪನೊವು ಅಯ್ಯಣ್ಣ ಮಾಸ್ತ್ರ, ಅವರ ಹೆಣ್ಣ್ ಕಮಲಕ್ಕ, ಅತ್ತೆ ಚಿನ್ನಮ್ಮನೊವು, ತಂಗೆಕ ಜಯಂತಿ, ವಸಂತಿ ಮತ್ತೆ ಗಿರಿಧರ, ಕುಕ್ಕಪ್ಪಣ್ಣನ ಕರ್‍ಕಂಡ್ ಒಂದು ಸಣ್ಣ ಹಾಲ್‌ಗೆ ಹೋಗಿ ಅಲ್ಲಿ ಕುದ್ರಿಸಿ ಉಂಬಕೆ ಏರ್ಪಾಡ್ ಮಾಡ್ದೊ. ಉಂಡದ್ ಅವೆಲ್ಲಾ ಪಂಬೆತ್ತಾಡಿಗೆ ಮಡಿಕೇರಿಂದ ಹೊರ್‍ಚೊ.

ಬೆಳ್ಯಪ್ಪನೊವು ಚೊಂಬುಲಿ ನೀರ್ ಹಿಡ್ದ್ ಸಭೆಗೆ ಉಂಬಕೆ ಎದ್ರಿಕೆ ಹೇಳಿಕೆ ಕೊಟ್ಚೊ. ಉಂಬಕ್ಕಾಗಿ ಕಾದ್ ಕಂಡಿದ್ದ ಜನ ಸಭೆಂದ ಒಮ್ಮೆಗೇ ಎದ್ದ್, ಗೌಡ ಸಮಾಜದ ಕೆಳಗಿದ್ದ ದೊಡ್ಡ ಊಟದ ಹಾಲ್‌ಗೆ ಎಲ್ಲೋವೂ ಹೊರ್‍ಚೊ. ಒಂದು ಗಳ್ಗೆಲಿ ಊಟದ ಹಾಲ್ ಭರ್ತಿ ಆಗಿ ಬಾಕಿಲ್ ಹಾಕಿದೊ. ಉಳ್ದೋವು ಎರಡ್ನೆ ಹಂತಿಗೆ ಕಾದೊ. ಮೊದು ಮಕ್ಕಳಿಗೆ ಸೇಸೊಪಚಾರ ಮುಗ್ಯಕಾಕನ ಮೂರ್ ಗಂಟೆ ಕಳ್ತ್. ಶೇಷೋಪಚಾರ ಕಳ್ದ ಕೂಡ್ಲೇ ಅಲ್ಲೆ ಹೆಣ್ಣ್ ಇಳ್ಸಿಕೊಡುವ ಸಾಸ್ತ್ರ ಮಾಡ್ದೊ. ಅದಾದ ಮೇಲೆ ಮೊದ್ಮಕ್ಕಳಿಗೆ ಊಟ ಕೊಟ್ಚೊ. ಐದ್ ಗಂಟೆಗೆ ಗಂಡ್‌ನ ಕಡೆವು ಹೆಣ್ಣ್‌ನ ಕರ್‍ಕಂಡ್ ಹೊರ್‍ಚೊ. ಮೊದೋಳ್ಗೆ ಗೂಡೆ ತವುರು ಮನೆಯವರ ಎಲ್ಲರ ಕಾಲ್ ಹಿಡ್ಕಂಡ್ ಕಣ್ಣನೀರ್ ಹಾಕಂಡ್ ಹೊರ್‍ಟತ್. ಅದರೊಟ್ಟಿಗೆ ಅದರ ಸೋದರತ್ತೆ ಬೋಜಮ್ಮನೊವು ಮತ್ತೆ ಅವರ ಎರ್ಡ್ ಮಗಕ್ಕ ಅಡಿ ಕುರುಂಟಾಗಿ ಹೊರ್‍ಚೊ.

* * * * *

15. "ಕೊಡ್ಗನ ಗೂಡೆನ ಮನೆ ತುಂಬಿಸಿಕೊಂಡೊ"

ಜಯಂತಿ, ವಸಂತಿ ಅಕ್ಕನೊವು ಒಂದು ಚೆಂಬುನ ಸೇರ್‌ನ ಪಳಪಳ ಹೊಳಿವಾಂಗೆ ತೊಳ್ದ್, ಅದಕ್ಕೆ ಗಂಧ, ಅರ್ಶಿಣ, ಕುಂಕುಮದ ಬೊಟ್ಟು ಇಸಿ, ಅದರ ಕಂಠಕ್ಕೆ ಮಲ್ಲಿಗೆ ಮಾಲೆ ಸುತ್ತಿ, ಅದರ ತುಂಬಾ ಅಕ್ಕಿ ತುಂಬಿಸಿ, ಅದರ ಮೇಲೆ ಒಂದಚ್ಚಿ ಬೆಲ್ಲ ಇಸಿ, ಮನೆಗೆ ಹತ್ತುವ ಎದ್ರ್‌ನ ಬಾಕಿಲ್ ಪುಡೆಲಿ ಇಸಿದೊ. ಬಾಕಿಲ್‌ನ ಅಡಿ ಚೆಂಟೆ ತೊಳ್ದ್, ರಂಗೋಲಿ ಹಾಕಿ, ಅರ್ಶಿಣ, ಕುಂಕುಮ ಇಸಿ, ಹೂ ಇಸಿದೊ. ಮೊದುಮಕ್ಕಳಿಗೆ ಆರತಿ ಮಾಡಿಕೆ ಕುರ್ದ ನೀರ್, ಎಂಣೆ ನೆಣೆ, ಕಿಚ್ಚಿನ ಪೆಟ್ಟಿಗೆ ಎಲ್ಲಾ ಸಿದ್ಧ ಮಾಡಿದೊ. ಒಂದು ಚೊಂಬು ನೀರ್‌ನನೂ ಇಸಿದೊ. ಹಸೆ ಮಣೆ ಹಕ್ಕಲೆ ಹಾಲ್ತುಪ್ಪ ಕುಡ್ಸಿಕೆ ಬೇಕಾದ ಸಿದ್ಧತೆ ಮಾಡ್ದೊ.

ಹಿಂಬೊತ್ತು ಸುಮಾರ್ ಆರ್ ಗಂಟೆಗೆ ದಿಬ್ಬಣ ದೊವು ಬಂದೊ. ಆಗ ಕುಂಞಣ್ಣ ಗರ್ನಾಲ್ ಹೊಡ್ಸಿತ್. ವಾಲಗದೊವು ವಾಲಗ ಊದಿದೊ. ಮೊದು ಮಕ್ಕಳಿಗೆ ಕಾಲ್‌ಗೆ ನೀರ್ ಹಾಕಿ, ಆರತಿ ಎತ್ತಿ ಒಳಗೆ ಬಾಕಿಲ್ ಹಕ್ಕಲೆ ಕರ್ಕಂಡ್ ಬಂದೊ. ಮನೆ ಮೆಟ್ಲ್ ಹತ್ತಿಸಿಕನ ಬಾಕಿಲ್‌ನ ಮೆಟ್ಲ್ ಮೇಲೆ ಇಸಿದ ಸೇರಕ್ಕಿ, ಬೆಲ್ಲನ ಮೊದೊಳ್ಗೆ ಕೈಲಿ ಒದ್ಯಕೆ ಹೇಳ್ದೊ. ಅವು ಹೇಳ್ದಾಂಗೆ ಮೊದೊಳ್ಗೆ ಮಾಡ್ತ್.

ಹೀಂಗೆ ಗೂಧೂಳಿ ಲಗ್ನಲಿ ಮೊದೊಳ್ಗೆ ಗೂಡೆನ ಕಮಲಕ್ಕ ಅಯ್ಯಣ್ಣ ಮಾಸ್ಟ್ರ ಮನೆ ತುಂಬಿಸಿಕಂಡ್, ಮೊದು ಮಕ್ಕಳ ಕೈ ಹಿಡ್ಕಂಡ್ ಒಳಗೆ ಕರ್ಕೊಂಡೋಗಿ ಹಸೆ ಮೊಂದ್ರಿ ಹಕ್ಕಲೆ ನಿಲ್ಲಿಸಿದೊ. ಊರ ಗೌಡ್ರು ಒಕ್ಕಣೆ ಹೇಳಿ ಹಾಲ್ತುಪ್ಪ ಕುಡ್ಸಿಕೆ ಕುದ್ರಿಸಿದೊ. ಕಮಲಕ್ಕ ಮೊದು ಮಕ್ಕಳಿಗೆ ಕುಡ್ಯಕೆ ಒಂದೊಂದು ಗ್ಲಾಸ್ ಸಕ್ಕರೆ ಹಾಕಿದ ಹಾಲ್‌ನ ಕೊಟ್ವೊ. ಹಾಲ್ನ ಕುಡ್ದ್ ಅವಿಬ್ರೊರು ಗ್ಲಾಸ್‌ನೊಳಗೆ ಎಲೆ, ಅಡ್ಕೆ ಹಾಕಿ ಹಿಂದೆ ಕೊಟ್ವೊ ಐದ್ ಜನ ಮುತ್ತೈದೆಕ ಮೊದು ಮಕ್ಕಳಿಗೆ ಹಾಲ್ತುಪ್ಪ ಕುಡ್ಸುವ ಸಾಸ್ತ್ರ ಮಾಡ್ದೊ. ಊರು ಗೌಡ್ರು ಬಂದ್ ಮೊದು ಮಕ್ಕಳ ಹಸೆ ಮಣೆನ ಮೇಲೆಂದ ಒಕ್ಕಣೆ ಹೇಳಿ ಎದ್ರಿಸಿದ ಮೇಲೆ ಎಲ್ಲೋವ್ಕ ಉಂಬಕೆ ನೀರ್ ಕೊಟ್ವೊ. ಸೀಂಯಿ ಊಟ ಉಂಡ ಮೇಲೆ ಮೊದೊಳಿಗೆಗೂ ಅದರೊಟ್ಟಿಗೆ ಬಂದ ನೆಂಟ್ರಗೂ ಒಂದು ಕೋಣೆನ ಮೊಲ್ಗಿಕೆ ಬುಟ್ಟ್ ಕೊಟ್ವೊ. ಅಸ್ತಾಕನ ಗಂಟೆ ಹತ್ತ ಕಳ್ತ್.

ಅಯ್ಯಣ್ಣ ಮಾಸ್ತ್ರ ಮೊಬೈಲ್ ರಿಂಗಾತ್. ಅವು ಮೊಬ್ಯಾಲ್ ತೆಗ್ಟ್, "ಹಲೋ, ಹಲೋ" ಎಂತ ಕೇಳ್ದೊ.-

"ನಾ ಐತಾಳ ಮಾತಾಡ್ದು, ನಾವು ಪಂಜ ದೇವಸ್ಥಾನಕ್ಕೆ ಬಂದೊಳೊ. ನೀವು ಒಮ್ಮೆ ಬಂದ್ ನಾವ್ಗೆ ಸಾಮಾನದ ತೋರ್ಸಿನಿ" ಎಂತ ಅತ್ತಂದ ಮಂಜಯ್ಯ ಐತಾಳ್ರ್ ಹೇಳ್ದೊ. ಅಯ್ಯಣ್ಣ ಮಾಸ್ಟ್ರ.

"ಆತ್ ನಾ ಬನ್ನೆ" ಎಂತ ಹೇಳಿ ಕಮಲಕ್ಕ ನೊಟ್ಟಿಗೆ,

"ವಿಟ್ಲಂದ ಅಡ್ಗೇವು ಬಂದೊಳೊ. ದೇವಸ್ಥಾನಲಿ ಒಳೊ. ನಾ ಹೋಗಿ ಅವ್ಕೆ ಸಾಮಾನ್ ಒಪ್ಪಿಸಿ ಬನ್ನೆ" ಎಂತ ಹೇಳಿ, ಸಾಮಾನ್ ಇಸಿದ ಕೋಣೆಗೆ ಹೋಗಿ, ಎಲ್ಲಾ ಸಾಮಾನ್‌ಗಳ ಜೀಪುಗೆ ಆಳ್‌ಗಳ ಕೈಲಿ ಹೊರ್ಸಿಸಿ, ಅವರ್ರೂ ಕರ್ಕಂಡ್ ಸಂಣ ಮಂಜ ಗಿರೀಶನೊಟ್ಟಿಗೆ ಪಂಜ ದೇವಸ್ಥಾನಕ್ಕೆ ಹೋದ್ದೋ. ಅಲ್ಲಿ ಐತಾಳ್ರ್ ಎಳೆಂಟ್ ಜನರ ಅಡ್ಗೆಗೆ ಸಾಯಕ್ಕೆ ಕರ್ಕಂಡ್ ಬಂದಿದ್ದೊ. ಸಮಾನ್‌ಗಳ ಎಲ್ಲಾ ನೋಡಿ, ಎಲ್ಲಾ ಸರ್ಯಾಗುಟ್ವೊಂತ ಐತಾಳ್ ಅಡ್ಗೆ ಕೆಲ್ಸಕ್ಕೆ ಕೈ ಹಾಕಿದೊ. ಸುರುಗೆ ಹೋಳಿಗೆ ಕೆಲ್ಸಕ್ಕೆ ಕೈ ಹಾಕಿದೊ. ಹೋಳಿಗೆ ಕೆಲ್ಸ ಮುಗ್ಯಕಾಕನನೇ ಬೆಳ್ಗಾರಾತ್. ಇನ್ ಮೊಲ್ಗಿರೆ ಆಕಿಲ್ಲೇಂತ ಅಡ್ಗೆ ಕೆಲ್ಸಕ್ಕೆ ಸುರು ಮಾಡ್ದೊ. ಮದ್ಯಾನ ಹನ್ನೆರ್ಡ್ ಗಂಟೆ ಆಕಾಕನ ಅಡ್ಗೆ ಕೆಲ್ಸ ಎಲ್ಲಾ ಮುಗ್ತ್. ಸುರೇಶನ ಸಿನೇಹಿತರ್ ಒಂದೂವರೆ ಸಾವಿರ ಚಿರೋಟನ ಮಾಡ್ಸಿ, ತಂದ್ ಮುಟ್ಟಿಸಿದೊ. ಅದ್ಕೆ ಬಾದಾಮಿ ಹಾಲ್ನ ಐತಾಳ್ರ್ ಮಾಡ್ದೊ. ಮಂಗ್ಳೂರ್‌ಂದ ಐಸ್ ಕ್ರೀಂನೂ ಬಾತ್.

ಬೊಳ್ಪುಗೆ ಒಂಭತ್ತ್‌ಗಂಟೆಗೆ ಪುತ್ತೂರ್‌ಂದ ಬ್ಯೂಟಿ ಪಾರ್ಲರ್‌ನ ಗೂಡೆನ ಮೊದ್ಮಗಳ ಸಿಂಗಾರ ಮಾಡಿಕೆ ಜಯಂತಿ ಅಕ್ಕನ ಮಗ ಮಾಲಿನಿ ಕರ್ಕಂಡ್ ಬಾತ್. ಮೊದ್ಮಗಳ ಸಿಂಗಾರ ಮಾಡಿ, ಹನ್ನೊಂದು ಗಂಟೆಗೆ ಪಂಜ ಪರಿವಾರ ಪಂಚಲಿಂಗೇಶ್ವರ

ದೇವಸ್ಥಾನಕ್ಕೆ ಮೊದ್ಮಕ್ಕಳ ಕರ್ಕಂಡ್ ಬಂದೊ. ದೇವಸ್ಥಾನಲಿ ಬೊಳ್ಪುಗೆ ಬಂದೋವ್ಕೆಲ್ಲಾ ಕಾಫಿ, ತಿಂಡಿನ ಏರ್ಪಾಡ್ ಮಾಡಿದ್ದೊ. ಕೊಡ್ಗ್‌ನೋವು ಎಂಟ್ ಕಾರ್, ಎರ್ಡ್ ವೇನ್‌ಲಿ ಸುಮಾರ್ ಎಪ್ಪತ್ತ್, ಎಂಭತ್ತ್ ಜನ ಬಂದ್ ಹನ್ನೊಂದುವರೆ ಗಂಟೆಗೆ ಮುಟ್ಟಿದೊ. ರೇಶ್ಮಂಗೆ ಅಪ್ಪ, ಅವ್ವನ ನೋಡಿ ಕಣ್ಣ್‌ಲಿ ನೀರ್ ಬಾತ್. ಒಂದ್ ಇರ್ಳ್ ಕಳ್ಯಕಾಕನ ಅದ್ಕೆ, ನಾ ಈಗ ಬೇರೆ ಮನೆಗೆ ಸೇರ್ದವ್ಳುಂತ ಬೇಜಾರಾತ್, ಅಪ್ಪ, ಅವ್ವನ ತೊಬ್ಬಿಕಂಡ್ ಮರ್ರ್ತ್. ಅವು ಅದರ ತಲೆ ಪೂಜಿ ಸಮದಾನ ಮಾಡ್ದೊ.

ಬಂದ ನೆಂಟ್ರ್‌ಗೆ ಎಲ್ಲಾ ಪಳಾರ ಆತ್. ಹನ್ನೆರ್ಡ್ ಗಂಟೆಗೆ ಮೊದುಮಕ್ಕಳ ಮಂಟಪಲಿ ಪಚಾರಕ್ಕೆ ಊರು ಗೌಡ್ರು ಒಕ್ಕಣೆ ಹೇಳಿ ಕುದ್ರಿಸಿದೊ. ಇದ್ ಹೈದನ ಕಡೆ ಪಚಾರ ಆದ ಕಾರ್ಣ ಸುರುಗೆ ಕಮಲಕ್ಕ ಅಯ್ಯಣ್ಣ ಮಾಸ್ಟ್ರ ಸೇಸೆ ಹಾಕಿದೊ. ಆ ಮೇಲೆ ಮೊದೊಳಿಗೆನ ಅವ್ವ, ಅಪ್ಪ ಸೇಸೆ ಹಾಕಿದೊ. ನೆಂಟ್ರ್‌ಗ, ಊರೋವೆಲ್ಲಾ ಆ ಮೇಲೆ ಸೇಸೆ ಹಾಕಿ ಸುರು ಮಾಡ್ದೊ. ಗಂಡ್‌ನ ಕಡೆನ ಪಚಾರಕ್ಕೆ ಅಯ್ಯಣ್ಣ ಮಾಸ್ಟ್ರ ನೆನ್ಸಿದರ್‌ಂದ ಹೆಚ್ಚ್ ಜನ ಬಂದಿದ್ದೊ. ಪುಣ್ಯಕ್ಕೆ ಅಡ್ಗೆ ಕಮ್ಮಿ ಅತ್ಲೆ. ಎಲ್ಲೋವೂ ಹೊಟ್ಟೆ ತುಂಬಾ ಉಂಡ್‌ದ್, ಮೊದು ಮಕ್ಕಳ ಹರ್ಸಿದ್ ಹೋದೊ. ಬೆಳ್ಯಪ್ಪನೋವು.

"ನೆಂಟ್ರೇ ಅಡ್ಗೆ ಭಾರೀ ಲಾಯ್ಕಾಗುಟ್ಟು, ಇನ್ನ್ ನಾವು ಹೊರ್ಟವೆ. ತುಪ್ಪದ ಸಾಸ್ತ್ರ ಯಾಗ ಮಾಡ್ರೆ?" ಎಂತ ಕೇಳ್ದೊ. ಆಗ ಅಯ್ಯಣ್ಣ ಮಾಸ್ಟ್ರ,

ನಾಳೆ ನಾಗೋಲಿ ಸಾಸ್ತ್ರ ಮಾಡೊಕು. ಮುಂದೆನ ಕಾಲಲಿ ತುಪ್ಪದ ಸಾಸ್ತ್ರ ಎಂಟ್ ದಿನಲಿ ಮಾಡ್ತಿದ್ದೊ. ಆದರೆ ಸುರೇಶಂಗೆ ರಜೆ ಇಲ್ಲೆ ಗಡ. ಹಂಗಾಗಿ ನಾಳ್ದ್ ತುಪ್ಪದ ಸಾಸ್ತ್ರ ಮಾಡೊಮೊ" ಎಂತ ಹೇಳ್ದೊ.

ಗೂಡೆನ ಕಡೆ ನೆಂಟ್ರ್‌ಗ ಎಲ್ಲಾ ಹೊರ್ಟ್ ಹೋದೊ. ರೇಶ್ಮಾ, ಸುರೇಶ ಕಾರ್ ನಿಲ್ಸಿದಲ್ಲಿಗೆ ಮುಟ್ಟ ನೆಂಟ್ರ ಒಟ್ಟಿಗೆ ಹೋಗಿ ಎಲ್ಲರ ಕಾಲ್ ಹಿಡ್ಕಂಡ್ ಆಶೀರ್ವಾದ ಬೇಡ್ದೊ. ರೇಶ್ಮ ಅಪ್ಪ, ಅವ್ವನ ತೊಬ್ಬಿಕಂಡ್ ಮೊರ್ರ್ತ್. ಬೋಜಮ್ಮನೊವು ಮತ್ತೆ ಅವರ ಇಬ್ಬೊರು ಮಕ್ಕ ರೇಶ್ಮಾನ ಸಮಧಾನ ಮಾಡಿ ಕರ್ಕಂಡ್ ಬಂದೊ.

ಪಚಾರ ಮುಗ್ದ ಮೇಲೆ ಹೆಚ್ಚಿನ ನೆಂಟ್ರ್‌ಗ ಎಲ್ಲಾ ಅವರವರ ಮನೆಗೆ ಹೊರ್ಟ್ ನಿಂತೊ. ರಾಮಯ್ಯ ಗೌಡ್ರು,

"ನಾವು ಎರ್ಡ್ ಮೂರ್ ದಿನಂದ ಓಡಾಡ್ದೇ ಆತ್. ಮನೆ ಕಡೆನೂ ಗಮನ ಕೊಡಕಲೆ. ನಾಳೆನ ಸಾಸ್ತ್ರಕ್ಕೆ ನಾವು ಬಾಲ್ಲೆ. ವಾರಿಜನ ಕಳ್ಸಿನೆ, ಅದರೊಟ್ಟಿಗೆ ಗಿರಿಧರ, ಶಶಿಧರ ಬಂದವೆ. ಇನ್ನ್ ನೀವೇ ಸುದಾರ್ಸಿ" ಎಂತ ಅಯ್ಯಣ್ಣ ಮಾಸ್ಟ್ರ ಒಟ್ಟಿಗೆ ಹೇಳಿ, ಹೆಣ್ಣ್ ವಿಮಲನ ಕರ್ಕಂಡ್ ಹೊರ್ಟ್ರೊ. ಸತೀಶಣ್ಣಂಗೂ ಮನೆಲಿ ಪ್ರಾಯದ ಅಪ್ಪನ ಒಬ್ಬರನೇ ಕೆಲ್ಸದೋವರ ಸ್ವಾಧೀನಲಿ ಬುಟ್ಟ್ ಬಾಕೆ ಆದುಲ್ಲೇಂತ

ಸುನಂದಕ್ಕನ ಕರ್ಕಂಡ್ ಹೊರ್ಡ್ದೊ. ಅವರ ಮಗ ಭಾರತಿ ಹೇಂಗೂ ಇಲ್ಲಿ ಉಟ್ಟು, ಕಳಸ– ಕನ್ನೆಟಿ ಹಿಡ್ದವುಳು ತುಪ್ಪದ ಸಾಸ್ತ್ರ ಮುಗ್ದೇ ಬರ್ಲಿ. ನಾಳೆ ಭಾಸ್ಕರನನೂ ಅಂವನ ಹೆಣ್ಣ್‌ನನೂ ಕಳ್ಸಿನೇಂತ ಅಯ್ಯಣ್ಣ ಮಾಸ್ತ್ರ ಒಟ್ಟಿಗೆ ಹೇಳಿ ಅವಿಬ್ರೊರು ಗಂಡ ಹೆಣ್ಣ್ ರಾಮಯ್ಯ ಸಣಪನೊಟ್ಟಿಗೆ ಹೊರ್ಟ್ರೊದೊ. ಗಿರಿಜಕ್ಕನ ಗಂಡ ಸಬ್ಬಿನ್ಸ್‌ಪೆಕ್ಟರ್ ಕೊಡ್ಗಿಗೆ ಮೊದ್ವೆಗೆ ಬಂದೊವು ಅಲ್ಲಿಂದಳೇ ಮಂಗ್ಳೂರ್‌ಗೆ ಹೊರ್ಟ್ರೋದೊ. ಇಂದ್‌ನ ಪಚ್ಚಾರಕ್ಕೆ ರಜೆ ಇಲ್ಲೇಂತ ಹೆಣ್ಣ್ ಗಿರಿಜಕ್ಕನನೂ ಮಗಳ್ ಸುಧಾಳನೂ ಇಲ್ಲೇ ಬುಟ್ಟ್ ಹೋದೊ. ಜಯಂತಿ ಅಕ್ಕನೂ, ಅವರ ಮಗ ಮಾಲಿನಿಗೂ ನಿತ್ತೊ. ಅವರ ಮಂಜ, ಸೊಸೆ, ಗಂಡ ಪುತ್ತೂರು ಬಲ್ನಾಡ್‌ಗೆ ಹೋದೊ. ಅವ್ಕೆ ಸರ್ಕಾರಿ ಚಾಕ್ರಿ ಉಟ್ಟಲೇ, ನಿಲ್ಲಿಕಾದೆನೋ?

* * * * *

16. "ನೀರ್ ಮೊದುವೆ"

ಮಾರ್ಣೆದಿನ ಬೊಳ್ಪುಗೆ ಕೊಟಗೆಲಿ ದೊಡ್ಡ ದೊಡ್ಡ ಎರ್ಡ್ ಒಲೆಗಳಿಗೆ ಕಿಚ್ಚಿಮೊಟ್ಟ್, ಬಳೇವುನ ಅಪ್ಪದ ಹಿಟ್ಟ್‌ನ ಕಾವೆಲಿನ ಒಲೆ ಮೇಲೆ ಇಸಿ, ಚಿನ್ನಮ್ಮ ನೋವು ಮತ್ತೆ ನಾಗಮ್ಮನೊವು ಅಪ್ಪದ ಹಿಟ್ಟ್ ಹೊಯ್ಯಕೆ, ಪಟ್ಟಾಂಗ ಹೊಡ್ಕಂಡ್ ಸುರು ಮಾಡ್ದೊ.

"ಅಲ್ಲಾ ನಾಗಮ್ಮ, ಅಯ್ಯಣ್ಣ ಇಸ್ಟ್ರ ಗೌಜಿಲಿ ಮೊದ್ವೆ ಮಾಡಿ ಮುಗ್ಸುದೂಂತ ನಾ ನೆನ್ಸಿತೇ ಇಲ್ಲೆ. ಮೊದುವೆ ಬಾಳ ಪೊರ್ಲು ಆತ್ ಅಲ್ಲಾ?" ಎಂತ ಚಿನ್ನನೊವು ನಾಗಮ್ಮನವರೊಟ್ಟಿಗೆ ಹೇಳ್ದೊ. ಅವರ್‌ಂದ ಹತ್ತ್ ಹನ್ನೆರ್ಡ್ ವೊರ್ಸಕ್ಕೆ ನಾಗಮ್ಮ ನೋವು ಸಣ್ಣೋವು ಸಣ್ಣ ಪ್ರಾಯಂದಳೇ ಗೊತ್ತಿದ್ದೋವು. ಹಂಗಾಗಿ ಚಿನ್ನಮ್ಮ ನೋವು ನಾಗಮ್ಮನವರ ಹೋಗ್, ಬಾಂತ ಕರ್ಯೋತಿದ್ದೊ.

"ಹೌದಕ್ಕಾ, ಅಳ್ಯಂದರ್ ಅವರ ಅಪ್ಪ– ಅವ್ವ ಒಮ್ಮೆಳೇ ತೀರಿ ಹೋಕಾಕನ ಕಂಗಾಲಾಗಿದ್ದೊ. ಈಗ ಚಾಮಯ್ಯಣ್ಣ ಇರಕಾಗಿತ್ತ್. ಮಂಜನ ಕಾರ್ಬಾರಕ್ಕೆ ಮೂಂಕ್‌ನ ಮೇಲೆ ಬೆರೆಳ್ ಇಸ್ತಿದ್ದೊ." ಎಂತ ನಾಗಮ್ಮನೊವು ದನಿಗೂಡಿಸಿದೊ.

"ಚಾಯಯ್ಯ ಮತ್ತೆ ಅಂವನ ಹೆಣ್ಣ್ ತೀರಿ ಹೋಕನ ಅಯ್ಯಣ್ಣನ ಗೋಳಾಟ ನೋಡಿಕೇ ಆಗ್ತಿತ್ತೆ. ಅಂವ ಏನಾರ್ ಮಾಡಿಕೊಂಬೊದೂಂತ ನಾ ಒಂದ್ ತಿಂಗ ಮುಟ್ಟ ಇಲ್ಲೇ

ಇದ್ದೆ. ದೇವುರು ದೊಡ್ಡೋವು. ಅಂವ ಆ ದುಕ್ಕನ ಸೈಸಿಕಂಡ್, ಕೆಲ್ಸಕ್ಕೆ ರಾಜಿನಾಮೆ ಕೊಟ್ಟ್, ಆಸ್ತಿ, ಬೊದ್ಕ್ ಎಲ್ಲ ಉಳ್ಸಿ ಕಂಡತ್. ಅಪ್ಪ ಅವ್ವ ಇರ್ತಿದ್ದರೆ ಅಂವ ಈಗ ಯಾವ ಯಾವುದೋ ಊರ್ ಸುತ್ತಿಕಂಡ್ ಸರ್ಕಾರಿ ಚಾಕ್ರಿ ಮಾಡಿಕಂಡ್ ಇರ್ತಿತ್ತ್." ಎಂತ ಚಿನ್ನಮ್ಮನೊವು ಹಿಂದೆ ನಡ್ಡದರ ಈಗ ಇನ್ನೊಮ್ಮೆ ನೆನ್ಸಿಕೊಂಡೊ. ಅಸ್ಟರ್ಲಿ ಭಾರತಿ ಗೂಡೆ ಬೋಜಮ್ಮನವರ ಮತ್ತೆ ಅವರ ಎರ್ಡ್ ಮಗಕ್ಕಳ ಕರ್ಕಂಡ್ ಅಲ್ಲಿಗೆ ಬಾತ್. ಅವರ ನೋಡಿ ಚಿನ್ನಮ್ಮನೊವು.

"ಬನ್ನಿ, ಬನ್ನಿ, ನೆಂಟ್ರೇ" ಎಂತ ಉಪಚಾರ ಮಾಡಿ, ಚಪ್ಪರದಡಿಂದ ಮೂರು ಕುರ್ಸಿಗಳ ತಕಂಬಾಕೆ ಭಾರತಿಗೆ ಹೇಳ್ದೊ. ಭಾರತಿ ಗೂಡೆ ಕುರ್ಸಿ ತಂದ್ ಹಾಕಿತ್. ಅವು ಮೂರು ಜನ ಅದರ್ಲಿ ಕುದ್ದ್‌ಕಂಡೊ. ಭಾರತಿ ಅವರ ಅಲ್ಲಿ ಬುಟ್ಟ್ ಮೊದುಮಗಳ ಹಕ್ಕಲೆ ಹೋತ್. ನಾಗಮ್ಮನೊವು ನೆಂಟ್ರೋಟ್ಟಿಗೆ.

"ಹೇಂಗೆ ಇರ್ಸ್ಟ್ ಸರಿ ನಿದ್ದೆ ಬಾತೋ?" ಎಂತ ಕೇಳ್ದೊ.

"ನಂಗೆ ಮೊಲ್ಗಿದ್ ಒಂದೇ ಗೊತ್ತ್. ನಾಕೈದ್ ದಿನಂದ ನಿದ್ದೆ ಇತ್ಲೆ. ಇಲ್ಲಿ ಲಾಯ್ಕ್‌ಲಿ ನಿದ್ದೆ ಬಾತ್" – ಬೋಜಮ್ಮನೊವು ಹೇಳ್ದೊ.

"ನಾ ಏಕೆ ಕೇಳ್ಟೇಂತೇಳ್ರೆ, ಕೆಲವು ಜನಕ್ಕೆ ಜಾಗ ಪಗರ್‌ರೆ ನಿದ್ದೆ ಬಾದುಲ್ಲೆ." – ನಾಗಮ್ಮನೊವು ಹೇಳ್ದೊ.

" ಹಂಗೇನಿಲ್ಲೆ, ನಂಗೆ ಎಲ್ಲಿ ಹೋದರೂ ನಿದ್ದೆ ಒಂದು ಲಾಯ್ಕ್‌ಲಿ ಬಂದದೆ" –ಬೋಜಮ್ಮನೊವು ಹೇಳ್ದೊ.

"ನೀವು ಪುಣ್ಯಾತ್ಮರ್, ನಂಗೆ ಮನೆ ಬುಟ್ಟರೆ ಎರ್ಡ್ ಮೂರ್ ದಿನ ಹೋದಲ್ಲಿ ನಿದ್ದೆ ಬಾದು ಕಷ್ಟ. ಮತ್ತೆ ಹೊಂದಿಕಣೆ" ಚಿನ್ನಮ್ಮನೊವು ಹೇಳ್ದೊ.

"ನಿಮ್ಮ ಮಗಕ್ಕಳಲಿ ದೊಡ್ಡದ್ ಯಾವ್ದು? ಸಣ್ಣದ್ ಯಾವ್ದು? ನಂಗೆ ಅಂದಾಜ್ ಮಾಡಿಕೆ ಆದುಲ್ಲೆ"– ನಾಗಮ್ಮನೊವು ಕೇಳ್ದೊ.

"ಇದ್ ದೊಡ್ಡ ಗೂಡೆ ಯಾಮಿನೀಂತ ಇದರ ಹೆಸ್ರ್. ಇದರ್‌ಂದ ಎರ್ಡ್ ವೊರ್ಸಕ್ಕೆ ದಾಮಿನಿ ಸಣ್ಣದ್ ಅವಿಬ್ರೊರು ಈಗ ಬಿ.ಎ. ಮುಟ್ಟ ಓದಿದ್ ಬೆಂಗ್ಳೂರ್‌ಲಿ ಒಂದು ಸಾಲೆಲಿ ಮಾಸ್ಟ್ರತ್ತಿಗೆ ಕೆಲ್ಸ ಮಾಡಿವೆ' ಎಂತ ಬೋಜಮ್ಮನೊವು ಗೂಡೆಗಳ ತೋರ್ಸಿದ್ ಹೇಳ್ದೊ.

ದಾಮಿನಿನ ಕಡೆ ಕೈ ತೋರ್ಸಿ ನಾಗಮ್ಮನೊವು,

"ನಾ ನೆನ್ಸಿದೆ ಈ ಗೂಡೆ ಅಕ್ಕಾಂತ ನೋಡಿಕನ ಅವುಳಿ ಮಕ್ಕಳ ಹಾಂಗೆ ಒಳೊ" ಎಂತ ಹೇಳ್ದೊ.

"ಎಲ್ಲೋವೂ ಹಾಂಗೇ ಹೇಳ್ದು. ಸಣ್ಣದರ ಬೆಳವಣಿಗೆ ಒಸಿ ಹೆಚ್ಚ್ ಕಂಡದೆ"– ಬೋಜಮ್ಮನೊವು ಹೇಳ್ದೊ. ಚಿನ್ನಮ್ಮನೊವು,

"ಈಗನ ಕಾಲಲಿ ಗೂಡೆಗ ಎಲ್ಲಾ ಓದಿದ್ ಪಟ್ಣಲಿ ಕೆಲ್ಸಕ್ಕೆ ಸೇರಿವೆ. ಹಳ್ಳಿಲಿ ಇದ್ದ ಹೈದಂಗಳಿಗೆ ಗೂಡೆಗ ಸಿಕ್ಕುದೇ ಕಷ್ಟ" ಎಂತ ಹೇಳ್ದೊ. 'ನಾವುಗೆ ಹಾಂಗೇನಿಲ್ಲೆ, ಮೊದ್ವೆ ಆಕನ ಮುಟ್ಟ ಚಾಕ್ರಿಲಿ ಇದ್ದವೆ. ಒಳ್ಳೆ ಆಸ್ತಿ ಬೋದ್ಕ್ ಇದ್ದೊವು ಸಿಕ್ಕರೆ ಚಾಕ್ರಿ ಬುಟ್ಟ್ ಹಳ್ಳಿಗೆ ಬಾಕೆ ನಮ್ಮ ಗೂಡೆಗ ರೆಡಿ ಒಳೊ.–" ಎಂತ ಬೋಜಮ್ಮನೊವು ಹೇಳ್ದೊ.

"ಹಾಂಗಾದರೆ ಒಳ್ಳೆದಾತ್. ನಿಮ್ಮ ಗೂಡೆಗಳ ಯಾರೂ ಮೊದ್ವೆ ಆವೊ. ನೋಡಿಕೂ ಪೊರ್ಲು ಒಳಲೆ"– ಚಿನ್ನಮ್ಮನೊವು ಹೇಳ್ದೊ.

"ಇಂದ್ ಎಂತಾ ಸಾಸ್ತ್ರ ಉಟ್ಟು?" – ಬೋಜಮ್ಮನೊವು ಕೇಳ್ದೊ.

"ಇಂದ್ ಗೂಡೆಗೆ ಹೈದಂಗೆ ಒಟ್ಟಿಗೆ ಕುದ್ರಿಸಿ ಅರ್ಸಿಣ ಎಂಣೆ ಸಾಸ್ತ್ರ ಮಾಡಿವೆ. ಈ ಕಡೆ ಇದರ ನೀರ್ ಮೊದ್ವೇಂತ ಕರ್ದವೆ. ನಿಮ್ಮ ಕಡೆ ಇದೆಲ್ಲಾ ಇಲ್ಲೆನೋ?" ಚಿನ್ನಮ್ಮನೊವು ಕೇಳ್ದೊ.

ನಮ್ಮ ಕಡೆನೂ ಉಟ್ಟು. ಆದರೆ ಹಂಞ ಬೇರೆ ರೀತಿಲಿ ಮಾಡಿವೆ. ಹಟ್ಟಿಂದ ಗೊಬ್ಬರ ತೆಗ್ದ್ ಮೊದ್ಮಂಜ ಮೊದೊಳಿಗೆನ ತಲೆಗೆ ಹೊರ್ಸುದು. ಅದರ ಮೊದೊಳ್ಗೆ ಗದ್ದೆಗೆ ಹಾಕುದು ಎಲ್ಲಾ ಮಾಡಿವೆ"– ಬೋಜಮ್ಮನೊವು ಹೇಳ್ದೊ.

"ಈಗ ಬೇಸಾಯ ಎಲ್ಲಿ ಉಟ್ಟು? ಹಾಂಗಾಗಿ ಅದರೆಲ್ಲಾ ಈಗ ಬುಟ್ಟೊಳೊ. ಅಲ್ಲದೆ ಈಗನ ಗೂಡೆಗ ತಲೆಲಿ ಗೊಬ್ಬರ ಹೊರಿಕೆ ಒಪ್ಪೊಕೊಲೆ?" – ನಾಗಮ್ಮನೊವು ನೆಗಾಡಿಕಂಡ್ ಹೇಳ್ದೊ.

"ಅದುನೂ ಸರಿ" ಬೋಜಮ್ಮನೊವು ಒಪ್ಪಿಕೊಂಡೊ.

ಇತ್ತ ಕಮಲಕ್ಕಂಗೆ ಬೊಳ್ಪಾದೇ ಗೊತ್ತಾತ್ಲೆ. ಒಂದು ವಾರಂದ ಕಣ್ಣ್‌ಗೆ ಸರಿ ನಿದ್ದೆ ಇಲ್ಲೆ. ನಿನ್ನೆನೇ ಇರ್ಳ್ ಮೊಲ್ಗಿಕನ ಗಂಟೆ ಒಂದಾಗುಟ್ಟು. ಅಯ್ಯಣ್ಣ ಮಾಸ್ತ್ರ ದೇವಸ್ಥಾನಂದ ಬಾಕನ ನಡಿರ್ಳ್ ಹನ್ನೆರ್ಡ್ ಕಳ್ದುಟು. ಕಮಲಕ್ಕ ಕಣ್ಣ್ ಬುಟ್ಟ್ ನೋಡಿವೆ ಪಳ್ಳಂಗೆ ಬೊಳ್ಪಾಗುಟ್ಟು, ಅವ್ಕೆ ಇದ್ ಬೊಳ್ಪುಗೆನೋ, ಹಿಂಬೊತ್ತೋ ಎಂತ ಒಂದೂ ಅರ್ತ ಅತ್ಲೆ. ಗೋಡೆಲಿದ್ದ ಗಡಿಯಾರನ ತಲೆ ಎತ್ತಿ ನೋಡಿವೆ. ಗಂಟೆ ಏಳ್ ಆಗಿತ್ತ್. ಆಗ ಅವ್ಕೆ ಗೊತ್ತಾತ್. ಇದ್ ಬೊಳ್ಪುನ ಹೊತ್ತ್ಂತೆ. ಅಯ್ಯೋ ದೇವ್ರೇ, ಮನೆಲಿ ನೆಂಟ್ರ್‌ಗ ಇರಿಕಾಕನ ನಾ ಹಿಂಗೆ ಮೈ ಮರ್ತ್ ಮೊಲ್ಗಿದೆಲೇಂತ ನೆನ್ಸಿಕಂಡ್ ಗಡಿ ಬಿಡಿಲಿ ಎದ್ದ್, ಹಾಸಿಗೆ ಕೊಡ್ಕಿ ಸರಿ ಮಾಡಿ, ನೀರೆಡಿಗೆ ಓಡಿಹೋಗಿ, ಹಲ್ಲುಜ್ಜಿ ಕೈಕಾಲ್ ಮೋರೆ ತೊಳ್ದ್ ಅಡ್ಗೆ ಕೋಣೆಗೆ ಬಂದೊ. ಅಲ್ಲಿ ಒಂದು ಹೆಡಗೆಲಿ ಅಪ್ಪದ ಹಿಟ್ಟ್ ಒಟ್ಟಿ ಇಸಿದ್ದೊ. ಸುಂದರಿ ಚಾ ಮಾಡ್ತಿತ್ತ್ ಅದ್.

"ಅವ್ವಾ, ಈಗ ಎದ್ದರಿನೋ? ನಾ ನಿಮ್ಮ ಆಗಳೇ ಎದ್ರಿಸಿಕೆ ಬಂದೆ. ನಿಮ್ಮ ಅವ್ವ, ಈಗಳೇ ಅದರ ಎದ್ರ್‌ಸ್ ಬಡ. ಅದ್ ತುಂಬಾ ದಣ್ದುಟ್ಟು. ಹಂಞ ಹೊತ್ತ್

ಮೊಲ್ಗಲೀಂತ ಹೇಳ್ದೊ. ಹಂಗಾಗಿ ನಾ ಸುಮ್ಮನಾದೆ" ಎಂತ ಹೇಳ್ತ್.

"ಅವ್ವ, ದೊಡವ ಎಲ್ಯೋಳೊ? ಕಮಲಕ್ಕ ಕೇಳ್ದೊ.

"ಅವು ಕೊಟಗೆಲಿ ಅಪ್ಪದ ಹಿಟ್ಟ್ ಹ್ಯೊದವೆ. ನೀವು ಏನ್ ಮಾಡ್ಬೋಡಿ. ನಾ ಎಲ್ಲಾ ನೋಡಿಕಣೆ. ಕರ್ ಬುಟ್ಟ್ ಆತ್. ಇನ್ನ್ ಹಾಲ್ನ ಕಾಸುದು ಮಾತ್ರ ಬಾಕಿ." – ಎಂತ ಸುಂದರಿ ಹೇಳ್ತ್.

ಕಮಲಕ್ಕ ಕೊಟಗೆನ ಅಡ್ಗೆ ಕೋಣೆಗೆ ಹೋಕನ ಅಲ್ಲಿ ಚಿನ್ನಮ್ಮ ದೊಡವ, ನಾಗಮ್ಮ ಅವ್ವ, ಬೋಜಮ್ಮನೊವು ಪಟ್ಟಾಂಗ ಹೊಡ್ಯತಿದ್ದೊ. ಒಲೆಲಿ ಹಿಟ್ಟ್ ಬೇಯತಿತ್ತ್. ಯಾಮಿನಿ, ದಾಮಿನಿ ಅವು ಮಾತಾಡ್ದರ ಕೇಳಿಕಂಡ್ ಕುದ್ದೊಳೊ. ನಾಗಮ್ಮನೊವು ಕಮಲಕ್ಕನ ನೋಡಿ,

"ಈಗ ಬಂದನಾ ಮಗ, ಒಳ್ಳೆದಾತ್. ನಿಂಗೆ ಒಂದ್ ವಾರಂದ ನಿದ್ದೆ ಇಲ್ಲೇಂತ, ನಿನ್ನ ಎದ್ರು ಸುದು ಬೇಡಾಂತ ಸುಂದರಿಗೆ ಹೇಳಿದ್ದೆ. ಇಂದಾ, ನೀ ಈ ಹಿಟ್ಟ್‌ನ ಕುಕ್ಕೆನ ತಕಂಡೋಗು. ಇನ್ನ ಹಂಞ ಉಟ್ಟು, ಅದರ ಹ್ಯೊದ್ ನಾವು ತಂದವೆ. ನೀ ಬೇಗ ಬೊಳ್ಪುನ ಚಾಯಕ್ಕೆ ರೆಡಿ ಮಾಡ್. ಹತ್ತ್ ಗಂಟೆಗೆಲ್ಲಾ ನೀರ್ ಮೊದ್ವೆ ಸಾಸ್ತ್ರ ಸುರು ಮಾಡೊಕು."– ಎಂತ ಹೇಳ್ದೊ. ಕಮಲಕ್ಕ ನೆಂಟ್ರ ವಿಚಾರ್ಸಿಕಂಡ್.

"ನೀರೆಡಿಲಿ ನೀರ್ ಕಾದುಟ್ಟು, ನೀವು ಹೋಗಿ ಮಿದ್ ಹೊಸ ಅರ್ವೆ ಹಾಕಿ ಬನ್ನಿ. ಬೇಗ ಬೊಳ್ಪುನ ಚಾಯದ ಸಡ್ಗರ ಮುಗ್ದರೆ, ಮುಂದೆನ ಕಾರ್ಯಕ್ಕೆ ಸುಲಭ ಆದೆ." ಎಂತ ಹೇಳಿ, ಹಿಟ್ಟ್‌ನ ಕುಕ್ಕೆನ ತಕಂಡ್, ಮನೆ ಒಳಗೆ ಹೋದೊ.

ಹಿಂದೆನ ದಿನವೇ ಅಯ್ಯಣ್ಣ ಮಾಸ್ಟ್ರ ಕುಂಞಣ್ಣ ನೊಟ್ಟಿಗೆ ಹೇಳಿ, ನಾಕ್ ಕೆ.ಜಿ. ಕೋಳಿ ಮಾಸನ ಫಾರಂದ ತರ್ಸಿ ಇಸಿದ್ದೊ. ಅದರ ಇರ್ಕ್ ಗೈಪು ಮಾಡಿಸಿ ಕಮಲಕ್ಕ ಮೊಲ್ಗಿದ್ದೊ. ಒಬ್ಬೊಬ್ಬನೇ ಚಾಯ ಕುಡ್ಯಕೆ ಊಟದ ಕೋಣೆಗೆ ಬಂದೊ. ಎಲ್ಲೋವು ಕೋಳಿ ಗೈಪುಲಿ ಅಪ್ಪದ ಹಿಟ್ಟ್‌ನ ತಿಂಬಕೆ ಕೊಟ್ಟ್ ಚಾಯ ಕೊಟ್ಟೊ.

ಅಸ್ಟಾಕನ ಕಡಬಂದ ವಸಂತಿ ಅಕ್ಕ, ಅವರೊಟ್ಟಿಗೆ ಅವರ ಸೊಸೆ, ಮಗಳ ಕರ್ಕಂಡ್ ಬಂದೊ. ಅವರ ನೋಡಿ ಕಮಲಕ್ಕ,

ಒಳ್ಳೆದಾತ್ ಅತ್ತಿಗೆ, ನೀವು ಬೇಗ ಬಂದದ್. ಸಾಸ್ತ್ರ ಮಾಡಿಕೆ ಸುರು ಮಾಡಿಕನ ಎಸ್ಟ್ ಜನ ಇದ್ದರೂ ಸಾಕಾದ್ಲೆ. ನೀವು ಕುದ್ರಿನಿ.ಚಾಯ ಕುಡ್ಯೆನಿ" ಎಂತ ಹೇಳಿ ಅವ್ಕನೂ ಚಾಯ ಹಿಟ್ಟ್ ಗೈಪು ಇಕ್ಕಿದೊ.

ರೇಶ್ಮಾ ಬೊಳ್ಪುಗೆ ಕಣ್ಣ ಬುಟ್ಟ್ ನೋಡಿಕನ ಕೋಣೆಲಿ ಯಾರೂ ಇತ್ಲೆ. ಅತ್ತೆನೂ, ಅತ್ತಿಗೆಕಳೂ ಆಗಳೇ ಎದ್ದ್ ಹೋಗಿರೊಕೂಂತ ನೆನ್ಸಿಕಂಡ್, ಕಣ್ಣ್ ಮುಚ್ಚಿತ್. ಹಂಞ ಹೊತ್ತ್‌ಲಿ ಯಾರೋ ಅದರ ಹಕ್ಕಲೆ ನಿತ್ತ ಹಾಂಗೆ ಆತ್. ಕಣ್ಣ್ ಬುಟ್ಟ್ ನೋಡಿದೆ. ಸುರೇಶ ಮೆಲ್ಲಂಗೆ ಕೊತ್ತಿ ಹೆಜ್ಜೆಲಿ ಬಂದ್ ಅದರ ಹಾಸಿಗೆ ಹಕ್ಕಲೆ ನಿತ್ತ್

ಅದರನೇ ನೋಡ್ತಿತ್ತ್. ರೇಶ್ಮ ಗಡಿಬಿಡಿಲಿ ಎದ್ದ್ ಕುದ್ದ್.

"ನೀವು ಎಸ್ಟೊತ್ತಿಗೆ ಬಂದರಿ? ಯಾರಾದರ್ ನೋಡ್ರೆ ತಮಾಸೆ ಮಾಡ್ವೊ" ಎಂತ ಹೇಳ್ತ್.

"ಯಾಕೆ ತಮಾಸೆ ಮಾಡ್ದು? ಹೆಣ್ಣ್‌ನ ಹಕ್ಕಲೆ ಗಂಡ ಬಾಕೆ ಆಗದೋ?" ಎಂತ ನೆಗಾಡಿಕಂಡ್ ಕೇಳ್ದ.

"ಅದ್ಕೆ ಹೊತ್ತು ಗೊತ್ತು ಇಲ್ಲೆನೋ? ಇನ್ನೂ ಏನೇನೋ ಸಾಸ್ತ್ರಗ ಒಳೊಗಡ. ಅವೆಲ್ಲಾ ಮುಗ್ಯಲಿ. ಆಗ ನಮ್ಮ ಕೇಳೋವು ಯಾರೂ ಇರಿಕಿಲ್ಲೆ." ಎಂತ ರೇಶ್ಮ ಹೇಳ್ತ್.

"ಅಬ್ಬಾ ನಿಂಗೂ ಮಾತಾಡಿಕೆ ಬಂದದೆ. ಅಲ್ಲ ನೆನ್ನೆಂದ ಒಂದೂ ಮಾತ್ನ ನನ್ನೊಟ್ಟಿಗೆ ಮಾತಾಡ್‌ತ್ಲೆ. ನನ್ನ ಕಡೆ ತಿರ್ಗಿನೂ ನೋಡ್‌ತಿತ್ಲೆ." ಸುರೇಶ ಹೇಳ್ತ್.

"ಅಸ್ಟ್ ಜನರ ಎದ್‌ರ್ ಎನ್ ಮಾತಾಡ್ದು? ಮತ್ತೆ ನನ್ನ ಎಲ್ಲೋವೂ ಗಂಡ್ ಬೀರೀಂತ ಕರೇವೊ ಅವ್ವ ಮುಂದೆನೇ ನಂಗೆ ಹೇಳ್ವೊಳೊ. ಮೊದೊಳ್ಗೆ ಗೂಡೆ ಗಂಭೀರಲಿ ಇರೊಕು. ಹೆಚ್ಚ್ ಮಾತಾಡಿಕೆ ಆಗದ್‌ಂತ" ರೇಶ್ಮ ಹೇಳ್ತ್.

"ಹಾಂಗೋ ಸರಿ ಬುಡು. ನಾ ಯಾಗ ನೀ ನನ್ನ ನೋಡಿಯಾಂತ ಕಾದ್ ಕಂಡಿದ್ದೆ" – ಸುರೇಶ ಹೇಳ್ತ್.

ಅಸ್ಟಾಕನ ಸುರೇಶ್‌ನ ಜಯಂತಿ ಅತ್ತೆ ಒಂದ್ ಹಳೇ ಬೆಳ್ದ್ ಸೀರೆನ ಕೈಲಿ ಹಿಡ್ಕಂಡ್ ಅಲ್ಲಿಗೆ ಬಂದೊ. "ನೀ ಇಲ್ಲಿ ಒಳನಾ? ಅಲ್ಲಿ ನಿನ್ನ ಹುಡ್ಕುವೆ ಹೋಗು. ಸಾಸ್ತ್ರಕ್ಕೆ ಸಿದ್ಧ ಆಗ್. "ಎಂತ ಸುರೇಶಂಗೆ ಹೇಳಿ ಅಂವನ ಹೊರಗೆ ಕಳ್ಸಿದೊ. ಅತ್ತೆನ ನೋಡಿ, ಅಂವ ಸಿಕ್ಕಿ ಬಿದ್ದಂವನಾಂಗೆ ಪೆಚ್ಚ್ ಮೋರೆ ಹಾಕಂಡ್ ಅಲ್ಲಿಂದ ಹೊರ್ಟ್ ಹೋತ್.

"ಇಂದ ರೇಶ್ಮ ನೀ ಈ ಸೀರೆನ ಉಟ್ಟ್‌ಕ. ಅರ್ಸಿಣ ಎಂಣೆಗೆ ಈ ಸೀರೆ ಸಾಕ್. ಇನ್ನ್ ಅದರ ಮೊಡ್ಯೋಳ್ತಿ ತಕಂಡೋದು. ನೀ ಬೇಗ ಮೋರೆ ತೊಳ್ದ್ ಚಾಯ ಕುಡ್ದ್, ಇದರ ಉಟ್ಟ್‌ಕಂಡ್ ರೆಡಿ ಆಗ್ ಬಲಾ" ಎಂತ ಹೇಳಿ ಅದರ ಕೈಲಿ ಆ ಸೀರೆನ ಇಸಿ ಹೋದೊ. ರೇಶ್ಮೆ ಗಡಿ ಬಿಡಿಂದ ಆ ಸೀರೆ ತಕಂಡ್ ಹಾಸಿಗೆ ಮೇಲೆ ಇಸಿ, ಸೂಟ್‌ಕೇಸ್‌ಂದ ಬ್ರೆಷ್, ಪೇಸ್ಟ್, ಸಾಬಾನ್ ಪೆಟ್ಟಿಗೆ, ಬೈರಾಸ್ ತಕಂಡ್ ಹೊರ್ಡಿಕಾಕನ ಅಲ್ಲಿಗೆ ಭಾರತಿ ಬಂದ್,

"ಅತ್ತಿಗೆ ಬೇಗ ಮೋರೆ ತೊಳ್ಕಂಡ್ ಚಾಯ ಕುಡ್ಯಕೆ ಬರಕಡ. ಹತ್ತ್ ಗಂಟೆಗೆ ಸಾಸ್ತ್ರ ಸುರು ಮಾಡ್ವೆಗಡ" ಎಂತ ಹೇಳಿ ರೇಶ್ಮನ ನೀರೆಡಿಕೊಟಗೆಗೆ ಕರ್ಕಂಡ್ ಹೋತ್.

ಹತ್ತ್ ಗಂಟೆಗೆಲ್ಲಾ ಅಕ್ಕ ಪಕ್ಕದೊವು, ನೆಂಟ್ರ್‌ಗ ಬಂದ್ ಸೇರ್ದೊ. ಮೊದ್ಮಂಜ,

ಮೊದೊಳಿಗೆನ ಮೇಲ್ಕಟ್ಟ್ ಅಡಿಲಿ ಎಂಣೆ ಅರ್ಸಿಣಕ್ಕೆ ಕುದ್ರಿಸಿದೊ. ಸುರುಗೆ ಐದ್ ಜನ ಮುತ್ತೈದೆಗ ಇಬ್ಬೊರಿಗೂ ಎಂಣೆ ಅರ್ಸಿಣ ಸಾಸ್ತ್ರ ಮಾಡ್ದೊ. ಅಕೆರಿಗೆ ಮೊದ್ಮಂಜ ಮೊದೊಳಿಗೆನ ಕೆನ್ನೆಗೆ ಅರ್ಸಿಣ ಎಂಣೆ ಹಚ್ಚಿತ್. ಮೊದೋಳ್ಗೆ ಗೂಡೆನ ಕೈಲಿ ಮೊದ್ಮಂಜಂಗೆ ಅರ್ಸಿಣ ಎಂಣೆ ಹಚ್ಚಿಸಿದೊ. ಅವರಿಬ್ಬರ ಮಿಂಯಕೆ ಕಳ್ಸಿದೊ. ಸುರುಗೆ ಮೊದ್ಮಂಜ ಮಿಂದ್ ಬಾತ್. ಅಂವಂಗೆ ಹೊಸ ವೇಸ್ಟಿ ಬಡ್ಸಿ. ಉದ್ದಕೈನ ಬಿಳಿ ಅಂಗಿ ಹಾಕಿ ತಲೆಗೆ ರುಮಾಲ್ ಕಟ್ಟಿದೊ. ಮುಂಡಕ್ಕೆ ಗಂಧ– ಕುಂಕುಮದ ಬೊಟ್ಟು ಇಸಿದೊ. ಆ ಮೇಲೆ ಮೊದೊಳ್ಗೆ ಗೂಡೆ ಮಿಂದ್ ಬಾತ್. ಅದ್ಕೆ ಸುಧ, ಮಾಲಿನಿ ಕೂಡಿಕಂಡ್ ಒಂದು ರೇಶ್ಮೆ ಸೀರೆನ ಉಡ್ಸಿಕೆ, ಸುರು ಮಾಡ್ದೊ. ಆಗ ಚಿನ್ನಮ್ಮತ್ತೆ,

"ಸೆರ್‌ಂಗ್‌ನ ಉದ್ದಕ್ಕೆ ಬುಡು. ಅದರ ಸುಂಪೆ ಮಾಡಿ ತಲೆಗಿಸೊಕು, ನೀರ್‌ನ ಕಂದಲ್ ಹೊರಿಕೆ" ಎಂತ ಹೇಳ್ದೊ. ಸುಧ ಸೆರ್‌ಂಗ್‌ನ ಸೊಂಟಂದ ಕೆಳಗೆ ಮುಟ್ಟ ಇಳ್ಸಿ.

"ಇಸ್ಟ್ ಸಾಕೋ ಉಗ್ಗವ" ಎಂತ ಕೇಳ್ತ್. ಚಿನ್ನಮ್ಮನೊವು.

"ಇನ್ನ್ ಹಂಞ ಕೆಳಗೆ ಇಳ್ಸ್. ನೆಲಕ್ಕೆ ಮುಟ್ಟು ವಾಂಗೆ" ಎಂತ ಹೇಳ್ದೊ. ಅವು ಹೇಳ್ದಾಂಗೆ ಸೇರ್‌ಂಗ್‌ನ ಇಳ್ಸಿ ಸೀರೆ ಉಡ್ಸಿದೊ. ಆ ಸೀರೆನ ಸೆರಂಗ್‌ನ ಸುಂಪೆ ಮಾಡಿ ತಲೆ ಮೇಲೆ ಇಸಿ ಮೊದೋಳ್ಗೆನ ಬಾಮಿ ಹಕ್ಕಲೆ ಕರ್ಕಂಡೋದೊ. ಮೊದ್ಮಂಜ ನೀರ್ ಎಳ್ದ್ ನೀರ್‌ನ ಕೊಡ್ಪಾಣನ ಮೊದೊಳಿಗೆನ ತಲೆ ಮೇಲೆ ಇಸಿತ್. ಅವರಿಬ್ಬರ ಉಳ್ದೋವು ಕರ್ಕಂಡ್ ಚಪ್ಪರದ ಮುಖ್ಯ ಬಾಕಿಲ್‌ಗೆ ಬಾಕನ ಮುತ್ತೈದೆಗ ಆರತಿ ಎತ್ತಿದೊ. ಗಿರಿಧರ, ಶಶಿಧರ ಮೊದ್ಮಂಜನೊಟ್ಟಿಗೆ ಹೆಣ್ಣ್‌ನ ಹೆಸ್ರ್ ಹೇಳಿಕೆ ಹೇಳ್ದೊ. ಸುರೇಶ ಕುಸಿಲಿ "ರೇಶ್ಮಾ"ಂತ ಹೇಳ್ತ್. ಸುಧಾ, ಮಾಲಿನಿ, ಭಾರತಿ ಗೂಡೆಗ ಮೊದೋಳ್ಗೆನೊಟ್ಟಿಗೆ ಗಂಡನ ಹೆಸ್ರ್ ಹೇಳಿಕೆ ಹೇಳ್ದೊ.

ರೇಶ್ಮಾ ನಾಚಿಕೆಂದ ಮೆಲ್ಲಂಗೆ ಗಂಡನ ಹೆಸ್ರ್ ಹೇಳ್ತ್. ಅಲ್ಲಿದ್ದೊವೆಲ್ಲಾ, "ನಾವ್ಗೆ ಕೇಳ್ತ್‌ಲ್ಲೆ, ನಾವ್ಗೆ ಕೇಳ್ತ್‌ಲ್ಲೆ. ಗಟ್ಟಿ ಹೇಳ್‌ಂತ ಒತ್ತಾಯ ಮಾಡ್ದೊ. ಆಗ ಅದ್ ಹಂಞ ಗಟ್ಟಿಲಿ 'ಸುರೇಶ' ಂತ ಹೇಳ್ತ್. ಎಲ್ಲೋವು ನೆಗಾಡಿಕಂಡ್ ಅವರ ನೊಡು ಒಳಗೆ ಕರ್ಕಂಡ್ ಬಂದ್ ಹಸೆ ಹಕ್ಕಲೆ ಸುಂಪೆ ಮೇಲೆ ಇಸಿದ ಪ್ಯಾಸದ ಮಡ್ಕೆಗೆ ನೀರ್‌ನ ಹ್ಯೊಯ್ಯಕೆ ಹೇಳ್ದೊ. ಅದ್ ನೀರ್ ಹೊಯ್ದ್ ದೀಪಕ್ಕೆ ಅಕ್ಕಿ ಹಾಕಿ ಕೈ ಮುಗ್ದ್ ಆ ನೀರ್ನ ಮೊದ್ ಮಗಳ್ ಅಡ್ಗೆ ಕೋಣೆಗೆ ತಕಂಡೋಗಿ, ಒಲೆ ಮೇಲೆ ಇಸಿ, ಅದ್ಕೆ ಐದ್ ಕೊಂಡೆ ಬೆಳ್ತಕ್ಕಿ ತೊಳ್ದ್ ಹಾಕಿಕೆ ಮುತ್ತೈದೆಗ ಹೇಳ್ದೊ. ರೇಶ್ಮ ಅವು ಹೇಳ್ದಾಂಗೆ ಮಾಡ್ತ್.

"ಒಳ್ದ ಕೆಲ್ಸನ ನೀವು ಗೂಡೆಗ ಮಾಡಿ. ಈಗ ಮೊದು ಮಕ್ಕಳ ಓಕುಳಿ

ಆಡಿಕೆ ಮೇಲ್ಕಟ್ಟ್ ಅಡಿಗೆ ನಾವು ಕರ್ಕೊಂಡೋದವೆ" ಎಂತ ಚಿನ್ನಮ್ಮನೊವು ಹೇಳಿ ಪ್ಯಾಸ ಮಾಡಿಕೆ ಅಲ್ಲಿ ಎರ್ಡ್ ಗೂಡೆಗಳ ನಿಲ್ಸಿ ಉಳ್ದ ಹೆಣ್ಮಕ್ಕಳ ಮೇಲ್ಕಟ್ ಅಡಿಗೆ ಕರ್ಕಂಡ್ ಬಂದೊ.

ಮೇಲ್ಕಟ್ಟ್ ಅಡಿಲಿ ಇಸಿದ ಕಡಾಯಿಲಿ ಕುರ್ದಿ ನೀರ್ ತುಂಬಿಸಿ ಇಸಿದ್ದೊ. ಮೊದು ಮಕ್ಕಳ ಕಡಾಯಿನ ಎದ್ರ್ ಬದ್ರ್ ಮೂಡು– ಪಡು ಮೋರೆ ಹಾಕಿಕುದ್ರಿಸಿ ಒಬ್ಬರ ಮೇಲೆ ಒಬ್ಬ ಕುರ್ದನೀರ್ ಚೇಂಪಿಕೆ ಹೇಳ್ದೊ. ಆ ಸಾಸ್ತ್ರ ಆದ ಮೇಲೆ, ಒಂದು ಚಿನ್ನದ ಉಂಗಿಲನ ಕಡಾಯಿ ಒಳಗೆ ಹಾಕಿ ಮೊದು ಮಕ್ಕ ಇಬ್ಬೊರು ಕಡಾಯಿಲಿದ್ದ ಉಂಗಿಲನ ಹುಡ್ಕಿಕೆ ಹೇಳ್ದೊ. ಇಬ್ಬೊರು ಒಟ್ಟಿಗೆ ಕೈಹಾಕಿ ಉಂಗಿಲನ ಹುಡ್ಕಿಕಾಕನ ಉಂಗಿಲ ರೇಶ್ಮನ ಕೈಗೆ ಸಿಕ್ಕಿತ್. ಅದ್ ಕೈಲಿ ಹಿಡ್ದ ಉಂಗಿಲನ ಎತ್ತಿ ತೋರ್ಸಿತ್. ಎಲ್ಲೋವು ಕೈ ಬೊಟ್ಟಿದೊ. ಸುರೇಶ ಸೋತತ್. ಇನ್ನ್ ಅಂವ ಹೆಣ್ಣ್ ಹೇಳ್ದಾಂಗೆ ಕೇಳೊಕೂಂತ ತಮಾಸೆ ಮಾಡ್ದೊ.

ಇತ್ತ ಅಡ್ಗೆ ಕೋಣೆಲಿ ಗೂಡೆಗ ಪ್ಯಾಸ ಮಾಡಿ ಮುಗ್ಸಿದೊ. ಮೇಲ್ಕಟ್ ಅಡಿಲಿ ಮೊಂದ್ರಿ ಹಾಕಿ, ಮೊದು ಮಕ್ಕಳ ಕುದ್ರಿಸಿ, ಅವರ ಅತ್ತ ಇತ್ತ ಅಡುಳಿ ಅಶೋಕ ಮೊದ್ಮಂಜನ ಪಕ್ಕಲಿನೂ, ಕಂಚಿಮೆ ಹಿಡ್ದ ಭಾರತಿ ಮೊದೊಳ್ಗಿ ಪಕ್ಕಲಿನೂ, ಭಾರತಿ ಹಕ್ಕಲೆ ಕುರುಂಟು ಯಾಮಿನಿನನೂ ಕುದ್ರಿಸಿದೊ. ಮೊದೊಳ್ಗೆನ ಎದ್ರಿಸಿ ಅದರ ಕೈಲಿ ಎಲ್ಲೋವ್ಕ ಬಾಳೆಲೆ ಹಾಕಿಸಿ, ಅದ್ಕೆ ನೀರ್ ಹಾಕ್ಸಿದೊ. ಎಲ್ಲೋವೂ ಬಾಳೆಲೆನ ನೀರ್‌ಲಿ ಪೂಜಿದ ಮೇಲೆ, ಮೊಡೋಳ್ಗಿ ಗೂಡೆನ ಕೈಲಿ ಸುರುಗೆ ಪ್ಯಾಸನ ಇಕ್ಕಿಸಿದೊ. ಆ ಮೇಲೆ ಒಳ್ದಅಡ್ಗೆನ ಇಕ್ಕಿಸಿದೊ. ಮೊದೊಳ್ಗಿ ಗೂಡೆನ ಕುದ್ರಿಸಿ ಅದರ ಬಾಯಿಗೆ ಪ್ಯಾಸ ತಿನ್ಸಿಕೆ ಸುರೇಶಂಗೆ ನಾಗಮ್ಮನೊವು ಹೇಳ್ದೊ. ಅಂವ ಹೆಣ್ಣ್‌ಗೆ ಪ್ಯಾಸ ತಿನ್ಸಿತ್. ಅದಾದ ಮೇಲೆ ಗೂಡೆನ ಕೈಯಿಂದ ಗಂಡಂಗೆ ಪ್ಯಾಸ ತಿನ್ಸಿಕೆ ಹೇಳ್ದೊ. ಈ ಸಾಸ್ತ್ರ ಆದ ಮೇಲೆ ಮೇಲ್ಕಟ್ ಅಡಿಲಿ ಕುದ್ದೊವು ಉಂಬಕೆ ಸುರು ಮಾಡ್ದೊ. ಒಳ್ದವ್ಕೂ ಚಪ್ಪರದಡಿಲಿ ಊಟಕೊಟ್ಟೊ, ಅಂತೂ ಇಂತೂ ಪಂಡ್‌ಲಿ ನೀರ್ ಮೊದ್ವೆಂತೇಳ್ವ ನಾಗೋಲಿ ಸಾಸ್ತ್ರ ಮುಗ್ತ್. ಚಾಮಯ್ಯ ಮಾಸ್ತ್ರಿಗೂ, ಕಮಲಕ್ಕಂಗೂ ಈ ಸಾಸ್ತ್ರನೆಲ್ಲಾ ನೋಡಿ ಬಾಳ ಕುಸಿ ಆತ್.

* * * * *

17. "ಗಿರಿಧರ ನೆಂಟ್ರ್‌ಗಳ ಕರ್ಕಂಡ್ ಸುಬ್ರಹ್ಮಣ್ಯಕ್ಕೆ ಹೋತ್"

ನಾಗೋಲಿ ಸಾಸ್ತ್ರ ಮುಗ್ದ್ ಊಟ ಆದ ಮೇಲೆ ಎಲ್ಲೋವೂ ಒಂದ್ ನಿದ್ದೆ ತೆಗ್ದ್ ಎದ್ದೊ. ಹಿಂಬೊತ್ತು ಬೋಜಮ್ಮ ನೊವು ನಾಗಮ್ಮನವರೊಟ್ಟಿಗೆ,

"ಇಲ್ಲಿಂದ ಸುಬ್ರಮಣ್ಯ ದೇವಸ್ಥಾನಕ್ಕೆ ಹಕ್ಕಲೆ ಗಡ. ಒಮ್ಮೆ ಹೋಗಿ ಬಂದರಾಗ್ತಿತ್:- ಎಂತ ಹೇಳ್ದೊ.

" ಅದಕ್ಕೇನ್? ವಾರಿಜನ ಮಕ್ಕ ಶಶಿಧರ, ಗಿರಿಧರ ಒಳೊ. ಅವು ಕರ್ಕಂಡೋವೊ. ನಾ ಹೇಳ್ನೆ, ನೀವು ದೇವಸ್ತಾನ ನೋಡಿ ಬನ್ನಿ"- ನಾಗಮ್ಮನೊವು ಹೇಳ್ದೊ.

"ನೀವೂ ಬನ್ನಿ ನಾಗಮ್ಮಕ್ಕ. ಚಿನ್ನಮ್ಮಕ್ಕನನೂ ಕರ್ರೆನಿ" – ಬೋಜಮ್ಮ ನೊವು ಹೇಳ್ದೊ.

ನಾಗಮ್ಮನೊವು ಈ ವಿಸಯನ ಚಿನ್ನಮ್ಮನವರೊಟ್ಟಿಗೆ ಹೇಳಿಕಾಕನ, ಅವು,

'ನಾ ಬಾದ್ಲೆ. ನಂಗೆ ಈಗ ತಿರ್ಗುನ ಪ್ರಾಯನೋ? ನೀವು ಹೋಗಿ ಬನ್ನಿ" ಎಂತ ಹೇಳ್ದೊ.

ಯಾಮಿನಿ, ದಾಮಿನಿ, ಗೂಡೆಗ ಸುಧಾ, ಮಾಲಿನಿ, ಭಾರತಿಗೆ ಆಗಳೇ ಒಳ್ಳೆ ಜೋಸ್ತಿಗ ಆಗಿದ್ದೊ. ಅವ್ಕೆಲ್ಲಾ ಹೊರಗೆ ಹೋದೂಂತ ಕುಸಿ ಆತ್. ವಿಸಯ ಚಾಮಯ್ಯ ಮಾಸ್ಟ್ರ

ಕೆಬಿಗೆ ಬೀತ್. ನೆಂಟ್ರ ಇಸ್ಟಕ್ಕೆ ವಿರೋದ ಹೋಕೆ ಆದೆನೋ? ಅವು ಗಿರಿಧರನೊಟ್ಟಿಗೆ ಜೀಪುಲಿ ಅವರೆಲ್ಲರ್ರೂ ದೇವಸ್ತಾನಕ್ಕೆ ಕರ್ಕಂಡೋಗಿ ಸಾಬೀತ್‌ಲಿ ಕರ್ಕಂಡ್ ಬಾಕೆ ಹೇಳ್ದೊ. ಎಲ್ಲೋವೂ ಕುಸುಲಿ ಹೊರ್ಟೊ. ನಾಗಮ್ಮನೊವು ಬೋಜಮ್ಮ ನೊವು ಮುಂದೆ ಕುದ್ದೊ. ಉಳ್ದೋವೆಲ್ಲಾ ಹಿಂದೆ ಹತ್ತಿದೊ. ಶಶಿಧರ ಹಿಂದೆ ಕುದ್ದತ್ತ್. ಈಗ ಗಿರಿಧರ, ಶಶಿಧರನೊಟ್ಟಿಗೆ ಯಾಮಿನಿ, ದಾಮಿನಿಗೆ ಮಾತಾಡಿ ಸಲಿಗೆ ಬೆಳ್ದಿತ್ತ್. ಅವೆಲ್ಲಾ ಈಗ ಮೈಚಳಿ ಬುಟ್ಟ್ ಹರ್ಟಿಕಂಡ್ ದೇವಸ್ತಾನ ಮುಟ್ಟಿದೊ. ದೇವರ ದರ್ಶನ ಪಡ್ದ್ ಪ್ರಸಾದ ತಕಂಡ್ ದೇವಸ್ತಾನ ಎಲ್ಲಾ ಸುತ್ತಿದೊ. ನೆಂಟ್ರ್‌ಗ ಆದಿ ಸುಬ್ರಮಣ್ಯ, ತೀರ್ಥ ಸ್ನಾನ ಮಾಡುವ ಜಾಗೆ, ಬಿಲದ್ವಾರ, ಕಾಶಿಕಟ್ಟೆ ಎಲ್ಲಾ ನೋಡಿ ಕುಸಿಪಟ್ಟೊ. ಗಿರಿಧರ, ಶಶಿಧರ, ಅವರ್ನೆಲ್ಲಾ ಹೋಟ್ಲ್‌ಗೆ ಕರ್‍ಕೊಂಡೋಗಿ ಕಾಪಿ ಕುಡ್ಸಿದೊ. ಅವು ಸುಬ್ರಹ್ಮಣ್ಯಂದ ಪಂಬೆತ್ತಾಡಿಗೆ ಮುಟ್ಟಿಕಾಕನ ಗಂಟೆ ಏಳ್ ಆಗಿತ್ತ್.

ಅಯ್ಯಣ್ಣ ಮಾಸ್ಟ್ರ ಕಮಲಕ್ಕನೊಟ್ಟಿಗೆ. "ನಾಳೆ ಬೇಗ ಚಾಯದ ಅಟ್ಟಣೆ ಮುಗ್ಸಿ, ತುಪ್ಪದೊವು ಹೊರ್ಡೋಕು, ಅಡಿ ಕುರುಂಟುಗೆ ಉಡ್ಗೊರೆ ಕೊಡ್ದರ ಮರಿಬಡ"– ಎಂತ ಹೇಳ್ದೊ.

"ನಂಗೆ ಅಸ್ಟೂ ಗೊತ್ತಿಲ್ಲೆನೋ? ಅಡಿಕುರುಂಟು ಗೂಡೆಗೆ ಒಬ್ಬಂಗೇ ಹೇಂಗೆ ಕೊಡ್ದು? ನಾ ಬೋಜಮ್ಮನೊವ್ಕೂ, ದಾಮಿನಿಗೂ ಒಂದೊಂದು ಸೀರೆನ ಉಡ್ಗೊರೆ ಕೊಡೊಕೂಂತ ಒಳೆ."– ಕಮಲಕ್ಕ ಹೇಳ್ದೊ. " ಅದೆಲ್ಲಾ ನಿಂಗೆ ಬುಟ್ಟದ್. ನಿಂಗೆ ಹೇಂಗೆ ಬೇಕೋ ಹಾಂಗೆ ಮಾಡ್. " ಅಚ್ಯುಣ್ಣ ಮಾಸ್ಟ್ರ ಹೇಳ್ದೊ. ಇರ್‍ಳ್ ಎಲ್ಲೋವ್ಕೂ ನೆಂಟ್ರ ಹೆಸ್ರೇಳಿ ಕೋಳಿ ಗೈಪು ನೀರ್ ದೋಸೆನ ಸಮ್ಮಾನ ಆತ್. ಕಮಲಕ್ಕ ಮೊರ್ದಿನಕ್ಕೆ ಇಡ್ಲಿಗೆ ಕಡ್ಡ್ ಇಸಿದೊ.

* * * * *

18. "ತುಪ್ಪದ ಸಾಸ್ತ್ರ"

ಬುಧವಾರ ಬೊಳ್ಪುಗೆ ಎಲ್ಲೋವೂ ಬೇಗನೆ ಎದ್ದ್ ಚಾಯದ ಅಟ್ಟಣೆ ಮುಗ್ಸಿ, ಮಿಂದ್ ದೇವ್ರ ಕೋಣೆಲಿ ದೀಪ ಹೋಸಿ, ಕೈ ಮುಗ್ದ್ ಹೊರ್‍ಟ್ವೊ. ಮೊದೊಳಿಗೆನ ಕೈಲಿ ತುಪ್ಪ ತುಂಬಿದ ಚೊಂಬು, ಎರ್‍ಡ್ ಚೋಲಿ ತೆಗ್ಯದ ಒಣ್ಗಿದ ಕಾಯೆನ ಒಗ್ಗಿ ಹಾಕಿ ಕಟ್ಟಿ ಹಿಡ್ಯಕೆ ಕೊಟ್ವೊ. ಅಡಿ ಕುರುಂಟು ಯಾಮಿನಿನ ಒಟ್ಟಿಗೆ, ಬೋಜಮ್ಮನವರನೂ, ದಾಮಿನಿನನೂ ಕುದ್ರಿಸಿ, ಐದೆಲೆ, ಒಂದಡ್ಕೆ ಇಸಿ ಮೂರು ಜನಕ್ಕೊ ಒಂದೊಂದು ರೇಶ್ಮೆ ಸೀರೆನ ಉಡ್ಲೊಗ್ರೆ ಕೊಟ್ವೊ. ಅವು ಕೈ ಮುಗ್ದ್ ಅದರ ತಕಂಡ್, ಹಿರ್‍ಯರ ಕಾಲ್ ಹಿಡ್ದ್ ಹೊರ್‍ಟ್ವೊ.

ಒಂದು ಕಾರ್, ಒಂದು ಜೀಪುಲಿ ಊರ ಗೌಡ್ರು, ಮೊದು ಮಕ್ಕ, ಅಡುಳಿ,ಕಂಚಿಮೆ, ಚಿನ್ನಮ್ಮನೊವು ಸುಧಾ, ಮಾಲಿನಿನನೂ ಹೊರ್‍ಡಿಸಿದೊ. ಅವೆಲ್ಲ ಗೂಡೆನ ಮನೆ ನೋಡ್ತಿಲ್ಲೆ. ಹಂಗಾಗಿ ಅವೆಲ್ಲಾ ಕುಸಿಂದ ಹೊರ್‍ಟ್ವೊ.

ಮುರ್‍ನಾಡ್‌ಲಿ ತುಪ್ಪ ತಕಂಡ್ ಬಾವುದರನೇ ಕಾದ್ ಕಂಡ್, ಸೆಂಟ್ರ್‌ಗ ನಿತ್ತಿದ್ದೊ. ಮೊದುಮಕ್ಕಳ ಕುರ್ದಿ ನೀರ್ ಆರತಿ ಮಾಡಿ. ಒಳಗೆ ಕರ್‍ಕೊಂಡೋಗಿ ಹಸೆ ಮಣೆಲಿ ಕುದ್ರಿಸಿದೊ. ಮೊದು ಮಗಳ ಕೈಲಿದ್ದ ತುಪ್ಪದ ಚೊಂಬು, ಜೋಡು ಕಾಯೆನ ಹಸೆ ಮೊಂದ್ರಿನ ಬಲ್ದ ಪುಡೆಲಿ ಇಸಿದ

ಮಣೆ ಮೇಲೆ ಇಸಿದೊ. ಮೊದು ಮಕ್ಕಳಿಗೆ ಹಾಲ್ತುಪ್ಪ ಕುಡ್ಸಿದ ಮೇಲೆ, ರೇಶ್ಮನ ಅವ್ವ ಮೊದು ಮಕ್ಕಳಿಗೆ ಒಂದೊಂದು ಗ್ಲಾಸ್ ಹಾಲ್ನ ಕುಡ್ಯಕೆ ಕೊಟ್ಟೊ. ಕಟ್ಕ್‌ಕಟ್ಲೆ ಪ್ರಕಾರ ಮೊದು ಮಕ್ಕ ಐದೆಲೆ ಒಂದಡ್ಕೆನ ಹಾಲ್ ಕುಡ್ದ ಗ್ಲಾಸ್‌ಗೆ ಹಾಕಿ, ಹಿಂದಕೆ ಕೊಟ್ಟವೆ. ಊರು ಗೌಡ್ರು ಒಕ್ಕಣೆ ಹೇಳಿ ಮೊದು ಮಕ್ಕಳ ಎದ್ರಿಸಿದ ಮೇಲೆ, ಮೊದು ಮಗಳಿಗೆ ಕಟ್ಟಿದ ಕಸ್ತಾಳಿನ ಅದರ ಸೋದರ ಮಾಂವ ಬಿಚ್ಚಿತ್. ಅವು ಹೊರಗೆ ಬಾಕಾಕನ ಹೈದನ ಬಾವ ಮ್ಯೊದನಕ ಬಾಕಿಲ್ ತಡ್ದವೆ. ಮೊದು ಮಂಜನ ಕೈಲಿ, ಹೆಣ್ಣ್ ಕೂಸು ಹುಟ್ಟಿರೆ ನಾ ನೀವ್ಗೆ ಕೊಟ್ಟನೆ, ಗಂಡ್ ಕೂಸು ಹುಟ್ಟಿರೆ ನಿಮ್ಮ ಗೂಡೆನ ನಾ ಸೊಸೆ ಮಾಡಿ ಕಣೆ' ಎಂತ ಮಾತ್ ತಕಂಡವೆ. ಬಾಕಿಲ್ ತಡೆವ ಕಾರ್ಯಕ್ರಮ ಮುಗ್ದ ಮೇಲೆ ಬಂದೋವ್ಕೆಲ್ಲಾ ಕಾಫಿ, ಪಳಾರ ಕೊಟ್ಟೊ.

ಗೂಡೆನೊಟ್ಟಿಗೆ ಬಂದ ಕುರುಂಟುನ ಗೂಡೆನ ಊರು ಗೌಡ್ರು. ಗೂಡೆನ ಊರು ಗೌಡ್ರಿಗೆ ಒಪ್ಪಿಸಿದೊ. ಆ ಮೇಲೆ ತುಪ್ಪದ ಚೊಂಬುನ ಬಿಚ್ಚಿದೊ. ಅದರ್ಲಿದ್ದ ತುಪ್ಪಂದ ಹನೀಸ್ ತೆಗ್ದ್, ದೇವ್ರ ಕೋಣೆಲಿ ದೀಪ ಹೋಸಿ ಕೈ ಮುಗ್ದೊ.

ಮದ್ಯಾನಕ್ಕೆ ಚಪ್ಪರದಡಿಲಿ ಮೂಡ ದಿಕ್ಕಿಗೆ ಮೋರೆ ಮಾಡಿ ಮೊದು ಮಕ್ಕಳ ಕುದ್ರಿಸಿದೊ. ಅವರೊಟ್ಟಿಗೆ ಗಂಡ್‌ನ ಕಡೆಂದ ಬಂದ ನೆಂಟ್ರನನೂ ಕುದ್ರಿಸಿದೊ. ಕೊಡಿ ಬಾಳೆ ಹಾಕಿ, ಉಂಬಕೆ ಇಕ್ಕಿದೊ. ಸುರುಗೆ ಹೆಸ್ರ್ ಇಲ್ಲದ ಒಂದು ಪೊಜ್ಜಿನ ಮಾಡಿ, ಗೂಡೆನ ಕಡೆವು ಇಕ್ಕಿ, ಒಂದು ಚೊಂಬು ನೀರ್ ಇಸ, ಈ ಪೊಜ್ಜಾನ ಹೆಸ್ರ್ ಹೇಳಿಂತ ಕೇಳಿಕಂಡವೆ. ಊಟಂದ ಎದ್ರಿಕೆ ಮುಂದೆ ಈ ಪೊಜ್ಜಿನ ಹೆಸ್ರ ಹೇಳೋಕು, ತೊಪ್ಪಿರೆ ತೊಪ್ಪು ದಂಡ ಕೊಡೊಕು. ಆ ಮೇಲೆ ಒಳ್ದ ಅಡ್ಗೆನ ಇಕ್ಕಿದೊ. ಮೊದೊಳ್ಗೆ ಗೂಡೆ ತಂದ ತುಪ್ಪನನೂ ಇಕ್ಕಿದೊ. ಹೈದನ ಕಡೆವ್ಕೆ ಆ ಪೊಜ್ಜಿ ಯಾವ್ದರ್‌ಂದ ಮಾಡ್ದ್‌ಂತ ಹೇಳಿಕೆ ಆತ್ಲೆ. ಅವು ಐದೆಲೆ ಒಂದಡ್ಕೆ ಮೇಲೆ ಒಂದು ರುಪ್ಯಾ ಇಸಿ ತೊಪ್ಪು ದಂಡ ಕೊಟ್ಟ್ ಎದ್ದೊ. ಆ ಮೇಲೆ ಗೊತ್ತಾತ್‌ಅದ್ ಪಿಂಗಾರದ ಎಸಳ್ ಹಾಕಿ ಮಾಡ್ದ ಚಟ್ನೀಂತ. ಅಂದ್ ಇರ್ಳ್ ಅವ್ಕೆಲ್ಲಾ ಗಡ್ದ್‌ನ ಮಾಸದ ಊಟ ಆತ್. ಮೊರ್ದಿನ ಕಾಫಿ, ತಿಂಡಿ ಮುಗ್ಸಿ ಅಲ್ಲಿಂದ ಹೊರ್ಟೊ. ಹೊರ್ಡಿಕಾಕನ ಮೊದೊಳ್ಗೆನ ಅವ್ವ ತುಪ್ಪದ ಚೊಂಬುನ ಕಾಲಿ ಮಾಡಿ, ಅದರ್ಲಿ ಬೆಲ್ಲಕಾಯೆ ಹಾಕಿ ಕಲ್ಸಿದ ಅವ್ಲಕ್ಕಿ, ಐದೆಲೆ ಒಂದಡ್ಕೆ ಹಾಕಿ ಬಾಯಿ ಕಟ್ಟಿಕೊಟ್ಟೊ. ಊರು ಗೌಡ್ರು ಮನೆ ದೇವ್ರುಗೆ ಬಿನ್ನ ಮಾಡ್ದ ಮೇಲೆ, ಮೊದು ಮಕ್ಕ ದೀಪಕ್ಕೆ ಅಕ್ಕಿ ಕೈ ಮುಗ್ದ್, ಎಲ್ಲಾ ಹಿರ್ಯರ ಕಾಲ್ ಹಿಡ್ಕೊಂಡೊ. ರೇಶ್ಮನ ಅವ್ವ ತುಪ್ಪದ ಚೊಂಬುನ ಎತ್ತಿದ್ ರೇಶ್ಮನ ಕೈಗೆ ಕೊಟ್ಟೊ. ಅದರ ಹಿಡ್ಕಂಡ್ ಮೊದುಮಕ್ಕ ಅಲ್ಲಿಂದ ಹೊರ್ಟೊ. ಅವು ಪಂಬೆತ್ತಾಡಿಗೆ ಮುಟ್ಕಿಕಾಕನ ಗಂಟೆ ಒಂದೂವರೆ ದಾಟಿತ್. ಅಲ್ಲಿಂದ ಬಂದ ಮೇಲೆ ಮೊದು ಮಕ್ಕಳ ಹಸೆಲಿ ಕುದ್ರಿಸಿ ಮೊದು ಮಂಜನ ಮೂರ್ತದ ಮಣಿನ

ಊರು ಗೌಡ್ರು ಬಿಚ್ಚಿದೊ. ಮೊದು ಮಂಜನ ಕಾಲ್‌ಗೆ ಹಾಕಿದ ಬೆಳ್ಳಿ ಉಂಗುರನನೂ ಬಿಚ್ಚಿಸಿದೊ. ಎಲ್ಲೋವ್ಕೂ ಮದ್ಯಾಹ್ನದ ಊಟ ಆತ್.

ಮೊದ್ವೆ ಕಾರ್ಯಕ್ರಮ ಮುಗ್ಧ ಮೇಲೆ ಬಂದ ನೆಂಟ್ರೆಲ್ಲಾ ಬಿರ್ದ್ದೊ. ಅಯ್ಯಣ್ಣ ಮಾಸ್ಟ್ರ, ಕಮಲಕ್ಕ, ಗಿರೀಶ ಮೊದು ಮಕ್ಕಳ ಕರ್ಕಂಡ್ ಪಂಜ, ಸುಬ್ರಹ್ಮಣ್ಯ ಧರ್ಮಸ್ಥಳ ದೇವಸ್ಥಾನಗಳಿಗೆ ಹೋಗಿ ವಿಸೇಸ ಪೂಜೆ ಮಾಡ್ಸಿ ಬಂದೊ.

ಒಂದು ವಾರ ಕಳ್ದ ಮೇಲೆ ರೇಶ್ಮನ ಅಪ್ಪ, ಅವ್ವ ಬಂದ್ ಗೂಡೆನ ಎಂಟ್ ಕುದ್ರಿಕೆ ತವುರು ಮನೆಗೆ ಕರ್ರ್ಕೊಂಡೋದೊ. ಮಾರ್ಣೆ ದಿನ ಅವು ಸುರೇಶಂಗೆ ಫೋನ್ ಮಾಡಿ.

“ನಾ ನೀವ್ಗಿಬ್ಬೊರಿಗೆ ಟೂರ್ ಪೇಕ್‌ಲಿ ವಿಮಾನ ಟಿಕೇಟ್ ತೆಗ್ದಿಸ್ಯಳೆ. ಒಂದು ವಾರ ಮುಟ್ಟ ಸಿಂಗಾಪುರ, ಮಲೇಶ್ಯಾ, ಹಾಂಗ್‌ಕಾಂಗ್, ಶ್ರೀಲಂಕಾ ಎಲ್ಲಾ ನೋಡಿಕಂಡ್ ಬನ್ನಿ” ಎಂತ ಹೇಳ್ದೊ. ಅಯ್ಯಣ್ಣ ಮಾಸ್ಟ್ರಿಗೂ ಫೋನ್ ಮಾಡಿ ತಿಳ್ಸಿದೊ. ಸುರೇಶ ಮಾರ್ಣೆ ದಿನವೇ ಮೂರ್ನಾಡಿಗೆ ಹೊರ್ಟತ್.

* * * * *

19. "ಸುರೇಶ ಬೆಂಗ್ಳೂರ್‌ಲಿ ಮನೆ ಮಾಡ್ತ್"

ಸುರೇಶ, ರೇಶ್ಮಾ ಸಿಂಗಾಪುರದ ಹನಿಮೂನ್ ಮುಗ್ಸಿದ ಮೇಲೆ, ಸುರೇಶ ಅಲ್ಲಿಂದಳೇ ಹುಬ್ಬಳ್ಳಿಗೆ ಹೋತ್. ರೇಶ್ಮಾ ಬೆಂಗ್ಳೂರ್‌ಲಿ ಅದರ ಕೆಲ್ಸಕ್ಕೆ ಹಾಜರಾತ್.

"ಟ್ರಿನ್, ಟ್ರಿನ್" ಮೊಬೈಲ್ ರಿಂಗಾಕನ ಕಮಲಕ್ಕ ಓಡಿ ಬಂದ್ ಎತ್ತಿಕೊಂಡೊ ಅತ್ತಂದ ಸುರೇಶ ಮಾತಾಡ್ತ್.

"ಅವ್ವಾ, ನಂಗೆ ಬೆಂಗ್ಳೂರ್‌ಗೆ ವರ್ಗ ಆಗುಟ್ಟು, ನಾಳೆ ನಾ ಬೆಂಗ್ಳೂರ್‌ಗೆ ಹೋಗಿ ಕೆಲ್ಸಕ್ಕೆ ಹಾಜಿರಾನೆ. ಅಪ್ಪಂಗೆ ತಿಳ್ಸಿ ಬುಡು" – ಎಂತ ಹೇಳ್ತ್.

"ಒಳ್ಳೆದಾತ್ ಮಂಜ. ಇನ್ ನೀವಿಬ್ಬರೊರು ಕೂಡಿ ಒಂದು ಮನೆ ಮಾಡಿನಿ" ಕಮಲಕ್ಕ ಹೇಳ್ದೊ.

"ಮಾಂವ ಒಂದು ಪ್ಲೇಟ್ ನೋಡ್ಯೊಳೊಗಡ. ಅದರ ತಕಂಡ್ ನಾವ್ಗೆ ಕೊಟ್ಟವೆ ಗಡ" – ಸುರೇಶ ಹೇಳ್ತ್.

"ಹಾಂಗಾದರೆ ಬಾರಿ ಒಳ್ಳೆದಾತಲೆ. ಬಾಡಿಗೆ ಮನೆಲಿ ಇರ್ದು ತೊಪ್ಪಿದೆ. ಬೆಂಗ್ಳೂರ್‌ಲಿ ಬಾಡಿಗೆನೂ ಬಾರಿ ಹೆಚ್ಚ್ ಗಡ?" ಕಮಲಕ್ಕ ಹೇಳ್ದೊ.

"ಹೌದವ್ವಾ, ನಾವ್ಗೆ ಒಂದು ಹದ್ನೈದ್ ಸಾವಿರ ರುಪ್ಯಾಂದ ಕಮ್ಮಿನ ಮನೆ ಸಾಕಾಕಿಲ್ಲೆ. ನೆಂಟ್ರ್‌ಗ ಬಾಕನ ಒಂದೆರ್ಡ್ ರೂಂ. ಆದರೂ ಹೆಚ್ಚಿಗೆ ಇರೊಕಲೆ" – ಸುರೇಶ ಹೇಳ್ತ್.

"ಸರಿ ಮಂಜ. ನಿನ್ನ ಆರೋಗ್ಯನ ನೋಡಿಕ" ಕಮಲಕ್ಕ ಹೇಳ್ದೊ.

" ಆತವ್ವಾ" ಎಂತ ಹೇಳಿ ಅಂವ ಫೋನ್ ಇಸಿತ್. ಕಮಲಕ್ಕ ಗಂಡನೊಟ್ಟಿಗೆ ಈ ವಿಸಯ ಎಲ್ಲಾ ಹೇಳ್ದೊ. ಅಯ್ಯಣ್ಣ ಮಾಸ್ಟ್ರ,

"ಅಂವಗೇನ್? ಗಟ್ಟಿನ ಮಾಂವ ಸಿಕ್ಯೋಳೊ. ಇನ್ನ್ ಅಂವನ ಚಿಂತೆ ನಾವ್ಗಿಲ್ಲೆ. ಗಿರೀಶನ ಮೊದ್ವೆ ಒಂದು ಆದರೆ ನಮ್ಮ ಕೆಲ್ಸ ಮುಗ್ತ್. ಮತ್ತೆ ನಾ ಈ ಆಸ್ತಿನ ಸಮಾ ಎರ್ಡ್ ಪಾಲ್ ಮಾಡಿ, ಮಕ್ಕಳಿಗೆ ಕೊಟ್ಟನೆ. ಅವು ಏನ್ ಬೇಕರೂ ಮಾಡಿಕಣಲಿ. ನಾವಿಗಿಬ್ಬೊರಿಗೆ ಕರ್ಚಿಗೆ ಕೊಟ್ಟರೆ ಸಾಕ್. ನಂಗೂ ಇನ್ನೂ ಪ್ರಾಯ ಆತಲೆ. ಮುಂದೆನಾಂಗೆ ದುಡ್ಯಕೆ ಆದೆನೋ?" ಎಂತ ಹೆಣ್ಣ್‌ನೊಟ್ಟಿಗೆ ಹೇಳ್ದೊ.

"ಈಗಳೇ ಏನ್ ಅಮ್ಸರ, ನೀವೇನ್ ಈಗ ಭಾರೀ ತೊಂಡನೋ? ಒಳ್ಳೆ ಎಪ್ಪತ್ತ್ ವೊರ್ಸದ ಅಜ್ಜಂದರಾಂಗೆ ಮಾತಾಡ್ರೆ, ನಮ್ಮ ರಾಮಯ್ಯ ಮಾಂವನ ನೋಡಿ, ಈಗಳೂ ಮನೆಲಿ ಅವರ್ದೆ ಕಾರ್ಬಾರ್"– ಕಮಲಕ್ಕ ಹೇಳ್ದೊ.

"ನಿಂಗೆ ಗೊತ್ತಿಲ್ಲೆನೆ. ನಾ ಎಲ್ಯಾದರ್ ಗೊಟಕ್‌ಂತ ನನ್ನ ಉಸ್ರು ನಿತ್ತರೆ, ಮೊಕ್ಕ ಆಸ್ತಿಗಾಗಿ ಜಗಳ ಮಾಡಿಕೆ ಬೊತ್ತಲೆ? ಅದ್ಕಾಗಿ ಈಗಳೇ ಅವ್ಕೆ ಹಿಸೆ ಮಾಡಿಸಿನೆ. ಮುಂದೆ ಏನಾದೆನೋ? ಯಾರಿಗೆ ಗೋತ್ತು? ಗಿರೀಶ, ಸುರೇಶನಾಂಗಲ್ಲ. ಅಂವ ಯಾವ್ದರನೂ ಬಾಯ್ಬುಟ್ಟು ಹೇಳ್ದುಲ್ಲೆ. ಅಂವ ಆತ್, ಅಂವನ ಕೆಲ್ಸ ಆತ್. ಅಂವ ಪಾಪದಂವಾಂತ ಅಣ್ಣ, ತಮ್ಮನ ಮೆಟ್ಟಿ ನಿಲ್ಲಿಕೆ ಆಗದಲೆ?" ಮಾಸ್ಟ್ರ ಹೇಳ್ದೊ.

"ನಮ್ಮ ಸುರೇಶ ಅಂತಂವ ಅಲ್ಲ. ತಮ್ಮಂಗೆ ಮೋಸ ಮಾಡಿಕಿಲ್ಲೆ" ಕಮಲಕ್ಕ ಹೇಳ್ವೆ.

"ಹುಟ್ಟಿಕನ ಅಣ್ಣ– ತಮ್ಮಂದರ್‌ಗಡ. ಮೊದ್ವೆ ಆದ ಮೇಲೆ ಅವು ದಾಯಾದಿಗ ಆದವೆ. ಗಂಡಂದರ್ ಒಳ್ಳೆದರ್ಲಿ ಇರಿಕೆ ಅವರ ಕೈ ಹಿಡ್ದೋವು ಬುಡಕಲೆ? ಈಗ ಕಾಲ ಕೆಟ್ಟ್ ಹೋಗುಟ್ಟು, ಹಿಂದೆನ ಕಾಲಲೇ ಆಸ್ತಿಗಾಗಿ ಪಾಂಡವ ಕೌರವರ್ ಹೋರಾಡ್ದೊ. ಈಗಿನ ಕಾಲದ ಮಕ್ಕ ಬುಟ್ಟವೆನೋ?"– ಮಾಸ್ಟ್ರ ಹೇಳ್ದೊ.

"ಅದುನೂ ಸರಿ" ಕಮಲಕ್ಕ ದನಿಗೂಡ್ಸಿದೊ. ಇದಾಗಿ ಹದಿನೈದ್ ದಿನಲಿ ಸುರೇಶ ಹೊಸ ಕಾರ್‌ಲಿ ದಿಡೀರ್‌ಂತ ಬಂದ್ ಇಳ್ತ್. ಅಪ್ಪ, ಅವ್ವಂಗೆ ಬಾರೀ ಕುಸಿ ಆತ್.

"ನೀ ಒಬ್ಬನೇ ಬಂದನೋ? ಹೆಣ್ಣ್‌ನ ಕರ್ಕಣಕಾಯ್ತ್" ಕಮಲಕ್ಕ ಕೇಳ್ದೊ.

"ಅದ್ಕೆ ಹೊಸ ಮನೆನ ಸಿಂಗಾರ ಮಾಡ್ದರ್ಲೇ ಆತ್. ಒಂದ ಗಳ್ಗೆ ಪುರ್ಸೊತ್ತಿಲ್ಲೆ. ನಾ ಬಂದದ್ ಗುರುವಾರ ಮನೆ ಒಕ್ಲು. ನಿಮ್ಮ ಕರ್ಕೊಂಡೋಕೆ ಗಿರೀಶನನೂ ಬೆಂಗ್ಳೂರ್‌ಗೆ ಬಾಕೆ ಹೇಳ್ಯೋಳೆ."– ಸುರೇಶ ಹೇಳ್ತ್.

ಮಾರ್ಣೆದಿನ ಅಯ್ಯಣ್ಣ ಮಾಸ್ಟ್ರ, ಕಮಲಕ್ಕ ಸುರೇಶನ ಕಾರ್‌ಲಿ ಬೆಂಗ್ಳೂರ್‌ಗೆ

ಹೋದೊ. ಮನೆ ಜಾಲ ಹಳ್ಳಿಲಿ. ವಿಮಾನ ನಿಲ್ದಾಣಕ್ಕೆ ಹಕ್ಕಲೆ ಆದೆ. ಮೂರ್ನೆ ಫ್ಲಾಟ್ ಇವರ ಮನೆ, ಹತ್ತಿಕೆ ಇಳ್ಯಕೆ ಲಿಫ್ಟ್ ಉಟ್ಟು. ಎರ್ಡ್ ಬೆಡ್ ರೂಂನ ಮನೆ, ಬಾರೀ ಲಾಯ್ಕಿತ್ತ್. ಸುರೇಶ ಅಪ್ಪ– ಅವ್ವಂಗೆ ಇರಿಕೆ ಹೋಟ್ಲ್‌ಲಿ ರೂಂ ಮಾಡಿಕೊಟ್ಟಿತ್. ಬೆಳ್ಯಪ್ಪನೊವುನೂ ಅದೇ ಹೋಟ್ಲ್‌ಲಿ ರೂಂ. ಮಾಡಿದ್ದೊ. ಮನೆ ಒಕ್ಲ್‌ಗೆ ನೆಂಟ್ರ್‌ಗಳಿಗೆ ಯಾರಿಗೂ ಹೇಳ್ತಿಲ್ಲೆ. ಬೆಳ್ಯಪ್ಪನವರ ದೊಡ್ಡ ಮಗ, ಅದರ ಗಂಡ ಬೆಂಗ್ಳೂರ್‌ಲೇ ಇದ್ದೊ. ರೇಶ್ಮನ ತಮ್ಮ ಮೈಸೂರ್‌ಲಿ ಮೆಡಿಕಲ್ ಓದ್ತಿತ್ತ್. ಅವೆಲ್ಲಾ ಬಂದೊ. ಗುರುವಾರ ಬೊಳ್ಪುಗೆ ಗಿರೀಶನು ಬಾತ್. ಬೊಳ್ಪುಗೆ ಎಂಟ್ ಗಂಟೆಗೆ ಗೃಹ ಪ್ರವೇಶ ಮಾಡಿ, ಒಂದು ಗಣ ಹೋಮ ಮಾಡ್ಸಿ, ಹಾಲುಕ್ಕಸಿದೊ. ಮದ್ಯಾನಕ್ಕೆ ರೇಶ್ಮನ ಅವ್ವ ತಂಗಮ್ಮನೊವು, ಕಮಲಕ್ಕನು ಕೂಡಿ ಅಡ್ಗೆ ಮಾಡ್ದೊ.

ಅಯ್ಯಣ್ಣ ಮಾಸ್ಟ್ರ್, ನಾ ಇಂದೇ ಹೋನೇಂತ, ಮನೆ ಕಡೆ ಯಾರೂ ಇಲ್ಲೇಂತ ಹೊರ್ಟ್ ನಿತ್ತೊ. ಹೆಣ್ಣ್‌ಗೆ ನೀ ಬೇಕಾರೆ ಎರ್ಡ್‌ದಿನ ನಿತ್ತ್ ಬಾಂತ ಹೇಳ್ದೊ. ಕಮಲಕ್ಕ ನಿಲ್ಲಿಕೆ ಒಪ್ಪಿತ್ಲೆ. ಗಿರೀಶನೂ ಅಪ್ಪ, ಅವ್ವನೊಟ್ಟಿಗೆ ಹೊರ್ಟತ್. ಹಂಗಾಗಿ ಅವರ ಮೂರು ಜನರ ಇರ್‌ಲ್ ಬಸ್ ಹತ್ತಿಸಿ ಸುರೇಶ ಕಳ್ಸಿತ್. ಅಯ್ಯಂಣ ಮಾಸ್ಟ್ರ ಕುಂಞಂಣ್ಣಗೆ ಫೋನ್ ಮಾಡಿ ಬೊಳ್ಪುಗೆ ಐದ್ ಗಂಟೆಗೆ ಸುಳ್ಯಕ್ಕೆ ಜೀಪು ತಕಂಬಾಕೆ ಹೇಳ್ದೊ. ಸುಳ್ಯಲಿ ಇಳ್ದ ಕೂಡ್ಲೇ ಕುಂಞಂಣ ಕಾದ್ ಕಂಡಿತ್ತ್. ಅವೆಲ್ಲಾ ಬೊಳ್ಪುಗೆ ಆರುವರೆ ಗಂಟೆಗೆ ಪಂಬೆತ್ತಾಡಿಗೆ ಮುಟ್ಟಿದೊ.

* * * * *

20. "ಕಡೆಗೂ ವಾರಿಜಕ್ಕನ ಅವುಳಿ ಮಂಜಂದರಿಗೆ ಗೂಡೆಗ ಸಿಕ್ಕಿದೊ."

ಮೊದ್ವೆ ಜಂಬರ, ಹೋದು, ಬಾದು, ಸುರೇಶನ ಮನೆ ಒಕ್ಲೂಂತ ಅಯ್ಯಣ್ಣ ಮಾಸ್ಟ್ರಿಗೆ ದಿನ ಹೋದೇ ಗೊತ್ತಾತ್ಲೆ, ಆದರೆ ಡೆಲಿ ಸುರುನ ಕೊಯಿಲ್‌ನ ಅಡ್ಕೆನ ಸಮಯಕ್ಕೆ ಸರಿಯಾಗಿ ತೆಗ್ಯದ ಕಾರ್ಣ, ಅಡ್ಕೆ ಎಲ್ಲಾ ಹಣ್ಣಾಗಿ ಉದ್ರಿ, ಕಮ್ಮನ ಬುಡಲಿ ಬಿದ್ದಿತ್ತ್. ಜಂಬರದ ಗೌಜಿ ಮುಗ್ದ ಮೇಲೆ ಅಯ್ಯಣ್ಣ ಮಾಸ್ಟ್ರ ನಾಕಾರ್ ಆಳ್‌ಗಳ ಕೂಡ್ಸಿ ಆದಸ್ಟ್ ಬಿದ್ದ ಅಡ್ಕೆನೆಲ್ಲಾ ಹೆಕ್ಕಿಸಿ ಜಾಲ್‌ಗೆ ತಂದ್ ಹಾಕ್ಸಿದೊ. ಇಸ್ಟ್‌ವೊರ್ಸ‌ಲಿ ಈ ಸಲದಾಂಗೆ ಅವರ ಕೆಲ್ಸ ಹಿಂದೆ ಬಿದ್ದತ್ಲೆ. ನವಂಬರಕ್ಕೆ ಕ್ಯೊಸುವ ಅಡ್ಕೆನ ಡಿಸೆಂಬರಲಿ ಕೊಯ್ಸಿದೊ. ಹಾಂಗಾಗಿ ಪೆಬ್ರವರಿಲಿ ಎರಡ್ನೆ ಕೊಯಿಲ್‌ನ ಅಡ್ಕೆನ ಕ್ಯೊಸಿದೊ. ಈ ಕೆಲಸದ ಗೌಜಿಲಿ ಇರಿಕಾಕನ ಒಂದಿನ ಚಿಮಿ, ಚಿಮಿಬೊಳ್ಪುಗೇ ವಿಟ್ಲಂದ ರಾಮಯ್ಯ ದೊಡಪ ಚೇಪ್‌ಲಿ ಬಂದೊ. ಅಯ್ಯಣ್ಣ ಮಾಸ್ಟ್ರಿಗೆ ಗಾಬೆರಿ ಆತ್. ದೊಡ್ಡ ದೊಡಪಂಗೆ ಏನಾದರ್ ಆತೋ ಹೇಂಗೇಂತ ಏಚನೆ ಮಾಡಿ, ದೊಡಪನೊಟ್ಟಿಗೆ,

"ಇದೇನ್ ದೊಡಪಾ, ಇಸ್ಟ್ ಅಂಬೆರ್ಪ್ಲಿ ಬಂದೊಳೋರಿ? ಏನ್ ವಿಶೇಸ?" ಮಾಸ್ಟ್ರ ಕೇಳ್ದೊ.

"ನಿನ್ನ ದೊಡವ ನನ್ನ ಮನೆಲಿ ಕುದ್ರಿಕೆ ಬುಡೊಕೊಲೆ? ನಿನ್ನ ಮಂಜಂಗೆ ಮೊದ್ವೆ ಆದೇ ತಡ, ಅದರ ಪುಳ್ಳಿಕ ಸುರೇಶಂದ ಒಂದು ವೊರ್ಸಕ್ಕೆ ದೊಡ್ಡೊವು ಅಲ್ಲನೋ?

ಅವ್ಕೆ ಇನ್ನೂ ಮೊದ್ವೆ ಆತ್ಲೇಂತ ಆದ್ಕೆ ಚಿಂತೆ" – ದೊಡಪ ಹೇಳ್ದೊ.

"ಹಂಗಾರೆ ಗೂಡೆನ ನೋಡಿ ಇಸ್ಯಳೊರಿನೋ ಹೇಂಗೆ" ಮಾಸ್ಟ್ರ ಕೇಳ್ವೆ.

"ಅದ್ಕೇ ಅಲ್ಲನೋ, ನಾ ನಿನ್ನಲ್ಲಿಗೆ ಬಂದದ್. ನಿನ್ನ ಹೊಸ ನೆಂಟ್ರ ಕಡೆ ಎರ್ಡ್ ಗೂಡೆಗ ಬಂದಿದ್ದೊ ಅಲ್ಲ? ಆ ಗೂಡೆಗಳ ಮೇಲೆ ಈಗ ನನ್ನ ಪುಳ್ಳಿಕಳ ಕಣ್ಣ್ ಬಿದ್ದುಟ್ಟು. ಅವು ಅವರ ಉಗ್ಗವನೊಟ್ಟಿಗೆ ಈ ವಿಸಯ ಎಲ್ಲಾ ಹೇಳಿ, ಮಾತಾಡ್ಸಿನೀಂತ ದುಂಬಾಲು ಬಿದ್ದೊಳೊಗಡ. ನಿನ್ನ ದೊಡವ ಮೊದ್ವೆ ಕಳ್ದ ದಿನಂದ ನಂಗೆ ಹೇಳ್ತಾನೇ ಉಟ್ಟು. ಇನ್ನ್ ತಡ ಮಾಡ್ದು ಬೇಡಾಂತ ನಾ ಹೊರ್ಟ್ ಬಂದೆ" ಎಂತ ದೊಡಪ ಹೇಳ್ದೊ.

"ಯಾರ್? ಬೆಳ್ಯಪ್ಪ ಬಾವನ ತಂಗೆ ಬೋಜಮ್ಮನವರ ಮಕ್ಕಳೋ? ಗೂಡೆಗ ಆದು. ನೋಡಿಕೆನೂ ಅವುಳಿ ಮಕ್ಕಳ ಹಾಂಗೆ ಒಳೊ. ಆದರೆ ಅವು ಒಂದೇ ಮನೆಗೆ ಎರ್ಡ್ ಮಗಕ್ಕಳ ಕೊಡ್ವೊನೋ?" ಮಾಸ್ಟ್ರ ಕೇಳ್ದೊ.

"ನೀ ಇಚಾರ್ಸ್. ಕೊಟ್ಟರೆ ಕೊಟ್ಟವೆ" ದೊಡಪ ಹೇಳ್ದೊ.

ಇವು ಮಾತಾಡುವ ಸದ್ದ್‌ಕೇಳಿ. ಅಡ್ಗೆ ಕೋಣೆಂದ ಬಂದ ಕಮಲಕ್ಕ, ಮಾಂವನ ನೋಡಿ,

"ಏನ್ ಮಾಂವಾ? ಈಗ ಬಂದಳರಿನೋ? ಮನೆಲಿ ಎಲ್ಲಾ ಸೌಕ್ಯಲಿ ಒಳೊನೋ?" ಎಂತ ಇಚಾರ್ಸಿ ಅವರ ಕಾಲ್ ಹಿಡ್ಕಂಡೊ.

ಮಾಸ್ಟ್ರ ಹೆಣ್ಣ್‌ನೊಟ್ಟಿಗೆ, ಎಲ್ಲಾ ವಿಸಯ ಹೇಳ್ದೊ.

"ಅಂತೂ ಕೊಡ್ಗ್‌ನ ಗೂಡೆಗಳಿಗೆ ಕನ್ನಡ ಜಿಲ್ಲೆಲಿ ಬಾಳ ಕಾಯ್ಸ ಉಟ್ಟು. ಒಂದು ಸಂಬಂದ ಆದೇ ತಡ, ಒಂದೊಂದೇ ಗೂಡೆಗ ಇನ್ನ್ ಇತ್ತ ಬಂದವೆ"– ಕಮಲಕ್ಕ ಹೇಳ್ದೊ.

" ಅದೆಲ್ಲಾ ರುಣಾನುಬಂದ ಅಲ್ಲನೋ ಮಗ, ಹೆಣ್ಣ್, ಹೊನ್ನ್, ಮೊಣ್ಣ್ – ನಮ್ಮ ಕೈಲುಟ್ಟೊ? ಅದೆಲ್ಲಾ ಅವರವರ ನಸೀಬು"– ರಾಮಯ್ಯ ಗೌಡ್ರು ಸೊಸೆಗೆ ಸಮದಾನ ಹೇಳ್ದೊ.

"ರುಣ ಇದ್ದರೆ ಆಗಲಿ"– ಕಮಲಕ್ಕ ಹೇಳಿ ಒಳಗೆ ಹೋದೊ.

"ಈ ಇಸಯ ಎಲ್ಲಾ ಫೋನ್‌ಲಿ ಮಾತಾಡ್ದು ಬೇಡ. ನಾನೂ, ನೀನೂ ಒಮ್ಮೆ ಪುರ್ಸೊತ್ತ್‌ಲಿ ಬೆಳ್ಯಪ್ಪನವರ ಕಂಡ್, ಮೋರೆ ಮೋರೆ ಮಾತಾಡೊಮೊ. ನಿಂಗೆ ಯಾಗ ಪುರ್ಸೊತ್ತ್ ಆದೆ ಹೇಳ್" ದೊಡಪ ಕೇಳ್ದೊ.

"ನಂಗೆ ಈ ವಾರ ಪುರ್ಸೊತ್ತ್ ಇಲ್ಲೆ ದೊಡಪ. ಬರ್ವವಾರ ಪೋಯಿ ಆಗದೋ?" ಮಾಸ್ಟ್ರ ಹೇಳ್ದೊ.

" ಆಗಲಿ ಬರ್ವ ಐತ್ವಾರ ಪೋಯಿ" ದೊಡಪ ಒಪ್ಪಿದೊ. ಹಂಞಾ ಹೊತ್ತ್

ಮಳೆ, ಬೆಳೆ, ಸುಕ, ದುಕ್ಕ ಮಾತಾಡಿಕಂಡಿರಿಕನ ಕಮಲಕ್ಕ ಚೊಂಬುಲಿ ನೀರ್ ತಕಂಡ್ ಬಂದ್ ಚಾಯ ಕುಡ್ಯಕೆ ಕರ್‍ದೊ.

ಬಡ್ದ್ ರೊಟ್ಟಿನನೂ, ಮಾಸದ ಗೈಪುನನೂ ನೋಡಿ ರಾಮಯ್ಯ ಗೌಡ್ರು,

"ಇದೇನ್? ಮಾಸ ಮಾಡ್ಯಳರಿ? ನಾ ಬನ್ನೇಂತ ನೀವ್ಗೆ ಕನ್ಸ್ ಕಟ್ಟಿತೋ?" ದೊಡಪ ನೆಗಾಡಿಕಂಡ್ ಕೇಳ್ದೊ.

"ಅದ್ ನಮ್ಮ ಕುಕ್ಕಪ್ಪಣ್ಣ ನಿನ್ನೆ ಲೈಟಿಗೆ ಹೋಗಿದ್ದೊಗಡ. ಅವ್ಕೆ ಒಂದ್ ಬರಿಕ್ಕ ಸಿಕ್ಕಿತ್. ಅದರ್ಲಿ ಹಂಞ ಮಾಸನ ನಾವ್ಗೆ ಕಳ್ಸಿದೊ"– ಮಾಸ್ಟ್ರ ಹೇಳ್ದೊ.

" ಈಗ ಬೇಟೆ ಮಾಡಿಕೆ ಬೊತ್ತಲೆ? ಗೊತ್ತಾದರೆ ಬೆಡಿನ ತಕಂಡೋವೊ. ಕೇಸ್‌ನೂ ಹಾಕುವೊ"–

"ಅವು ಒಮ್ಮೊಮ್ಮೆ ಕದ್ದ್ ಬೇಟೆ ಮಾಡ್ವೆ. ಇಷ್ಟರ ಮುಟ್ಟ ಯಾರಿಗೂ ಗೊತ್ತಾತ್ಲೆ."

"ನಿನ್ನ ಕುಕ್ಕಪ್ಪಣ್ಣ ಜನ ಆದು ಬಲಾ. ಕಸ್ಟ ಸುಕಕ್ಕೆ ಆವ ಜನ. ನಿಂಗೆ ಒಳ್ಳೆ ನೆರೆಕರೆ ಸಿಕ್ಕಿಟ್ಟು"

"ಹೌದೌದು. ನಾವು ಒಬ್ಬರಿಗೊಬ್ಬ ಬಾಳ ಹೊಂದಿ ಕೊಂಡೊಳೊ"

ಚಾಯ ಕುಡ್ದ್ ರಾಮಯ್ಯ ದೊಡಪ ಊರಿಗೆ ಹೋದೊ. ಒಂದ್ವಾರ ಬುಟ್ಟ್ ಇವಿಬ್ಬೊರು ಕೊಡ್ಗಿಗೆ ಹೋಗಿ ಬಂದೊ. ಕೊಡ್ಗ್‌ನೊವ್ಕೆ ಕನ್ನಡ ಜಿಲ್ಲೆವು ಕಟಾಪಿಟಿ ಜನಗ ಅಲ್ಲಾಂತ ಗೊತ್ತಾತ್. ಹಂಗಾಗಿ ಅವು ಸಂತೋಸಂದ ಒಪ್ಪಿದೊ. ಎರ್ಡ್ ತಿಂಗಳೊಳಗೆ ಹೋದು, ಬಾದು ಈಳ್ಯ ಸಾಸ್ತ್ರ, ಮೊದ್ವೆ ಎಲ್ಲಾ ನಡ್ದೋತ್. ಈ ಮೊದುವೆ ಸಮಯಲಿ ವಸಂತಿ ಅಕ್ಕನ ಮಗ ಸುಮತಿ ಅದರ ಗಂಡನ ಕರ್‍ಕಂಡ್ ಬಾತ್. ಸುರೇಶನ ಮೊದ್ವೆಗೆ ಅದರ ಗಂಡ ಮಿಲಿಟ್ರಿಲಿ ಇದ್ದ ಕಾರ್ಣ, ಅಂವಂಗೆ ರಜೆ ಸಿಕ್ಕಿ ತಿಲ್ಲೆ ಗಡ. ಅದರ ಮಂಜ ಮಿಥುನ ಅಜ್ಜ– ಅಜ್ಜಿ ಒಟ್ಟಿಗೆ ಕಡಬಲಿ ಇದ್ದ್‌ಕಂಡ್ ಕನ್ನಾಯ ಸಾಲೆಗೆ ಹೋಗ್ತಿತ್ತ್. ಈ ಮೊದ್ವೆಲಿ ಸುಮತಿ ಎಲ್ಲಾ ಹೊಸ ನೆಂಟ್ರ್‌ಗಳ ನೋಡಿ ಕುಸಿ ಪಟ್ಟತ್.

* * * * *

21. "ಕುಕ್ಕಪ್ಪಣ್ಣನ ಸಣ್ಣ ಮಗ ಮೈ ನೆರ್ತ್"

ಕಮಲಕ್ಕ ಬೊಳ್ಪುನ ಕಾಪಿನ ಸಡ್ಗರಲಿ ಇರಿಕಾಕನ ಹೊರಗೆ ಯಾರೋ,

"ಕಮಲಕ್ಕಾ, ಕಮಲಕ್ಕಾ" ಎಂತ ಕರ್ಕಂಡ್ ಬಾವ ಸದ್ದ್ ಕೇಳ್ತ್. ಯಾರ್‌ಂತ ತಿರ್ಗಿ ನೋಡ್ವೆ ಕುಕ್ಕಪ್ಪಣ್ಣನ ಹೆಣ್ಣ್ ಗಂಗಮ್ಮಕ್ಕ ಉಟ್ಟ ಸೀರೆಲೇ ಓಡಿ ಬಂದಿದ್ದೊ.

"ಯಾಕೆ ಗಂಗಮ್ಮಕ್ಕ, ಇಸ್ಟ್ ಅಮ್ಸರಲಿ ಓಡಿಕಂಡ್ ಬಂದೊಳರಿ?" ಕಮಲಕ್ಕ ಇಚಾರ್ಸಿದೊ.

"ನನ್ನ ಸಣ್ಣ ಮಗ ಜ್ಯೋತಿ ಮೈನೆರ್ದುಟ್ಟು. ನೀವು ತಲೆಗೆ ನೀರ್ ಹಾಕಿಕೆ ಬರೊಕು. ಇನ್ನೂ ಎರ್ಡ್ ಮೂರು ಮನೆಗೆ ಹೋಕೆ ಉಟ್ಟು. ನಾ ನಿಲ್ಲುದ್ಲೆ"– ಗಂಗಮ್ಮಕ್ಕ ಅಮ್ಸರಲಿ ಹೇಳ್ದೊ.

"ಈಗಿನ ಕಾಲಲಿ ಯಾರ್ ಇದರೆಲ್ಲಾ ಮಾಡಿವೆ? ನೀವು ಗೂಡೆನ ಮಿಾಸಿ, ಒಳಗೆ ಕರ್ಕಣಕಾಗಿತ್ತ್. ಹದ್ನಾರ್ ದಿನ ಕಳ್ದ ಮೇಲೆ ದೇವಸ್ತಾನಲಿ ಕಳ್ಸ ಮಿಾಸಕಾಗಿತ್ತ್. ಈಗ ಯಾರ್ ನೆರ್ದ ಮೊದುವೆ ಮಾಡಿವೆ. ಅದೆಲ್ಲಾ ಹಿಂದೆನ ಕಾಲಕ್ಕಾತ್." ಕಮಲಕ್ಕ ಹೇಳ್ದೊ.

"ನಾ ಹೇಳ್ರೆ ಕೇಳೊಕಲೆ? ನಮ್ಮ ಅತ್ತೆ ಒಳಲೆ. ಮನೆಲಿ ಎಲ್ಲಾ ಅವು ಹೇಳ್ದಾಂಗೇ ಆಕು. ಅವರ ಮಾತ್ ಮಿಾರಿಕೆ

ನಿಮ್ಮ ಅಂಣಂಗೆ ಧೈರ್ಯ ಇಲ್ಲೆ. ಎಲ್ಲಾ ನನ್ನ ಹಣೆ ಬರ."– ಎಂತ ಹೇಳಿ ಗಡಿಬಿಡಿಲಿ ಅವು ಹೊರ್ಟೋದೊ.

ನೆರೆಕರೆ, ಕಸ್ಟ ಸುಕಕ್ಕೆ ಆಗೋವು ಹೋಗದಿರಿಕಾದೆನೋ? ಕಮಲಕ್ಕ ಸುಂದರಿನ ಕರ್ದ್

"ದೊಡಪ ಕೆಳಗೆನ ಬೈಲ್‌ನ ತೋಟಕ್ಕೆ ಹೋಗೊಳೊ. ಅವು ಬಾಕಾಕನ ಅವ್ಕೂ, ಕೆಲ್ಸದೊವ್ಕೂ, ಚಾಯ, ಹಿಟ್ಟ್ ಕೊಡು ಬಲಾ? ಗಂಗಮಕ್ಕನ ಮಗ ಮೈ ನೆರ್ದುಟ್ಟು ಗಡ. ನಾ ಅಲ್ಲಿಗೆ ತಲೆಗೆ ನೀರ್ ಹೊಯ್ಯಕೆ ಹೋಗಿ ಬನ್ನೆ. ನಮ್ಮೊವ್ಕೆ ಹೇಳಿ ಬುಡು ಬಲಾ." ಎಂತ ಹೇಳಿ ಅವು ಕುಕ್ಕಪ್ಪಣ್ಣನ ಮನೆ ಕಡೆ ಹೋದೊ.

ಕುಕ್ಕಪ್ಪಣ್ಣನ ಮನೆಲಿ ನೆರೆಕರೆನ ನಾಕೈದ್ ಹೆಣ್ಮಕ್ಕ ಬಂದ್ ಸೇರಿದ್ದೊ. ಜ್ಯೋತಿನ ಕೈಲಿ ಒಂದ್ ಕತ್ತಿ ಕೊಟ್ಟ್, ಅದರ ಮನೆ ಹಿಂದೆನ ಬಾಳೆ ಬುಡಲಿ ಕುದ್ರಿಸಿದ್ದೊ. ಐದ್ ಜನ ಮುತ್ತೈದೆಕ ಹೋಗಿ ಅಲ್ಲಿಂದ ಅದರ ಕರ್ಕಂಡ್ ಬಂದ್ ಇಜ್ಜಲಿಲಿ ಒಗ್ಗಿ ಹಾಕಿದ ಐದ್ ತೆಂಗಿನ ಕಾಯೆ ಮೇಲೆ ಕುದ್ರಿಸಿದೊ. ಐದ್ ಕಂಚಿನ ಚೊಂಬುಲಿ ನೀರ್ ತುಂಬಿಸಿ, ಅದರೊಳಗೆ ಐದೆಲೆ ಒಂದಡ್ಕೆ ಹಾಕಿ ಇಸಿದ್ದೊ. ಅದರ ಐದ್ ಜನ ಮುತ್ತೈದೆಕ ಎತ್ತಿಕಂಡ್, ಐದೆಲೆ ಒಂದಡ್ಕೆನ ಕೈಲಿ ಹಿಡ್ಕಂಡ್ ಆ ಐದ್ ಚೊಂಬುಲಿ ತುಂಬಿಸಿ ಇಸಿದ್ದ ನೀರ್‌ನ ಜ್ಯೋತಿನ ತಲೆಗೆ ಹೊಯ್ದೊ. ಆ ಮೇಲೆ ಅದರ ಕರ್ಕೊಂಡೋಗಿ ಮಿಾಸಿ, ಮನೆ ಹಕ್ಕಲೆ ಇದ್ದ ಕೊಟಗೆಲಿ ಕುದ್ರಿಸಿದೊ. ಇನ್ನ್ ಅದ್ ನೆರ್ದ ಮೊದುವೆ ಆಕನ ಮುಟ್ಟ ಅಲ್ಲೇ ಕುದ್ರೋಕು. ಉಂಬಕೆ ತಿಂಬಕೆ ಎಲ್ಲಾ ಅದ್ಕೆ ಅಲ್ಲೇ ಕೊಟ್ಟವೆ.

"ಗಂಗಮಕ್ಕಾ, ನಿಮ್ಮ ಮಗಳಿಗೆ ಮಡ್ಕೆ ಹಿಡ್ಸಿರೆನೋ?" – ನೆರ್ದ ಮೊದಿವೆ ಮಾಡಿರೇನೋ? ಬಂದ ನೆರೆ ಮನೆ ಹೆಣ್ಮಕ್ಕಳ್ಲಿ ಒಂದು ಅಕ್ಕ ಕೇಳ್ತ್.

"ನಮ್ಮ ಅತ್ತೆ ಕೇಳೊಕಲೆ. ಅವು ನೆರ್ದ ಮೊದ್ವೆನ ಗಡ್ಬ್‌ಲಿ ಮಾಡ್ಲೋಕೂಂತ ಹೇಳಿವೆ."– ಗಂಗಮ್ಮಕ್ಕ ಹೇಳಿವೆ.

"ಮಡ್ಕೆ ಹಿಡ್ಸುದಾದರೆ ನಾಕ್‌ನೇ ದಿನ ಮಿಾಸಿ, ಐದ್ನೇ ದಿನ ಮೊಡ್ಯೋಳ್ತಿನ ಕರ್ಸಿ, ಪಿಲೆ ತೆಗ್ದ್, ಮಡಿಕೆ ಹಿಡ್ಸಿರೆ ಆತ್. ನೆರ್ದ ಮೊದುವೆ ಮಾಡ್ದಾದರೆ ಒಂದ್ ತಿಂಗಳ್‌ಲಿ ಒಳ್ಳೆ ದಿನ ನೋಡಿ ಮಾಡ್ಯೋಕು" ಕಮಲಕ್ಕ ಹೇಳಿ,

"ಇನ್ನ್ ನಾ ಹೋನೆ. ನನ್ನ ಕೆಲ್ಸ ಎಲ್ಲಾ ಅರ್ದಲಿ ಉಟ್ಟು"– ಎಂತ ಹೇಳಿ ಕಮಲಕ್ಕ ಮನೆಗೆ ಬಂದೊ.

ಕುಕ್ಕಪ್ಪಣ್ಣಂಗೆ ಎರ್ಡ್ ಗೂಡೆಗ, ಒಬ್ಬ ಮಂಜ. ಗಂಗಮ್ಮಕ್ಕ ಐದಾರ್ ಮಕ್ಕಳ ಹೆತ್ತರೂ ಒಳ್ದದ್ ಇವು ಮೂರು ಜನ ಮಾತ್ರಾ. ದೊಡ್ಡ ಗೂಡೆನ ಮೊದ್ವೆ ಮಾಡಿ ಕಲ್ಲಪಳಿಗೆ ಕೊಟ್ಟೊಳೊ. ಎರಡ್ನೇಂವ ಪ್ರಕಾಶ ಹೈಸ್ಕೂಲ್‌ಲಿ ಹತ್ನೇ ಕ್ಲಾಸ್ ಓದಿದೆ.

ಜ್ಯೋತಿಗೆ ಈಗ ಹನ್ನೆರ್ಡ್ ವೊರ್ಸ ಕಳ್ದ್ ಹದಿಮೂರು ಹಿಡ್ದದೆ. ಅದ್ ಈಗ ಏಳ್ನೇ ಕ್ಲಾಸ್‌ಲಿ ಓದಿದೆ. ಅದ್ಕೆ ಒಂದು ತಿಂಗ ಮುಟ್ಟ ಸಾಲೆ ಹೋದಲೇಂತ ಬೇಜಾರ. ಗಂಗಮಕ್ಕ ಮಗಳಿಗೆ ಸಮಾದಾನ ಮಾಡಿ ನಾಕರ ನೀರ್ ಮೀದ್ ಸಾಲೆಗೆ ಹೋಗೂಂತ ಹೇಳಿವೆ. ಈ ಉಗ್ಗವ್ವನ ಗಲಾಟೆಲಿ ನನ್ನ ಮೊರ್ಯಾದೆ ಹೋದೇಂತ ಅದ್ ಮೊರ್ಬದೆ. ಸಾಲೆ ಮಕ್ಕಳಿಗೆ ಗೊತ್ತಾದರೆ ನಂಗೆ ಡೋಂಗಿ ಮಾಡ್ವೇಂತ ಅದ್ಕೆ ಹೆದ್ರಿಕೆ. ಉಗ್ಗವ ನಾ ನೆರ್ಯಕೆ ಮುಂದೆನೇ ಮರಕಟ್ಟಕಾಗಿತ್ತ್. ಅದ್ ಬೊದ್ಕಿದರ್‌ಂದ ನಂಗೆ ಈ ಗತೀಂತ ಜ್ಯೋತಿಗೂಡೆ ಮೊನ್ಸ್‌ಲೇ ಉಗ್ಗವಂಗೆ ಸಾಪ ಹಾಕಿದೆ.

ಜ್ಯೋತಿ ಗೂಡೆ ಮೀದ್ ಬಾವ ದಿನ ಕಮಲಕ್ಕ ಅವರ ಮನೆಗೆ ಹೋದೊ. ಆ ದಿನ ಗೂಡೆಗೆ ತಿಂಬಕೆ ಕ್ಯೊಸ್ಲಕ್ಕಿ, ಬೆಳ್ತಕ್ಕಿ, ಸಮ ಸಮ ತಕಂಡ್ ಬೇರೆ ಬೇರೆ ಹೊರ್ದ್ ಅದರೊಟ್ಟಿಗೆ ಒಂದು ತುಂಡು ಒಣ್ಗಿದ ಅರ್ಸಿಣ ಕೊಂಬುನ ಗುದ್ದಿ ಹಾಕಿ, ಒಂದು ಪುಂಡಿ ಮೆಂತೆ ಹಾಕಿ, ಹೊಡಿಮಾಡಿದ ಹೊಡಿನ ಒಂದು ಪಾವು ಹೊಡಿಗೆ ಐದ್ ಪಾವು ನೀರ್ ಕೊದ್ಯಕೆ ಇಸಿ, ಅದ್ಕೆ ರುಚಿಗೆ ತಕ್ಕ ಹಾಂಗೆ ಉಪ್ಪು ಹಾಕಿ ಅದರ್‌ಲ್ಲಿ ಅಕ್ಕಿ ಹೊಡಿನ ಮಾಜಿಸಿ ತೊಳ್ಸಿದ ಹಿಟ್ಟ್‌ನ ಹಾಕಿ ಕೊಟ್ಟೊ. ಅದರ ಮೇಲೆ ಹೆರ್ದ ಕಾಯೆ ಹೂ, ಜೇನ್, ತುಪ್ಪ ಇಕ್ಕಿದೊ. ಇದ್ ನೆರ್ದ ಗೂಡೆಗಳಿಗೆ ಸುರುಗೆ ಮಾಡಿ ಕೊಡುವ ತಿನ್ಸ್. ಕಮಲಕ್ಕಂಗೂ ಒಂದು ಬಾಳೆ ಚೀಂತ್‌ಲಿ ಹಾಕಿ ತಿಂಬಕೆ ಕೊಟ್ಟೊ. ಗೂಡೆನ ಮನೆ ಹಿಂದೆನ ಕೋಣೆಲಿ ಮೊಲ್ಗಿಕೆ ಹೇಳ್ದೊ. ನಾಳೆಂದ ಸಾಲೆಗೆ ಹೋಗೂಂತ ಹೇಳ್ದೊ.

* * * * *

22. "ಜ್ಯೋತಿ ಗೂಡೆನ ನೆರ್ದ ಮೊದುವೆ"

ಕುಕ್ಕಪ್ಪಣ್ಣ ಜೋಯಿಸರಲ್ಲಿಗೆ ಹೋಗಿ ಒಳ್ಳೆ ದಿನ ನೋಡಿ ಬಂದೊ. ಇಪ್ಪತ್ತೈದ್ನೇ ದಿನಲಿ ಒಂದು ಒಳ್ಳೆ ಮೂರ್ತ ಇತ್ತ್. ಗುರುವಾರ ದಿನ ಮನೆ ಎದ್ರ್ ಒಂದು ಸಣ್ಣ ಮೊಟ್ಟ್‌ನ ಚಪ್ಪರ ಹಾಕಿದೊ. ನೆರೆಕರೆಗೆ, ಗಂಗಮ್ಮಕ್ಕನ ತವುರು ಮನೆಯೋವ್ಕೆ, ಕಲ್ಲಪ್ಪೊಳಿಗೆ ಕೊಟ್ಟ ದೊಡ್ಡ ಮಗ ಆರತಿನ ಮನೆಯೋವ್ಕೆ ಹೇಳಿಕೆ ಕೊಟ್ರೊ. ಎಲ್ಲೋವು ಸೇರಿ ಒಂದ್ ಐವತ್ತ್ ಜನ ಜಂಬರಕ್ಕೆ ಬಾವೋಂತ ಅಂದಾಜ್ ಮಾಡಿ ಅಸ್ಟ್ ಜನಕ್ಕೆ ಅಡ್ಗೆ ಏರ್ಪಾಡ್ ಮಾಡ್ರೊ. ನೆರ್ದ ಮೊದ್ವೆಗೆ ಹೆಣ್ಮಕ್ಕಳೇ ಬಾದು. ಗಣ್ಮಕ್ಕ ಬಾದು ಕಮ್ಮಿ. ಗಂಗಮ್ಮಕ್ಕನ ತವರು ಮನೆ ಮರ್ಕಂಜಂದ ಅವರ ಅವ್ವ, ಅಣ್ಣ, ಅತ್ತಿಗೆ, ಎರ್ಡ್ ಮಗಕ್ಕ ಬಂದೊ. ಕುಕ್ಕಪ್ಪಣ್ಣ ಪುತ್ತೂರಿಗೆ ಹೋಗಿ ಮಗಳಿಗೆ ಎರ್ಡ್ ಪವನ್‌ನ ಪದಕದ ಚೈನ್ ತಂದ್ ಹಾಕಿದೊ. ಹೊಸ ಸೀರೆ, ರವ್ಕೆನನೂ ತಂದೊ.

ಕಮಲಕ್ಕ ಕುಕ್ಕಪ್ಪಣ್ಣನ ಮನೆಗೆ ಎತ್ತಿಕಾಕನ, ಅವರ ಇಜ್ಜೆಲ್‌ಲಿ ತೊಳ್ಸಿಕಟ್ಟೆ ಹಕ್ಕಲೆ ಮೊಡ್ಯೋಳ್ತಿ ರುಕ್ಮಿಣಿ ಅಕ್ಕಿ ಹೊಡಿಲಿ ಮಂಡಲ ಬರ್‍ಯ್‌ತಿತ್ತ್. ಅದರ ಹಕ್ಕಲೆ ಗಂಗಮಕ್ಕನ ಅವ್ವ ಜಾಕಮ್ಮನೊವು ಮತ್ತೆ ಅವರ ಎರ್ಡ್ ಪುಳ್ಳಿಕ ಗೂಡೆಗ ಮೊಡ್ಯೋಳ್ತಿಗೆ ಬೇಕಾದ ಸಾಮಾನ್‌ಗಳ ಮನೆ ಒಳಗೆಂದ ತಂದ್ ಕೊಟ್ಟ್‌ಕಂಡ್ ಸಾಯ ಮಾಡ್ತಿದ್ರೊ. ಜಾಕಮ್ಮನೊವು ಕಮಲಕ್ಕ ಬಂದದರ ನೋಡಿ

"ಏನಕ್ಕಾ, ಸೌಕ್ಯನೋ? ಮಾಸ್ತ್ರ ಹೇಂಗೊಳೋ?" ಎಂತ ಇಚಾರ್ಸಿದೊ.

"ನೋಡಿ ಹಿಂಗೊಳೆ ನೀವು ಹೇಂಗೊಳರಿ? ಇದ್ಯಾರ್ ನಿಮ್ಮ ಪುಳ್ಳಿಕಳೋ?" ಎಂತ ಕಮಲಕ್ಕ ಗೂಡೆಗಳ ನೋಡಿ ಇಚಾರ್ಸಿದೊ.

"ಹೌದಕ್ಕಾ, ಇದ್ ನನ್ನ ದೊಡ್ಡ ಮಂಜನ ಮಗ. ಪಾವನ. ಈಗ ಪಿಯುಸಿಲಿ ಓದಿದೆ. ಇದ್ ಎರಡ್ನೇ ಮಂಜನ ಮಗ ನಯನ. ಒಂಬತ್ನೇಲಿ ಓದಿದೆ."– ಎಂತ ಎರ್ಡ್ ಗೂಡೆಗಳ ಪರ್ಚಯ ಮಾಡಿ ಕೊಟ್ಟ್ ಪುಳ್ಳಿಕಳೊಟ್ಟಿಗೆ,

"ಅತ್ತೆನ ಕಾಲ್ ಹಿಡ್ಕಣಿ ಮಕ್ಕಳೇ"– ಎಂತ ಹೇಳ್ದೊ. ಗೂಡೆಗ ಕಾಲ್ ಹಿಡ್ಕಂಬಕೆ ಬಾಕನ ಕಮಲಕ್ಕ ಅವರ ತಡ್ದ್,

" ಬೇಡ ಮಕ್ಕಳೇ, ಈಗನ ಗೂಡೆಗ ಯಾರ್ ಹಿರ್‍ಯರ ಕಾಲ್ ಹಿಡ್ಡವೆ"– ಎಂತ ಹೇಳ್ದೊ.

" ಮಕ್ಕಳಿಗೆ ನಾವು ಸಣ್ಣ ಪ್ರಾಯಲೇ ಎಲ್ಲಾ ಕಲ್ಸೋಕು. ಹಿರಿಯರ ಕಾಲ್ ಹಿಡ್ದ್ ಆಶೀರ್ವಾದ ತಕಂಬದು ಪುಣ್ಯ ಕಾರ್‍ಯ." ಜಾಕಮ್ಮನೊವು ಹೇಳ್ದೊ. ಪಾವನ, ನಯನ ಕಾಲ್ ಹಿಡ್ಕೊಂಡೊ.

"ನೂರು ವೊರ್ಸ ಸುಕಲಿ ಬಾಳಿ"– ಕಮಲಕ್ಕ ಮಕ್ಕಳಿಗೆ ಆಶೀರ್ವಾದ ಮಾಡ್ದೊ.

" ನೀವು ಒಳಗೆ ಹೋಗಿ. ಹೆಣ್ಮಕ್ಕ ಎಲ್ಲಾ ಬಂದೊಳೊ. ಮಾತಾಡ್ಸಿ. ನಾ ಪಿಲೆ ತೆಗ್ಯಕೆ ಬೇಕಾದ ಸಾಮಾನ್ ಜೋಡಣೆ ಮಾಡಿಕೆ ರುಕ್ಮಿಣಿಗೆ ಸಾಯ ಮಾಡಿನೆ." ಎಂತ ಹೇಳಿ ಜಾಕಮ್ಮನೊವು ಕಮಲಕ್ಕನ ಮನೆ ಒಳಗೆ ಕಳ್ಸಿದೊ.

ಮೊಡ್ಯೋಳ್ತಿ ರುಕ್ಮಿಣಿ ಮಂಡಲ ಬರ್ದ್ ಮುಗ್ಸಿ, ಅದರ ಪಕ್ಕಲಿ ಒಂದು ಮಣೆ ಮೇಲೆ ಕಾಲ್ದೀಪ ಹೋಸಿ ಇಸಿತ್. ಒಂದು ಹರ್‍ವಾಣಲಿ ಕಳಸ– ಕನ್ನೇಟಿ ಮಾಡಿಸಿ, ಅದರ್‍ಲಿ ಒಂದು ಉಂಡೆ ಬೆಳ್ದ್ ನೂಲು, ಮತ್ತೆ ಬಾಯಿ ಬುಡ್ಸಿಕೆ ಆವ ಬೆಳ್ಳಿನ ಕಡಗ ಇಸಿತ್. ಇನ್ನೊಂದು ಹರಿವಾಣಲಿ ಐದ್ ಕೊಂಡೆ ಬೆಳ್ತಕ್ಕಿ ಹಾಕಿ, ಅಕ್ಕಿ ಮೇಲೆ ಒಂದು ಚೊಂಬು ಇಸಿ, ಅದರ ಒಳಗೆ ನೀರ್ ಹಾಕಿ, ಹಲ್ಸಿನ ಸೊಪ್ಪು ಸುತ್ತ ಇಸಿ, ಅದರ ನೊಡುಲಿ ಜುಟ್ಟು ಇದ್ದ ಕಾಯೆನ ಇಸಿದೆ. ಒಂದು ಮರದ ಮಣೆ ಮೇಲೆ ಒಂದು ಹರಿವಾಣಲಿ ಹೊಸ ಸೀರೆ, ರವ್ಕೆ, ಹೂ, ಪಿಂಗಾರ ಇಸಿದೆ. ಆ ಮೇಲೆ ಕಮ್ಮುನ ಹಸಿ ಒಲಿ ತಕಂಡ್ ಆರ್ ಸುಂಪೆಗಳ ಮಾಡಿ, ಒಂದು ಸುಂಪೆ ಮೇಲೆ ಒಂದು ಮಣ್ಣ್‌ನ ಮೊಡ್ಕೆ ಇಸಿ, ಅದ್ಕೆ ನೀರ್ ಹೊಯ್ದ್, ಹಂಞ ಹಾಲ್ ಹೊಯ್ದ್, ಮಡಿಕೆನ ಬಾಯಿನ ಸುತ್ತೊಳು ಮಾಯ್ನ ಸೊಪ್ಪು, ಹಲ್ಸಿನ ಸೊಪ್ಪು ಇಸಿ, ಅದರ ಮೇಲೆ ಒಂದು ಚೊಂಬು ಇಸಿತ್. ಒಳ್ದ ಐದ್ ಸುಂಪೆಗಳ ಮೇಲೆ ಐದ್ ಕಂಚಿನ ಚೊಂಬುಗಳ ಇಸಿ, ಅದ್ಕೆ ನೀರ್ ಹೊಯ್ದ್, ಪ್ರತಿ ಒಂದರ್‍ಲಿ ಐದೆಲೆ

ಒಂದಡ್ಕೆ ಹಾಕಿತ್. ದೇವಸ್ತಾನಂದ ತಂದ ಪುಣ್ಯಾರ್ಚನೆನ ತೊಳ್ಸಿ ಕಟ್ಟೆಂದ ತೆಗ್ಗ್ದ್ ಮಂಡಲ ಪಕ್ಕಲಿ ಇಸಿತ್. ಈ ಎಲ್ಲಾ ಕೆಲ್ಸ ಮುಗ್ದ ಮೇಲೆ ಜಾಕಮ್ಮನವರೊಟ್ಟಿಗೆ,

"ಎಜಮಾನ್ತಿ, ಎಲ್ಲಾ ಸರಿ ಉಟ್ಟೋಲೆ"–ಎಂತ ಕೇಳ್ತ್. ಜಾಕಮ್ಮನೊವು ಎಲ್ಲದರ ಎರ್ಡ್ರೆರ್ಡ್ ಸಲ ಸರಿಯಾಗಿ ನೋಡಿ, ಸರಿ ಉಟ್ಟೊಂತ ಹೇಳ್ದೊ.

ಜ್ಯೋತಿ ಗೂಡೆನ ಮುತ್ತೈದೆ ಹೆಣ್ಮಕ್ಕ ನೀರೆಡಿಲಿ ತಲೆ, ಮೈ ಮಿಾಸಿ, ಮೊಡ್ಯೋಳ್ತಿ ಕೊಟ್ಟ ಕಂಬಿ ಇದ್ದ ಬಿಳಿ ಮಡಿ ಸೀರೆನ ಉಡ್ಸಿದೊ. ಮೊಡ್ಯೋಳ್ತಿ ರುಕ್ಮಿಣಿ,

"ಗೂಡೆನ ಕರ್ಕಂಡ್ ಬನ್ನಿ"– ಎಂತ ಕರ್ದ್ ಹೇಳ್ತ್. ಹೆಣ್ಮಕ್ಕ ಗೂಡೆನ ಕರ್ಕಂಡ್ ಬಂದೊ. ರುಕ್ಮಿಣಿ ಮಂಡಲದ ನೊಡುಲಿ ಒಂದು ಕೊಡಿ ಬಾಳೆಲೆ ಹಾಸಿ, ಜ್ಯೋತಿನ ಅದರ ಮೇಲೆ ನಿಲ್ಲಿಸಿತ್. ಮೊಡ್ಯೋಳ್ತಿ ಕಳಸ ಕನ್ನೆಟಿಲಿ ಇಸಿದ್ದ ಬಿಳಿ ನೂಲುಂಡೆನ ತಕಂಡ್ ಜ್ಯೋತಿನ ಬಲ ಹೆಬ್ಬೆರ್ಳ್‌ಗೆ ನೂಲುನ ಸುತ್ತಿ, ನೂಲುಂಡೆಂದ ನೂಲು ಬುಡ್ಸಿ ಅದರ ಮೇಲೆ ತಕಂಡ್ ಬಂದ್ ತಲೆ ಮೇಲೆಂದ ಎಡ ಬಾಗಲಿ ಕೆಳಗೆ ತಂದ್ ಎಡ ಹೆಬ್ಬೆರ್ಳ್‌ಗೆ ನೂಲುನ ಸುತ್ತಿ ಇಸಿದೆ. ಅದರ್ಲಿ ಬೆಳ್ಳಿ ಕಡಗನ ಬಾಯಿ ಬುಡ್ಸಿ, ಬಲ್ದ ಹೆಬ್ಬೆರ್ಳ್ ಕಡೆಂದ ನೂಲುಲಿ ಸಿಕ್ಕಿಸಿ, ಅದರ ಮೂರು ಸರ್ತಿ ಬಲ ಪುಡೆಂದ ಎಡ ಪುಡೆಗೆ, ಕಡಗನ ಸರಿಸಿ ತೆಗ್ದದೆ. ಆ ಮೇಲೆ ಆ ನೂಲುನ ತೆಗ್ಗ್ದ್ ಗೂಡೆನ ಎದ್ರ್ ಹಾಸಿದ ಕೊಡಿ ಬಾಳೆಲೆಲಿ ಇಸಿದೆ. ಪಾವನ, ನಯನನೊಟ್ಟಿಗೆ ಜ್ಯೋತಿಗೆ ತಿಂಬಕೆ ಎಲಾಡ್ಕೆನ ಕೊಟ್ಟ್, ಇದರ ಜ್ಯೋತಿಗೆ ತಿಂಬಕೆ ಕೊಡೀಂತ ಮೊಡ್ಯೋಳ್ತಿ ಹೇಳ್ದೆ. ಅತ್ತಿಗೆಕ ಕೊಟ್ಟ ಎಲಾಡ್ಕೆನ ಜ್ಯೋತಿ ತಿಂದದೆ.

"ಅದರ ನುಂಗು ಬಡ ಬಲಾ. ಜಗ್ಗ್ದ್ ಬಾಯಿಲಿ ಇಸಿಕ" ಎಂತ ರುಕ್ಮಿಣಿ ಹೇಳ್ತ್. ಅದರ ಜಗ್ದಾದ ಮೇಲೆ ಆ ಎಲಾಡ್ಕೆನ ಎದ್‌ರ್ ಇದ್ದ ಕೊಡಿ ಬಾಳೆಲೆನ ನೊಡುಗೆ ಉಗ್ಯಕೆ ಹೇಳ್ತ್. ಜ್ಯೋತಿ ಎಲಾಡ್ಕೆನೆಲ್ಲಾ ಬಾಳೆಲೆ ನೊಡುಲಿ ಉಗ್ದದೆ. ಅದಾದ ಮೇಲೆ ಮೊಡ್ಯೋಳ್ತಿ ಜ್ಯೋತಿ ಗೂಡೆನ ತಲೆ ಮೇಲೆ ಒಂದು ಬೆಳ್ದ್ ಅರ್ವೆನ ಹಿಡ್ಕಂಡತ್. ಅದರ ಅಗಲಲಿ ಹಿಡ್ಯಕೆ ಉಳ್ದ ಹೆಣ್ಮಕ್ಕ ಮೊಡ್ಯೋಳ್ತಿಗೆ ಸಾಯ ಮಾಡಿವೆ. ಮಂಡಲದೊಳಗೆ ಐದ್ ಚೊಂಬುಗಳಲಿ ತುಂಬುಸಿಸಿದ್ದ ನೀರ್ನ ಐದ್ ಜನ ಹೆಣ್ಮಕ್ಕ ತಕಂಡ್, ನೀರ್ನ ಮೊಡ್ಯೋಳ್ತಿ ಹಿಡ್ದ ಅರಿವೆ ಮೇಲೆಂದ ಎಲಾಡ್ಕೆ, ಮಾಯ್ನ ಸೊಪ್ಪುನೊಟ್ಟಿಗೆ ಹೊಯ್ದೊ. ಈ ಕ್ರಮ ಆದ ಮೇಲೆ ಮೊಡ್ಯೋಳ್ತಿ ಗೂಡೆನ ಮಂಡಲದ ಹೊರಗೆ ಬಾಕೆ ಹೇಳಿ ಅದರ ಮೇಲೆ ಪುಣ್ಯಾರ್ಚಣೆ ಹಾಕಿತ್. ಹರಿವಾಣಲಿ ಇಸಿದ್ದ ಹೊಸ ಸೀರೆ, ರವ್ಕೆನ ಮತ್ತೆ ಹೂವುನ ಅಲ್ಲಿದ್ದ ಹೆಣ್ಮಕ್ಕಳೊಟ್ಟಿಗೆ ಕೊಟ್ಟ್ ಜ್ಯೋತಿನ ಸಿಂಗಾರ ಮಾಡಿಕೆ ಮೊಡ್ಯೋಳ್ತಿ ಹೇಳ್ತ್.

ಪಿಲೆ ತೆಗ್ದ ಸಾಸ್ತ್ರ ಆದ ಮೇಲೆ ಅದರ ಮಾಡ್ದ ಜಾಗೆನ ಸುದ್ದ ಮಾಡಿಕೆ

ಜ್ಯೋತಿನ ಅವ್ವ ಗಂಗಮ್ಮಕ್ಕನೊಟ್ಟಿಗೆ ಮೊಡ್ಯೋಳ್ತಿ ಹೇಳ್ದೆ.

"ಎಜಮಾನ್ತಿ, ನೀವು ಗೂಡೆ ನಿತ್ತ ಬಾಳೆಲೆನನೂ, ಮಡೆ ಉಗ್ದ ಬಾಳೆಲೆನನೂ, ಅದರ್ಲಿದ್ದ ನೂಲ್‌ನೊಟ್ಟಿಗೆ ತಕಂಡ್ ಹೋಗಿ, ಹರಿವ ಚೋಡ್‌ಲಿ ಇದರ ಬುಟ್ಟ್ ತಲೆ ಮೈ ಮಿಾದ್, ಈ ಮಡಿ ಅರ್ವೆನ ಉಟ್ಟುದ್ ಬಂದ್, ಪಿಲೆ ತೆಗ್ದ ಜಾಗೆನ ಸೆಗೆಣಿ ಹಾಕಿ ಸುದ್ದ ಮಾಡೊಕು."– ಎಂತ ಹೇಳಿ ಅವ್ಳನೂ ಒಂದು ಮಡಿ ಸೀರೆನ ಉಡಿಕೆ ಜಾಕಮ್ಮನವರೊಟ್ಟಿಗೆ ಕೊಟ್ಟದೆ. ಗಂಗಮ್ಮನೊವು ಪಿಲೆ ತೆಗ್ದ ಬಾಳೆಲೆಗಳ ಕೈಲಿ ಹಿಡ್ಕಂಡ್ ಜಾಕಮ್ಮನವರ ಕರ್ಕಂಡ್ ಚೋಡಿಗೆ ಹೋಗಿ, ಹರಿವ ನೀರ್‌ಲಿ ಅದರ ಬುಟ್ಟ್, ತಲೆಗೆ ನೀರಾಕಂಡ್ ಬಂದ್, ನೀರೆಡಿಲಿ ತಲೆ ಮೈ ಮಿಾದ್, ರುಕ್ಮಿಣಿ ಕೊಟ್ಟ ಮಡಿ ಸೀರೆನ ಉಟ್ಟ್ ಕಂಡ್ ಬಂದೊ. ಜ್ಯೋತಿನನೂ ಹೆಣ್ಮಕ್ಕ ಸಿಂಗಾರ ಮಾಡಿ ಕರ್ಕಂಡ್ ಬಂದೊ.

"ಚಾಳೆ ಅಡಿಗೆ ಗೂಡೆನ ಕರ್ಕಂಡ್ ಬನ್ನಿ."– ಮೊಡ್ಯೋಳ್ತಿ ಹೇಳ್ದೆ. ಅದ್ ಹೇಳ್ದಾಂಗೆ ಎಲ್ಲೋವೂ ಚಾಳೆ ಅಡಿಗೆ ಗೂಡೆನ ಕರ್ಕಂಡ್ ಹೊರ್‍ಟ್ವೊ.

ಚಾಳೆ ಅಡಿಲಿ ಹೊಸ ಮೊಂದ್ರಿನ ಹಾಸಿ, ಅದರ್ಲಿ ಎರ್ಡ್ ಮೊಲೆಗಳ ರೂಪಲಿ ಮೊಣ್ಣಿಂದ ಮಾಡಿಸಿಕೆ, ಪಾವನ ನಯನರೊಟ್ಟಿಗೆ ಮೊಡ್ಯೋಳ್ತಿ ಹೇಳ್ತ್. ಅವು ನಾಚಿಕೆಂದ ನಾವ್ಗೆ ಬೊತ್ತ್‌ಂತ ಹೇಳಿವೆ.

ಆಗ ಮೊಡ್ಯೋಳ್ತಿ., "ನೆರ್ದ ಮೇಲೆ ನಾಚಿಕೆ ಹೋತ್, ಹೆತ್ತ ಮೇಲೆ ಹೇಸಿಗೆ ಹೋತ್‌ಂತ ಹಿರ್‍ಯರ ಗಾದೆನೇ ಉಟ್ಟು, ಅದರ ಅತ್ತಿಗೆಕಳೇ ಮಾಡೊಕು."– ಎಂತ ಹೇಳಿ, ಅವರ ಕೈಲಿ ಮೊಣ್ಣ್‌ನ ಕಲ್ಸಿಸಿ ಎರ್ಡ್ ಮೊಲೆಗಳ ಹಾಂಗೆ ಮಾಡಿ ಇಸಿದೊ.

"ಇದ್ಕನೂ ಪೂಜೆ ಮಾಡೊಕೊ, ಇದ್ ಏಕೆ?"– ಗೂಡೆಗ ಕೇಳ್ದೊ.

ಆಗ ಜಾಕಮ್ಮನೊವು,

"ಗೂಡೆಗ ಪ್ರಾಯಕ್ಕೆ ಬಾಕಾಕನ ಅವ್ಕೆ ಸಂತಾನ ಕೊಡುವ ಶಕ್ತಿ ಬಂದದೆ. ಹುಟ್ಟಿದ ಮಕ್ಕ ಬೊದ್ಕೊಕರೆ ಸುರುಗೆ ತಿಂಬೊದು ಅಯ್ಯೆನ ಮೊಲೆನ. ಅದ್ ಅಮೃತ ಕಲಶ ಇದ್ದ ಹಾಂಗೆ. ಸಂತಾನ ಬೆಳ್ಸಿಕೆ ಈ ಅಮೃತ ಕಲಶಕ್ಕೆ ನಾವು ಪೂಜೆ ಮಾಡೊಕು. ಪ್ರಾಯಕ್ಕೆ ಬಂದ ಗೂಡೆಗೆ ಸಂತಾನ ಭಾಗ್ಯ ಸಿಕ್ಕಲೀಂತ ನಾವು ಇದರ ಪೂಜೆ ಮಾಡಿವೆ."– ಎಂತ ಹೇಳ್ದೊ. ಆಗ ಅಲ್ಲಿದ್ದೊವೆಲ್ಲಾ, "ಹೌದು, ಹೌದು, ಅವ್ವ ಹೇಳ್ದ ಮಾತ್ ಸರಿಯಾಗುಟ್ಟು"– ಎಂತ ಹೇಳ್ದೊ.

ಒಲಿ ಮೊಂದ್ರಿ ಮೇಲೆ ಎರ್ಡ್ ಕೊಡಿಬಾಳೆಲೆ ಹಾಕಿ, ಅದ್ಕೆ ಹೊರ್ದ ಬೆಳ್ತಕ್ಕಿ, ಕ್ಯೊಸ್ಲಕ್ಕಿ ಹೊಡಿನ ಕಾಯೆ ಬೆಲ್ಲ ಹಾಕಿ ಕಲ್ಸಿದ ನೆನ್ಯಕ್ಕಿನ ಇಕ್ಕಿ, ಐದೆಲೆ, ಒಂದಡ್ಕೆ ಇಸಿ, ಮಂಡಲಲಿ ಮೊಡ್ಯೋಳ್ತಿ ಮಾಡಿಸಿದ ಮೊಣ್ಣ್‌ನ ಮೊಡ್ಕೆನ ಸುಂಪೆ ಸಮೇತ

ಜ್ಯೋತಿನ ತಲೆ ಮೇಲೆ ಇಸಿ ಚಾಳಿಗೆ ಮೂರು ಸುತ್ತು ಬರ್ಸಿ ಕೈ ಮುಗ್ಸುವೆ. ಅದರೊಟ್ಟಿಗೆ ಮೊದ್ವೆ ಆಗದ ಮೂರು ಗೂಡೆಗಳೂ ಸೇರಿಕಂಡ್ ಸುತ್ತು ಬಂದವೆ. ಜ್ಯೋತಿ ಗೂಡೆ ಕೈ ಮುಗ್ದ ಮೇಲೆ ಒಂದು ಬಾಳೆಲೆನ ಗಂಡ್ ಕೂಸಿಗೂ, ಇನ್ನೊಂದು ಬಾಳೆ ಎಲೆನ ಹೆಣ್ಣ್ ಕೂಸಿಗೂ ಜ್ಯೋತಿನ ಕೈಲಿ ಕೊಡ್ಸುವೆ.

ಇದಾದ ಮೇಲೆ ಜ್ಯೋತಿನ ಬಾಮಿ ಹಕ್ಕಲೆ ಕರ್ಕೊಂಡೋದವೆ. ಅಲ್ಲಿ ಮೂಡು ದಿಕ್ಕಿಗೆ ಮೋರೆ ಮಾಡಿ ಮೊಂದ್ರಿ ಹಾಕಿ ಅದರ ಮೇಲೆ ಐದ್ ಬಾಳೆಲೆ ಹಾಸುವೆ. ಆ ಎಲೆಗಳಿಗೆ ಅವ್ಲಕ್ಕಿ, ಬೆಲ್ಲ, ಬಾಳೆ ಹಣ್ಣ್‌ನ ಇಕ್ಕುವೆ. ಜ್ಯೋತಿನ ಕೈಲಿ ಒಂದು ಕಾಯೆನ ಕೊಟ್ಟವೆ. ಅದ್ ಕೈ ಮುಗ್ದ್, ಆ ಕಾಯೆನ ತಕಂಡ್ ಒಡ್ದ್ ಎರ್ಡ್ ಭಾಗ ಮಾಡಿ, ಇಕ್ಕಿದ ಎಲೆಗಳಿಗೆ ಆ ಕಾಯೆ ಗಡಿಗಳ್‌ಂದ ಆರತಿ ಎತ್ತಿದಾಂಗೆ ಮಾಡಿ, ಎಲೆಗಳ ನೊಡುಲಿ ಆ ಕಾಯೆ ಗಡಿಗಳ ಇಸಿಕೆ ಹೇಳಿವೆ. ಆ ಮೇಲೆ ದೂಪಾರತಿ ಮಾಡಿ ಪ್ರಾರ್ಥನೆ ಮಾಡಿವೆ. ಜ್ಯೋತಿ ಕೈಯಿಂದ ಆ ಎಲೆಗಳ ಹಂಞ ಎದ್ರ್‌ಗೆ ಎಳ್ಯಕೆ ಹೇಳ್ದೊ. ಆ ಮೇಲೆ ಅಲ್ಲಿದ್ದೋವು ಆ ಅವ್ಲಕ್ಕಿನ ಬೆಲ್ಲ, ಕಾಯೆ ಹಾಕಿ ಕಲ್ಸಿಸುವೆ. ಮತ್ತೈದೆಗ ಮಡಿಕೆನ ಎತ್ತಿ ಗೂಡೆನ ತಲೆ ಮೇಲೆ ಇಸಿ, ಬಾಮಿಗೆ ಸುತ್ತು ಬಂದವೆ.

ಇದಾದ ಮೇಲೆ ಜ್ಯೋತಿನ ಕರ್ಕಂಡ್, ಮನೆ ಹಕ್ಕಲೆ ಬಾಕನ ಮುತ್ತೈದೆಗ ಆರತಿ ಎತ್ತಿ ಅದರ ಒಳಗೆ ಕರ್ಕಂಡವೆ. ಕನ್ನೆ ಕಂಬದ ಹಕ್ಕಲೆ ದೀಪ ಹೋಸಿ, ಗೂಡೆನ ತಲೆಲಿದ್ದ ಮಡ್ಕೆನ ದೀಪದ ಹಕ್ಕಲೆ ಸುಂಪೆ ಸಮೇತ ಇಸುವೆ. ಗೂಡೆನ ಅಲ್ಲಿ ಕುದ್ರಿಸಿ ಎಲ್ಲೋವು ಸೇಸೆ ಹಾಕಿದೊ. ನೆಂಟ್ರ್‌ಗ ಉಡ್ಗೊರೆ ಕೊಟ್ಟೊ, ಊರೊವು ಹಣ ಕಟ್ಟಿದೊ. ಅದಾದ ಮೇಲೆ ಗೂಡೆನ ಅಪ್ಪ ಗೂಡೆನ ತೊಳ್ಸಿ ಕಟ್ಟಿ ಹಕ್ಕಲೆ ಕರ್ಕಂಡ್ ಬಂದ್ ಜ್ಯೋತಿನ ಕೈಲಿ ಐದೆಲೆ ಒಂದಡ್ಕೆ ಕೊಟ್ಟ್, ಗೂಡೆನ ಕೈಲಿದ್ದ ಎಲಾಡ್ಕೆಗೆ ಐದ್ ಸಲ ನೀರ್ ಹ್ಯೊಯ್ದ್ ಐದ್ ದೇವ್ರುಗಳ ಹೆಸ್ರೇಳಿ ಕೈ ಮುಗ್ದೊ. ಗೂಡೆನ ಒಳಗೆ ಕರ್ಕೊಂಡೋಗಿ ಅಟ್ಟಕ್ಕೆ ಕೈ ಮುಗ್ಸಿ, ಹೊರಗೆ ಬಂದ್ ಹಟ್ಟಿ, ಕೊಟಗೆ, ಫಲ ಬಾವ ಮರಗಳಿಗೆ ಕೈ ಮುಗ್ಸಿದೊ. ಈ ಎಲ್ಲಾ ಸಾಸ್ತ್ರ ಮಾಡ್ದ ಮೇಲೆ ಬಂದೋವ್ಕೆಲ್ಲಾ ಗಡ್ದ್‌ನ ಊಟ ಆತ್. ಬಂದ ನೆಂಟ್ರ್‌ಗ ಗೂಡೆಗೆ ಬಗೆ ಬಗೆನ ತೆನ್ಸ್‌ನ ಮಾಡಿ ತಂದಿದ್ದೊ. ಹೆಚ್ಚಿಗೆ ಇದ್ದದರ ಸಬೆಗೆ ಇಕ್ಕಿದೊ. ಜ್ಯೋತಿ ಗೂಡೆಗೆ ಹತ್ತ್ ರವ್ಕೆ ಕಣ ಉಡ್ಗೊರೆ ಸಿಕ್ಕಿತ್ತ್. ಒಂದು ಐನೂರು ರೂಪ್ಯಾನೂ ಹಣಲಿ ಸಿಕ್ಕಿತ್ತ್. ಕುಕ್ಕಪ್ಪಣ್ಣನ ಅವ್ವ ಸುಬ್ಬಮ್ಮಜ್ಜಿಗೆ ಕುಸಿನೋ ಕುಸಿ. ಪುಳ್ಳಿನ ನೆರ್ದ ಮೊದ್ವೆನ ಕಣ್ ತುಂಬ ನೋಡ್ದೇಂತ.

* * * * *

23. "ಮಾಸ್ತ್ರ ಸಣ್ಣ ಮಂಜ ಗಿರೀಶ"

ಗಿರೀಶ ಸಣ್ಣಂವ ಇರಿಕಾಕನನೇ ಅಜ್ಜ-ಅಜ್ಜಿನ ಕೊಂಡಾಟದ ಪುಳ್ಳಿ. ಚಾಮಯ್ಯ ಗೌಡ್ರ ಹೆಣ್ಣ್ ಗೌರಮ್ಮನೊವು ಪುಳ್ಳಿನ ಯಾಗೋಳು ಸೊಂಟಲಿ ನೇಲ್ಸಿಕಂಡೇ ಕೆಲ್ಸ ಮಾಡ್ತಿದ್ದೊ. ಹಟ್ಟಿಗೆ ಕರ್ ಬುಡಿಕೆ ಹೋಕನ ಆಗಲಿ, ಮೊಜ್ಜಿಗೆ ಕಡ್ಯಕನ ಆಗಲೀ ಗಿರೀಶ ಉಗ್ಗವನೊಟ್ಟಿಗೆ ಇರ್ತಿತ್ತ್. ಇಲ್ಲರೆ ಅಜ್ಜಪ್ಪ ಚಾಮಯ್ಯ ಗೌಡ್ರಿಗೆ ಅಂಟಿಕಂಡಿರ್ತಿತ್ತ್. ಅವು ಹಟ್ಟಿಲಿ ದನಂಗಳಿಗೆ ಹುಲ್ಲು ಹಾಕಿಕಾಕನ ಅವು ದನಂಗಳ ಬುಟ್ಟ್ ಗುಡ್ಡೆಗೆ ಹೊಡ್ಯಕಾಕನ ಆಗಲಿ ಗಿರೀಶ ಅಜ್ಜಪ್ಪನೊಟ್ಟಿಗೆ ಒಂದು ಕೋಲ್ನ ಕೈಲಿ ಹಿಡ್ಕಂಡ್ ಹೋಗ್ತಿತ್ತ್. ಅವು ಬೈಪಣೆಂದ ಬಿಳ್ಗಲ್ ಎಳ್ದ್ ಹಾಕಿ ತಿನ್ಸಿಕನ ಇಂವನೂ ದನಂಗಳಿಗೆ ಹುಲ್ಲು ತಿನ್ಸ್‌ತಿತ್ತ್. ಅಜ್ಜಪ್ಪ ತೋಟಕ್ಕೆ ಅಡ್ಕೆ ಹೆರ್ಕಿಕೆ ಹೋಕಾಕನ, ಇಂವನೂ ಅವರೊಟ್ಟಿಗೆ ತೋಟಕ್ಕೆ ಹೋಗಿ ಕಮ್ಮುನ ಬುಡಲಿದ್ದ ಅಡ್ಕೆನ ಹೆರ್ಕಿ, ನೀರ್‌ನ ದಂಡೆಲಿ ರಾಶಿ ಹಾಕ್ತಿತ್ತ್. ಅಜ್ಜಪ್ಪ ಅದರೆಲ್ಲಾ ಪೂಜಿ ಕೈ ಕುಕ್ಕೆಗೆ ತುಂಬಿಸಿಕಾಕನ, ಇಂವಂಗೆ ಹೊರಿಕಾಗದಿದ್ದರೂ, ನಾನೂ ಹಿಡ್ಕಣೀಂತ ಮೊರ್ಡ್‌ತಿತ್ತ್. ಅದ್ಕಾಗಿ ಚಾಮಯ್ಯ ಗೌಡ್ರು, ಅಂವಂಗಾಗಿ ಬೆತ್ತದ ಒಂದು ಸಣ್ಣ ಕೈ ಕುಕ್ಕೆನ ಮಾಡ್ಸಿದೊ. ಅಂವ ಕುಸಿಂದ ಅದರ ಹಿಡ್ಕಂಡ್ ಅದರ್‌ಲಿ ಅಡ್ಕೆ ತುಂಬುಸಿ ತಾತಿತ್ತ್. ಅಜ್ಜಪ್ಪ ತೋಟದ ಕೆಲ್ಸ

ಮಾಡಿಕಾಕನ ಗಿರೀಶನೂ ಅವರೊಟ್ಟಿಗೆ ಹೋಗಿ ಆಳ್‌ಗಳ್ ಕೆಲ್ಸ ಮಾಡ್ದರ ಕಣ್ಣರ್ಳಿಸಿ ನೋಡ್ತಿತ್ತ್. ಉಗ್ಗವ ಮಾಯ್ಪುನ ಮಾಡಿಕೆ ಕಮ್ಮುನ ಸೋಗೆಗಳ ಎಳ್ಕಂಡ್ ಬಾಕನ ಅಂವನ ಕೈಲಾತ್ಲರೂ ಕಷ್ಟಲಿ ಒಂದು ಸೋಗೆನ ಎಳ್ಕಂಡ್ ಬಂದ್ ಜಾಲ್‌ಲಿ ಹಾಕ್ತಿತ್ತ್. ಅವು ಚೀಂಕ್ರ್ ಬುಡ್ಸಿಕಾಕನ ಅಂವನೂ, ಅವು ಮಾಡ್ದಾಂಗೆ ಚೀಂಕ್ರ್ ಬುಡ್ಸಿಕೆ ನೋಡ್ತಿತ್ತ್. ಆಗ ಗೌರಮ್ಮಜ್ಜಿ ಅಂವನ ಕುಂಞಿ ಕೈನ ಹಿಡ್ಕಂಡ್, ಅದ್ಕೆ ಮುತ್ತು ಕೊಟ್ಟ್,

"ಬೇಡ ಬಾಬೆ, ನಿನ್ನಂದ ಆಕಿಲ್ಲೆ. ನಿನ್ನ ಕೈ ಬೆಣ್ಣೆ ಮುದ್ದೆ ಹಾಂಗುಟ್ಟು. ಅದ್ಕೆ ಚೀಂಕ್ರ್ ಮೆನಿ ಹೆಟ್ಟುದು. ನೀ ಮುಟ್ ಬಡ"– ಎಂತ ಹೇಳ್ತಿದ್ರೊ. ಆಗ ಅಂವ,

"ನಿಮ್ಮ ಕೈಗೆ ಚೀಂಕ್ರ್ ಹೆಟ್ಟಿಕಿಲ್ಲೆನೋ?"– ಎಂತ ಕೇಳ್ತಿತ್ತ್.

"ನೋಡು ನನ್ನ ಕೈ ಹೇಂಗೆ ದಡ್ಡ್ ಕಟ್ಟಿ ಹೋಗುಟ್ಟು. ಇದ್ಕೆ ಚೀಂಕ್ರ್ ಹೆಟ್ಟಿಕಿಲ್ಲೆ."– ಎಂತ ಹೇಳಿ ಅವರ ಕೆಲ್ಸ ಮಾಡಿ, ಮಾಡಿ ಬೊಡ್ಡ್ ಹಿಡ್ದ ಅಂಗೈನ ಅಂವನ ಕೆನ್ನೆಗೆ ಪೂಜಿದ್ ಹೇಳ್ತಿದ್ರೊ.

"ಅದೇನ್ ಉಗ್ಗವಾ, ನಿಮ್ಮ ಕೈ ಗಟ್ಟಿ ಇರ್ದು ನನ್ನ ಕೈ ನೋಡಿ ಮೆತ್ತಂಗೆ ಉಟ್ಟು?"– ಎಂತ ಅಂವ ಕೆಂಪು, ಕೆಂಪು ಇದ್ದ ಅಂವನ ಎರ್ಡ್ ಅಂಗೈಗಳ ಅವ್ಕೆ ತೋರ್ಸ್ತಿತ್ತ್. ಆಗ ಗೌರಮ್ಮನೊವು ನೆಗಾಡಿಕಂಡ್,

"ನೀ ಈಗ ಬಾಬೆ ಅಲ್ಲನೋ? ನನ್ನಾಂಗೆ ಪ್ರಾಯ ಆಕನ ನಿನ್ನ ಕೈನೂ ಬೊಡ್ಡ್ ಹಿಡ್ದ್ಯೋದು"– ಎಂತ ಹೇಳ್ತಿದ್ರೊ. ಆಗ ಅಂವ ಅವರ ಮೋರೆನನೇ ನೋಡ್ತಿತ್ತ್.

ಅವು ಕರ್ ಬುಡಿಕೆ ಹಟ್ಟಿಗೆ ಹೋಕನ ಒಂದು ಕೈಲಿ ಕರ್ ಬುಡುವ ಚೊಂಬುನ ಹಿಡ್ಕಂಡ್, ಗ್ಲಾಸ್‌ನ ಅಂವನ ಕೈಲಿ ಹಿಡ್ಯಕೆ ಕೊಟ್ಟ್, ಅಂವನ ಸೊಂಟಲಿ ಚೆಚ್ಚಿಕಂಡ್ ಹೋಗಿ ಬೈಪಣೆಲಿ ಕುದ್ರಿಸಿ, ಕರ್ ಬುಡ್ತಿದ್ರೊ. ಅಂವ ಕರ್ ಮೊಲೆ ಉಂಬೋದರನೇ ನೋಡಿಕಂಡ್ ಕುದ್ರ್‌ತಿತ್ತ್. ಅದರ ಎಳ್ದ್ ಕಟ್ಟಿಕಾಕನ, ಅದರ ಬಾಯಿಂದ ನೊರೆ ಹಾಲ್ ಇಳ್ಯೋದರ ನೋಡಿ,

"ಪಾಪ ನೋಡಿ ಉಗ್ಗವ, ಅದ್ಕೆ ಹೊಟ್ಟೆ ತುಂಬಿತ್ಲೆ. ಉಂಬೆನ ಬಾಯಿಂದ ಹಾಲ್ ಇಳ್ದದೆ"– ಎಂತ ಹೇಳ್ತಿತ್ತ್.

" ಅದ್ಕೂ ಎರ್ಡ್ ಮೊಲೆ ಹಾಲ್ನ ಕೊಟ್ಟನೆ ಬಲಾ ಹೆಚ್ಚ್ ತಿಂದರೆ ಅದ್ ಉರ್ಚುದು. ನಿಂಗೂ ಕುಡ್ಯಕೆ ಆಕಲೆ. ಎರ್ಡ್ ಮೊಲೆ ಹಾಲ್ನ ನಾ ಕರ್ಕಣೆ." ಎಂತ ಹೇಳಿ ಗ್ಲಾಸ್‌ಲಿ ಹಾಲ್ನ ಕರ್ದ್, ಕರ್ದ್ ಚೊಂಬುಗೆ ತುಂಬುಸುತಿದ್ರೊ. ಹಾಲ್ ಕರ್ದಾದ ಮೇಲೆ ಕರ್‌ನ ಮೊಲೆ ಕುಡ್ಯಕೆ ಬುಟ್ಟ್, ಅಲ್ಲೆ ಹಟ್ಟಿ ಗೋಡೆ ಮೇಲೆ ಇಸಿದ

ಅಂಗಾರನ ಕಲ್ಲ್‌ಗೆ ಹಟ್ಟಿಲಿ ಒಟ್ಟಿ ಇಸಿದ ಸೊಪ್ಪುನ ಹೊರೆಂದ, ಒಂದು ಪೊರ್ಲುನ ಸೊಪ್ಪುನ ತೆಗ್ದ್, ಅವರ ಸೀರೆ ಸೆರ್‌ಂಗ್‌ಲಿ ಪೂಜಿ, ಹಾಲ್ ಚೊಂಬುಗೆ ಅದರ ಕಂತಿಸಿ, ಸೊಪ್ಪುಲಿ ಅಂಟಿದ ನೊರೆ ಹಾಲ್ನ ಅಂಗಾರನ ಕಲ್ಲ್‌ನ ಮೇಲೆ ಇಸಿ, ಕೈ ಮುಗ್ದ್, ಒಂದ್ ಗ್ಲಾಸ್ ತುಂಬಾ ಆಗ ತಾನೇ ಕರ್ದ ಬಿಸಿ ನೊರೆ ಹಾಲ್ನ ಪುಳ್ಳಿಗೆ ಹಟ್ಟಿಲೇ ಕುಡ್ಸಿ, ಒಂದು ಕೈಲಿ ಅಂವನ ಸೊಂಟಲಿ ಕೋಸಿಕಂಡ್, ಇನ್ನೊಂದು ಕೈಲಿ ಹಾಲ್ನ ಚೊಂಬುನ ಹಿಡ್ಕಂಡ್ ಮನೆಗೆ ಬಾತಿದ್ದೊ. ಅಂವ ಹಾಲ್ ಕುಡ್ದಾದ ಮೇಲೆ ಕುಡ್ದ ಗ್ಲಾಸ್‌ನ ಒಂದು ಕೈಲಿ ಹಿಡ್ಕಂಡ್ ಬಲ್ದ ಕೈ ತೋರ್ಬೆರಳ್‌ನ ಗ್ಲಾಸ್‌ನ ಒಳಗೆ ಹಾಕಿ ಕೈಗೆ ಅಂಟಿದ ನೊರೆನ ಚೀಂಪಿಕಂಡ್ ಉಗ್ಗವನ ಸೊಂಟಲಿ ದೊರೆ ಮಂಜನ ಹಾಂಗೆ ಕುದ್ದ್‌ಕಂಡ್ ಬಾತಿತ್ತ್. ಗೌರಮ್ಮಜ್ಜಿ ಅಡ್ಗೆ ಕೋಣೆಲಿ ಅಂವನ ಇಳ್ಸಿ, ಹಾಲ್‌ನ ನೊಲುಲಿ ಇಸಿ,

"ನೀ ದಿನ ಹೋದಾಂಗೆ ಬಾರ ಆದಿಯ ಬಾಬೆ ನಾಳೆಂದ ನೀ ನಡ್ಕಂಡ್ ನನ್ನೊಟ್ಟಿಗೆ ಬರೊಕು ಬಲಾ? ನಂಗೆ ನಿನ್ನ ಚೆಚ್ಚಿಕಂಡ್ ಬಾಕೆ ಸಕ್ತಿ ಇಲ್ಲೆ"– ಎಂತ ಹೇಳ್ತಿದ್ದೊ. ಮೊಜ್ಜಿಗೆ ಕಡ್ಯಕನನೂ ಅಂವ ಅವರ ಹಕ್ಕಲೆ ಏನಾದರ್ ಒಂದು ಲೋಟಣೆ ಕೆಲ್ಸ ಮಾಡಿಕಂಡ್ ಕುದ್ರಿತಿತ್ತ್. ಬೆದ್ರ್‌ನ ಗುತ್ತಿಲಿ ಮೊಸ್ರ್ ಹಾಕಿ, ಕಡ್ದ ಮೇಲೆ ಬೆಣ್ಣೆ ಬಾಕಾಕನ ಅದರ ತೆಗ್ದ್ ಮೊಣ್ಣ್‌ನ ಮೊಡ್ಕೆಗೆ ಹಾಕ್‌ತಿದ್ದೊ. ಅದರ್ಲಿ ತೇಲಿಕಂಡ್ ಇದ್ದ ಬೆಣ್ಣೆಂದ ಒಂದ್ ಗೋಟಡ್ಕೆನಸ್ಟ್ ಬೆಣ್ಣೆನ ತೆಕಂಡ್,

"ಇಂದಾ ಬಾಯಿ ಬುಡು"– ಎಂತ ಹೇಳಿ ಅಂವನ ಬಾಯಿಗೆ ಹಾಕ್‌ತಿದ್ದೊ. ಮೊಜ್ಜಿಗೆಂದ ಬೆಣ್ಣೆನ ತೆಗ್ದ್ ನೀರ್‌ನ ಪಾತ್ರಕ್ಕೆ ಹಾಕಿದ ಮೇಲೆ, ಒಂದ್ ಗ್ಲಾಸ್ ದಪ್ಪ ಸೀಂಯಿ ಮೊಜ್ಜಿಗೆನ ಅಂವಂಗೆ ಕುಡ್ಯಕೆ ಕೊಡ್ತಿದ್ದೊ. ಅಂವಂಗೂ ಉಗ್ಗವ ಕೊಡುವ ಹಾಲ್, ಬೆಣ್ಣೆ, ಸೀಂಯಿ ಮೊಜ್ಜಿಗೇಂತೇಳ್ರೆ ಬಾಳ ಇಸ್ಟ. ಅದ್ಕೇ ಅಂವ ಕರ್ ಬುಡಿಕನ ಅವರ ಬೀಲ ಹಿಡ್ಕಂಡ್ ಹೋಗ್ತಿತ್ತ್. ಮೊಜ್ಜಿಗೆ ಕಡ್ಯಕನ ಯಾಗ ಬೆಣ್ಣೆ ಸಿಕ್ಕಿದೇಂತ ಕಾದ್ ಕುದ್ರ್‌ತಿತ್ತ್.

ಅಜ್ಜಪ್ಪನೊಟ್ಟಿಗೂ ತೋಟಕ್ಕೆ ಹೋಕಾಕನ, ಅವು ಸೋಗೆನ, ಹಾಳೆನ ಕಡ್ದ್ ಒಟ್ಟಿಕಾಕನ, ಇಂವ ಒಂದೊಂದೇ ಸೋಗೆನ ಎಳ್ಕಂಡ್ ಬಂದ್ ಅವರ ಹಕ್ಕಲೆ ಹಾಕ್ತಿತ್ತ್. ಹಾಂಗಾಗಿ ಅಜ್ಜಪ್ಪಂಗೂ, ಉಗ್ಗವಂಗೂ ಸಣ್ಣ ಪಿಳ್ಳಿಂತೇಳ್ರೆ ಜೀವ. ಉಂಬಕೆ ಕುದ್ರಿಕನನೂ ಅಜ್ಜಪ್ಪ ಅಂವನ ತೊಡೆ ಮೇಲೆ ಕುದ್ರಿಸಿಕಂಡ್ ಬಾಯಿಗೆ ತಿನ್ಸ್‌ತಿದ್ದೊ.

ಸುರೇಶ ಸಣ್ಣಂವ ಇರಿಕನ ಅಪ್ಪ ಅವ್ವಂಗೆ ಅಂಟಿಕಂಡಿರ್ತಿತ್ತ್. ಅಂವ ಹುಟ್ಟಿದ್ ಎರ್ಡ್ ವೊರ್ಸ ಕಳ್ದ ಮೇಲೆ ಗಿರೀಶ ಹುಟ್ಟಿತ್. ಗಿರೀಶನ ಎತ್ತಿಕಂಬಕನ ಸುರೇಶ ಹಟ ಮಾಡ್ತಿತ್ತ್.

"ನನ್ನನೇ ಎತ್ತಿಕಾ" ಎಂತ ಮೊರ್ಡ್ತಿತ್ತ್. ಎರ್ಡ್ ಮಕ್ಕಳ ಸುದಾರ್ಸಿಕಂಡ್, ಮನೆ ಕೆಲ್ಸ ಮಾಡಿಕೆ ಕಮಲಕ್ಕಂಗೆ ಬಂಜ ಆಗ್ತಿತ್ತ್. ಗೌರಮ್ಮನೊವು ಸೊಸೆನ ಈ ಕಸ್ಟನ ನೋಡಿ, ಸುರೇಶನ ಹಕ್ಕಲೆ ಕರ್ಕಂಬತಿದ್ದೊ. ಆದರೆ ಸುರೇಶ ಅವರ ಹಕ್ಕಲೆ ಹೋಗ್ತಿತ್ತೆ. ಅಂವಂಗೆ ಅವ್ವನೇ ಬೇಕಾಗಿತ್ತ್. ಹಂಗಾಗಿ ಸಣ್ಣ ಸಣ್ಣ ಕೂಸುನ ಚಾಕ್ರಿನ ಅವೇ ಮಾಡ್ತಿದ್ದೊ. ಎಂಣೆ ಹಾಕುದು, ಮಿಾಸುದು, ಊಡ್ಸುದು, ಮೊಲ್ಲುಗಸುವುದು ಎಲ್ಲಾ ಕೆಲ್ಸಗ ಗೌರಮ್ಮನವ್ಕೇ ಸಿಕ್ತಿತ್ತ್. ಮೊಲೆ ಕೊಡಿಕೆ ಮಾತ್ರಾ ಕಮಲಕ್ಕ ಹಕ್ಕಲೆ ಬುಡ್ತಿದ್ದೊ.

ಸುರೇಶ ಸಣ್ಣಂವ ಇರಿಕ್‌ನ ಜಾಲ್‌ಲಿ ಕೋಳಿ ಹೇಲ್ ಮೆನಿ ಮೆಟ್ಟಿರೆ, ಇಲ್ಲರೆ ಸೆಗೆಣಿ ಮೆನಿ ಅಂವನ ಕಾಲಿಗೆ ತಾಂಗಿರೆ, ಅಂವ "ಅವ್ವಾ, ಇಸ್ಸೀ, ಇಸ್ಸೀ"– ಎಂತ ಬೊಬ್ಬೆ ಹೊಡ್ಯತಿತ್ತ್. ಆಗ ಕಮಲಕ್ಕ ಓಡಿ ಬಂದ್ ಅಂವನ ಚೆಚ್ಚಿಕಂಡ್ ನಲ್ಲಿ ನೀರ್ನ ಹಕ್ಕಲೆ ಹೋಗಿ, ಅಂವನ ಕಾಲ್ನ ತೊಳ್ಸಿ ಒಳಗೆ ಕರ್ಕಂಡ್ ಬಾತಿದ್ದೊ. ಆದರೆ ಗಿರೀಶ ಹಾಂಗಲ್ಲ ಅಂವನ ಕಾಲ್‌ಗೆ ಸೆಗೆಣಿ, ಕೋಳಿ ಹೇಲ್ ತಾಂಗಿರೆ, ಅಂವನೇ ನೀರ್ನ ಹಕ್ಕಲೆ ಹೋಗಿ ಕಾಲ್ನ ತೊಳ್ದ್ ಮನೆಗೆ ಬಾತಿತ್ತ್. ಇಜ್ಜೆಲಿಲಿ ಕೋಳಿಗ ಪಿಳ್ಳೆಗಳ ಒಟ್ಟಿಗೆ ಸೇರಿಕಂಡ್, ಹೂ ದೈಗಳ ಬುಡಲಿದ್ದ ಕಾಡ್‌ನ ಒಕ್ಕಿ, ಹುಳು ಹುಪ್ಪಟೆನ ಕೆದ್ಕಿ, ಕೆದ್ಕಿ ತಿಂಬಕನ ಗಿರೀಶ ಕೋಳಿಗಳ ಓಡ್ಸಿ ಕಂಡ್ ಹೋಗ್ತಿತ್ತ್. ದೊಡ್ಡ ಕೋಳಿಗ ಅಂವನ ಕೈಗೆ ಸಿಕ್ಕ್‌ತಿತ್ತೆ. ಪಿಳ್ಳೆಗ ಮೆನಿ ಅಂವಂಗೆ ಹಿಡ್ಯಕೆ ಸಿಕ್ಕಿರೆ, ಅದರ ಹಿಡ್ಕಂಡ್ ಚಿಪ್ಪಿಲಿ ಕಡ್ಯಕ್ಕಿ ಹಾಕಿ ಅದರ ಬಾಯಿಗೆ ತಿನ್ಸ್‌ತಿತ್ತ್. ಇದೇ ಅಬ್ಯಾಸ ಆಕನ ಕಡೆಕಡೆಗೆ ಪಿಳ್ಳೆಗಳೇ ಅಂವನ ಹಕ್ಕಲೆ ಬಾತಿದ್ದೊ. ಇಜ್ಜೆಲ್‌ಲಿ ಹರ್ಕಂಡ್ ಹೋಗ್ತಿದ್ದ ಹುಳು ಹುಪ್ಪಟೆಗಳ ಕೈಲಿ ಹಿಡ್ಯತಿತ್ತ್. ಇದರೆಲ್ಲಾ ನೋಡಿ ಉಗ್ಗವ ಅಂವಂಗೆ ಬೊಯ್ಯತಿದ್ದೊ.

ಒಂದಿನ ಸುರೇಶ, ಗಿರೀಶ ಇಜ್ಜೆಲಿಲಿ ಆಟ ಆಡಿಕಂಡಿರಿಕನ ಒಂದು ಸಣ್ಣ ಮೊರಿ ಕೇರೆ ಹಾವು ಸರ ಸರ ಹೋಗ್ತಿತ್ತ್. ಗಿರೀಶ ಓಡಿಕಂಡ್ ಹೋಗಿ ಅದರ ಹಿಡ್ಯಕೆ ನೋಡ್ತ್. ಆಗ ಸುರೇಶ ಅದರ ನೋಡಿ ಎರ್ಡ್ ಕೈಗಳ ಕೆಬಿಗೆ ಹಿಡ್ಕಂಡ್, ಕಣ್ಣ್ ಮುಚ್ಚಿಕಂಡ್, "ಅವ್ವಾ, ಅವ್ವಾ"ಂತ ಕಿರ್ಚಿತ್. ಅಂವನ ಬೊಬ್ಬೆ ಕೇಳಿ, ಒಳಗೆಂದ ಗಾಬೆರಿಲಿ ಕಮಲಕ್ಕ ಗೌರಮ್ಮನೊವು ಓಡಿ ಬಂದೊ. ನೋಡಿವೆ, ಕೇರೆ ಹಾವು ಒಂದು ಮೋಟೆಗೆ ನುಗ್ಗ್‌ತಿತ್ತ್. ಗಿರೀಶ ಅದರ ಬೀಲನ ಹಿಡ್ಯಕೆ ಅದರ ಹಕ್ಕಲೆ ಓಡ್ತಿತ್ತ್. ಇದರ ನೋಡಿ ಗೌರಮ್ಮನೊವು ಓಡಿ ಹೋಗಿ ಅಂವನ ಚೆಚ್ಚಿಕಂಡ್,

"ಅಯ್ಯೋ ಬಾಬೆ, ಎಂತಾ ಮಲದ್ರ ಮಾಡ್ತಿದ್ದ? ನಿಂಗೆ ಒಂದಿಸ್ಟ್ ಹೆದ್ರಿಕೆ ಇಲ್ಲೆನೋ? ಕೇರೆ ಅದರ ಬೀಲಲಿ ಬೊಡ್ದರೆ, ಚಾಟಿ ಬೀಸಿದಾಂಗೆ ಆದೆ ಗಡ. ನೀ ಒಂದಲ್ಲ ಒಂದ್ ದಿನ ಏನಾದರ್ ಮಲಾದ್ರ್ ಮಾಡೊವನೆ." ಎಂತ ಒಳಗೆ

ಕರ್ೊಂಡೋದೊ. ಹೆದ್ರಿ ನಡ್ಗ್‌ತಿದ್ದ ಸುರೇಶನ ಚೆಚ್ಚಿಕಂಡ್ ಕಮಲಕ್ಕ ಒಳಗೆ ಹೋದೊ. ಸುರೇಶಂಗೆ ಇರ್ವ್ ಇಡೀ ಜರ ಬಾತ್. ಬೊಳ್ಪುಗೆ ಗೌರಮ್ಮನೊವು ತೊಳ್ಸಿ, ಸಾಂಬ್ರಾಣಿ ಸೊಪ್ಪು, ಪಂಚಪತ್ರೆ, ಕಿರಾತಕಡ್ಡಿ ಗುದ್ದಿ ಹಾಕಿ ಕಸಾಯಮಾಡಿ ಕುಡ್ಸಿದೊ. ಚಾಮಯ್ಯ ಗೌಡ್ರು ಅಂವಂಗೆ ಹೆದ್ರಿಕೆ ಹೋಕೆ ನೂಲು ಮೊಂತ್ರಿಸಿ ಕಟ್ಟಿದೊ. ಹಿಂಬೊತ್ತಾಕನ ಅಂವನ ಎರ್ಡ್ ಕಣ್ಣ್‌ಗ ಕೆಂಪು ದಾಸಾಳ್‌ದಾಂಗೆ ಆತ್. ಆಗ ಗೌರಮ್ಮಜ್ಜಿ, ಕಮಲಕ್ಕಂಗೆ ಹೇಳಿ, ಅಂವಂಗೆ ಹೆದ್ರಿಕೆ ಹೋಕೆ, ದೃಷ್ಟಿ ತೆಗ್ಯಕೆ, ಕುರ್ದಿ ನೀರ್ ಮಾಡ್ಸಿ, ಮೂರು ಕಂಚಿನ ಬಟ್ಲ್‌ಗೆ ಸಮಪಾಲ್ ಮಾಡಿ ಹಾಕ್ಸಿದೊ. ಒಂದು ಗಟ್ಟದ ಹರ್ವ್‌ನ ದಂಡ್‌ನ ಕಡ್ಕಂಡ್ ಬಂದ್, ಅದರ ಬೆರ್ಳ್‌ನಸ್ಟ್ ಉದ್ದದ ಮೂರು ತುಂಡು ಮಾಡಿ, ಅದರ ಮೂರು ಬಟ್ಲ್‌ನ ನೊಡುಲಿ ಇಸಿ, ಅದರ ಮೇಲೆ ದಳಿಯಂದ ಮಾಡ್ದ ನೆಣೆನ ಎಂಣೆಲಿ ಕಂತಿಸಿ ಇಸಿದೊ. ಕಮಲಕ್ಕನೊಟ್ಟಿಗೆ, ಸುರೇಶನ ಮೊಟ್ಟೆಲಿ ಕುದ್ರಿಸಿಕಂಡ್, ಮನೆನ ಎದ್ರ್‌ನ ಮೇಲೆನ ಮೆಟ್ಲ್‌ಲಿ ಕುದ್ರಿಕೆ ಹೇಳ್ದೊ. ಅವು ಸುರೇಶನ ಹಿಡ್ಕಂಡ್ ಕುದ್ರಿಕಾಕನ, ಗೌರಮ್ಮನೊವು ಅಂವನ ತಲೆ ಮೇಲೆ ಒಂದು ಕುರ್ದಿ ನೀರ್ನ ಬಟ್ಲ್‌ನ ಇಸಿ, ಅದರ್ಲಿದ್ದ ನೆಣೆನ ಹೋಸಿದೊ. ಒಂದು ಸಣ್ಣ ಕೊಡ್ಪಾಣನ ತಕಂಡ್, ಸುರೇಶಂಗೆ ಕೆಳಗೆಂದ ಮೇಲೆ, ಮೇಲೆಂದ ಕೆಳಗೆ, ಮೂರು ಸುತ್ತು ತಂದ್ ಅದರ ಬಟ್ಲ್ ಮೇಲೆ ಕಂಕಣಿ ಹಾಕಿ, ಕೊಡ್ಪಾಣನ ಒತ್ತಿ ಹಿಡ್ಕಂಡೊ. ಆಗ ಬಟ್ಲ್‌ಲಿದ್ದ ಕುರ್ದಿ ನೀರ್ ಗೊಳೊ ಗೊಳೊಂತ ಹೇಳಿಕಂಡ್ ಮೇಲೆ ಕೊಡ್ಪಾಣಕ್ಕೆ ಏರಿತ್. ಆಗ ಆ ಬಟ್ಲ್‌ನ ಅಂವನ ತಲೆ ಮೇಲೆಂದ ತೆಗ್ದ್, ಸೂರೆಡಿ ಅಡಿಲಿ ಇಸಿದೊ. ಅದರ್‌ಂದ ಮೇಲೆ ಕಮಲಕ್ಕನ ಕೆಳಗೆನ ಮೆಟ್ಲ್‌ಲಿ ಅಂವನ ಹಿಡ್ಕಂಡ್ ಕುದ್ರಿಕೆ ಹೇಳ್ದೊ. ಅಲ್ಲಿ ಅವು ಕುದ್ರಿಕನ ಎರಡ್ನೇ ಬಟ್ಲ್‌ಲಿದ್ದ ಕುರ್ದಿ ನೀರ್‌ನ ಅಂವನ ತಲೆ ಮೇಲೆ ಇಸಿ, ದೀಪ ಹೋಸಿ, ಕೊಡ್ಪಾಣನ ತಲೆ ಸುತ್ತ್ ತಂದ್ ಕಂಕಣೆ ಹಾಕಿದೊ. ಕುರ್ದಿ ನೀರ್ ಮೇಲೆ ಏರಿದ ಮೇಲೆ ಅದರನೂ ಸೂರೆಡಿ ಅಡಿಲಿ ಇಸಿದೊ. ಮೂರ್ನೇ ಸರ್ತಿ ಜಾಲ್‌ಗೆ ತಾಂಗಿಕಂಡಿದ್ದ ಮೆಟ್ಲ್ ಮೇಲೆ ಕುದ್ರಿಸಿ, ಮುಂದೆನಾಂಗೆ ಮಾಡ್ದೊ. ಆ ಮೇಲೆ ಅಂವನ ಒಳಗೆ ಕರ್ೊಂಡೋಗಿ, ಒಂದ್ ಕೊಂಡೆ ಕಸಾಯ ಕುಡ್ಯಕೆ ಕೊಟ್ಟ್, ಕಂಬ್ಳಿ ಹೊದ್ದ್ ಮೊಲ್ಗಿಸಿದೊ. ಮಾರ್ಣೆ ದಿನ ಅಂವ ಉಸಾರಾತ್. ಅಂವಂಗೆ ಹೆದ್ರಿಕೆಂದ ಜರ ಬಂದದ್‌ಂತ ಚಾಮಯ್ಯ ಗೌಡ್ರು ಹೇಳ್ದೊ. ಅವು ಯಾಗೋಳೂ ಹೆಣ್ಣ್‌ನೊಟ್ಟಿಗೆ ಹೇಳ್ತಿದ್ದೊ.

"ನೋಡ್‌ನೆ, ನನ್ನ ಈ ಪುಳ್ಳಿಕಳಲಿ ಗಿರೀಶನೇ ಮುಂದೆ, ನಾ ಕಸ್ಟಪಟ್ಟ್ ಮಾಡ್ದ ಆಸ್ತಿನ ಒಳ್ಸಿಕಂಬಂವ ನೋಡು ಬೇಕರೆ, ನಾ ಸತ್ತರೂ ಒಳ್ದೋವು ಹೇಳ್ವೋ"– ಎಂತ ಹೇಳ್ತಿದ್ದೊ.

ಚಾಮಯ್ಯ ಗೌಡ್ರು ಮತ್ತೆ ಗೌರಮ್ಮನೊವು ದಿಡೀರ್ ಆಗಿ ಜೀಪು ಅಪಗಾತಲಿ

ಸತ್ತ್ ಹೋಕನ ಸುರೇಶ ಹತ್ತ್ ವೊರ್ಸದ ಕೂಸು. ಐದ್ನೇ ಕ್ಲಾಸ್‌ಲಿ ಓದ್ತಿತ್ತ್. ಗಿರೀಶಂಗೆ ಆಗ ಎಂಟ್ ವೊರ್ಸ. ಅಂವ ಮೂರ್‍ನೇ ಕ್ಲಾಸ್‌ಲಿ ಓದ್ತಿತ್ತ್. ಸಣ್ಣ ಮಕ್ಕ ಅಪಘಾತಲಿ ಸತ್ತ ಹೆಣನ ನೋಡ್ರೆ ಹೆದ್ರುವೋಂತ ಹೆಣನ ತೋರ್‍ಲ್ಲೆ. ಆಸ್ಪತ್ರೆಂದ ಮಾರ್‍ನೆದಿನ ಹಿಂಬೊತ್ತ್ ಅಯ್ಯಣ್ಣ ಮಾಸ್ಟ್ರಿಗೆ ಹೆಣಗಳ ಬುಟ್ಟ್ ಕೊಟ್ಟೊ. ಹಂಗಾಗಿ ಇರ್‍ಳ್ನೇ ಎಲ್ಲಾ ಕಾರ್ಯಕ್ರಮನ ಮಾಡಿ ಮುಗ್ಸಿದೊ. ವಿಟ್ಲಂದ, ಪಂಬೆತ್ತಾಡಿ, ಗುತ್ತಿಗಾರ್, ಪಂಜಂದ, ಸುತ್ತುಮುತ್ತೊಳ್‌ನ ಗ್ರಾಮಗಳ್‌ಂದ ಸಾವಿರಾರ್ ಜನ ಬಂದ್ ಅವರಿಬ್ಬೊರ ಹೆಣನ ನೋಡಿ ಹೋಗ್ತಿದ್ದೊ. ಈ ಗದ್ದಳಲಿ ಮಕ್ಕಳ ಕೆಳೋವೇ ಇತ್ಲೆ. ಚಾಮಯ್ಯ ಮಾಸ್ಟ್ರ ಅಕ್ಕ ಚಿನ್ನಮ್ಮನೋವು ಮಕ್ಕಳಿಬ್ಬರ ಕರ್‍ಕಂಡ್ ಕುಕ್ಕಪ್ಪಣ್ಣನ ಮನೆಗೆ ಹೋಗಿ ಅಲ್ಲಿ ಬುಟ್ಟ್ ಬಂದೊ. ಮಕ್ಕಳಿಗೆ ಸುರು ಸುರುಗೆ ಇದೆಲ್ಲಾ ಯಾಕೇಂತ ಅರ್ತನೇ ಆತ್ಲೆ. ಕುಕ್ಕಪ್ಪಣ್ಣನ ಹೆಣ್ಣ್ ಗಂಗಮಕ್ಕ ಮಕ್ಕಳಿಬ್ಬರ ಆದಿನ ಅವರಲ್ಲೇ ಮೊಲ್ಗಿಸಿಕಂಡ್ ಮಾರ್‍ನೆ ದಿನ ಕಳ್ಸಿದೊ. ಮನೆಗೆ ಬಾಕನ ಅಜ್ಜಪ್ಪ, ಉಗ್ಗವ ಇಬ್ಬೊರು ದೇವ್ರಕ್ಕಲೆ ಹೋಗೋಳೋಂತ ಕಮಲಕ್ಕ ಹೇಳ್ದೊ. ಅದರ್‌ಂದ ಮೇಲೆ ಗಿರೀಶ ಬಾಳ ಮಂಕಾಗಿ ಇರ್ತಿತ್ತ್. ಚಿನ್ನಮ್ಮನೊವು ತಮ್ಮ ತೀರಿ ಹೋಗಿ ಒಂದ್ ತಿಂಗ ಮುಟ್ಟ ತಮ್ಮನ ಮನೆಲೇ ನಿತ್ತೊ. ಅಯ್ಯಣ್ಣ ಮಾಸ್ಟ್ರ ಮತ್ತೆ ಕಮಲಕ್ಕ ಅಪ್ಪ ಅವ್ವ ತೀರಿಹೋದ ಮೇಲೆ ಗಿರೀಶನ ಬಾಳ ಜಾಗ್ರತೆಲಿ ನೋಡಿಕಂಬತಿದ್ದೊ. ಅಜ್ಜಪ್ಪ, ಉಗ್ಗವನ ನೆಂಪು ಬಾರದಾಂಗೆ ಕೊಂಡಾಟ ಮಾಡ್ತಿದ್ದೊ. ಆದರೂ ಗಿರೀಶ ಆಗಾಗ ಅಜ್ಜಪ್ಪ ಉಗ್ಗವನ ನೆನ್ಸಿಕಂಡ್ ದುಕ್ಸ್‌ಸಿ ದುಕ್ಸ್‌ಸಿ ಮೊರ್‍ಡ್‌ತಿತ್ತ್. ಸಾಲೆಲಿ ಅಂವನ ಕ್ಲಾಸ್‌ನ ಮಕ್ಕ ನಿನ್ನ ಅಜ್ಜಪ್ಪ, ಉಗ್ಗವ ಸತ್ತೋದೊ. ಇನ್ನ್ ಅವು ಬಾಕಿಲ್ಲೇಂತ ಹೇಳಿಕಾಕನ ಬೆರೇಂತ ಮೊರ್‍ಡ್‌ತಿತ್ತ್.

ಆಗ ಟೀಚರ್‌ಗ ಆ ಮಕ್ಕಳ ಜೋರ್ ಮಾಡ್ತಿದ್ದೊ. ಅಂವನೆದ್‌ರ್ ಅಂವನ ಅಜ್ಜ, ಅಜ್ಜಿ ಸತ್ತ ಸುದ್ದಿನ ಎತ್ತಿಕಾಗದ್‌ಂತ ಮಕ್ಕಳಿಗೆ ಹೇಳ್ತಿದ್ದೊ.

ದಿನ ಕಳ್ದಾಂಗೆ ಅಂವನ ದುಕ್ಕ ಕಮ್ಮಿ ಆತ್. ಓದುದರ್‍ಲೇ ಹೊತ್ತ್ ಕಳ್ಯತಿತ್ತ್. ಅಂವಂಗೆ ಕೃಷಿಲಿ ಇಸ್ಟ್ ಇದ್ದ ಕಾರ್‍ಣ, ಅಂವನ ಧಾರವಾಡಕ್ಕೆ ಕಳ್ಸಿ, ಕೃಷಿ ವಿದ್ಯಾಲಯಲಿ ಪದವಿ ಪಡ್ಯಕೆ ಅಯ್ಯಣ್ಣ ಮಾಸ್ಟ್ರ ಏರ್ಪಾಡ್ ಮಾಡ್ದೊ. ಚಿಕ್ಕಮಗಳೂರ್‌ಲಿ ಕೆಲ್ಸ ಸಿಕ್ಕಿದ ಮೇಲೆ, ಅಂವ ಆತ್. ಅಂವನ ಕೆಲ್ಸ ಆತ್. ಹಾಂಗೆ ಇರ್ತಿತ್ತ್. ಅಲ್ಲಿಂದ ಮನೆಗೆ ಬಾಕಾಕನೆಲ್ಲಾ ಮಿತ್ರ ತಳಿನ ಒಳ್ಳೆ ಮೆಣ್ಸ್ ಬೊಳ್ಳಿನನೋ, ಚಾಯಿಕಾಯಿ, ಲವಂಗ, ಏಲಕ್ಕಿ ದೈಗಳನೋ ತಂದ್ ಅಪ್ಪಂಗೆ ಕೊಟ್ಟ್ ತೋಟಲಿ ನೆಡಿಕೆ ಸಾಯ ಮಾಡ್ತಿತ್ತ್.

* * * * *

24. "ಹಪ್ಪಳದ ಗೌಜಿಲಿರಿಕನ ಗಿರೀಶ ಬಾತ್"

ಅಯ್ಯಣ್ಣ ಮಾಸ್ಟ್ರ ಬೈಲ್‌ಂದ ಬಂದೊವೇ ಜಾಲ್ ಗುಡ್ಸ್‌ತಿದ್ದ ಪಾಚುನ ನೋಡಿ,

"ಪಾಚು, ಜೀಪುಲಿ ಹಲ್ಸಿನ ಕಾಯಿ ಉಟ್ಟು. ಅದರ ಕೊಟಗೆಲಿ ಇಸ್"– ಎಂತ ಹೇಳಿ ಜಾಲ್ ಪುಡೆಲಿದ್ದ ನೀರ್‌ಲಿ ಕೈಕಾಲ್ ತೊಳ್ದ್ ಮನೆ ಒಳಗೆ ಹೋದೊ.

ಪಾಚು ಗುಡ್ಸುದರ ಅರ್ದಲೇ ಬುಟ್ಟ್, ಓಡಿ ಹೋಗಿ ಜೀಪುನ ಹಿಂದೆ ನೋಡಿಕನ ದೊಡ್ಡ ದೊಡ್ಡ ಎರ್ಡ್ ಬೆಳ್ಟ ಹಲ್ಸಿನ ಕ್ಯಾ ಇತ್ತ್. ಅದರ ನೋಡಿ,

"ಇದ್ ನಂಗೆ ಒಬ್ಬಂಗೇ ತಕೊಂಡೋಕೆ ಆಕಿಲ್ಲೆ." ಎಂತ ನೆನ್ಸಿಕಂಡ್, ಮನೆ ಹಿಂದೆನ ಬಾಕಿಲ್‌ಗೆ ಹೋಗಿ ಬೊಗ್ಗಿ ನೋಡಿಕನ ಸುಂದರಿ ತೊಳ್ದ ಪಾತ್ರಗಳ ಸೆಲ್ಫ್‌ಲಿ ಇಸ್‌ಕಂಡಿತ್ತ್.

"ಸುಂದರಿ ಅಕ್ಕಾ, ದನಿಗ ಹಲ್ಸಿನ ಕ್ಯಾ ತಂದೊಳೊ. ನಂಗೆ ಒಬ್ಬಂಗೇ ತಕಂಬಾಕೆ ಆದುಲ್ಲೆ. ನೀವು ಬಂದ್ ಹಂಞ ನಂಗೆ ಸಾಯ ಮಾಡಿನಿ"– ಎಂತ ಹೇಳ್ತ್.

"ನಿಂಗೆ ಒಂದು ಹಲ್ಸಿನ ಕಾಯೆನ ತಂದ್ ಇಸಿಕೆನೂ ನಾನೇ ಬೇಕೋ?" ಎಂತ ಗೊಣ್ಣಿಕಂಡ್ ಅದರ ಒಟ್ಟಿಗೆ ಜೀಪುನ ಹಕ್ಕಲೆ ಹೋಗಿ ಹಲ್ಸಿನ ಕಾಯೆನ ನೋಡಿಕನ

"ಅಬ್ಬಾ! ಎಸ್ಟ್ ದೊಡ್ಡದುಟ್ಟು? ನೀ ಹೇಳ್ದಾಂಗೆ ಇದ್

ಒಬ್ಬಂಗೆ ತಾಕೆ ಆಕಿಲ್ಲೆ. ಇಂದಾ, ಆ ಗೋಣಿನ ಇಲ್ಲಿ ತಾ. ಇಬ್ಬೊರು ಸೇರಿ ಗೋಣಿ ಮೇಲೆ ಇಸಿ ಒಳಗೆ ತಕಂಡ್ ಪೋಯಿ."– ಎಂತ ಹೇಳ್ತ್. ಸುಂದರಿ ಜೀಪುನ ಹಿಂದೆನ ಬಾಕಿಲ್ ತೆಗ್ದ್, ಒಳಗೆ ಹತ್ತಿ ಹಲ್ಸಿನ ಕ್ಯಾಗಳ ಕೆಳಗೆ ಉರ್ಳಿಸಿತ್. ಪಾಚು ಗೋಣಿ ಹಾಸಿ, ಅದರ ಮೇಲೆ ಹಲ್ಸಿನ ಕಾಯೆನ ಉರ್‌ಳಿಸಿ ಇಸಿತ್. ಇಬ್ಬೊರು ಸೇರಿ ಗೋಣಿ ಚೀಲನ ಮೂಲೆಗಳ ಎರ್ಡ್ ಕೈಲಿ ಹಿಡ್ಕಂಡ್ ಕೊಟಗೆನ ಒಳಗೆ ತಕೊಂಡೋಗಿ ಇಸಿದೊ. ಸುಂದರಿ ಮನೆ ಒಳಗೆ ಹೋಗಿ,

"ಅವ್ವಾ, ಅವ್ವಾ, ಇಲ್ಲಿ ಬನ್ನಿ ನೋಡಿ, ದೊಡಪ ಎಸ್ಟ್ ದೊಡ್ಡ ಹಲ್ಸಿನ ಕಾಯೆಗಳ ತಂದಳೊ."– ಎಂತ ಹೇಳಿ, ಕಮಲಕ್ಕನ ಕರ್ಕಂಡ್ ಬಂದ್ ತೋರ್ಸಿತ್. ಅವು ಹಲ್ಸಿನ ಕಾಯೆಗಳ ನೋಡಿ,

"ಬಾರೀ ದೊಡ್ಡ ಹಲ್ಸಿನ ಕಾಯೆಗ. ಬೈಲ್‌ಲಿ ಇದ್ದದರ ಯಾರಾದರ್ ಹೊತ್ತ್‌ಕಂಡ್ ಹೋಗದ್ ನಮ್ಮ ಪುಣ್ಯ."– ಎಂತ ಹೇಳಿ, ಅದರ ಹೆಬ್ಬೆಟ್ಟ್ ತೋರ್ಬೆಟ್ಟ್‌ನ ಕೂಡಿಸಿ, ಬೊಟ್ಟಿ ನೋಡಿವೆ.

"ಎರ್ಡ್ ದಿನಲಿ ಹಣ್ಣಾದು" ಕಮಲಕ್ಕ ಹೇಳಿಕೊಂಡೊ.

"ಅವ್ವಾ, ಇದರ ನಾವು ಹಲ್ಸಿನ ಹಪ್ಪಳ ಮಾಡೊಮೊ"– ಸುಂದರಿ ಹೇಳ್ತ್.

"ಹೌದಲ್ಲ. ಈ ವೊರ್ಸ ನಾವು ಹಪ್ಪಳನೇ ಮಾಡ್ತಿಲ್ಲೆ. ಆತ್ ಬಲಾ. ನೀವಿಬ್ಬೊರು ನಾಳೆ ಬೊಳ್ಪುಗೆ ಆರ್ ಗಂಟೆಗೆನೇ ಬಂದ್ ಇದರ ತೋಳೆ ತೆಗ್ದ್ ಮನಾರ ಮಾಡಿ ಕೊಡಿನಿ. ನಾ ಬೇಸಿ ಕೊಟ್ಟನೆ. ಉಳ್ದದರ ನೀವು ಮಾಡೊಕು. "– ಕಮಲಕ್ಕ ಹೇಳ್ದೊ.

"ಬೇಡವ್ವ, ಇಲ್ಲಿ ಹೇಂಗೂ ಒಲೆಗ ಒಳೊಲೆ. ನೀವು ಇಡ್ಲಿ ಬೇಸುವ ಕಳ್ಸಿಗೆ ಕೊಡಿನಿ. ನಾವು ಇಲ್ಲೆ ಕಿಚ್ಚಿಮೊಟ್ಟ್ ಬೇಸುವೆ. ಹೇಂಗೂ ಕಡ್ಕಲ್‌ನೂ ಇಲ್ಲೇ ಉಟ್ಟು. ಇಲ್ಲೆ ಗುದ್ದಿ ಉಂಡೆ ಕಟ್ಟೊಮೊ. ನೀವು ಒತ್ತಿ ಕೊಟ್ಟರೆ ಸಾಕ್, ಉಳ್ದದರ ನಾವು ಮಾಡಿವೆ." – ಪಾಚು, ಸುಂದರಿ ಹೇಳಿವೆ.

ಕಮಲಕ್ಕ ಒಪ್ಪಿಕೊಂಡೊ ಮೊರ್ದಿನ ಬೊಳ್ಪುಗೆ ಆರ್ ಗಂಟೆಗೆನೇ ಪಾಚು, ಸುಂದರಿ ಹಾಜಿರ್. ಕಮಲಕ್ಕ ಕೊಟ್ಟ ಬಿಸಿ, ಬಿಸಿ ಚಾಯನ ಕುಡ್ದ್ ಹಲ್ಸಿನ ಕಾಯೆನ ಹಜಿರ್ ಮಾಡಿಕೆ ಕುದ್ದೊ.

ಸುಂದರಿ ಹಲ್ಸಿನ ಕ್ಯಾಗಳ ಹೊಣ್ಕಿಸಿಕಂಡ್ ಬಂದ್ ಕೊಟಗೆನ ನೊಡುಲಿ ಒಂದು ಗೋಣಿ ಚೀಲನ ಹಾಸಿ, ಅದರ ಮೇಲೆ ಉರ್ಳ್‌ಸಿ ಇಸಿದ್ ಪಾಚು ನೊಟ್ಟಿಗೆ,

"ಇಂದಾ ಪಾಚು, ಹಟ್ಟಿ ಹಕ್ಕಲೆ ಸೌಯ್ದೆ ಒಡೆವ ಮೊಚ್ಚು ಉಟ್ಟು. ಅದರ ತಕಂಡ್ ಬಾ" ಎಂತ ಹೇಳಿದೆ.

ಪಾಚು ತಂದ್ ಕೊಟ್ಟ ಕೈ ಮೊಚ್ಚ್‌ನ ನೋಡಿ, "ನಾ ಹಲ್ಸಿನ ಕಾಯೆನ

ಹೊರ್ಳದಾಂಗೆ ಹಿಡ್ಕಣೆ. ನೀ ಮೊಚ್ಚಿಲಿ ನೊಡುಗೆ ಗಡಿ ಹಾಕ್"- ಎಂತ ಹೇಳಿದೆ.

ಪಾಚು ಹಲ್ಸಿನ ಕಾಯೆನ ನೊಡುಗೆ ಒಂದು ಗಡಿ ಹಾಕಿದೆ. ಅದ್ ನೊಡುಲಿ ಅರ್ದ ಬಾಗ ಆಕನ ಸುಂದರಿ ಅದರ ಹೊಣ್ಕಿಸಿದೆ. ಆಗ ಇನ್ನೊಂದು ಗಡಿ ಹಾಕಿದೆ. ಹಲ್ಸಿನ ಕಾಯ್ ಎರ್ಡ್ ತುಂಡಾತ್. ಒಂದೊಂದು ತುಂಡುನನೂ ಮೊಚ್ಚಿಲಿ ಗಡಿ ಹಾಕಿ ನಾಕ್ ನಾಕ್ ಬಾಗ ಮಾಡ್ತ್. ಸುಂದರಿ ಮಾಡ್‌ಲಿ ಸಿಕ್ಕಿಸಿ ಇಸಿದ್ದ ಮಾಯ್ಣದ ಕೋಲ್‌ನ ತೆಗ್ದ್‌ದ್, ಹಲ್ಸಿನ ಕಾಯೆಲಿ ಅಂಟಿಕಂಡಿದ್ದ ಮಾಯಣನ ಎಲ್ಲಾ ಕೋಲ್‌ಗೆ ಸುಂದಿತ್. ಹೀಂಗೆ ಎರ್ಡ್ ಹಲ್ಸಿನ ಕಾಯೆಗಳ ತುಂಡು ಮಾಡ್ದ ಮೇಲೆ, ಅವಿಬ್ರೊರು ಒಂದೊಂದು ಮೆಟ್ಟ್ ಕತ್ತಿ ಮೇಲೆ ಕುದ್ದ್‌ಕಂಡ್, ಒಂದೊಂದೇ ಗಡಿಗಳ ಮೂರ್ಮೂರು ತುಂಡು ಮಾಡಿ, ಗೂಂಜ್‌ನ ತೆಗ್ದೊ. ಗೂಂಜ್ ತೆಗ್ಟ್ ಆದ ಮೇಲೆ ತೋಳೆನ ಬುಡ್ಸಿಕೆ ಸುಲಬ ಆತ್. ಒಂದು ಹೆಡಗೆಗೆ ಬಾಳೆಲೆನ ಹಾಸಿ, ಒಂದೊಂದು ತೋಳೆಗಳ ಬುಡ್ಸಿ, ಹೆಡಗೆಗೆ ತುಂಬಿಸಿದೊ. ತೋಳೆ ಬುಡ್ಸಿ ಆದ ಮೇಲೆ ಪಾಚು ಹಲ್ಸಿನ ಕಾಯೆನ ರೆಚ್ಚೆ, ಗೂಂಜಿನ ಎಲ್ಲಾ ಸಣ್ಣ ಸಣ್ಣ ತುಂಡು ಮಾಡಿ, ಮೊಡ್ಡಿ ಮಡ್ಕೆಗೆ ಹಾಕಿ, ಹಟ್ಟಿ ಹಕ್ಕಲೆ ಇದ್ದ ಮೊಡ್ಡಿ ಬೇಸುವ ಒಲೆಗೆ ಕಿಚ್ಚಿಮೊಟ್ಟ್ ಮೊಡ್ಡಿ ಬೇಯಕೆ ಇಸಿತ್. ಅದ್ಕೆ ಅರ್ದ ಕೊಡ್ಪಾಣ ನೀರ್‌ನ ಹೊಯ್ದ್, ಮಡ್ಕೆಗೆ ಮರದ ಹಲಗೆನ ಮುಚ್ಚಿ ಇಸಿತ್.

ಕಮಲಕ್ಕ ದೊಡ್ಡ ಇಡ್ಲಿ ಪಾತ್ರನ ಒಳಗೆಂದ ಹೊತ್ತ್‌ಕಂಡ್ ಬಂದ್ ಕೊಟಗೆಲಿದ್ದ ಒಲೆ ಮೇಲೆ ಇಸಿ, ಇಡ್ಲಿ ಪಾತ್ರೆಗೆ ಅರ್ದ ಕೊಡ್ಪಾಣ ನೀರ್ ಹಾಕಿ ಹೋದೊ. ಸುಂದರಿ ಹಲ್ಸಿನ ತೋಳೆನ ಸುತ್ತೋಳು ಅಂಟಿಕಂಡಿದ್ದ ನಾರ್‌ನ ತೆಗ್ದ್, ಅದರ ಒಳಗಿದ್ದ ಬಿತ್ತ್‌ನ ಒಂದು ಕಡೆ ರಾಸಿ ಹಾಕಿತ್. ಪಾಚು ಮೊಡ್ಡಿ ಬೇಯಕಿಸಿ, ಕೊಟಗೆಗೆ ಬಂದ್ ಹಲ್ಸಿನ ತೋಳೆನ ಸಜ್ಜಿ ಮಾಡಿಕೆ ಸುಂದರಿಗೆ ಸಾಯ ಮಾಡಿದೆ. ಇಬ್ರೊರು ಕೂಡಿಕಂಡ್, ಬೇಗ ಬೇಗ ಸಜ್ಜಿ ಮಾಡಿ, ಸೆಕೆಲಿ ಬೇಯಕೆ ಇಡ್ಲಿ ಪಾತ್ರಕ್ಕೆ ಹಾಕಿ ಮುಚ್ಚಳ ಮುಚ್ಚಿ, ಕಿಚ್ಚಿನ ಸರಿಮಾಡ್ದೊ.

ಹಲ್ಸಿನ ಬಿತ್ತ್‌ನ ಸುತ್ತೋಳು ಇದ್ದ ಮಾಂಜೋಳುನ ತೆಗ್ದ್, ಹಲ್ಸಿನಕ್ಕಿಗೆ ಹಂಞ ಮೊಣ್ಣ್, ಬೂದಿ ಬೆರ್ಕೆ ಮಾಡಿ ಪೂಜಿ ಕೊಟಗೆನ ಮೂಲೆಲಿ ಒಣ್ಗಿಕೆ ಹಾಕಿದೊ. ಪಾಚು ಹಲ್ಸಿನಕ್ಕಿನ ಮಾಂಜೋಳುನ ತಕಂಡೋಗಿ ಮೊಡ್ಡಿ ಮಡ್ಕೆಗೆ ಹಾಕಿ ಬಂದ್, ಇಬ್ರೊರು ಕೂಡಿ ಕೊಟಗೆನ ಗುಡ್ಸಿ ಮನಾರ ಮಾಡ್ದೊ. ಅಸ್ಟಾಕನ ಗಂಟೆ ಎಂಟ್ ಆಕೆ ಆತ್. ಕಮಲಕ್ಕ ಅವರಿಬ್ಬರ ಬೊಳ್ಪುನ ಚಾಯ ಕುಡ್ಯಕೆ ಕರ್ದೊ. ಅವಿಬ್ರೊರು ಬೊಳ್ಪುನ ಚಾಯಕ್ಕೆ ಮಾಡ್ದ ಪುಂಡಿನ ಹಿಂದೆನ ದಿನ ಮಾಡ್ದ ನೆಟ್ಟಿ ಕ್ಯಾ ಗೈಪುಲಿ ತಿಂದ್, ಚಾಯ ಕುಡ್ದ್, ಬೇಗ ಬೇಗ ತೊಳ್ಯಕೆ ಹಾಕಿದ ಪಾತ್ರಗಳ ತೊಳ್ಯಕೆ ಹೊರ್ಡಿಕನ ಕಮಲಕ್ಕ ಅವಿದ್ದಲ್ಲಿಗೆ ಬಂದ್,

"ಪಾತ್ರ ತೊಳ್ಯಕೆ ಕುದ್ದರೆ, ಹೊತ್ತಾದೆ, ನೀವು ಬೇಗ ಹಪ್ಪಳನ ಕೆಲ್ಸ ಮುಗ್ಸಿ, ಬಿಸ್ಲ್ ಬಾಕೆ ಮುಂದೆ ಹಪ್ಪಳ ಜಾಲ್‌ಲಿ ಇರೊಕು. ಹೋಗಿ, ಹೋಗಿ" ಎಂತ ಅಮ್ಸರ ಮಾಡಿ ಅವರ ಅಲ್ಲಿಂದ ಎದ್ರಿಸಿ ತನ್ನ ಕೈಲಿದ್ದ ಎಳ್ಳ್‌ನ ಪಾತ್ರನ ಸುಂದರಿ ಹಕ್ಕಲೆ ಕೊಟ್ಟ್ "ಇಂದ ಸುಂದರಿ, ತೋಳೆನ ಒಮ್ಮೊಮ್ಮೆ ಗುದ್ದಿ ತೆಗ್ಯಕಾಕನ ಎರ್ಡ್ ಸವುಂಟು ಎಳ್ಳ್ ಹಾಕಿ, ಗುದ್ದಿ ತೆಗ್ಯೊಕು ಬಲಾ?"– ಎಂತ ಹೇಳ್ದೊ.

"ಆತವ್ವಾ, ಹಾಂಗೇ ಮಾಡಿನೆ."– ಎಂತ ಹೇಳಿ ಸುಂದರಿ ಎಳ್ಳ್‌ನ ಪಾತ್ರನ ತಕಂಡ್ ಕೊಟಗೆಗೆ ಬಂದ್ ಇಡ್ಲಿ ಪಾತ್ರನ ಮುಚ್ಚಳ ತೆಗ್ಡ್ ನೋಡಿದೆ, ತೋಳೆಗ ಬೆಂದಿದ್ದೊ. ಸುಂದರಿ ಕೊಟಗೆಲಿದ್ದ ದೊಡ್ಡ ಕಡ್ಕಲ್‌ನ ಪೊರ್ಲುಲಿ ತೊಳ್ದ್, ಒಂದ್ ಸೀರೆ ಅರ್ವೆಲಿ ಅದರ ಚೆಂಡಿ ತೆಗ್ದ್, ಕಡ್ಕಲ್‌ನ ಗುಂಡಿಗೆ ಹಂಞ ಕಾಯೆಣ್ಣೆ ಪೂಜಿ ಇಸಿತ್. ಪಾಚು ತೋಳೆಗಳ ಗುದ್ದಿಕೇಂತ ಮಾಡಿಸಿದ ಮರದ ಕೊದಂಟಿನ ಪೊರ್ಲ್‌ಲಿ ತೊಳ್ದ್, ಒರ್ಸಿ, ಕೊದಂಟಿನ ಗುದ್ದುವ ಪುಡೆಗೆನೂ ಕಾಯೆಣ್ಣೆ ಪೂಜಿಸಿತ್. ಬೇಸಿದ ಹಲ್ಸಿನ ತೋಳೆನ ಕಡ್ಕಲ್‌ಲಿ ಹಿಡಿವಸ್ಟ್ ಹಾಕಿ, ಹಂಞ ಉಪ್ಪುನನೂ ಹಾಕಿ ಮರದ ಕೊದಂಟಿಲಿ ಗುದ್ದಿದೊ. ಒಬ್ಬ ಗುದ್ದಿಕನ ಇನ್ನೊಬ್ಬ ಪುಡೆಲಿದ್ದ ತೋಳೆಗಳ ಹಾಳೆ ಕಿಳ್ಳಿಲಿ ತುಗ್ಯಕೆ ಸೇರ್ಸಿ ಕೊಡ್ತಿತ್ತ್. ತೋಳೆಗಳ ಗುದ್ದಿದ್ ಅದ್ ನುಣ್ಣಂಗೆ ಆಗಿ, ಉಂಡೆ ಕಟ್ಟಿಕೆ ಹದ ಆಕನ ಅದ್ಕೆ ಎರ್ಡ್ ಸವುಂಟು ಎಳ್ಳ್‌ನ ಸೇರ್ಸಿ ಎರ್ಡ್ ಮೂರು ಸಲ ಗುದ್ದಿ ತೆಗ್ದೊ. ಹೀಂಗೆ ಎಲ್ಲಾ ತೋಳೆಗಳ ಗುದ್ದಿ ಮುದ್ದೆಗಳ ಮಾಡಿ ಒಂದು ತಾಂಬಾಳೆ ಪಾತ್ರಕ್ಕೆ ಒಟ್ಟಿ ಇಸಿದೊ. ಅಸ್ಟಾಕನ ಕಮಲಕ್ಕ ಅವರ ಬೊಳ್ಪುನ ಚಾಯದ ಕೆಲ್ಸದ ಮುಗ್ಸಿ, ಅಲ್ಲಿಗೆ ಹಪ್ಪಳ ಒತ್ತುವ ಮರದ ಮಣೆನನೂ, ಬಾಡಿಸಿದ ಐದಾರ್ ಬಾಳೆ ಚೀಂತ್‌ನನೂ ತಕಂಡ್ ಬಂದೊ.

"ಇಂದಾ ಸುಂದರಿ, ಅಟ್ಟಲಿ ಹಪ್ಪಳ ಒಣ್ಗ್‌ಸುವ ಒಲಿ ಮೊಂದ್ರಿನ ಮಾಡ್‌ಲಿ ಕಟ್ಟಿದ ನೇಕೆಲಿ ಕೋಸಿ ಇಸ್ಯಳೆ. ಅದರ ತಕಂಡ್ ಬಾ, ಬಲ" ಎಂತ ಹೇಳಿ ಕಮಲಕ್ಕ ಸುಂದರಿನ ಮನೆಗೆ ಕಳ್ಸಿದೊ. ಕಮಲಕ್ಕನೂ ಪಾಚುನೂ ಹಲ್ಸಿನಕಾಯಿ ಗುದ್ದಿ ಇಸಿದ ಮುದ್ದೆಂದ ಚಿತ್ತೂಳಿನಸ್ಟ್ ದೊಡ್ಡ ಉಂಡೆಗಳ ಮಾಡಿ ಒಂದು ಹಾಳೆಲಿ ಹಾಕಿಸುವೆ. ಸುಂದರಿ ಮೊಂದ್ರಿನ ತಕಂಡ್ ಬಂದ್ ಇಜ್ಜೆಲ್‌ಲಿ ಬಿಸಿಲ್ ಬಾವ ಜಾಗೆಲಿ ಹಾಸಿ ಇಸಿತ್. ಕಮಲಕ್ಕ ಎರ್ಡ್ ಬಾಳೆ ಚೀಂತ್ ತಕಂಡ್, ಅದ್ಕೆ ಕಾಯೆಣ್ಣೆ ಪೂಜಿ, ಒಂದು ಚೀಂತ್‌ನ ಎಣ್ಣೆ ಪೂಜಿದ ಪುಡೆನ ಮೇಲೆ ಬಾವ ಹಾಂಗೆ ಹಪ್ಪಳ ಒತ್ತುವ ಮಣೆ ಮೇಲೆ ಇಸಿ, ಅದರ ಮೇಲೆ ಒಂದು ಉಂಡೆ ಇಸಿ, ಅದರ ಮೇಲೆ ಇನ್ನೊಂದು ಬಾಳೆ ಚೀಂತ್‌ನ ಹಾಸಿ, ಹಪ್ಪಳ ಒತ್ತಿದೊ. ಸುಂದರಿ ಕಮಲಕ್ಕ ಒತ್ತಿದ ಹಪ್ಪಳಗಳ ಇಜ್ಜೆಲ್‌ಗೆ ತಕಂಡೋಗಿ ಸಾಲಾಗಿ ಮೊಂದ್ರಿಲಿ ಇಸಿತ್. ಪಾಚು ಮುದ್ದೆಂದ ಉಂಡೆ ಕಟ್ಟಿಕೆ ಸಾಯ ಮಾಡ್ತ್. ಹಪ್ಪಳದ ಕೆಲ್ಸ ಬರಂದ

ಸಾಗಿತ್. ಇಜ್ಜೆಲ್‌ಲಿ ಬಿಸಿಲ್‌ನೂ ಬಾತ್. ಗಂಟೆ ಹತ್ತು ಆಕೆ ಆತ್. ಕೆಲ್ಸ ಮುಗ್ದ್ ಕಂಡ್ ಬಾಕಾಕನ ಕಟ್ಟಿ ಹಾಕಿದ ನಾಯಿಗ ಒಮ್ಮೆನೇ ಬೊಗ್ಳಿಕೆ ಸುರು ಮಾಡ್ದೊ. ಮನೆ ಒಳಗೆಂದ ಅಯ್ಯಣ್ಣ ಮಾಸ್ಟ್ರ ಬಂದ್ ಬೊಗ್ಗಿ ನೋಡಿ,

"ಇಂದನೆ, ನಾಯಿ ಒಂದೇ ಸಮ ಬೊಗ್ಳ್‌ದೆ. ಯಾರ್ ಬಂದೊಳೊ ನೋಡ್. ನಂಗೆ ಇಲ್ಲಿ ಹನೀಸ್ ಕೆಲ್ಸ ಉಟ್ಟು." ಎಂತ ಕಮಲಕ್ಕಂಗೆ ಕರ್ದ್ ಹೇಳಿವೆ.

ಹಪ್ಪಳ ಒತ್ತುತ್ತಿದ್ದ ಕಮಲಕ್ಕನೂ, ಸುಂದರಿ, ಪಾಚುನೂ ಇಜ್ಜೆಲಿಗೆ ಇಳ್ದ್ ಬೊಗ್ಗಿ ನೋಡಿವೆ. ಗೇಟ್ ಹಕ್ಕಲೆ ಒಂದ್ ಕಾರ್ ಬಂದ್ ನಿತ್ತತ್. ಒಬ್ಬ ಅದರ್‌ಂದ ಇಳ್ದ್ ಗೇಟ್‌ನ ಬಾಕಿಲ್‌ನ ಅಗಲ ತೆಗ್ದ್, ನಿತ್ತತ್. ಕಾರ್ ಮುಂದೆ ಬಂದ್ ಮನೆ ಎದ್ರ್‌ನ ಬಾಕಿಲ್ ಹಕ್ಕಲೆ ನಿತ್ತತ್. ಗೇಟ್ ತೆಗ್ದವ ಕಾರ್‌ನ ಹಕ್ಕಲೆ ಬಂದ್ ಹಿಂದೆನ ಸೀಟ್‌ನ ಬಾಕಿಲ್ ತೆಗ್ತ್. ಒಳಗೆಂದ ಒಬ್ಬ ಇಳ್ದ್, ಗಿರೀಶನ ರಟ್ಟೆ ಹಿಡ್ದ್ ಇಳ್ಸಿತ್. ಅದರ ನೋಡಿ ಕಮಲಕ್ಕನ ಎದೆ 'ದಸ್'ಂತ ಹೇಳ್ತ್. ಓಡಿ ಹೋಗಿ ಮಂಜನ ಕೈ ಹಿಡ್ಕಂಡ್

"ಏನಾತ್ ಮಂಜ' ಎಂತ ಮೊರ್ಡುವ ದನಿಲಿ ಕೇಳಿ ಒಳಗೆ ಕರ್ಕಂಡ್ ಹೋದೊ. ಈ ಗದ್ದಳ ಕೇಳಿ ಒಳಗೆ ಹೋದ ಅಯ್ಯಣ್ಣ ಮಾಸ್ಟ್ರ ಹೊರಗೆ ಬಂದ್ ಮಂಜನ ಈ ಅವತಾರನ ನೋಡಿ ಗಾಬರಿಗೊಂಡೊ. ಅವುನೂ ಮಂಜನ ಒಂದು ಪುಡೆ ಹಿಡ್ಕಂಡ್ ಬಂದ್ ಕೋಣೆಲಿ ಅವರ ಹಾಸಿಗೆ ಮೇಲೆ ಮೊಲ್ಗಿಸಿದೊ. ಅವನೊಟ್ಟಿಗೆ ಬಂದ ಅಂವನ ಜೋಸ್ತಿಗ

ಅಂವಂಗೆ ನಿನ್ನೆಂದ ಜರ. ನಿನ್ನೆ ಆಪೀಸ್‌ಗುನೂ ಬಾತಿಲ್ಲೆ. ನಾವು ಹಿಂಬೊತ್ತ್ ಅಂವನ ರೂಮ್‌ಗೆ ಹೋಕನ ಅಂವಂಗೆ ಏನೂ ಬೊತ್ತ್. ನಾವು ಅಂವನ, ಅಲ್ಲಿ ಹಕ್ಕಲೆ ಇದ್ದ ಡಾಕ್ಟ್ರಲ್ಲಿಗೆ ಕರ್ಡೊಂಡೋಗಿ ಮೊದ್ದ್ ಕೊಡ್ಸಿ ರೂಮ್‌ಲಿ ತಂದ್ ಬುಟ್ಟೊ. ಈಗ ಎಲ್ಲಾ ಕಡೆ ಡೆಂಗ್ಯೂ, ಚಿಕನ್ ಗುನ್ಯಾ, ಎಲಿ ಜರಾಂತ ಉಟ್ಟು. ನೀವು ಊರಿಗೆ ಕರ್ಡೊಂಡೋಗೀಂತ ಡಾಕ್ಟ್ರ ಹೇಳ್ದೊ. ಹಾಂಗೆ ನಾವು ಬೆಳ್ಳಾರ್‌ಗೆನೇ ಕಾರ್ ಬಾಡಿಗೆಗೆ ಮಾಡಿಕಂಡ್ ಕರ್ಕಂಡ್ ಬಂದೊ."– ಎಂತ ಹೇಳ್ದೊ.

"ಬಾಳ ಒಳ್ಳೆದಾತ್. ನಿಮ್ಮ ಉಪಕಾರನ ನಾ ಯಾಗೋಳೂ ಮೊರ್ಯಕಿಲ್ಲೆ." ಎಂತ ಅಂವನ ಜೋಸ್ತಿಗಳಿಗೆ ಹೇಳಿ, ಮಂಜನ ಕೈ ಹಿಡ್ಕಂಡ್ ಅಂವನ ಮೋರೆ ನೋಡಿವೆ. ಕಮಲಕ್ಕ ಮಂಜನ ಕೈ ಮೈ ಪೂಜಿ,

"ನೀ ಹೆದ್ರ್ ಬಡ ಮಂಜ. ಇಲ್ಲಿ ಬಂದ್ ಬಿದ್ದಲೆ. ಇನ್ನ್ ನಾವೊಳೊ. ನಾ ಕಸಾಯ ಮಾಡಿ ತನ್ನೆ. ಈಗ ನೀ ಕಣ್ಣ್, ಮುಚ್ಚಿ ಮೊಲ್ಗ್" ಎಂತ ಹೇಳಿ ಒಳಗೆ ಹೋಗಿ ಕಸಾಯ ಮಾಡಿ ತಂದ್ ಮಂಜಂಗೆ ಕುಡ್ಸಿದೊ. ಅಯ್ಯಣ್ಣ ಮಾಸ್ಟ್ರ ಕುಂಞಣ್ಣಂಗೆ ಹೇಳಿ ಗಿರೀಶನ ಜೋಸ್ತಿಗಳಿಗೆ ಬೆಂಡದ ನೀರ್‌ನ ಉಪಚಾರ

ಮಾಡ್ಸಿದೊ. ಕಮಲಕ್ಕ ಅಂವನೊಟ್ಟಿಗೆ ಬಂದೊವ್ಕೆ ಕೈ ಕಾಲ್ ತೊಳ್ಕಂಬಕೆ ಹೇಳಿ ಚಾಯ ಮಾಡಿಕೆ ಒಳಗೆ ಹೋದೊ.

ಅಯ್ಯಂಣ ಮಾಸ್ಟ್ರ ಮಂಗ್ಳೂರ್‌ಗೆ ತಂಗೆ ಗಿರಿಜಂಗೆ ಫೋನ್ ಮಾಡ್ದೊ.

"ಇಂದಾ ಗಿರಿಜ, ನಮ್ಮ ಗಿರೀಶಂಗೆ ಕಂಡಾಬಟ್ಟೆ ಜರ ಬಂದ್‌ಟ್ಟು. ಅಂವನ ಕರ್ಕಂಡ್ ಅಂವನ ಇಬ್ಬೊರು ಜೋಸ್ತಿಗ ಈಗ ಬಂದ್ ಎತ್ತಿದೊ. ನಾ ಅಂವನ ಮಂಗ್ಳೂರ್‌ಗೆ ಕರ್ಕಂಡ್ ಬನ್ನೆ. ನೀ ನಿನ್ನ ಗಂಡನೊಟ್ಟಿಗೆ ಹೇಳಿ ಒಂದ್ ಒಳ್ಳೆ ಪ್ರೈವೇಟ್ ನರ್ಸಿಂಗ್ ಹೋಮ್‌ಗೆ ಸೇರ್ಸಿಕೆ ಏರ್ಪಾಡ್ ಮಾಡ್"– ಎಂತ ಹೇಳ್ದೊ.

ಗಿರಿಜಕ್ಕನೂ ಗಾಬರಿಂದ, "ಅಣ್ಣಾ, ನೀವು ಚಿಂತೆ ಮಾಡ್ಬೊಡಿ ನಾವೆಲ್ಲ ಒಳೊಲೆ. ನೀವು ಅಂವನ ಇಲ್ಲಿಗೆ ಕರ್ಕಂಡ್ ಬನ್ನಿ. ನಾ ಎಲ್ಲಾ ಏರ್ಪಾಡ್ ಮಾಡಿನೆ"– ಎಂತ ಧೈರ್ಯ ಹೇಳ್ದೊ.

ಕಮಲಕ್ಕ ಅಕ್ಕಿ ಹೊರ್ದ್ ರವೆ ಮಾಡಿ, ಅದರ್‌ಂದ ಎರ್ಡ್ ಗ್ಲಾಸ್ ರವೆ ಗಂಜಿ ಮಾಡಿಕಂಡ್ ತಂದ್ ಮಂಜಂಗೆ ಕುಡ್ಸಿದೊ. ಅಂವನೊಟ್ಟಿಗೆ ಬಂದ ಜೋಸ್ತಿಗಳ ಒಳಗೆ ಕರ್ಕೊಂಡೋಗಿ ಚಾಯ, ಪುಂಡಿ ಕೊಟ್ಟೊ.

ಅಯ್ಯಣ್ಣ ಮಾಸ್ಟ್ರ, " ನೀವ್ಗೆ ಈಗಳೇ ಹೋಕೋ?" ಎಂತ ಅವರ ಕೇಳ್ದೊ.

"ಇಲ್ಲೆ. ಹೇಂಗೂ ಇಂದ್‌ನ ದಿನ ರಜೆ. ನಾವೂ ಮಂಗ್ಳೂರ್‌ಗೆ ಬಂದ್ ಅಲ್ಲಿಂದಳೇ ಹೋದವೆ"– ಎಂತ ಅವು ಹೇಳ್ದೊ.

"ಹಂಗಾರೆ ಇದೇ ಕಾರ್‌ಲಿ ಅಂವನ ಕರ್ಕಂಡ್ ಪೋಯಿ. ಜೀಪುಲಿ ಕುದ್ರಿಕೆ ಅಂವಂಗೆ ಕಸ್ಟ ಆದು. ಇಲ್ಲರೆ ನಾ ಬೇರೆ ಬಾಡಿಗೆ ಕಾರ್ ಮಾಡೊಕು. " ಮಾಸ್ಟ್ರ ಹೇಳ್ದೊ.

"ಬೇಡ. ಇದೇ ಕಾರ್‌ಲಿ ಪೋಯಿ. ನಾವು ಅಲ್ಲಿಂದಳೇ ಚಿಕ್ಕಮಗಳೂರ್‌ಗೆ ಹೋದವೆ."– ಜೋಸ್ತಿಗ ಹೇಳ್ದೊ.

"ಅವ್ವಾ ನಂಗೆ ಮಿಾಯೊಕು. ನಿನ್ನೆನೂ ಮಿಾತಿಲ್ಲೆ. ನಂಗೆ ಹೇಂಗೇಂಗೋ ಆದೆ."– ಗಿರೀಶ ಮೆಲ್ಲಂಗೆ ಅವ್ವನೊಟ್ಟಿಗೆ ಹೇಳ್ದೆ.

"ನಿನ್ನ ಈ ಅವಸ್ತೆಲಿ ಹೇಂಗೆ ಮಿಾಸುದು ಮಂಜ." ಕಮಲಕ್ಕ ಕೇಳಿವೆ.

"ಇಬ್ಬೊರು ಹಿಡ್ಕಣಿ. ನಾ ಹೇಂಗಾದರೂ ಮಿಾಯದೆ ಇರಿಕೆ ಆದುಲ್ಲೆ."

ಅಯ್ಯಣ್ಣ ಮಾಸ್ಟ್ರನೂ, ಕಮಲಕ್ಕನೂ ಅಂವನ ಮೆಲ್ಲಂಗೆ ಮನೆಗೆ ತಾಂಗಿಕಂಡಿದ್ದ ನೀರೆಡಿ ಕೊಟಗೆಗೆ ಕರ್ಕೊಂಡೋಗಿ, ಒಂದು ಸ್ಟೂಲ್ ಮೇಲೆ ಕುದ್ರಿಸಿ, ಉಗುರು ಬೆಚ್ಚ ನೀರ್‌ಲಿ ಮಿಾಸಿದೊ. ಮೈಗೆ ಸಾಬಾನ್ ಹಾಕಿ, ನೀರ್ ಹಾಕಿ ಮಿಾಸಿ ಮುಗ್ಯಕಾಕನ ಅಂವಂಗೆ ಕಣ್ಣ್ ಕತ್ತಲೆ ಬಂದ ಹಾಂಗೆ ಆತ್. ಅಂವ,

"ಅವ್ವಾ, ಬೇಗ ಮಿಾಸ್. ನಂಗೆ ಕಣ್ಣ್ ಕತ್ತಲೆ ಬಂದದೆ." ಎಂತ ಹೇಳ್ತ್.

"ನಾ ಮುಂದೆನೇ ಹೇಳ್ದೆ. ಮಿಾಯೊದು ಬೇಡಾಂತ. ನೀ ನಿನ್ನ ಹಟ ಬುಡೊಕೊಲೆ. ಈಗ ಹೀಂಗೆ ಹೇಳಿರೆ ಹೇಂಗೆ" ಎಂತ ಹೇಳಿ, ಅವು ಅಮ್ಸರಲಿ ಬೇಗ ಬೇಗ ಒಂದು ಬೈರಾಸ್‌ಲಿ ಅಂವನ ಮೈ ಒರ್ಸಿದೊ. ಅಯ್ಯಣ್ಣ ಮಾಸ್ಟ್ರ ಅಂವನ ಎರ್ಡ್ ಕೈಲಿ ಎತ್ತಿಕಂಡ್ ಬಂದ್ ಮಂಚಲಿ ಮೊಲ್ಗಿಸಿ, ಒಂದು ಬೆಂಡನ ಒಟ್ಟೆ ಮಾಡಿ, ಅದ್ಕೆ ಹಂಞ ಗ್ಲುಕೋಸ್ ಹಾಕಿ ಕುಡ್ಸಿದೊ. ಗಿರೀಶಂಗೆ ಹಂಞ ಆರಾಮ ಆತ್.

"ನಾ ಗಿರಿಜಂಗೆ ಫೋನ್ ಮಾಡ್ಯಳೆ. ನೀ ತಲೆ ಬಿಸಿ ಮಾಡ್ಬಡ. ಅದ್ ಎಲ್ಲಾ ಏರ್ಪಾಡ್ ಮಾಡ್ದೆ. ನೀ ಮನೆ ಕಡೆ ನೋಡಿಕ. ನಾ ಹೋಗಿ ಬನ್ನೆ"– ಎಂತ ಅಯ್ಯಣ್ಣ ಮಾಸ್ಟ್ರ ಕಮಲಕ್ಕಂಗೆ ಧೈರ್ಯ ಹೇಳಿ, ಹೊರಗೆ ಹೋಕನ ಹಾಕುವ ಡ್ರೆಸ್ ಹಾಕಿ ಹೊರ್ಟೊ.

ಗಿರೀಶಂಗೆ ಅಂವನ ಜೋಸ್ತಿಗ ಅಂಗಿ, ಪೇಂಟ್ ಹಾಕಿ ಹೊರ್ಡಿಸಿದೊ. ಕಮಲಕ್ಕ ಅಂವಂಗೆ ಬೇಕಾದ ಅಗತ್ಯದ ಬಟ್ಟೆ ಬರೆ, ಸಾಮಾನ್‌ಗಳ ಜೋಡ್ಸಿ ಒಂದು ಚೀಲಲಿ ಹಾಕಿ ಕಾರ್‌ಲಿ ಇಸಿದೊ. ಅವೆಲ್ಲಾ ಮಂಗ್ಳೂರ್‌ಗೆ ಹೊರ್ಟ್ಹೋದ ಮೇಲೆ ಕಮಲಕ್ಕಂಗೆ ಕೈಕಾಲ್ ಬಿದ್ದ್ ಹೋದಾಂಗಾತ್. ಹೊಟ್ಟೆಲಿ ಸಂಕಟ, ಮರ್ಕ ಆಗ್ತಿತ್ತ್.

"ಛೇ, ನಾನೂ ಹೋಕಾಗಿತ್ತ್. ಇಲ್ಲಿ ಇದ್ದ್ ಸಂಕಟ ಪಡ್ದು ತೊಪ್ಪ್ತಿತ್ತ್." ಎಂತ ಅವು ಪೇಚಾಡಿಕಂಡ್ ಆಗಾಗ ಮೊಬ್ಯಾಲ್ ತೆಗ್ದ್,

"ಈಗ ಹೇಂಗುಟ್ಟು? ಈಗ ಎಲ್ಲಿಗೆ ಎತ್ತಿದರಿ?" ಎಂತ ಇಚಾರ್ಸಿಕಂಡ್ ಇದ್ದೊ.

ದಾರಿಲಿ ಹೋಕನ ಒಮ್ಮೆಗೇ ಗಿರೀಶನ ಮೈ ಕೈ ಎಲ್ಲಾ ನಡ್ಗಿಕೆ ಸುರಾತ್. ಸೊಯ ತೊಪ್ಪಿದಾಂಗೆ ಬಿದ್ದ್‌ಕಂಡತ್. 'ಅವ್ವಾ, ಅವ್ವಾ'ಂತ ಆಗಾಗ ನರ್ಕಿಕಂಡ್ ಕಣ್ಣ್ ಮುಚ್ಚಿಕಂಡತ್. ಅಂವನ ಅವಸ್ತೆ ನೋಡಿ ಅಂವನ ಜೋಸ್ತಿಗಳಿಗೆ ತುಂಬಾ ಗಾಬೆರಿ ಆತ್.

ಅವೆಲ್ಲಾ ಮಂಗ್ಳೂರ್‌ಗೆ ಗಿರಿಜಕ್ಕನ ಮನೆಗೆ ಮುಟ್ಟಿಕನ, ಗಿರಿಜಕ್ಕ ಇವರನೇ ಕಾದ್‌ಕಂಡಿದ್ದೊ.

"ಹಲೊ ಡಾಕ್ಟ್ರೇ, ನಮ್ಮ ಕಡೆ ಪೇಶಂಟ್ ಈಗ ಬಂದ್ ಮುಟ್ಟಿದೊ. ನಾ ಈಗ ಕರ್ಕಂಡ್ ಬನ್ನೆ. ರೂಮ್ ಎಲ್ಲಾ ರೆಡಿ ಮಾಡ್ಯಳೊರಿನೋ?"– ಗಿರಿಜಕ್ಕ ಡಾಕ್ಟ್ರ‌ಗೆ ಫೋನ್ ಮಾಡಿ ಕೇಳ್ದೊ.

ಅತ್ತಂದ ಡಾಕ್ಟ್ರ, " ಬನ್ನಿ ಅಮ್ಮ. ನಾ ನಿಮ್ಮನೇ ಕಾದ್‌ಕೊಂಡೊಳೆ.

ಇನೆಸ್ಪೆಕ್ಟ್ರ ನಂಗೆ ಫೋನ್ ಮಾಡಿ ಎಲ್ಲಾ ವಿಸಯ ತಿಳ್ಸಿದೊ. ಇಲ್ಲಿ ಎಲ್ಲಾ ರೆಡಿಯಾಗುಟ್ಟು. ನೀವು ಕರ್ಕಂಡ್ ಬನ್ನಿ" ಎಂತ ಕನ್ನಡಲಿ ಹೇಳ್ದೊ.

ಗಿರಿಜಕ್ಕ ಅವರ್ನೆಲ್ಲಾ ಕರ್ಕಂಡ್ ಸಿಟಿ ನರ್ಸಿಂಗ್ ಹೋಂಗೆ ಹೋದೊ. ಡಾ. ಎಸ್.ಪಿ. ಪ್ರಸಾದ್ ಮಂಗ್ಳೂರ್‌ಲಿ ಹೆಸ್ರ್ ಮಾಡ್ದ ಡಾಕ್ಟ್ರ. ಅವು ಗಿರಿಜಕ್ಕನ ಮನೆ ಡಾಕ್ಟ್ರ ಅವು ಕಾದ್‌ಕಂಡಿದ್ದೊ.

ಗಿರೀಶಂಗೆ ಸೊಯ ಇತ್ಲೆ ಕೂಡ್ಲೆ ಗಿರಿಜಕ್ಕ ಡಾಕ್ಟರ್ ಒಟ್ಟಿಗೆ "ಅಂವಂಗೆ ಮೊತಿತೊಪ್ಪಿಟ್ಟು" ಎಂತ ಹೇಳ್ದೊ. ಡಾಕ್ಟ್ರ ಅಂವನ ಸ್ಟ್ರೆಚರ್‌ಲಿ ಮೊಲ್ಗಿಸಿ ಕರ್‌ಕಂಡ್ ಬಾಕೆ ಕೆಲ್ಸದೊವ್ಕೆ ಹೇಳ್ದೊ. ಇಬ್ಬೊರು ವಾರ್ಡ್ ಬಾಯ್‌ಗ ಕಾರ್‌ನ ಹಕ್ಕಲೆ ಸ್ಟ್ರೆಚರ್ ತಕಂಡೋಗಿ, ಅದರ್ಲಿ ಮೊಲ್ಗಿಸಿ ಕರ್ಕೊಂಡೋದೊ. ಡಾಕ್ಟ್ರ ಅಂವನ ಅವಸ್ತೆ ನೋಡಿ ಅಂವನ ಐ.ಸಿ.ಯು ಗೆ ಸೇರ್ಸಿದೊ. ಎರ್ಡ್ ಮೂರು ಜನ ಡಾಕ್ಟ್ರಗ ಬಂದ್ ಪರೀಕ್ಷೆ ಮಾಡ್ದೊ. ನೆತ್ತರ್ ಪರೀಕ್ಷೆ, ಉಚ್ಚೆ ಪರೀಕ್ಷೆ, ಬಿ.ಪಿ. ಎಲ್ಲಾ ನೋಡ್ದೊ. ಒಂದು ಗಂಟೆ ಕಳ್ಯಕನ ರಿಪೋರ್ಟು ಬಾತ್. ಅಂವಂಗೆ ಡೆಂಗ್ಯೂ ಜರಾಂತ ಗೊತ್ತಾತ್. "ಬೇಗ ಕರ್ಕಂಡ್ ಬಂದದ್ ಒಳ್ಳೆದಾತ್. ಎರ್ಡ್ ದಿನ ಕಳ್ದಿದ್ದರೆ ತುಂಬಾ ಕಸ್ಟ ಆಗ್ತಿತ್ತ್." ಡಾಕ್ಟ್ರ ಹೇಳ್ದೊ.

ಹಿಂಬೊತು ಆಕನ ಅಂವ ಕಣ್ಣ್ ಬುಟ್ಟತ್. ಡಾಕ್ಟ್ರ ಅಂವನ ಪರೀಕ್ಷೆ ಮಾಡಿ, ಇನ್ನ್ ತೊಂದ್ರೆ ಇಲ್ಲೆ. ನಾಳೆಗೆ ಹಂಞ ಉಸಾರಾದೂಂತ ಹೇಳ್ದೊ. ಗಿರೀಶನ ಜೋಸ್ತಿಗ ಚಿಕ್ಕಮಗಳೂರಿಗೆ ಹೊರ್ಟ್ರೊ. ಅಯ್ಯಣ್ಣ ಮಾಸ್ಟ್ರ ಕಾರ್ ಡ್ರೈವರ್‌ಗೆ ಬಾಡಿಗೆ ಹಣ ಕೊಟ್ಟ್, ಚಿಕ್ಕಮಗಳೂರಿಗೆ ಜೋಸ್ತಿಗಳ ಬುಡಿಕೆ ಹೇಳ್ದೊ. ಅವರಿಬ್ಬೊರ ಎರ್ಡ್ ಕೈಗಳ ಹಿಡ್ಕಂಡ್, ಕಣ್ಣ ನೀರ್ ತುಂಬಿಕಂಡ ಅಯ್ಯಣ್ಣ ಮಾಸ್ಟ್ರ.

"ನನ್ನ ಮಂಜನ ಪ್ರಾಣ ಒಳ್ಸಿದರಿ. ನಿಮ್ಮ ಉಪಕಾರನ ಯಾಗೊಳು ಮರ್‍ಯಕಿಲ್ಲೆ. ಆಗಾಗ ನಮ್ಮ ಮನೆಗೆ ಬಂದ್‌ಕಂಡ್ ಇರಿನಿ." ಎಂತ ಹೇಳಿದೊ.

ಇತ್ತ ಕಮಲಕ್ಕಂಗೆ ಇರ್ಳ್ ಇಡೀ ನಿದ್ದೆನೇ ಬಾತಿಲ್ಲೆ. ಅತ್ತಂದ ಇತ್ತ ಹೊಣ್ಕಿದೇ ಆತ್. ಹೊಟ್ಟೆ ತೊಳ್ಸಿಕಂಡ್ ಬಾದು, ಸಂಕಟ ಮರ್ಕ ಆಗ್ತಿತ್ತ್. ಬೊಳ್ಪಾಕನ ಕುಕ್ಕಪ್ಪಣ್ಣಂಗೆ ಹೇಳಿ ಕಳ್ಸಿದೊ. ವಿಸಯ ತಿಳ್ದ್ ಕುಕ್ಕಪ್ಪಣ್ಣ ಅಮ್ಸರಲಿ ಓಡಿ ಬಂದೊ ಕಮಲಕ್ಕ,

"ಅಣ್ಣಾ, ನಂಗೆ ಗಿರೀಶನ ನೋಡದೆ ಇರಿಕೆ ಆದುಲ್ಲೆ. ನೀವು ನನ್ನೊಟ್ಟಿಗೆ ಬಂದರೆ ಮಂಗ್ಳೂರಿಗೆ ಪೋಯಿ"– ಎಂತ ಮೊರ್ಟ್‌ಕಂಡ್ ಹೇಳ್ದೊ.

"ಮೊರ್ಡ್‌ಬೊಡಿ ಕಮಲಕ್ಕ. ನಾವೆಲ್ಲ ಇಲ್ಲೆನೋ? ನಾನೂ ಗಂಗಮ್ಮನೂ ಬಂದವೆ. ಈಗ ಹೀಂಗೆ ಹೋಗಿ ಹಾಂಗೆ ಬನ್ನೆ. ನೀವು ಹೊರ್ಟ್ ನಿಲ್ಲಿನಿ."– ಎಂತ ಹೇಳಿ ಅವು ಮನೆಗೆ ಹೋದೊ. ಕಮಲಕ್ಕ ಮಂಜಂಗೆ ಹಂಞ ಕಾಸಿದ ಹಾಲ್‌ನ ಒಂದು ಕುಪ್ಪಿಲಿ ಹಾಕಿ ಹಿಡ್ಕೊಂಡೊ. ಕುಂಞಣ್ಣನೊಟ್ಟಿಗೆ ಹೇಳಿ, ನಾಕ್ ಬೆಂಡನನೂ

ಕೆತ್ತಿಸಿ, ಜೀಪುಲಿ ಹಾಕಂಡೊ. ಕುಕ್ಕಪ್ಪಣ್ಣನೂ, ಗಂಗಮ್ಮಕ್ಕನೂ ಬೇಗ ಬಂದ್ ಮುಟ್ಟಿದೊ. ಸುಂದರಿಗೆ, ಕುಂಞಣ್ಣಂಗೆ ಮನೆ ಕಡೆ ಜೋಕೆಂತ ಹೇಳಿ ಕಮಲಕ್ಕ ಜೀಪು ಹತ್ತಿದೊ.

ಅವರನೆಲ್ಲಾ ನೋಡಿ ಅಯ್ಯಣ್ಣ ಮಾಸ್ಟ್ರ, "ನೀವೆಲ್ಲಾ ಏಕೆ ಬಂದೆರಿ? ನಾನೂ ಗಿರಿಜನೂ ನೋಡಿಕಂಬತಿದ್ದೊ." ಎಂತ ಹೇಳ್ದೊ. ಕಮಲಕ್ಕ ಮಾತಾಡ್‌ತ್ಲೆ. ಅವು ಅಲ್ಲಿಗೆ ಎತ್ತಿಕಾಕನ ಗಿರೀಶ ಇನ್ನೂ ಐ.ಸಿ.ಯುಲೇ ಇತ್. ಮದ್ಯಾಹ್ನಕ್ಕೆ ಅಂವನ ಸ್ಪೆಶಲ್ ವಾರ್ಡ್‌ಗೆ ಹಾಕಿದೊ. ಗಿರೀಶಂಗೆ ಅವ್ವನ ನೋಡಿ ಕುಸಿ ಆತ್. ಅವರನೇ ನೋಡ್ತ್. ಕಮಲಕ್ಕ ಅಂವನ ಎರ್ಡ್ ಕೈಗಳ ಹಿಡ್ಕಂಡ್ ಅಂವನ ತಲೆ ಪೂಜಿದೊ. ಹಿಂಬೊತ್ತು ಆಕನ ಮಾಸ್ಟ್ರ

"ನೀ ಹೇಂಗೂ ಬಂದಳಲೆ. ನಾ ಮನೆಗೆ ಹೋಗಿ ನಾಳೆ ಬೊಳ್ಪುಗೆ ಬನ್ನೆ."– ಎಂತ ಹೇಳಿ ಕುಕ್ಕಪ್ಪಣ್ಣನೊಟ್ಟಿಗೆ ಪಂಬೆತ್ತಾಡಿಗೆ ಹೋರ್ಟೋದೊ.

ಮೊಬ್ಯಾಲ್ ರಿಂಗ್ ಆತ್. ಕಮಲಕ್ಕ ನೋಡ್ವೆ ಸುರೇಶನ ಫೋನ್.

"ಅವ್ವ ನಾ ಗಿರೀಶಂಗೆ ಎರ್ಡ್ ದಿನಂದ ಫೋನ್ ಮಾಡ್ನೆ. ಅಂವಂದ್ ಸುದ್ದಿನೇ ಇಲ್ಲೆ. ಎಂತದ್ ಅಂವನ ಕತೆ? ಮನೆಗೇನಾದರ್ ಬಂದುಟ್ಟೊ ಹೇಂಗೆ?" ಎಂತ ಕೇಳ್ದ್.

"ಏನ್ ಹೇಳ್ದು ಮಂಜ? ಗಿರೀಶಂಗೆ ಸೌಕ್ಯ ಇಲ್ಲೆ. ಡೆಂಗ್ಯೂ ಜೊರ ಗಡ. ಈಗ ಅಂವನ ಮಂಗ್ಳೂರ್‌ನ 'ಸಿಟಿ ನರ್ಸಿಂಗ್ ಹೋಂ'ಗೆ ಸೇರ್ಸ್ಲೊಳೊ. ನಾ ಈಗ ಮಂಗ್ಳೂರ್‌ಲಿ ಒಳೆ. ನಿನ್ನ ಅಪ್ಪ ಈಗ ತಾನೆ ಪಂಬೆತ್ತಾಡಿಗೆ ಹೋದೊ." ಎಂತ ಕಮಲಕ್ಕ ಮೊರ್ಡುವ ದನಿಲಿ ಹೇಳ್ದೊ.

"ಅಯ್ಯೊ ರಾಮ. ಡೆಂಗ್ಯೂ ಬಾಳ ಕೆಟ್ಟ ಕಾಯ್ಲೆ. ನೀವು ಅಂವನ ಸರ್‍ಯಾಗಿ ನೋಡಿಕಣಿ. ನಾನೂ, ರೇಶ್ಮನೂ ನಾಳೆ ಬಂದವೆ"– ಸುರೇಶ ಅತ್ತಂದ ಹೇಳ್ದ್.

"ನೀ ಬರ್ಬಡ ಮಂಜ. ನಾವೆಲ್ಲ ಒಳೊಲೆ. ನಿನ್ನ ಅಪ್ಪ ಈಗ ಯಾರಿಗೂ ಹೇಳ್ಬಡಾಂತ ಹೇಳ್ಯೊಳೊ. ಮನೆಗೆ ಹೋದ ಮೇಲೆ ಹೇಳಿರೆ ಸಾಕ್. ಎಲ್ಲೋವೂ ಆಸ್ಪತ್ರೆಗೆ ಬಂದರೆ ತೊಂದರೇಂತ ಹೇಳಿವೆ. ಹಂಗಾಗಿ ನಾ ನನ್ನ ಅಪ್ಪ, ಅವ್ವಂಗೂ ತಿಳ್ಸಿತಿಲ್ಲೆ.' ಕಮಲಕ್ಕ ಹೇಳ್ದೊ.

'ಅದ್ ಹೇಂಗಾದೆ? ಅಪ್ಪ ಹೇಳಿಕಂಡ್ ಇರ್ಲಿ. ನಾ ನಾಳೆ ಬಾಂವನೇ.' ಎಂತ ಹೇಳಿ ಫೋನ್ ಬುಟ್ಟತ್.

ಮೊರ್ದಿನ ಅಯ್ಯಣ್ಣ ಮಾಸ್ಟ್ರ ಹತ್ತ್ ಗಂಟೆ ಆಕಾಕನ ಪಂಬೆತ್ತಾಡಿಂದ ಬಂದೊ. ಸುರೇಶ, ರೇಶ್ಮಾ ಹನ್ನೆರ್ಡ್ ಗಂಟೆಗೆ ಬಂದೊ. ಅವರ ನೋಡಿ ಅಯ್ಯಣ್ಣ ಮಾಸ್ಟ್ರ ಹೆಣ್ಣ್‌ನೊಟ್ಟಿಗೆ

"ನೀ ಎಲ್ಲೋವ್ಕೂ ಹೇಳಿಕಂಡ್ ಬಾ. ನಾ ಹೇಳ್ತಿಲ್ಲೆನೋ? ಯಾರೀಗೂ ಹೇಳ್ಬಡಾಂತ' – ಹೆಣ್ಣ್ನ ಗದ್ರ್ಸಿದೊ.

'ಅಂವ ಫೋನ್ ಮಾಡಿಕನ ಹೇಂಗೆ ಹೇಳದೆ ಇರ್ದು?' ಕಮಲಕ್ಕ ಸಮದಾನ ಮಾಡ್ದೊ.

'ಒಳ್ಳೆ ಕತೆ ನಿಮ್ಮದ್ ಅಪ್ಪ. ಕಸ್ಟ ಕಾಲಲಿ ನಾವು ಬಾತ್ಲರೆ ಒಡ ಹುಟ್ಟಿದೊವುಂತ ಹೇಂಗಾದೆ? ನನ್ನ ಮೊನ್ಸ್ ಅಲ್ಲಿ ನಿಲ್ಲೊಕಲೆ?' – ಸುರೇಶ ಹೇಳ್ದೆ.

ಅಂವ ತಮ್ಮನ ಮೇಲೆ ಇಸಿದ ಪ್ರೀತಿಗೆ ಅಯ್ಯಣ್ಣ ಮಾಸ್ತ್ರ ಮೊನ್ಸ್ ತುಂಬಿ ಬಾತ್. ಅವು ಕಮಲಕ್ಕನೊಟ್ಟಿಗೆ,

"ನೀ ಸುರೇಶನೊಟ್ಟಿಗೆ ಪಂಬೆತ್ತಾಡಿಗೆ ಹೋಗು. ಇಲ್ಲಿ ನಾನೂ ಗಿರಿಜನೂ ಒಳೊಲೆ. ನೀ ಮಂಡೆಬೆಚ್ಚ ಮಾಡ್ಬಡ. ಮನೆಗೆ ಬೀಗ ಹಾಕಿ ಇರ್ದು ಸರಿ ಅಲ್ಲ.' ಎಂತ ಹೆಣ್ಣ್ನೊಟ್ಟಿಗೆ ಹೇಳ್ದೊ. ಕಮಲಕ್ಕ ಒಪ್ಪಿದೊ.

ಗಿರೀಶಂಗೆ ಅಣ್ಣ, ಅತ್ತಿಗೆನ ನೋಡಿ ಬಾಳ ಕುಸಿ ಆತ್. ಹಿಂಬೊತ್ತು ಮುಟ್ಟ ಆಸ್ಪತ್ರೆಲಿ ಇದ್ದ್, ಸುರೇಶ ರೇಷ್ಮಾ ಕಮಲಕ್ಕನ ಕರ್ಕಂಡ್ ಪಂಬೆತ್ತಾಡಿಗೆ ಬಂದೊ. ಮಾರ್ನೆ ದಿನ ಅವಿಬ್ಬೊರು ಬೆಂಗ್ಳೂರ್ ಹೊರ್‍ಟೋದೊ.

ಗಿರೀಶ ಆಸ್ಪತ್ರೆಗೆ ಬಂದ ನಾಕ್ನೇ ದಿನ ವಿಟ್ಲಂದ ರಾಮಯ್ಯ ದೊಡಪ, ವಿಮಲ ದೊಡವ, ವಾರಿಜಕ್ಕ ಬಂದೊ. ಅವರ ನೋಡಿ ಅಯ್ಯಣ್ಣ ಮಾಸ್ಟ್ರ,

'ನಾ ಗಿರಿಜಂಗೆ ಹೇಳಿದ್ದೆ. ಯಾರಿಗೂ ಸುದ್ದಿ ಮುಟ್ಟುಸುದು ಬೇಡಾಂತ. ನೀವ್ಗೆಲ್ಲಾ ತೊಂದರೆ ಅಲ್ಲನೋ?' ಎಂತ ಹೇಳ್ದೊ.

'ನಾವ್ಗೆ ಗಿರಿಜ ಹೇಳ್ತಿಲ್ಲೆ. ನಮ್ಮ ಮಕ್ಕಳ ಗೆರೇಜಿಗೆ ವಿಟ್ಲದೊವು ಒಂದು ಕಾರ್ನ ರಿಪೇರಿಗೆ ತಂದಿದ್ದೊ ಗಡ. ಅವರ ಸಂಮಂದಿಕರ್ ಇದೇ ಸಿಟಿ ಆಸ್ಪತ್ರೆಲಿ ಎಡ್ಮಿಟ್ ಆಗಿದ್ದೊ ಗಡ. ಅವು ಹೇಳ್ದ್. ಯಾರೋ ಪಂಜದ ಕಡೆವು ಬಂದೊಳೊ. ಗಿರೀಶಂತ ಅವರ ಹೆಸ್ರ್ ಅವರ ಅಪ್ಪ ಅಯ್ಯಣ್ಣ ಗೌಡ್ರೂಂತ ಹೇಳ್ದೊ ಗಡ. ಹಂಗೆ ನಾವ್ಗೆ ಗೊತ್ತಾತ್.' ರಾಮಯ್ಯ ದೊಡಪ ಸಮದಾನ ಮಾಡ್ದೊ.

"ಇಂತಾ ಸಮಯಲಿ ನಾವೆಲ್ಲಾ ಬರದಿದ್ದರೆ ಹೇಂಗೆ? ಇದರೆಲ್ಲಾ ಅಡ್‌ಂಗ್‌ಸಿಕೆ ಆಗದ್. ನಿನ್ನ ಅತ್ತೆ ಮಾಂವಂಗೆ ಗೊತ್ತುಟ್ಟೊ?" ವಿಮಲ ದೊಡವ ಕೇಳ್ದೊ.

'ಇಲ್ಲೆ. ನಾವು ಯಾರಿಗೂ ತಿಳ್ಸಿತ್ಲೆ. ಮನೆಗೆ ಹೋದ ಮೇಲೆ ಹೇಳೊಮೋಂತ ಕಮಲಂಗೆ ಹೇಳ್ಯೆಳೆ' ಮಾಸ್ಟ್ರ ಹೇಳ್ದೊ.

'ತೊಪ್ಪು ಮಾಡ್ದ. ಇದೆಲ್ಲಾ ಸರಿ ಅಲ್ಲ. ಇಂತಾ ಇಸಯ ಮುಚ್ಚಿ ಇಸಿಕೆ ಆಗದ್. ಇಂವ ಅವ್ಕೆ ಪುಳ್ಳಿ ಅಲ್ಲನೋ?' ವಾರಿಜಕ್ಕ ಹೇಳ್ದೊ. ಮಾಸ್ಟ್ರ ಮಾತಾಡ್ತ್ಲೆ.

ಅಸ್ಪಾಕನ ಗಿರಿಜನೂ, ಜಯಂತಿನ ಮಗ ಮಾಲಿನಿನೂ ಗಿರೀಶಂಗೆ ಊಟ ತಕಂಡ್ ಬಂದೊ. ಮಾಲಿನಿನ ನೋಡಿ ವಾರಿಜ,

'ನಿಂಗೆ ರಜನೋ?' ಎಂತ ಕೇಳ್ದೊ. 'ಇಂದ್ ಆೃತ್ವಾರ ಅಲ್ಲನೋ ದೊಡವಾ? ಗಿರೀಶ ಬಾವಂಗೆ ಡೆಂಗ್ಯೂ ಬಂದ್ ಇಲ್ಲಿ ಸೇರ್ಸಿಯೊಳೋಂತ ನಂಗೆ ಗೊತ್ತೇ ಇತ್ಲೆ. ಇಂದ್ ಸಣ್ಣವ್ವ ಮನೆಗೆ ಬಾಕನನೇ ಗೊತ್ತಾದ್. ಹಂಗರೆ ನಾನೂ ಬನ್ನೇಂತ ಹೊರ್ಟ್ ಬಂದೆ' ಎಂತ ಮಾಲಿನಿ ಹೇಳ್ತ್. ಅದ್ ಸೈಂಟ್ ಎಗ್ನಿಸ್ ಕಾಲೇಜಿಲಿ ಎಂ.ಎಸ್.ಸಿ. ಮಾಡ್ತಿತ್ತ್. ಹಾಸ್ಟೆಲ್‌ಲಿ ಇದ್ದ ಕಂಡ್ ಓದ್ತಿತ್ತ್. ಗಿರೀಶಂಗೆ ಇವರ್‍ನೆಲ್ಲಾ ನೋಡಿ ಬಾಳ ಕುಸಿ ಆತ್. ನಿತ್ರಾಣಲಿ ಇದ್ದ್ ಮಾತಾಡಿಕೆ ತುಂಬಾ ಕಸ್ಟ ಆದರೂ, ಅಂವನ ಮೋರೆಲಿ ಕುಸಿ ಕಾಂಬತಿತ್ತ್. ಮಾಲಿನಿ ಬಾವನ ಹಕ್ಕಲೆ ಬಂದ್ ಅಂವನ ಹಣೆನ ಪೂಜಿ,

'ಬಾವಾ ಹೇಂಗಾಳೊಳರಿ? ಗುರ್ತನೇ ಸಿಕ್ಕುದ್ಲೆ. ಇನ್ ನೀವು ಮುಂದೆನಾಂಗೆ ಆಕೆ ಸುಮಾರ್ ಸಮಯ ಬೇಕಾದು.' ಎಂತ ಬೇಜಾರ್‌ಲಿ ಹೇಳ್ತ್.

'ಹೇಂಗೂ ಜೀವ ಒಳ್ತಲೆ. ಅಣ್ಣ ಬೇಗ ಕರ್‍ಕಂಡ್ ಬಂದ ಕಾರ್ಣ ಆತ್. ಇಲ್ಲರೆ ಕಸ್ಟ ಇತ್ತ್.' ಗಿರಿಜಕ್ಕ ಹೇಳ್ದೊ.

ಅಂವ ಬೊದ್ಕಿಕೆ ಗಿರಿಜನೇ ಕಾರ್ಣ ಅವ್ಳೇ ಕಸ್ಟಪಟ್ಟ್ ಹಗ್ಳ್ ಇರ್‍ಳ್ ನಮ್ಮ ನೋಡಿಕಂಡ್, ಮನೆಂದ ಇಲ್ಲಿಗೆ ಇಲ್ಲಿಂದ ಅದರ ಮನೆಗೇಂತ ನಾಕ್ ದಿನಂದ ಅದ್ಕೆ ಒಂದು ಚೂರು ಪುರ್ಸೊತ್‌ಂತ ಇಲ್ಲೆ. ಅದರ ರುಣನ ನಾ ಹೇಂಗೆ ತೀರ್‍ಸುದು.' ಅಯ್ಯಣ್ಣ ಮಾಸ್ಟ್ರ ಪೇಚಾಡಿಕಂಡೊ.

'ಇಂದಾ, ಇದ್ಕೆ ನಂಗೆ ಬೇಜಾರಾದು. ರಿಣ ಗಿಣಂತ ಏಕೆ ಹೇಳ್ಯ? ನಾ ನಿನ್ನ ಒಡಹುಟ್ಟು ಅತ್ಲರೂ, ನಿನ್ನದೇ ನೆತ್ತರ್. ಸಣ್ಣದಿರಿಕನ ನಾವು ಒಟ್ಟಿಗೆ ಆಡಿ ಬೆಳ್ದದ್ ಮರ್‍ತೋತೋ ಹೇಂಗೆ? ಅಣ್ಣ, ತಮ್ಮಂದರ ಮಕ್ಕ ಆದರೂ ಒಂದೇ ಅಯ್ಯನ ಮಕ್ಕಳಾಂಗೆ, ಒಂದೇ ಮಡ್ಕೆನ ಗಂಜಿ ತೆಳಿ ಕುಡ್ದ್ ಬೊದ್ಕಿದೊವು ನಾವಲ್ಲನೋ? ನೀ ಈಗ ಮರ್‍ತರೂ ನಂಗೆ ಅದೆಲ್ಲಾ ನೆಂಪಾದೆ. ನಂಗೆ ಒಡ ಹುಟ್ಟಿದ ಅಣ್ಣ ಇತ್ಲರೂ ನೀ ನಂಗೆ ಸೊಂತ ಅಣ್ಣಂದ ಹೆಚ್ಚ್ ಬಲಾ? ಇದರೆಲ್ಲಾ ಮೊನ್ಸ್‌ಗೆ ಹಚ್ಚಿಕಂಬಡ.' ಎಂತ ಹೇಳಿ ಅಯ್ಯಣ್ಣ ಮಾಸ್ಟ್ರ ತಲೆ ಪೂಜಿತ್. ತಂಗೆನ ಪ್ರೀತಿಗೆ ಅಣ್ಣನ ಕಣ್ಣ್ ತುಂಬಿ ಬಾತ್.

ಗಿರಿಜಕ್ಕ ಗಿರೀಶಂಗೆ ಊಟಕೊಟ್ಟ್, ಮಾಲಿನಿನ ಅಂವನ ಹಕ್ಕಲೆ ನಿಲ್ಲಿಕೆ ಹೇಳಿ, ಅಪ್ಪ, ಅವ್ವ, ಅಕ್ಕ ಮತ್ತೆ ಅಯ್ಯಣ್ಣ ಮಾಸ್ಟ್ರ ಮನೆಗೆ ಉಂಬಕೆ ಕರ್‍ಕೊಂಡೋದೊ. ಅಂದ್ ಆೃತ್ವಾರ ಆದ ಕಾರ್ಣ ಸಬ್‌ಇನೆಸ್ಪೆಕ್ಟರ್ ಮನೆಲಿದ್ದೊ.

ಎಲ್ಲೋವು ಉಂಡ್ ಎದ್ದೊ. ರಾಮಯ್ಯ ಗೌಡ್ರು, ವಿಮಲಕ್ಕ, ವಾರಿಜಕ್ಕ

ಊರಿಗೆ ಹೊರ್ವೋದೊ.

ಒಂದ್ ವಾರ ಆಕನ ಗಿರೀಶ ಹಂಞ ಉಸಾರಾತ್. ಇನ್ನ್ ಮನೆಗೆ ಕರ್ಕ್ಯೋಂಡೋಕ್‌ಂತ ಡಾಕ್ಟ್ರ ಹೇಳ್ದೊ. ಮಾತ್ರೇ ಟಾನಿಕ್ ಬರ್ದ್ ಕೊಟ್ಟೊ. ಒಂದು ವಾರ ಬುಟ್ಟ್ ಬಂದ್ ಪರೀಕ್ಷೆ ಮಾಡ್ಸಿಕಂಡ್ ಹೋಕೂಂತ ಹೇಳ್ದೊ. ಅಯ್ಯಣ್ಣ ಮಾಸ್ಟ್ರ ಗಿರಿಜಕ್ಕನ ಕಾರ್‌ಲಿ ಮಂಜನ ಊರಿಗೆ ಕರ್ಕಂಡ್ ಬಂದೊ. ಗಿರಿಜಕ್ಕನು ಒಟ್ಟಿಗೆ ಬಂದ್ ಅಳಿಯನ ಪಂಬೆತ್ತಾಡಿಲಿ ಬುಟ್ಟ್ ಹೋದೊ.

ಈಗ ಸುದ್ದಿ ಎಲ್ಲಾ ನೆಂಟ್ರ್‌ಗಳಿಗೂ ಗೊತ್ತಾತ್. ದಿನಾ ಯಾರಾದರೊಬ್ಬರ ಮನೆಂದ ಜನಂಗ ಅಂವನ ನೋಡಿಕೆ ಬಾತಿದ್ದೊ. ಜಯಂತಿ ಅಕ್ಕ ಅಳ್ಯನ ನೋಡಿಕೆ ಬಂದೊವು ಒಂದ್ ವಾರ ತವರು ಮನೆಲಿ ನಿತ್ತ್. ಅತ್ತಿಗೆಗೆ ಸಾಯ ಮಾಡ್ದೊ. ಬಂದ ನೆಂಟ್ರ್‌ಗಳ ಸುದಾರ್ಸಿಕಂಡ್, ಮಂಜನ ಚಾಕ್ರಿ ಮಾಡಿಕೆ ಕಮಲಕ್ಕಂಗೆ ಕಸ್ಟ ಆಗ್ತಿತ್ತ್. ಕಮಲಕ್ಕನ ಅವ್ವ, ಅಪ್ಪ, ಅಣ್ಣ, ತಮ್ಮಂದರ್ ಅವರ ಹೆಣ್ಮಕ್ಕ ಎಲ್ಲಾ ಒಬ್ಬೊಬ್ಬರಾಗಿ ಬಂದ್ ನೋಡಿಕಂಡ್ ಹೋಗ್ತಿದ್ದೊ. ರೇಶ್ಮನ ಅಪ್ಪ, ಅವ್ವ ಮೂರ್ನಾಡ್‌ಂದ ಬಂದ್ ನೋಡಿಕಂಡ್ ಹೋದೊ. ಆಗ ಅವು ಅಯ್ಯಣ್ಣ ಮಾಸ್ಟ್ರ ಒಟ್ಟಿಗೆ,

"ಬಾವಾ, ಗಿರೀಶಂಗೆ ಬೇಗ ಮೊದ್ವೆ ಮಾಡಿ. ಅಂವಂಗೂ ಈಗ ಇಪ್ಪತ್ತೆಂಟ್ ವೊರ್ಸ ಕಳ್ತಲೆ. ಬೇಕಾರೆ ನಾ ಹೆಣ್ಣ್ ನೋಡ್ನೆ. ನನ್ನ ತಂಗೆನ ಕಡೆವು ಕುಸಾಲನಗರದ ರಂಗ ಸಮುದ್ರಲಿ ಒಳೊ. ಗಟ್ಟಿ ಕುಳವಾರ್‌ಗ. ಅವ್ಕೆ ಒಬ್ಳೇ ಮಗ. ಆಸ್ತಿ ಬೊದ್ಕ್ ಬೇಕಾದಸ್ಟ್ ಉಟ್ಟು. ನೀವು ಹೂಂತೇಳ್ರೆ ನಾ ಅವ್ಕೆ ಹೇಳಿ ಕಳ್ಸಿನೆ. ಅಂವ ಎಸ್ಟ್ ದಿನಾಂತ ಹೋಟ್ಲೂಟ ತಿಂದ್‌ಕಂಡ್ ಇರ್ದು?" ಎಂತ ಹೇಳ್ದೊ. ಆಗ ಕಮಲಕ್ಕ 'ಯಾವ್ದಕ್ಕೂ ಅಂವ ಒಮ್ಮೆ ಮುಂದೆನಾಂಗೆ ಮೈ ಕೈ ತುಂಬಿಕಂಡ್ ಪುಟಿಕ್ಕನೆ ಆಗಲಿ.ಮತ್ತೆ ನೋಡೊಮೊ. ನೀವು ಅಮ್ಸರ ಮಾಡ್ಬೊಡಿ." ಎಂತ ಹೇಳ್ದೊ.

ಹತ್ತ್ ಇಪ್ಪತ್ತ್ ದಿನಲಿ ಗಿರೀಶ ಮೆಲ್ಲಂಗೆ ಮನೆ ಒಳಗೆ ಎದ್ದ್ ಓಡಾಡುವಂಗಾತ್. ನೆರೆ ಕರೆವು ಯಾರಾದರೊಬ್ಬರ್ ಬಂದ್ ಅಂವನ ಮಾತಾಡ್ಸಿಕಂಡ್ ಹೋಗ್ತಿದ್ದೊ. ಒಂದು ಆೃತ್ವಾರ ಮಂಗ್ಳೂರ್‌ಂದ ಮಾಲಿನಿನೂ, ಗಿರಿಜಕ್ಕನ ಮಗಳ್ ಸುಧನೂ ಗಿರೀಶನ ನೋಡಿಕೆ ಬಂದೊ. ಸುಧಾ ಬೆಂಗ್ಳೂರ್‌ಲಿ ಕೆಲ್ಸಲಿ ಇತ್ತ್. ಈಗ ಅದ್ಕೆ ಇಪ್ಪತ್ತಾರ್ ವೊರ್ಸ. ಗಿರಿಜಕ್ಕ ಮಗಳಿಗೆ ಗಂಡ್ ಹುಡ್ಕ್ಯತಿದ್ದೊ. ಆದರೆ ಅದ್ ಮೊದ್ವೆಗೆ ಒಪ್ಪ್‌ತಿತ್ಲೆ. ಎರ್ಡ್ ವೊರ್ಸ ದುಡ್ದ್ ದುಡ್ಡು ಸಂಪಾದ್ನೆ ಮಾಡ್ನೇಂತ ಹೇಳ್ತಿತ್ತ್. ಮಗಳ ಆಸೆಗೆ ಅಪ್ಪನ ಒಪ್ಪಿಗೆ ಇತ್ತ್. ಇದರ್‌ಂದಾಗಿ ಗಿರಿಜಕ್ಕಂಗೆ ತುಂಬಾ ಬೇಜಾರಾಗ್ತಿತ್ತ್. ಇದರ ಪ್ರಾಯದ ಗೂಡೆಗ ಎಲ್ಲಾ ಮೊದ್ವೆ ಆಗಿ ಎರ್ಡೆರ್ಡ್ ಮಕ್ಕಳ ಅಯ್ಯೆಕ ಆಗೊಳೊ. ಇನ್ನ್ ನನ್ನ ಮಗಳ್ ಯಾಗ ಮೊದ್ವೆ ಆದು ನಾ ಯಾಗ ಅಜ್ಜಿ

ಆದೂಂತ' ಗಿರಿಜಕ್ಕ ಮೊನ್ಸ್‌ಲೇ ಕೊರ್‍ಗ್ತಿದ್ದೊ. ಅವಿಬ್ಬೊರು ಬಂದ ಮೇಲೆ ಕಮಲಕ್ಕಂಗೆ ಬಾಳ ಕುಸಿ ಆತ್. ಅಯ್ಯಣ್ಣ ಮಾಸ್ಟ್ರು ಸೊಸೆಕ್ಕಳಿಗೆ ಗಡ್ದ್‌ನ ಸಮ್ಮಾನ ಮಾಡ್ಸಿದೊ. ಅವರಿಬ್ಬರ ನೋಡಿಕಾಕನ ಅಯ್ಯಣ್ಣ ಮಾಸ್ಟ್ರಿಗೆ ಇವರಿಬ್ಬರ ಪೈಕಿ ಒಬ್ಬಳ ಸೊಸೆ ಮಾಡಿಕಂಡರೆ ಹೇಂಗೇಂತ ಏಚನೆ ಮಾಡ್ದೊ. ಸುಧಾ ತುಂಬಾ ಸೋಕುನ ಗೂಡೆ. ಯಾಗೊಳೂ ಪೇಂಟ್ ಸರ್ಟ್‌ಲೇ ಇರ್‍ತಿತ್ತ್. ಕಮಲಕ್ಕ ಒಪ್ಪಿಕಿಲ್ಲೇಂತ ಅಯ್ಯಣ್ಣ ಮಾಸ್ಟ್ರ ಒಳಮೊನ್ಸ್ ಹೇಳ್ತಿತ್ತ್. ಅದ್ ಅಲ್ಲದೆ ಸುದಾ ಒಪ್ಪೊಕಲೆ? ಅದ್ಕೆ ಯಾರಾದರ್ ಇಂಜಿನಿಯರೋ ಡಾಕ್ಟ್ರೊ ಗಂಡ ಆಕೂಂತ ಇರ್‍ದು. ನಾ ಏಕೆ ಇಲ್ಲದರ ಎಲ್ಲಾ ಏಚನೆ ಮಾಡೊಕೂಂತ ಹೇಳಿಕಂಡ್ ಮೊನ್ಸ್‌ಲೇ ಸುಮ್ಮಂಗಾದೊ.

ಕಮಲಕ್ಕಂಗೆ ಮಾಲಿನಿನ ಮೇಲೆ ತುಂಬಾ ಪ್ರೀತಿ ಅದ್ ಗುರು ಹಿರ್‍ಯರಿಗೆ ಅಂಜಿದ್ ನಡ್ಯತಿತ್ತ್. ಹಳ್ಳಿಗೆ ಹಳ್ಳಿ ಮಟ್ಟ್‌ನೂ, ಪೇಟೆಗೆ ಪೇಟೆ ಮಟ್ಟ್‌ಲಿನೂ ಇತ್ತ್. ನಮ್ಮ ಗಿರೀಶಂಗೆ ಸರಿಯಾದ ಜೋಡಿ. ಜಯಂತಿ ಒಪ್ಪಿದೆನೋ ಇಲ್ಲೆನೋ? ಅದರ ಮೊನ್ಸ್‌ಲಿ ದೊಡ್ಡ ಆಪೀಸರ್ ಅಳ್ಯ ಆಕೂಂತ ಇರ್‍ದು. ನಾ ಏಕೆ ಕೇಳಿದ್ ಹಗುರ ಆಕು? ಅಸ್ಟರ್‌ಲೂ ಮಾಲಿನಿಗೂ, ಗಿರೀಶಂಗೂ ಈ ಇಸಯ ಅವರ ಮೊನ್ಸ್‌ಲಿ ಬಾಕೊಲೆ. ಬೇಡ. ದೇವ್ರು ಎಲ್ಯಾದರೂ ನನ್ನ ಮಂಜಂಗೆ ಒಂದು ಹೆಣ್ಣ್‌ನ ಸೃಷ್ಟಿ ಮಾಡಿರ್‍ದು. ಆದರೆ ಕೊಡ್ಗ್‌ನ ಗೂಡೆಗ ಮಾತ್ರ ಬೇಡ. ನಂಗೆ ಅವರೊಟ್ಟಿಗೆ ಹೊಂದಿಕಂಬಕೆ ಆಕಿಲ್ಲೆ. ಎಂತ ಮೊನ್ಸ್‌ಲೇ ನೆನ್ಸಿಕಂಡ್ ಇದ್ದೊ.

ಇಪ್ಪತ್ತ್ ದಿನಗ ಕಳ್ದೊ. ಈಗ ಗಿರೀಶ ಉಸಾರಾತ್. ಒಂದಿನ ಅಂವ ಅಪ್ಪ, ಅವ್ವನೊಟ್ಟಿಗೆ.

'ನಾ ಚಿಕ್ಕಮಗಳೂರಿಗೆ ಹೋನೆ. ಈಗ ನಾ ಉಸಾರಾಗೊಳೆ' ಎಂತ ಹೇಳ್ತ್.

ಒಂದು ತಿಂಗ ಆಗಲಿ ಮಂಜ ರಜೆ ಇತ್ಲರೆ ರಜೆ ಹಾಕ್. ಸಂಬಳ ಸಿಕ್ಕಿತ್ಲರೂ ಚಿಂತೆ ಇಲ್ಲೆ. ನೀ ಸರ್‍ಯಾಗಿ ಮೈ ಕೈ ತುಂಬಿಕಂಡ್ ಪುಟ್ಟಿಕ್ಕನೆ ಆಗ್. ಹಂಞ ದಾತ್ ಬರ್‍ಲಿ. ಕಮಲಕ್ಕ ಹೇಳ್ದೊ.

ಇಲ್ಲೆ ಅವ್ವ, ನಂಗೆ ಇಲ್ಲಿ ಬೇಜಾರಾದೆ. ನಾ ಹೋನೆ–" ಗಿರೀಶ ಹೇಳ್ದೆ.

'ನೀ ಚಿಕ್ಕಮಗ್ಳೂರ್‌ಂದ ವರ್ಗ ಮಾಡ್ಸಿಕ. ಸುಳ್ಯಕ್ಕೊ ಪುತ್ತೂರಿಗೊ ಹಾಕ್ಸಿಕ. ಆಗ ನಿಂಗೆ ಮನೆಂದಳೇ ಕೆಲ್ಸಕ್ಕೆ ಹೋಕ್, ಅಯ್ಯಣ್ಣ ಮಾಸ್ಟ್ರ ಹೇಳ್ದೊ.

'ನಾ ಅದೇ ಏಚನೆಲಿ ಒಳೆ ಅಪ್ಪಾ, ನೋಡೊಮೊ. ಹೇಂಗಾದೇಂತ' ಗಿರೀಶ ಹೇಳ್ದೆ.

'ನೀ ಬೇಗ ಮೊದ್ವೆ ಆಗ್ ಮಂಜ. ನಾವು ಇಬ್ಬೊರೇ ಇದ್ದ್ ಇದ್ದ್ ಬೇಜಾರಾಗುಟ್ಟು.' ಕಮಲಕ್ಕ ಹೇಳ್ದೊ.

ನೀವೇ ಹೆಣ್ಣ್ ನೋಡಿ ಇಸಿನಿ ಅವ್ವಾ, ನಾ ಬಂದ್ ತಾಳಿ ಕಟ್ಟಿನೆ. ನಂಗೆ ಗೂಡೆ ನೋಡಿಕೆ ಆಕಿಲ್ಲೆ. ಒಳ್ಳೆದ್ ಕೆಟ್ಟದ್ ಎಲ್ಲಾ ನೀವೇ ನೋಡೊಕೊಲೆ' – ಗಿರೀಶ ಹೇಳ್ದ.

ಈ ಮಾತ್‌ನ ಕೇಳಿ ಕಮಲಕ್ಕಂಗೆ ಸೊರ್ಗ ಸಿಕ್ಕಿದಂಗಾತ್.

'ಹೌದ್ ಮಂಜ. ನೀ ಹೇಳ್ದು ನಿಜನಾ ? ಮತ್ತೆ ನಾ ನೋಡ್ದ ಗೂಡೆನ ನೀ ಬೇಡಾಂತ ಹೇಳಿಕೆ ಆಗದ್.' – ಕಮಲಕ್ಕ ಒತ್ತಿ ಒತ್ತಿ ಕೇಳ್ದೊ.

'ಇಲ್ಲೆ ಅವ್ವಾ, ನಿಂಗೆ ಅಪ್ಪಂಗೆ ಒಪ್ಪಿರೆ ನಂಗೂನೂ ಒಪ್ಪಿಗೆನೆ. ಆದರೆ.' – ಗಿರೀಶ ಅರ್ದಲಿ ನಿಲ್ಲಿಸಿತ್.

'ಆದರೆ ಏನ್ ಮಂಜ ಬೇಗ ಹೇಳ್' – ಕಮಲಕ್ಕ ಅರ್ದ ಸೋತ ದನಿಲಿ ಕೇಳ್ದೊ. ಮಂಜ ಇನ್ ಏನಾದರ್ ಕೊಕ್ಕೆ ತೆಗ್ದದೆನೋಂತ.

'ಏನಿಲ್ಲೆ. ಗೂಡೆ ಬಿ.ಎ. ಮುಟ್ಟ ಓದಿರೋಕು. ವ್ಯವಹಾರ ಜ್ಞಾನ ಇರೊಕು. – ಗಿರೀಶ ಹೇಳ್ದ.

'ಅಬ್ಬಾ! ಅಸ್ಟೆನೊ. ನಾ ಇನ್ ಏನೇನ್ ಸರ್ತ ಹಾಕ್ಯಂತ ಹೆದ್ರಿ ಹೋಗಿದ್ದೆ. ಅದ್ಕೇನ್ ಈಗ ಬಿ.ಎ. ಕಲ್ತೋವು ಎಂ.ಎ. ಕಲ್ತೋವು ತುಂಬಾ ಗೂಡೆಗ ಒಳೊ. ನಾ ನೋಡ್ನೇ– ಕಮಲಕ್ಕ ಕುಸಿಲಿ ಹೇಳ್ದೊ. ಮಂಜ ಒಪ್ಪಿತ್. ಸುದ್ದಿ ಅಯ್ಯಣ್ಣ ಮಾಸ್ತ್ರ ಕೆಬಿಗುನೂ ಬೀತ್. ಅವುನೂ ತುಂಬಾ ಕುಸಿ ಪಟ್ಟೊ. ಅವ್ಕೆ ಗೊತ್ತಿತ್ತ್. ಗಿರೀಶ ಎಲ್ಲರ ಹಾಂಗೆ ಅಲ್ಲಾಂತ, ಸಣ್ಣ ಪ್ರಾಯಲೇ ಅಂವ ಅಜ್ಜ, ಅಜ್ಜಿನ ನೆರ್ಳ್‌ಲಿ ತೋಟ, ತೊಡ್ಗೆ, ದನ, ಕರ್, ಆಸ್ತಿ ಬೊದ್‌ಕ್‌ಂತ ಅದರನೇ ಪ್ರೀತಿಸಿಕಂಡ್ ಬಂದಂವ. ಗುರು, ಹಿರ್ಯರಿಗೆ ಗೌರವ ಕೊಡಂವ. ಅವರ ಅಪ್ಪ ಚಾಮಯ್ಯ ಗೌಡ್ರು ಯಾಗೋಳು,

'ನಾ ಕಸ್ಟಪಟ್ಟ್ ಮಾಡ್ದ ಆಸ್ತಿ, ಬೊದ್‌ಕ್‌ನ ಒಳ್ಸಂವ ಇಂವನೇ ನನ್ನ ಪುಳ್ಳಿ ಗಿರೀಶಾಂತ' ಎಲ್ಲರೊಟ್ಟಿಗೆ ಹೇಳ್ತಿದ್ದೊ.

ಗಿರೀಶ ಚಿಕ್ಕಮಗಳೂರಿಗೆ ಹೊರ್‍ಟೋತ್. ಕಮಲಕ್ಕ ದಿನಾ ಗಂಡನೊಟ್ಟಿಗೆ ಗಿರೀಶನ ಮೊದ್ವೆ ಇಸಯನೇ ಮಾತಾಡ್ದು. ಕೇಳಿ, ಕೇಳಿ ಸಾಕಾಗಿ ಕಡೆಗೊಂದು ದಿನ

'ನೀ ಹೇಳ್ದರನೇ ಎಸ್ಟ್ ಸಲ ಹೇಳ್ದುನೇ? ನಂಗೆ ಗೊತ್ತಿಲ್ಲೆನೋ? ನನ್ನ ಮಂಜಂಗೆ ಮೊದ್ವೆ ಮಾಡ್ಸಿಕೆ. ಅಮ್ಸರ ಮಾಡ್ಬಡ. ನಾವು ಉಸಾರ್‌ಲಿ ಹೆಜ್ಜೆ ಇಸೊಕು. ನಂಗೇನೋ ದೂರದ ಗೂಡೆನ ತಾಕೆ ಮೊನ್ಸಿಲ್ಲೆ. ನಮ್ಮ ಸಂಮಂದಲಿನೇ ಗೂಡೆನ ಹುಡ್ಕಿರೆ ಹೇಂಗೆ?' –ಮಾಸ್ತ್ರ ಹೆಣ್ಣ್‌ನೊಟ್ಟಿಗೆ ಕೇಳ್ದೊ.

'ನಾನೂ ಅದರ್‌ನೇ ಹೇಳೊಕೂಂತ ಇದ್ದೆ. ಗೊತ್ತಿದ್ದ ಗೂಡೆಗ ಆದರೆ ನಾವ್ಗೆ ಚಿಂತೆ ಇಲ್ಲೆ. ನಿಮ್ಮ ಮೊನ್ಸ್‌ಲಿ ಯಾರಾದರ್ ಒಳೊನೊ?– ಕಮಲಕ್ಕ

ಕೇಳಿವೆ.

'ನಿನ್ನ ಮೊನ್ಸ್‌ಲಿ ಏನ್ ಉಟ್ಟು ಹೇಳ್' – ಅಯ್ಯಣ್ಣ ಮಾಸ್ಟ್ರ ಕೇಳ್ದೊ.

'ನೀವು ಸುರುಗೆ ಹೇಳಿ, ಮತ್ತೆ ನಾ ಹೇಳಿನೆ' ಕಮಲಕ್ಕ ಹೇಳ್ದೊ.

'ಇಂದಾ ಗಿರೀಶ ಆಸ್ಪತ್ರೆಲಿರಿಕಾಕನ ಗಿರಿಜ ನಾವ್ಗೆ ತುಂಬಾ ಉಪಕಾರ ಮಾಡಿಟ್ಟು. ಅದ್ಕೆ ಗಿರೀಶನ ಕಂಡ್ರೆ ಪ್ರೀತಿನೂ ಉಟ್ಟು. ಅದರ ಮಗಳ ಕೇಳ್ರೆ ಹೇಂಗೆ? ಅದನೂ ಕುಸಿಲಿ ಒಪ್ಪುದು.' ಮಾಸ್ಟ್ರ ಹೇಳ್ದೊ.

'ಗೂಡೆ ಏನೋ ಆದು. ಗಿರಿಜತ್ತಿಗೆನೂ ತುಂಬಾ ಒಳ್ಳೆ ಜನ. ಆದರೆ ಗೂಡೆ ಒಪ್ಪೊಕಲೆ? ಅದರ ಏಸನೋ, ಯಾಗೋಳು ಗಂಡ್‌ಗಳ ಹಾಂಗೆ ಇರ್ದು. ಅದ್ ಗಿರೀಶನ ಕ್ಯಾರೇ ಮಾಡಿಕಿಲ್ಲೆ.' ಕಮಲಕ್ಕ ನರ್‌ಂಗಿದೊ.

'ಅದ್ಕೇ ನಾ ಹೇಳ್ದ್. ನಿನ್ನ ಮೊನ್ಸ್‌ಲಿ ಯಾರೊಳೋಂತ. ನಿಂಗೆ ಕಲ್ತ ಗೂಡೆನೂ ಆಕು. ಅದರ ಡ್ರೆಸ್‌ನೂ ಹಳ್ಳಿ ಗೂಡೆಗಳಾಂಗಿರೊಕುಂತೇಳ್ರೆ ಈಗನ ಕಾಲಲಿ ಯಾರ್ ಸಿಕ್ಕುವೆ?' ಅಯ್ಯಣ್ಣ ಮಾಸ್ಟ್ರ ಹೇಳ್ದೊ.

'ಏಕೆ ಸಿಕ್ಕಿಕಿಲ್ಲೆ? ನಾ ಒಂದು ಗೂಡೆನ ಮೊನ್ಸ್‌ಲಿ ಇಸಿಕಂಡಳೆ. ಹೇಳಲಿನೋ?' –ಕಮಲಕ್ಕ ಹೇಳ್ದೊ.

'ಹೇಳ್ ಹೇಳ್. ನಿಂಗೆ ಮುಂದೆನೇ ಹೇಳಿಕೆ ಏನಾಗಿತ್ತ್. ನಾ ಏನ್ ಬೇಡಾಂತೇಳ್ನೆನೊ? ನಿನ್ನ ಮಾತ್ ನಾ ಯಾಗ ತೆಗ್ದ್ ಹಾಕಳೆ?' – ಅಯ್ಯಣ್ಣ ಮಾಸ್ಟ್ರ ಹೇಳ್ದೊ.

ಅದೇ, ನಮ್ಮ ಜಯಂತಿನ ಮಗಳ್ ಮಾಲಿನಿ ಹೇಂಗೆ? ಗೂಡೆನೂ ಕಲ್ತುಟ್ಟು. ನಮ್ಮ ಮೊಟ್ಟ್‌ಗುನೂ ಸರಿ ಉಟ್ಟು.' – ಕಮಲಕ್ಕ ಹೇಳ್ದೊ.

ಅದರ ಕೇಳಿ ಅಯ್ಯಣ್ಣ ಮಾಸ್ಟ್ರ ಸಮದಾನಲಿ ಉಸ್ರ ಬುಟ್ಟೊ. ಅವರ ಮೊನ್ಸ್‌ಲಿನೂ ಒಮ್ಮೆ ಆ ಇಸಯ ಬಂದಿತ್ತ್. ತಂಗೆ ಒಪ್ಪಿದೆನೊ ಇಲ್ಲೆನೋಂತ ಅದರ ಮೊನ್ಸ್‌ಂದ ತೆಗ್ದ್ ಹಾಕಿದ್ದೊ.

'ಹಿಂಗಾ ಇಸಯ. ನಾ ಯಾರೋಂತ ಇದ್ದೆ. ಗೂಡೆ ಆದು. ಆದರೆ ಜಯಂತಿ ಒಪ್ಪೊಕೊಲೆ. ಅದರ ಮೊನ್ಸ್‌ಲಿ ಏನುಟ್ಟೊ ಏನೋ?' – ಅಯ್ಯಣ್ಣ ಮಾಸ್ಟ್ರ ಹೇಳ್ದೊ.

ನಾವಿಬ್ಬೊರು ಒಂದು ದಿನ ನೋಡಿ ಮಾತಾಡಿ ಬರೊಮೊ ಒಪ್ಪಿರೆ ಸರಿ. ಒಪ್ಪಿತ್ಲರೆ ಬೇಡ. ಕಲ್ಲ್ ಹೊಡ್ದ್ ನೋಡೊಮೊ. ಹೋದರೆ ಒಂದ್ ಕಲ್ಲ್, ಸಿಕ್ಕಿರೆ ಒಂದ್ ಹಣ್ಣ್.' – ಕಮಲಕ್ಕ ಹೇಳ್ದೊ.

ಅಂತೂ ಇಂತೂ ಇಬ್ಬೊರು ಒಂದು ಒಮ್ಮತಕ್ಕೆ ಬಂದ್ ತಂಗೆ ಮನೆಗೆ ಹೆಣ್ಣ್ ಕೇಳಿಕೆ ಹೊರ್ಟೊ.

* * * * *

25."ತಂಗೆ ಮನೆಲಿ ಹೆಣ್ಣ್ ಮಾತಾಡಿಕೆ ಹೋದೊ."

ಒಂದ್ ಒಳ್ಳೆ ದಿನ ನೋಡಿ ಅಯ್ಯಣ್ಣ ಮಾಸ್ತ್ರ ಮತ್ತೆ ಕಮಲಕ್ಕ ಜಯಂತಿ ಅಕ್ಕನ ಮನೆಗೆ, ಪುತ್ತೂರು ಬಲ್ನಾಡ್‌ಗೆ ಹೋದೊ. ಬೊಳ್ಪುನ ಕಾಪಿನ ಅಟ್ಟೈಸ್ರ ಮುಗ್ಯಕಾಕನನೇ ಗಂಟೆ ಹತ್ತ್ ಆಗಿತ್ತ್. ತಂಗೆ ಮನೆ ಮುಟ್ಟಿಕಾಕನನೇ ಗಂಟೆ ಹಕ್ಕಲೆ ಹಕ್ಕಲೆ ಹನ್ನೆರ್ಡ್ ಆತ್. ಅಪ್ರೂಪಕ್ಕೆ ಬಂದ ಅಣ್ಣ ಅತ್ತಿಗೆನ ನೋಡಿ ತಂಗೆಗೆ ಬಾಳ ಕುಸಿನೂ, ಕಾರಣ ಇಲ್ಲದೆ ಬಾವು ಅಲ್ಲಲೇ ಅಣ್ಣ, ಅತ್ತಿಗೇಂತ ಅಚ್ಚರಿನೂ ತಂಗೆಗಾತ್. ಸಂಭ್ರಮಂದ ಅವುಕೆ ಕೈ ಕಾಲ್ ತೊಳಕೆ ನೀರ್ ಕೊಟ್ಟ್ ಅವ್ರ ಉಪ್ಚಾರ ಮಾಡಿ, ಕುಡ್ಯಕೆ ನಿಂಬುಳಿ ಪಾನಕ ಮಾಡಿ ತಂದ್ ಕೊಟ್ಟೊ. ಬೇಡ ಬೇಡಂತೇಳ್ರೂ ಕೆಲ್ಸದೊವರೊಟ್ಟಿಗೆ ಹೇಳಿ, ಕೋಳಿ ಮಾಸ ಮಾಡ್ಸಿ, ಅಕ್ಕಿ ಹೊಡಿಂದ ಪೊಕ್ಳ ರೊಟ್ಟಿ ಮಾಡಿ, ಕೋಳಿ ಗೈಪುಲಿ ಉಂಬಕೆ ನೀರ್ ಕೊಟ್ಟೊ. ಉಂಡ್‌ದ್ ಆರಾಮಾಗಿ ಎಲೆ ಅಡ್ಕೆ ತಿಂದ್ ಕಂಡ್ ಕುದ್ರಿಕಾಕನ ಜಯಂತಿ ಅಕ್ಕ,

'ಅಣ್ಣ, ಹನೀಸ್ ತಲೆ ಅಡ್ಡ ಹಾಕಿ ಆಗದೋ?' ಎಂತ ಹೇಳ್ದೊ.

'ಬೇಡ ಬಲ. ನಾವುಗೆ ಹಿಂಬೊತ್ತು ಹೊರ್ಡೊಕು. ನಿಲ್ಲಿಕಾದ್ಲೆ' – ಎಂತ ಪೀಠಿಕೆ ಹಾಕಿದೊ.

ಅದೇನ್ ಅಸ್ಟ್ ಅಂಬೆರ್ಪುಲಿ ಬಂದದ್? ಕಾರ್‍ಣ ಇಲ್ಲದೆ ನೀವು ಇಬ್ಬೊರು ಒಟ್ಟಿಗೆ ಬಾಕಿಲ್ಲೆಲೆ?' ಜಯಂತಿ ಅಕ್ಕ ಹೇಳ್ದೊ.

"ಕಾರ್‍ಣ ಇದ್ದೇ ಬಂದದ್. ನಮ್ಮ ಗಿರೀಶಂಗೂ ಪ್ರಾಯ ಇಪ್ಪತ್ತೆಂಟ್ ಆತ್. ಅವಂಗೊಂದು ಹೆಣ್ಣ್ ನೋಡೊಕು. ನಿಂಗೆ ಎಲ್ಯಾದರ್ ಗೊತ್ತುಟ್ಟೋ ಹೇಳ್. ಸಂಮಂದದ ಹೆಣ್ಣಾದರೆ ರೀತಿ, ನೀತಿ ಎಲ್ಲಾ ಗೊತ್ತಿದ್ದದೆ. ದೂರದ ಹೆಣ್ಣ್ ತಾದು ಬೇಡಾಂತ ನಿನ್ನ ಅತ್ತಿಗೆನೂ ಹೇಳ್ದೆ.' – ಎಂತ ಹೇಳಿ ಹೆಣ್ಣ್‌ನ ಮೋರೆ ನೋಡ್ದೊ. ಕಮಲಕ್ಕನೂ ತಲೆ ಹಂದಾಡ್ಸಿದೊ. ಆಗ ಜಯಂತಿ ಅಕ್ಕ,

'ಈಗ ಸಂಮಂದದೊಳಗೆ ಮೊದುವೆಗೆ ಇರುವ ಹೆಣ್ಣ್ ಸುದಾ ಒಂದೇ ಅದ್ನುನೂ ಗಿರಿಜಕ್ಕ ಗಂಡ್ ಹುಡ್‌ಕ್‌ತ್ತಾ ಒಳೊ. ನನ್ನೊಟ್ಟಿಗೆ ಗಿರಿಜಕ್ಕನೂ, ಎಲ್ಯಾದರ್ ಇದ್ದರೆ ಹೇಳ್‌ಂತ ಹೇಳಿದ್ದೊ.' – ಎಂತ ಹೇಳ್ದೊ.

'ನಾನೂ ಕಮಲನೊಟ್ಟಿಗೆ ಅದೇ ಹೇಳ್ದ್. ಆದರೆ ಅದ್ಕೆ ಅಸ್ಟ್ ಮೊನ್ಸಿಲ್ಲೆ. ಅದ್ಕೆ ನಿನ್ನ ಮಗ ಮಾಲಿನಿನ ಗಿರೀಶಂಗೆ ತಂದ್‌ಕೊಣಕೂಂತ ಇಸ್ಟ.' – ಮಾಸ್ಟ್ರ ಹೇಳ್ದೊ.

ಒಮ್ಮೆಲೇ ಈ ಮಾತ್ ಕೇಳಿ ಜಯಂತಿ ಅಕ್ಕನ ಮೋರೆ ಚಪ್ಪೆ ಆತ್. ಅಣ್ಣಂಗೆ ಹೇಂಗೆ ಇಲ್ಲೆಂತ ಹೇಳ್ದು? ಅದರ ಆಸೆನೇ ಬೇರೆ ಇತ್ತ್.

'ಅಣ್ಣಾ ಅದ್ ಕಲ್ತ್‌ಕಂಡ್ ಉಟ್ಟು. ಅದರ ಓದು ಮುಗ್ದ್, ಎರ್ಡ್ ವೊರ್ಸ ಚಾಕ್ರಿ ಮಾಡ್ದ ಮೇಲೆ ಅದ್ಕೆ ಮೊದ್ವೆ ಮಾಡೊಕೂಂತ ಅದರ ಅಪ್ಪ ಹೇಳ್ತಿದ್ದೊ. ನಂಗೂನೂ ಅದೇ ಸರೀಂತ ಕಂಡತ್. ಈಗ ಯಾರ್ ಸಣ್ಣ ಪ್ರಾಯಲಿ ಮೊದ್ವೆ ಮಾಡಿವೆ? ಗೂಡೆಗಳಿಗೆ ಇಪ್ಪತ್ನಾಕ್ ಆದರೂ ದಾಟೊಕೂಂತ ಹೇಳ್ವೆ, ಅವರವರ ಕಾಲ್ ಮೇಲೆ ಅವುವು ನಿತ್ತ ಮೇಲೇನೇ ಮೊದ್ವೆ ಆಕೂಂತ ನನ್ನ ಗಂಡ ಹೇಳಿವೆ.' – ಜಯಂತಿ ಅಕ್ಕ ಹೇಳ್ದೊ. ಅವರ ಮಾತ್ ಕೇಳಿ ಗಂಡ – ಹೆಣ್ಣ್‌ನ ಮೋರೆ ಸಣ್ಣದಾತ್. ಅದರ ನೋಡಿ ಜಯಂತಿ ಅಕ್ಕಂಗೆ ಬೇಜಾರಾತ್.

'ಅಣ್ಣಾ, ನೀವೇನ್ ಬೇಜಾರ ಮಾಡ್ಬೊಡಿ. ಮಾಲಿನಿನ ಅಪ್ಪನ ಕೆಬಿಗೆ ಈ ಮಾತ್ನ ಹಾಕಿನೆ.' – ಎಂತ ಸಮದಾನ ಮಾಡಿವೆ.

ಅಯ್ಯಣ್ಣ ಮಾಸ್ಟ್ರ ಹೆಚ್ಚ್ ಮಾತಾಡ್‌ತಿಲ್ಲೆ. ಹಿಂಬೊತ್ತ್ ಜಯಂತಿ ಅಕ್ಕ ಎಸ್ಟ್ ಒತ್ತಾಯ ಮಾಡ್ರೂ ನಿಲ್ಲದೆ ಮನೆಗೆ ಬಂದೊ.

ತಿಂಗಳ ಸಂಬಳ ಆದ ಕೂಡ್ಲೇ ಒಂದು ಸನಿವಾರ ಹಿಂಬೊತು ಗಿರೀಶ ಚಿಕ್ಕಮಗಳೂರ್‌ಂದ ಬಾತ್. ಹೀಂಗೆ ಮಾತಾಡಿಕನ ಗಿರೀಶನೊಟ್ಟಿಗೆ ಕಮಲಕ್ಕ ಸುಧಾ ಮತ್ತೆ ಮಾಲಿನಿನ ಇಸಯ ಹೇಳ್ದೊ.

'ಅಪ್ಪಂಗೆ ಸುಧಾನ ತರೊಕೂಂತ ಇಸ್ಟ ಇತ್ತ್. ನಾನೇ ಬೇಡಾಂತ ಹೇಳಿ,

ಮಾಲಿನಿನ ಕೇಳಿಕೆ ಬಲ್ನಾಡಿಗೆ ಹೋದೊ.' – ಎಂತ ಕಮಲಕ್ಕ ಮಂಜನೊಟ್ಟಿಗೆ ಹೇಳ್ದೊ.

ಗಿರೀಶಂಗೂ ಮಾಲಿನಿನ ಕಂಡರೆ ಹಂಞ ಸಲ್ಗೆ ಇತ್ತ್. ಆದರೆ ಇಸ್ಸರ ಮುಟ್ಟ ಅದರ ಮೊದುವೆ ಆಕೂಂತ ಅಂವ ನೆನ್ಸಿತ್ಲೆ. ಅಂವ ಹೇಳ್ತ್,

'ನೀವು ದೊಡ್ಡವು ಮಾತಾಡ್ರೊ, ಈಗನ ಕಾಲದ ಗೂಡೆಗಳ ಮೊನ್ಸ್ ಹೇಂಗುಟ್ಟೂಂತ ಯಾರಿಗೆ ಗೊತ್ತು?'

'ಅದುನೂ ಸರಿನೆ. ನೋಡೊಮೊ. ನಿನ್ನ ಹಣೆಲಿ ಯಾವ ಗೂಡೆನ ಬರ್ದುಟ್ಟೋ ಏನೋ?' – ಕಮಲಕ್ಕ ಹೇಳ್ದೊ.

ಗಿರೀಶ ಆೈತ್ವಾರ ಹಿಂಬೊತ್ತೇ ಚಿಕ್ಕಮಗಳೂರಿಗೆ ಹೊರ್ಟೋತ್. ಅಲ್ಲಿಗೆ ಹೋದ ಮೇಲೂ ಅಂವನ ತಲೆಲಿ ಮಾಲಿನಿನೇ ಸುತ್ತ್‌ತಿತ್ತ್. ಆಸ್ಪತ್ರೆಲಿ ಇರಿಕಾಕನ ಅಂವನ ನೋಡಿಕೆ ಅದ್ ಬಂದದ್, ಅದರ ಉಪ್ಚಾರ ಎಲ್ಲಾ ಅವಂಗೆ ಕುಸಿ ಕೊಡ್ತಿತ್ತ್. ಅತ್ತೆನ ಮಗಳ್ ನನ್ನ ಹಕ್ಕ್‌ನ ಹೆಣ್ಣ್. ಇದರ ಮೊದ್ವೆ ಆದರೆ ಎರ್ಡ್ ಕಡೆಕ್ಕೆನೂ ಕುಸಿ ಆದೂಂತ ನೆನ್ಸಿತ್. ಏನ್ ಮಾಡ್ದು? ಅವ್ವಂಗೆ ಮೊನ್ಸ್ ಉಟ್ಟು. ಅವ್ಕೆ ಸಾದಾರ್ಣದ ಗೂಡೆಗ ಹಿಡ್ಸಿಕಿಲ್ಲೆ. ಏನಾರ್ ಮಾಡೊಕೂಂತ ನೆನ್ಸಿತ್. ಎರ್ಡ್ ದಿನ ಇದೇ ಗುಂಗ್‌ಲಿ ಕಳ್ತ್. ಕಡೆಗೆ ಮೊನ್ಸ್ ಗಟ್ಟಿ ಮಾಡಿ, ಮಾಲಿನಿಗೆ ಒಂದು ಕಾಗ್ದ ಬರ್ದ್ ಹಾಕುದು. ಅದರ ಮೊನ್ಸ್‌ಲಿ ಏನುಟ್ಟೂಂತ ಮುಂದೆ ತಿಳ್ಯೊಕು. ಅದ್ಕೆ ಮೊನ್ಸ್ ಇದ್ದರೆ ಉಳ್ದೋವೆಲ್ಲಾ ಒಪ್ಪುವೋಂತ ನೆನ್ಸಿಕಂಡ್ ಕಾಗ್ದ ಬರ್ಯಕೆ ಸುರುಮಾಡ್ತ್. ಈಗ ಮೊಬ್ಯಾಲ್ ಇರಿಕನ ಕಾಗ್ದ ಯಾರ್ ಬರ್ದವೆ? ಹೇಂಗೆ ಬರ್ಯೊದೂಂತ ಗೊತ್ತಾತ್ಲೆ. ಹತ್ತಾರ್ ಸಲ ಬರ್ದ್ ಹರ್ದ್ ಹಾಕಿತ್. ಅಕೆರಿಗೆ ಹೇಂಗೋ ಒಂದು ಉದ್ದದ ಕಾಗ್ದನ ಬರ್ದ್, ಮುಗ್ಸಿತ್. ಅದರ್ಲಿ ಅವ್ವ – ಅಪ್ಪನ ಇಸ್ಟ, ಅವು ಹೆಣ್ಣ್ ಕೇಳಿಕೆ ಬಲ್ನಾಡಿಗೆ ಹೋದ್, ಅಲ್ಲಿ ಅತ್ತೆ ಹೇಳ್ದ ಮಾತ್, ಎಲ್ಲಾನೂ ವಿವರವಾಗಿ ಬರ್ದ್, ಇದರ್ಲಿ ನಿನ್ನ ಅಭಿಪ್ರಾಯ ಏನ್? ಎಂತ ಕೇಳಿ ಬರ್ದತ್.

'ನಂಗೆನೋ ನಿನ್ನ ಮೊದ್ವೆ ಆದರೆ, ನಾನೂ ನನ್ನ ಮನೆವೂ ಸುಕಲಿ ಇರುವೋಂತ ನಂಬಿಕೆ ಉಟ್ಟು. ನೀ ದೊಡ್ಡ ಮೊನ್ಸ್ ಮಾಡೊಕು. ಆದರೆ ಒತ್ತಾಯ ಇಲ್ಲೆ. ನನ್ನ ಹಟಕ್ಕೆ ನೀ ಒಪ್ಪು ಬಡ. ನಿಂಗೆ ಮನಪೂರ್ವಕ ಮೊನ್ಸ್ ಇದ್ದರೆ ಮಾತ್ರಾ ಒಪ್ಪು. ನೀ ಒಪ್ಪಿತಿಲ್ಲರೆ ನಂಗೆ ಬೇಜಾರಿಲ್ಲೆ. ನಾವು ಮುಂದೆನಾಂಗೇ ಭಾವ – ನಾದಿನಿನಾಂಗೇ ಇರೊಮೊ. ಏಚನೆ ಮಾಡ್. – ಎಂತ ಹೇಳಿ ಬರ್ದ್, ಕಾಗ್ದನ ಅದರ ಎಡ್ರಾಸ್‌ಗೆ ಪೋಸ್ಟ್ ಮಾಡ್ತ್.

ಕಾಗ್ದ ಸಿಕ್ಕಿದ ಕೂಡ್ಲೇ ಮಾಲಿನಿಗೆ ತುಂಬಾ ಸೋಜಿಗ ಆತ್. ಕಾಗ್ದ ಒಡ್ಯಕೆ ಮುಂದೆ ಯಾರ್ದಾಗಿರ್ದು? ಈ ಕಾಗ್ದ? ಇಸ್ಸರ ಮುಟ್ಟ ಅವ್ಳಿಗೆ ಕಾಗ್ದ ಬರ್ದೊವು

ಯಾರೂ ಇಲ್ಲೆ. ಈಗನ ಕಾಲಲಿ ಕಾಗ್ದ ಯಾರ್ ಬರ್ದವೆ? ಎಂತ ಏಚನೆ ಮಾಡಿ, ಅದರ ಲಕೋಟೆನ ಹರ್ದ ನೋಡ್ತ್. ಐದಾರ್ ಪುಟದ ಕಾಗ್ದ ತುಂಬಾ ದೊಡ್ಡದಿತ್ತ್. ಅದರ ಓದಿ ಮಾಲಿನಿಗೆ ಬಾಳ ಅಚ್ಚರಿ ಆತ್. ಮಾಂವ – ಅತ್ತೆನ ಮೊನ್ಸ್‌ಲಿ ನನ್ನ ಸೊಸೆ ಮಾಡಿಕೊಣಕೂಂತ ಆಸೆ ಇದ್ದದರ ನೋಡಿ ಅದ್ ಸೋಜಿಗ ಪಟ್ಟತ್. ಗಿರೀಶನ ಕಾಗ್ದದ ಒಕ್ಕಣೆ ಓದಿ ಅದ್ಕೆ ತುಂಬಾ ಕುಸಿ ಆತ್. ಅಂವ ಯಾವ ಒತ್ತಾಯನೂ ಮಾಡದೆ ನನ್ನನೇ ಆಯ್ಕೆ ಮಾಡಿಕೆ ಬುಟ್ಟುಟಲ್ಲಾಂತ, ಸಂತೋಸ ಆತ್. ಅದರ ಅಪ್ಪನ ಮಾತಿಗೂ ಅದ್ಕೆ ಹೆಮ್ಮೆ ಆತ್. ಎಲ್ಲೋವು ನನ್ನ ಒಳ್ಳೆದರನೇ ಬಯಸೋವು. ಅವರವರ ನೇರಕ್ಕೆ ಅವವು ಹೇಳ್ದ್ ಸರಿ – ಎಂತ ಗ್ರೇಸಿತ್. ಎರ್ಡ್ ಮೂರು ದಿನ ಈ ಕಾಗ್ದದ ಇಸಯನೇ ಅದರ ತಲೆಲಿ ಹರ್ದಾಡ್ತ್. ಆಗಾಗ ಅದರ ತೆಗ್ದ್ ಓದಿ, ಮೊಡ್ಚಿ ಪರ್ಸ್‌ಲಿ ಹಾಕಿ ಇಸ್ತಿತ್ತ್. ಕಾಲ್ ಸುಟ್ಟ ಕೊತ್ತಿನಾಂಗೆ ಆಗಾಗ ಅದ್ ಅತ್ತ ಇತ್ತ ಹೋದು, ಆಗಾಗ ಪರ್ಸ್‌ಂದ ಕಾಗ್ದ ತೆಗ್ದ್‌ದ್ ಓದುದರ ನೋಡ್ದ ಇದರ ರೂಮ್‌ನ ಗೂಡೆ ಸವಿತ ಕೇಳ್ತ್,

'ನಾ ನಿನ್ನೆಂದ ನೋಡಿನೆ. ನೀ ಯಾವ್ದೋಗೊಂದಳಲಿ ಒಳ. ಎಂತ ನಿನ್ನ ಕತೆ? ಯಾರ್ದ್ ಆ ಕಾಗ್ದ? ಆ ಕಾಗ್ದ ಬಂದ ಮೇಲೆ ನೀ ಸರಿ ಇಲ್ಲೆ. ಏನ್ ಅದ್ 'ಲೌ ಲೆಟರ್' ನೋ? ನೀ 'ಲೌ' ಗಿವ್‌ಂತ ಹಾರ್ವ ಗೂಡೆ ಅಲ್ಲಾಂತ ನಂಗೆ ಗೊತ್ತು. ಏನ್ ಕತೆ? ಎಂತ ಆಗಾಗ ಇಚಾರ್ಸಿತಿತ್ತ್. ಕಡೆಗೆ ಮಾಲಿನಿ ಒಬ್ಬರ್‌ಂದ ಇಬ್ಬೊರು ಲೇಸ್‌ಂತ ನೆನ್ಸಿ, ಆ ಕಾಗ್ದನ ಸವಿತಂಗೆ ಓದಿಕೆ ಕೊಟ್ಟತ್. ಸವಿತ ಅದರ ಎರ್ಡ್ ಎರ್ಡ್ ಸಲ ಓದಿ,

'ಒಳ್ಳೆ ಇಂಟ್ರೆಸ್ಟ್ ಉಟ್ಟು ಈ ಕಾಗ್ದಲಿ. ನೀ ಈಗ ಏನ್ ಮಾಡ್ಯ? ಪಾಪ, ಅಂವ ಒಳ್ಳೆ ಹೈದ. ಅಂವನ ಕಾಯ್ಸುದು ಬೇಡ. ನಿಂಗೆ ಬೇಡ್ತ್ತಲ್ಲರೆ ಅಂವಂಗೆ ಬರ್ದ್ ಹಾಕ್. ನಿನ್ನ ದಾರಿ ನಿಂಗೆ, ನನ್ನ ದಾರಿ ನಂಗೇಂತ. ಇದ್ಕೆಲ್ಲಾ ತಲೆ ಕೆಡ್ಸಿಕಂಬಡ' – ಎಂತ ಬುದ್ದಿ ಹೇಳ್ದೆ.

ಅಕೆರಿಗೆ ಮಾಲಿನಿ ಎಂತಾದರಾಗಲಿ ಒಮ್ಮೆ ಊರಿಗೆ ಪೋಯಿ. ಅಪ್ಪ – ಅವ್ವಂಗೆ ಈ ಕಾಗ್ದನ ತೋರ್ಸಿನೆ. ಮತ್ತೆ ಎಲ್ಲಾ ಕತೇಂತ ಏಚನೆ ಮಾಡಿ, ಅದೇ ಸನಿವಾರ ಊರಿಗೆ ಬಾತ್.

ಮಾಲಿನಿ ಕೊಟ್ಟ ಕಾಗ್ದನ ಅದರ ಅಪ್ಪ, ಅವ್ವ ಇಬ್ಬೊರು ಓದಿದೊ. ಗಿರೀಶನ ಮೊನ್ಸ್‌ನ ಒಳಗೆ ಇದ್ದದರ ನೋಡಿ ಅವ್ಕೆ ಅಚ್ಚರಿ ಆದೆ. ಅಂವ ಅಂತಾ ಕಟಾಪಿಟಿ ಹೈದ ಅಲ್ಲ. ಅಂವ ಅಂವನ ಅಜ್ಜ, ಅಜ್ಜಿನ ಎಸ್ಟ್ ಹಚ್ಚಿಕಂಡಿತ್ತ್. ಅವು ಸಡನ್ನಾಗಿ ತೀರಿ ಹೋಕನ ಅಂವ ಅನ್ಬವಿಸಿದ ವೇದನೆ ಎಲ್ಲಾ ಜಯಂತಿ ಅಕ್ಕಂಗೆ ಗೊತ್ತಿದ್ದದೆ. ಅಂವ ಸೂಕ್ಷ್ಮ ಮೊನ್ಸ್‌ನೊಂವ. ಅಂವಂಗೆ ಕೊಟ್ಟರೆ, ಯಾವುದರ್ಲಿನೂ

ದೂರುವ ಹಾಂಗಿಲ್ಲೆ. ಹಾಂಗೇಂತ ಮಗಳ ಅಂವಂಗೆ ಕೊಟ್ಟರೆ, ನಮ್ಮ ಆಸೆ ಎಲ್ಲಾ ನೀರ್ಪಾಲಾದೆ. ಏನ್ ಮಾಡ್ದು? ಗಂಡ ಹೆಣ್ಣ್ ಇಬ್ಬೊರು ಏಚನೆ ಮಾಡಿವೆ. ಅಕೆರಿಗೆ ಮಾಲಿನಿನನೇ ಕೇಳ್ವೊ.

'ಮಾನಿ, ನೀ ಏನ್ ಹೇಳ್ಯ? ನೀ ಹೇಳ್ದಾಂಗೆ/' – ಯಾವ್ದಕ್ಕೂ ಮಾಲಿನಿ ಮಾತಾಡ್‌ತ್ಲೆ. ಅದ್ ಒಂದು ವಾರ ಬುಟ್ಟ್ ಹೇಳ್ನೇಂತ ಮಂಗ್ಳೂರ್‌ಗೆ ಹೊರ್ಟ್ವೋತ್. ಅದ್ಕೆ ಕುದ್ದರೂ, ನಿತ್ತರೂ ಗಿರೀಶಂದೇ ನೆಂಪು. ಅಂವ ಆಗಿನೇ ನನ್ನ ಕೇಳಿಕನ ನಾ ಒಪ್ಪದಿರ್ದು ಸರಿ ಅಲ್ಲ. ಅಂವಂದ ದೊಡ್ಡ ಹುದ್ದೆಲಿರುವ ಗಂಡ ನಂಗೆ ಸಿಕ್ಕುದು. ನಾನೂ ಕಲ್ತ್ ದೊಡ್ಡ ಕೆಲ್ಸಕ್ಕೆ ಸೇರಿಕಮ್ಮೆ. ಆದರೆ ಗಂಡ – ಹೆಣ್ಣ್‌ಲಿ ಹೊಂದಾಣಿಕೆ ಬೇಕಲೆ? ಬರೇ ದುಡ್ಡ್‌ನ ಮೋರೆ ನೋಡ್ರೆ, ಸಂಸಾರಲಿ ಹೊಂದಾಣಿಕೆ ಇತ್ಲರೆ ಏನ್ ಸುಕ? ನಾವಿಬ್ಬೊರು ಮೊದುವೆ ಆದರೆ ಅಂವ ನನ್ನ ತುಂಬಾ ಪ್ರೀತಿಂದ ಸಾಂಕುದು. ಅತ್ತೆ – ಮಾಂವನೂ ಬಾಳ ಒಳ್ಳೆ ಜನ. ನಮ್ಮ ಎರ್ಡ್ ಮನೆಗಳಿಗೂ ಸಂಮಂದ ಇನ್ನೂ ಗಟ್ಟಿ ಆದೆ. ಏನ್ ಮಾಡ್ದೂಂತ ಏಚನೆ ಮಾಡ್ದೆ. ಅಕೆರಿಗೆ ಅದ್ ಅದೇ ಸುಕ್ರವಾರ ಆರ್ ಗಂಟೆಗೇ ಎದ್ದ್, ವಾರ್ಡನಿಗೆ ಹೇಳಿ, ಒಂದು ಬಾಡಿಗೆ ಕ್ಯಾಬ್‌ಲಿ ಸವಿತನ ಕರ್ಕಂಡ್ ಕಟೀಲ್ ದೇವಸ್ಥಾನಕ್ಕೆ ಹೋದೆ. ಅಲ್ಲಿ ದೇವ್ರಿಗೆ ಹಣ್ಣ್ – ಕಾಯಿ ಮಾಡ್ಸಿ ಬಟ್ರೊಟ್ಟಿಗೆ,

'ನಾ ಒಂದು ಪರೀಕ್ಷೆಗೆ ಕುದ್ರೊಕೂಂತ ಒಳೆ. ಕುದ್ದರೆ ಪಾಸಾವೆನೋ? ಪೆಲಾವೆನೋ? ದೇವ್ರಲ್ಲಿ ಪೂಜೆ ಮಾಡಿ ಕೇಳಿ ಹೇಳಿನಿ? – ಎಂತ ಹೇಳ್ತ್.

ಬಟ್ರ್ ಅದರ ನಕ್ಷತ್ರ, ಹೆಸ್ರ್, ಕೇಳಿ, ಪೂಜೆ ಮಾಡಿ, ಮಂಗಳಾರತಿ ಮಾಡಿ ಕಣ್ಣ್ ಮುಚ್ಚಿ ಪ್ರಾರ್ಥನೆ ಮಾಡ್ದೊ. ದೇವ್ರ ಎದ್ರ್ ಇಸಿದ ಬಟ್ಲ್‌ಂದ ಒಂದು ಪುಂಡಿ ಹೂ ತೆಗ್ದ್, ಸರಿ ಆದರೆ ಪಾಸ್, ಮುಗುಳಿ ಆದರೆ ಪೇಲ್‌ಂತ ನೆನ್ನಿಕಂಡ್ ಲೆಕ್ಕ ಮಾಡಿ ನೋಡ್ದೊ. ಬಟ್ಲ್‌ಂದ ತೆಗ್ದ ತುಂಬೆ ಹೂವು ಸರಿ ಸಂಖೆಲಿ ಇತ್ತ್. ಬಟ್ರ್ ಬಂದ್ ಮಂಗಳಾರತಿನ ಕೊಟ್ಟ್,

'ನೀ ಪರೀಕ್ಷೆಗೆ ಕುದ್ರು. ಪಸ್ಟ್ ಕ್ಲಾಸ್‌ಲಿ ಪಾಸಾದಿಯ' – ಎಂತ ಹೇಳ್ದೊ. ಮಾಲಿನಿಗೆ ತುಂಬಾ ಕುಸಿ ಆತ್. ಅದ್ ಹಾಸ್ಟೆಲಿಗೆ ಬಂದ್ ಅಂದೇ ಗಿರೀಶಂಗೆ ಒಂದು ಸಣ್ಣ ಒಕ್ಕಣೆನ ಕಾಗ್ದ ಬರ್ತ್.

'ಕಟೀಲ್ ಅಮ್ಮನವರಲ್ಲಿ ಕೇಳ್ದೆ. ನಾ ಪರೀಕ್ಷೆಲಿ ಪಾಸಾದೆ. ನಿನ್ನ ಕಾಗ್ದಕ್ಕೆ ನನ್ನ ಒಪ್ಪಿಗೆ ಉಟ್ಟು.' – ಎಂತ ಬರ್ದ್ ಹಾಕಿತ್. ಅಪ್ಪ – ಅವ್ವಂಗೂ ಇಸಯ ತಿಳ್ಸಿತ್.

ಕಾಗ್ದ ಹಾಕಿ ಇಪ್ಪತ್ತ್ ದಿನ ಕಳ್ದರೂ ಮಾಲಿನಿಂದ ಉತ್ತರ ಬಾರದಿರಿಕಾಕನ ಗಿರೀಶ ಮಾಲಿನಿನ ಆಸೆನನೇ ಬುಟ್ಟಿತ್. ಮಾಲಿನಿನ ಕಾಗ್ದ ಬಂದ ದಿನ ಅದರ

ನಡ್ಗುವ ಕೈಯಿಂದ ಒಡ್ದ್ ಓದಿಕಾಕನ ಅಂವಂಗೆ ತನ್ನ ಕಣ್ಣ್‌ನ ತಾನೇ ನಂಬಿಕಾತ್ಲೆ. ಎರ್ಡೆರ್ಡ್ ಸಲ ಓದಿತ್. 'ಯುರೇಕಾ'ಂತ ಕೊಣ್ದ್ ಕುಪ್ಪಳಿಸಿತ್. ಕೂಡ್ಲೇ ಅವ್ವಂಗೆ ಪೋನ್ ಮಾಡಿ,

'ಅವ್ವಾ, ಮಾನಿ ನನ್ನ ಮೊದುವೆ ಆಕೆ ಒಪ್ಪಿಟು.' – ಎಂತ ಹೇಳ್ತ್.

ಕಮಲಕ್ಕಂಗೆ, ಅಯ್ಯಣ್ಣ ಮಾಸ್ಟ್ರಿಗೆ ಅಚ್ಚರಿಯೋ ಅಚ್ಚರಿ. ಹೈದ ಏನ್ ಮಾಯೆಕ ಮಾಡ್ತ್? ನಾವೆಲ್ಲಾ ಆಸೆ ಬುಟ್ಟ್‌ದ್ ಕೈ ಕೊಡ್ಕಿ ಕುದ್ರಿಕಾಕನ, ಅಂವನ ಆಸೆ ಹೇಂಗೆ ಈಡೇರ್ತ್? ಅವ್ಕೆ ಒಂಚೂರು ಅರ್ತ ಆತ್ಲೆ. ಅಯ್ಯಂಣ ಮಾಸ್ಟ್ರ ಮಂಜಂಗೆ ಪೋನ್ ಮಾಡಿ,

'ನೀ ಏನ್ ಜಾದು ಮಾಡ್ದ ಮಂಜ?"– ಎಂತ ಕೇಳ್ದೊ. ಅಂವ ನಡ್ದ ಇಸಯನ ಅಪ್ಪಂಗೆ ಹೇಳಿ, ಹೆಚ್ಚಿನ ಇಸಯನ ನಾ ಬಾಕಾಕನ ಹೇಳ್ನೇಂತ ಹೇಳ್ತ್.

ಇತ್ತ ಜಯಂತಿ ಅಕ್ಕನೂ ಅಣ್ಣನಿಗೆ ಪೋನ್ ಮಾಡಿ, 'ಅಣ್ಣಾ, ನನ್ನ ಕ್ಷಮಿಸಿ ಬುಡಿ. ನಿಮ್ಮ ಮೊನ್ಸ್‌ಗೆ ಬೇನೆ ಮಾಡ್ದೆ. ಈಗ ಮಕ್ಕ ಇಬ್ರೊರು ಒಪ್ಪಿಕೊಂಡೊಳೊ. ಮುಂದೆನ ಕೆಲ್ಸ ಕಾರ್ಯನ ಮಾಲಿನಿನ ಪರೀಕ್ಷೆ ಮುಗ್ದ ಕೂಡ್ಲೇ ಸುರು ಮಾಡೊಮೊ' – ಎಂತ ಹೇಳ್ದೊ.

ಎರ್ಡ್ ಮನೆಲಿನೂ ಸಡ್ಗರ ಸುರಾತ್. ಆದರೆ ಮಾಲಿನಿದ್ ಒಂದೇ ಹಟ. ' ನನ್ನ ಮೊದ್ವೆ ಸರಳ ರೀತಿಲಿ ಆಕು. ಆಡಂಬರ ಬೇಡ. ಕಟೀಲ್ ಅಮ್ಮನವರ ಸನ್ನಿದಾನಲಿ ಆಕು.' ಎಂತ ಹೇಳ್ತ್. ಗಿರೀಶಂಗೂ ಅದೇ ಇಸ್ಟ. ಅಂವಂಗೂ ಆಡಂಬರ ಬೇಡ. ಇನ್ನೇನ್ ಮಾಡ್ದು? ಇದರ ತಿಳ್ದ್‌ದ್ ಎರ್ಡ್ ಮನೆವು ಕೂಡಿ ಮಕ್ಕಳ ಮೊನ್ಸ್‌ನಾಂಗೇ ಆಗಲೀಂತ ಒಪ್ಪಿದೊ.

* * * * *

26. "ಗಿರೀಶ ಸಂಸಾರಸ್ತ ಆತ್"

ಗಿರೀಶ – ಮಾಲಿನಿನ ಮೊದ್ವೆ ಅವರ ಇಸ್ಟದ ಹಾಂಗೆ ಬಾಳ ಸರಳ ರೀತಿಲಿ ಕಟೀಲ್ ದೇವಸ್ತಾನಲಿ ನಡ್ತ್. ಬಂದು ಬಳಗಕ್ಕೆ ಮಾತ್ರ ಹೇಳಿಕೊಟ್ಟೊ, ಹೊರಗೆನವುಕೆ ಹೆಚ್ಚಿನ ಜನಕ್ಕೆ ಹೇಳ್ತ್‌ಲ್ಲೆ. ಅದಲ್ಲದೆ ಎರ್ಡ್ ಕಡೆವ್ಕೂ ಸಂಮಂದಿಕರ್ ಒಂದೇ ಬಳಗದೊವು ತಾನೆ? ಆದರೂ ಸುಮಾರ್ ಐನೂರು ಜನ ಸೇರಿದ್ದೊ. ಬಂದೋವ್ಕೆಲ್ಲಾ ದೇವಸ್ತಾನಲೇ ಒಳ್ಳೆ ಊಟ ಹಾಕ್ಸಿದೊ. ಕಮಲಕ್ಕ ದೊಡ್ಡ ಸೊಸೆಗೆ ಮಾಡ್ಸಿದ ಹಾಂಗೆ ಮಾಲಿನಿಗೂ ನಾಕ್ ಬಳೆ, ಒಂದು ನೆಕ್ಲೆಸ್, ಕೆಬಿಯೋಲೆ, ಉಂಗ್ರ, ತಾಳಿ, ಮೂಕುತೀಂತ ಸುಮಾರ್ ಇಪ್ಪತ್ತ್ ಪವನ್‌ನಸ್ಟ್ ಚಿನ್ನ ಮಾಡ್ಸಿ ಹಾಕಿದೊ.

ಜಯಂತಿ ಅಕ್ಕಂಗೆ ಒಬ್ಬಳೇ ಮಗಳ ಮೊದುವೆ ಆಡಂಬರಲಿ ಮಾಡೊಕೂಂತ ಇತ್ತ್. ಅದ್ಕೆ ಮಗಳ್ ಕಲ್ಲ್ ಹಾಕಿತ್. ಆದರೂ ಅವು ಮಗಳಿಗೆ ಐವತ್ತ್ ಪವನ್‌ನಸ್ಟ್ ಚಿನ್ನ ಹಾಕಿದೊ. ಮೊದ್ವೆ ಕರ್ಚ್ ಹೆಚ್ಚ್ ಆಗದ ಕಾರ್ಣ ಅವು ಅಳಿಯಂಗೆ ಒಂದು ಸ್ವಿಪ್ಟ್ ಕಾರ್ ಉಡ್ಗೊರೆ ಕೊಟ್ಟೊ.

ಸುರೇಶಂಗೆ ತಮ್ಮನ ಮೊದುವೆ ಅಸ್ಟ್ ಸರಳ ರೀತಿಲಿ ಮಾಡ್ದ್ ಇಸ್ಟ ಆತ್ಲೆ. ಹೆಣ್ಣ್‌ನ ಕಡೆವು ಹೇಳ್ದೋಂತ ಅಪ್ಪ ಯಾಕೆ ಒಪ್ಪಕಾತ್? ಪಂಜ ದೇವಸ್ತಾನಲಿ ಊರೋವ್ಕೆ ಒಂದು ಊಟನಾರ್ ಹಾಕ್ಸಕಾಗಿತ್ತ್. ಎಂತ ಅವನ ಏಚನೆ. ಅಯ್ಯಣ್ಣ ಮಾಸ್ಟ್ರ ಮನೆಲೇ ಊರೋವ್ಕೆ, ನೆರೆಕರೆಯೋವ್ಕೆ ಒಂದ್ ಗಡ್ದ್‌ನ ಊಟನ ಪಚಾರದ ಲೆಕ್ಕಲಿ ಕೊಟ್ಟೊ. ಆದರೂ ಸುರೇಶಂಗೆ ಇದರ್‌ಂದ ಬೇಜಾರಾತ್. ಅಂವ ತಮ್ಮಂಗೆ ನಾಕ್ ಪವನ್‌ನ ಒಂದು ಕಡಗ, ಮತ್ತೆ ನಾದಿನಿಗೆ ಮೂರು ಪವನ್‌ನ ಒಂದು ಪದಕದ ಹಾರ ಮಾಡ್ಸಿ ಉಡ್ಗೊರೆ ಕೊಟ್ಟತ್.

27. "ಹೆಣ್ಣ್ ಮಕ್ಕ ಇಲ್ಲದ ಕೊರ್ತೆನ ಮಾಲಿನಿ ತುಂಬಿಸಿತ್"

ಕಮಲಕ್ಕ ಗಿರೀಶಂಗೆ ಚಿಕ್ಕಮಗಳೂರ್‌ಲಿ ಮನೆ ಮಾಡಿಕೆ ಹೇಳ್ದೊ. ಆಗ ಮಾಲಿನಿ,

ಏಕೆ ಅತ್ತೆ? ನಾ ಇದ್ದರೆ ನೀವ್ಗೆ ಕಸ್ಟನೋ? ನನ್ನ ಓಡ್ಸಿಕೆ ನೋಡ್ರೆ? ನಾ ನಿಮ್ಮ ಹಕ್ಕಲೆನೇ ಇದ್ದನೆ. ಬಾವ ವಾರಕ್ಕೊಮ್ಮೆನೋ ಹದ್ನೈದ್ ದಿನಕ್ಕೊಮ್ಮೆನೋ ಬಂದ್ ಹೋಗಲಿ' – ಎಂತ ಹೇಳ್ತ್.

ಸೊಸೆನ ಮಾತ್ನ ಕೇಳಿ ಕಮಲಕ್ಕಂಗೆ ಹಾಲ್ನ ಕುಡ್ದಾಂಗಾತ್. ಅಯ್ಯಣ್ಣ ಮಾಸ್ಟ್ರು ಕುಸಿ ಪಟ್ಟೊ. ಗಿರೀಶನೂ ಹೆಣ್ಣ್‌ನ ಮಾತ್‌ಗೆ ತಲೆದೂಂಗಿತ್. ಅಂತೂ ಕಮಲಕ್ಕ ನೆನ್ಸಿದಂಗಾತ್. ಅತ್ತೆಗೆ ತಕ್ಕ ಸೊಸೆ ಸಿಕ್ಕಿತ್. ಹೆಣ್ಣ್ ಮಕ್ಕ ಇಲ್ಲದ ಕೊರ್ತೆನ ಮಾಲಿನಿ ತುಂಬಿಸಿತ್.

ಈಗ ಕಮಲಕ್ಕ ಎಲ್ಲಾ ಇಸಯಲಿನೂ ಸುಕಲಿದ್ದೊ. 'ದೇವ್ರೆ ನನ್ನ ಸಂಸಾರಕ್ಕೆ ಯಾರ ಕಣ್ಣ್ ಬೀಳದಿರ್‍ಲಿ. ದಿನಾ ಹೀಂಗೆ ಈ ಸಂಸಾರ ಹೊಂದಿ ಕಂಡಿರ್‍ಲಿ.' –ಎಂತ ದೇವ್ರಿಗೆ ಅಡ್ಡ ಬಿದ್ದ್ ಕೈ ಮುಗ್ಯತಿದ್ದೊ.

ಗಿರೀಶ ಮೊದ್ವೆಗಾಗಿ ಒಂದು ತಿಂಗ ರಜೆ ಹಾಕಿತ್. ಹೊಸ ಮೊದು ಮಕ್ಕಳ ಸಮ್ಮಾನಕ್ಕೆ ಎಲ್ಲೋವೂ ಕರ್‍ಯತಿದ್ದೊ. ಅವಿಬ್ಬೊರು ಎಲ್ಲಾ ನೆಂಟ್ರ ಮನೆಗಳಿಗೆ ಹೋಗಿ ಸಮ್ಮಾನ ತಿಂದ್ ಬಾತಿದ್ದೊ. ಬಾಕಾಕನೆಲ್ಲಾ ಮಾಲಿನಿ ಎಲ್ಲರ ಮನೆಂದ

ಹೂನ ದೈಗಳ ತಾತಿತ್ತ್. ಮನೆ ಮುಂದೆ ಪೊರ್ಲುನ ಹೂ ತೋಟ ಮಾಡ್ತ್. ಗಿರೀಶನೂ ಕೃಷಿ ಇಲಾಖೆಲಿ ಇರಂವ ಅಲ್ಲನೋ? ಅಂವಂಗೂ ಅದರ್ಲಿ ತುಂಬಾ ಆಸಕ್ತಿ. ಅಂವ ಹೆಣ್ಣ್‌ಗೆ ತರತರದ ಕಸಿ ಗುಲಾಬಿ ದೈಗ, ದಾಸವಾಳ ದೈಗಳ ಎಲ್ಲಾ ತಂದ್ ಕೊಟ್ಟತ್. ಮೂರ್ನಾಡ್‌ಗೆ ಸಮ್ಮಾನಕ್ಕೆ ಹೋಗಿ ಬಂದ ಮೇಲೆ, ಅವರ ಹೂ ತೋಟ ನೋಡ್ದ ಮೇಲೆ ಮಾಲಿನಿಗೆ ಅವರ ಹಾಂಗೆ ಹೂ ತೋಟ ಮಾಡೊಕೂಂತ ಆಸೆ ಆತ್. ಅಲ್ಲಿಂದ ಬಾಕನ ತರತರದ ಬಣ್ಣದ ಸೇವಂತಿಗೆ ದೈಗಳ, ಡೇಲಿಯಾ ಗೆಡ್ಡೆಗಳ, ಜೀನಿಯಾ, ಆಸ್ತರ್ ಹೂಗಳ ದೈಗಳ ತಕಂಡ್ ಬಾತ್. ಮಾಂವನೊಟ್ಟಿಗೆ ಹೇಳಿ ಇಜ್ಜೆಲಿನ ಎದ್ರ್‌ಗೆ ಉದ್ದಾಕೆ ಕಲ್ಲ್ ಕಟ್ಟಿಸಿ ಅದರ ಮೇಲೆ, ಗಂಡನೊಟ್ಟಿಗೆ ಹೇಳಿ ಒಂದು ಐವತ್ತ್ ಹೂನ ಚೆಟ್ಟಿ ತರ್ಸಿ ಅದರ್ಲಿ ದೈಗಳ ನೆಡ್ಸಿತ್. ಮನೆ ಪುಡೆಲಿ ನಾಕ್ ಕಂಬ ಹಾಕ್ಸಿ, ದೈಗಳಿಗೆ ಜೀವ ಬಾಕನ ಮುಟ್ಟ ಬೊದ್ಕಿಕೆ ನೆರ್ಳ್‌ಗೆ ಬಲೆ ಹಾಕಿ ಮಾಡ್ ಮಾಡ್ಸಿತ್. ಕೆಲ್ಸದೊವರೊಟ್ಟಿಗೆ ಸೇರಿಕಂಡ್, ಚೂಟ್‌ಮೊಣ್ಣ್ ಮಾಡ್ಸಿ, ಇಸಿತ್. ಚೆಟ್ಟಿಗಳಿಗೆಲ್ಲಾ ಕಾವಿ ಬಣ್ಣ ಕೊಟ್ಟ್, ಅದರ್ಲಿ ಕೆಳಗೆ ನಾಕ್ ಮಡ್ಕೆ ಓಡುಗಳ ತುಂಡುಗಳ ಇಸಿ, ಚೂಟುಮೊಣ್ಣ್ ತುಂಬಿಸಿ ದೈಗಳ ನೆಟ್ಟತ್. ಇಜ್ಜೆಲಿನ ಎರ್ಡ್ ಪುಡೆ, ಎದ್ರಗಡೆ ಎಲ್ಲಾ ಹೂನದೈಗಳ ನೆಟ್ಟ್ ಆರೈಕೆ ಮಾಡ್ತ್. ಸೊಸೆನ ಕಾರ್ಬಾರ ನೋಡಿ ಕಮಲಕ್ಕಂಗೆ ಕುಸಿನೋ ಕುಸಿ. ಅವು ಅವ್ಳ ಯಾವ ಕೆಲ್ಸ ಮಾಡಿಕೂ ಬುಡ್‌ತಿತ್ಲೆ. ಅದಾದರ್ ಏನ್ ಮಾಡ್ದು. ಗಂಡನೂ ಹಕ್ಕಲೆ ಇಲ್ಲೆ ಹೊತ್ತು ಕಳ್ಯಕಲೆ? ಅದ್ಕಾಗಿ ಅದ್ ಕಂಡ್ ಕಂಡ ದಾರಿ ಹೂನ ಕೊಪ್ಪಳ. ಅದರ್ಲಿ ಅವ್ಳಿಗೆ ಬಾಳ ಕುಸಿ ಸಿಕ್ತಿತ್ತ್. ಬೊಳ್ಪುಗೆ ಎದ್ದ ಕೂಡ್ಲೇ ಅದ್ ಓಡ್ದು ಹೂನ ದೈಗಳ ಹಕ್ಕಲೆ. ಇಜ್ಜೆಲ್‌ನ ದೊಡ್ಡ ಗೇಟ್‌ನ ಹಕ್ಕಲೆ ಕಮಲಕ್ಕ ಒಂದು ಪಾರಿಜಾತದ ಮರ ಬೆಳ್ಸಿದೊ. ಅದರ್ಲಿ ತುಂಬಾ ಹೂವಾಗ್ತಿತ್ತ್. ಹಿಂಬೊತ್ತು ಆಕನ ಅದ್ ಅರ್ಳಿಕನ ಬಾವ ಗಮಲ್ ಇಡೀ ಮನೆಗೆ ಹರ್‌ಂಡ್‌ತಿತ್ತ್. ಕಮಲಕ್ಕನೂ ಬೆಳ್ದ್ ಮಂದಾರ, ಅರ್ಸಿಣ ಮಂದಾರ, ಗುಡ್ಡು ಮಲ್ಲಿಗೆ, ಇರುವಂತಿಗೆ, ದಾಸಳ ದೈಗಳ ನೆಟ್ಟಿದೊ. ದೇವ್ರಿಗೆ ಇಸಿಕೆ ಹೂವು ಆಕೊಲೆ. ಈಗ ಸೊಸೆ ಬಂದ ಮೇಲೆ ಚಿನ್ನಕ್ಕೆ ಒಪ್ಪ ಕೊಟ್ಟ ಹಾಂಗೆ ಆತ್. ಮನೆ ಒಳಗೆನ ಅಲಂಕಾರಲಿನೂ ಬದ್ಲಾವಣೆ ಆತ್. ಎರ್ಡ್ ತಿಂಗಳ್‌ಲಿ ಗಿರೀಶ ಪುತ್ತೂರು ಕೃಷಿ ಇಲಾಖೆಗೆ ವರ್ಗ ಮಾಡ್ಸಿ ಕಂಡತ್. ಅಂವ ಈಗ ದಿನಾ ಮನೆಂದಳೇ, ಜಯಂತಿ ಅಕ್ಕ ಉಡ್ಗೊರೆ ಕೊಟ್ಟ ಕಾರ್‌ಲಿ, ಆಪೀಸಿಗೆ ಹೋಗಿ ಬಾತಿತ್ತ್. ತಿಂಗಳಿಗೊಮ್ಮೆ ಜಯಂತಿ ಅಕ್ಕನ ಮನೆಗೆ ಗಂಡ – ಹೆಣ್ಣ್ ಹೋಗಿ ಬಾತಿದ್ದೊ. ಜಯಂತಿ ಅಕ್ಕಂಗೆ ಮಗಳ್ ಸರ್ಕಾರಿ ಚಾಕ್ರಿಗೆ ಸೇರಕೂಂತ ಆಸೆ. ಅದರ ಒಂದೆರ್ಡ್ ಸಲ ಮಗಳಲ್ಲಿ ಹೇಳಿನೂ ಇದ್ದೊ. ಆಗ ಮಾಲಿನಿ,

"ಅತ್ತೆ, ಮಾಂವಂಗೂ ಪ್ರಾಯ ಆತ್. ನಾ ಮನೆಲೇ ಇದ್ದನೆ. ನಾ ಏನ್

ದುಡ್ಡ್ ಗುಡ್ಡೆ ಹಾಕೊಕು? ಇದ್ದದರ ಪೊರ್ಲುಲಿ ನೋಡಿಕಂಡ್ ಇದ್ದರೆ ಸಾಲದೋ?' – ಎಂತ ಕೇಳ್ತಿತ್ತ್. ಆಗ ಜಯಂತಿ ಅಕ್ಕ,

'ಹಂಗಾರೆ ನೀ ಇಸ್ಟ್ ಕಲ್ತದ್ ದಂಡ' – ಎಂತ ಹೇಳ್ತಿದ್ದೊ.

'ದಂಡ ಯಾಕೆ ಆದೆ? ನಾ ಕಲ್ತದ್ ನನ್ನ ಬುಟ್ಟ್ ಹೋದೆನೋ? ನಂಗೆ ಕೃಷಿಲಿ ಇರ್ವ ಪ್ರೀತಿ ಸರ್ಕಾರಿ ಚಾಕ್ರಿಲಿ ಇಲ್ಲೆ' – ಎಂತ ಹೇಳಿ ಅವ್ವನ ಬಾಯಿ ಮುಚ್ಚಿಸಿತ್ತ್. ಒಂದು ಅರ್ಗಾಲ ಕಳ್ದ್ ಮಳೆಗಾಲ ಬಾತ್. ಮಾಲಿನಿನ ಆರೈಕೆಲಿ ದೈಗೆಲ್ಲಾ ನೆಗಾಡ್ತಿದ್ದೊ. ಜೊಂಪೆ, ಜೊಂಪೆ ಹೂಗಳ ದೈಗಳ್‌ಲಿ ನೋಡಿಕನ ಮಾಲಿನಿಗೆ ಸೊರ್ಗ ಸಿಕ್ಕಿದಂಗಾಗ್ತಿತ್ತ್. ಒಮ್ಮೆ ಸುರೇಶ – ರೇಷ್ಮಾ ಊರಿಗೆ ಬಂದೊವು ಮಾಲಿನಿನ ಹೂನ ಕೊಪ್ಪಳನ ನೋಡಿ, ಮೂಂಕುನ ಮೇಲೆ ಬೆರಳ್ ಇಸಿದೊ.

'ಅಲಲಾ, ಹೂನ ತೋಟನ ಲಾಲ್ ಬಾಗ್‌ನಾಂಗೆ ಮಾಡ್ಯಳ ಅಲ್ಲ? ಗಿರೀಶನೊಟ್ಟಿಗೆ ಹೇಳಿ ನೊಡುಲಿ ಒಂದು ಕಾರಂಜಿಗ ಹಾಕ್ಸ್. ಆಗ ನಿನ್ನ ಹೂ ತೋಟ ಇನ್ನೂ ಪೊರ್ಲು ಕಾಂಬೊದು. – ಎಂತ ಕೊಂಡಾಡ್ದೊ. ಆಗ ಮಾಲಿನಿಗೆ ಸೊರ್ಗಕ್ಕೆ ಮೂರೇ ಗೇಣ್ ಬಾಕಿ. ಅಸ್ಟ್ ಕುಸಿ ಆತ್. ಮನೆ ಒಳಗೂ ಕಿಡ್ಗೆ, ಬಾಗ್‌ಲ್‌ಗೆ ಪರ್ದೆಗ ಬಂದಿದ್ದೊ. ಮೊಕಸಾಲೆಲಿ ಕಸೂತಿ ಹಾಕಿದ ಸೋಪಾ ಸೆಟ್ಟ್ ಬಂದಿತ್ತ್. ಮನೆನೂ ಬಾಳ ಸಿಂಗಾರಗೊಂಡಿತ್ತ್. ಕಲ್ತ ಗೂಡೆನ ತಂದದಕ್ಕೆ ಸಾರ್ಥಕ ಆತ್‌ಂತ ಎಲ್ಲೋವು ಕುಸಿ ಪಟ್ಟೊ.

ಈಗ ಕಮಲಕ್ಕಂಗೆ ಒಂದೇ ಚಿಂತೆ. ಎರ್ಡ್ ಮಕ್ಕಳಿಗೆ ಮೊದ್ವೆ ಆದರೂ ಪುಳ್ಳಿಕ ಆತ್ಲಲೇಂತ. ಸುರೇಶನೊಟ್ಟಿಗೆ, ರೇಷ್ಮಾನೊಟ್ಟಿಗೆ ಆಗಾಗ ಹೇಳ್ತಿದ್ದೊ. ಬೇಗ ಒಂದು ಪುಳ್ಳಿನ ಕೊಡೀಂತ. ಆದರೆ ರೇಷ್ಮಾ ಸುತಾರಾಂ ಒಪ್ಪುತಿತ್ಲೆ. ನಂಗೆ ನಾಕ್ ವೊರ್ಸಕ್ಕೆ ಮಕ್ಕ ಬೇಡಾಂತ ಖಡಾ ಖಂಡಿತವಾಗಿ ಹೇಳ್ತ್. ಆಗ ಅವು ಮಾನಿನೊಟ್ಟಿಗೆ,

"ನೀ ಆದರೂ ಬೇಗ ಹೆರ್ ಬಲಾ. ಮಕ್ಕ ಆಗದಾಂಗೆ ಸಿಕ್ಕಿದ ಮಾತ್ರೆನೆಲ್ಲಾ ನುಂಗುಬೊಡಿ' – ಎಂತ ಹೇಳ್ತಿದ್ದೊ. ಆಗ ಮಾಲಿನಿ ನೆಗಾಡಿಕಂಡ್, 'ಆಗಲಿ ಅತ್ತೆ. ದೇವ್ರು ಕಣ್ ಬುಡಲಿ' –ಎಂತ ಹೇಳ್ತಿತ್ತ್.

* * * * *

27. "ಸೋಮಯ್ಯ ದೊಡಪ ತೀರಿ ಹೋದೊ"

ಅಂದ್ ಬೊಳ್ಪುಂದಳೇ ಹಕ್ಕಿ ಒಂದು ಒಂದೇ ಸಮ ದುಕ್ಕಲಿ ಮೊರ್ಟ ಹಾಂಗೆ ಮೊರ್ಟ್‌ತಿತ್. ಹಳ್ಳಿಲಿ. ಆ ಹಕ್ಕಿ ಹಾಂಗೆ ಮೊರ್ಟರೆ ಏನಾದರ್ ಅಪಸಕುನದ ಮಾತ್ ಕೇಳ್ವೇಂತ ಹಿರ್‍ಯರ ನಂಬಿಕೆ.

' ತೂ, ತೂ, ಈ ಹಾಳ್ ಹಕ್ಕಿ ಏಕೆ ಹೀಂಗೆ ಮೊರ್ಟದೆ ಇಂದ್ ಏನೋ ಆದೆ.' – ಕಮಲಕ್ಕ ಗ್ರೇಸಿದೊ. ಅವು ಗ್ರೇಸಿದಂಗೆನೇ ಆತ್. ವಿಟ್ಲಂದ ರಾಮಯ್ಯ ಮಾಂವನ ಪೋನ್ ಬಾತ್. ಸೋಮಯ್ಯ ಮಾಂವ ತೀರಿ ಹೋದೋಂತ. ಹಕ್ಕಿ ಸಕುನ ಸರಿ ಆತ್. ಸೋಮಯ್ಯ ಮಾಂವಂಗೆ ಈಗ ಮುಟ್ಟಿ ಮುಟ್ಟಿ ತೊಂಬತ್ತ್ ವೊರ್ಸ ಆದು. ಕಳ್ದ ನಾಕೈದ್ ವೊರ್ಸಂದ ಅವು ಕಂಗಾಲಾಗಿದ್ದೊ. ಈಗ ಒಂದ್ ವೊರ್ಸಂದ ಅವು ಮೊಲ್ಗಿದಲ್ಲೇ ಇದ್ದೊ. ಗಿರೀಶನ ಮೊದ್ವೆ ಹೇಳಿಕೆಗೆ ಹೋಕಾಕನ ಅವ್ಕೇಂತ ಅಯ್ಯಣ್ಣ ಮಾಸ್ಟ್ರ, ಮಾಸದ ಗೈಪು, ಹಿಟ್ಟ್‌ನ ಬುತ್ತಿ ಕಮಲಕ್ಕನ ಕೈಲಿ ಹೇಳಿ ಮಾಡ್ಸಿ, ಒಂದು ಕುಪ್ಪಿ ಬೀಜದ ಹಣ್ಣ್‌ನ ಸರಾಯಿನ ಸಾ, ಕುಂಞಣ್ಣನೊಟ್ಟಿಗೆ ಹೇಳಿ ತರ್ಸಿ, ಅದರ ತಕೊಂಡೋಗಿ ದೊಡಪಂಗೆ ಕೊಟ್ಟಿದ್ದೊ. ದೊಡಪಂಗೆ ತಿಂಬಕಾಗದಿದ್ದರೂ. ಮಂಜನ ಪ್ರೀತಿಗೆ ತಿಂದ್, ಕುಡ್ದ ಸಾಸ್ತ್ರ ಮಾಡಿ, ಮಾಸ್ಟ್ರ ಕೈ ಹಿಡ್ದ್ ಮೊರ್‍ಟೊ. ಮಾಸ್ಟ್ರ,

'ಮೊರ್ದ್ ಬಡಿ ದೊಡಪ. ನಾವುನೂ ನಿಮ್ಮ ಹಾಂಗೆ ಆಕನ ಹೀಂಗೆ ಇರ್ದು. ನೀವ್ಗೆ ಏನ್ ಕಮ್ಮಿ ಆಗುಟು? ಪೊರ್ಲುಲಿ ನೋಡಿಕಂಬ ಮಂಜ, ಸೊಸೆ, ಪುಳ್ಳಿಕ ಒಳೊ. ನಿಮ್ಮಂಥಾ ಬಾಗ್ಯ ಎಸ್ಟ್ ಜನಕ್ಕೆ ಬಂದದೆ? ಇರ್‌ವೊಸ್ಟ್ ದಿನ ಕುಸಿಲಿ ಇರಿನಿ' – ಎಂತ ಹೇಳಿ, ಅವರ ಕಣ ನೀರ್ನ ಒರ್ನಿ ಸಮ್ಮಾನ ಮಾಡ್ರೊ. ಕಮಲಕ್ಕಂಗೆ ಇದೆಲ್ಲಾ ಇಂದ್ ನೆಂಪಾತ್.

ಅಯ್ಯಣ್ಣ ಮಾಸ್ಟ್ರ ನೀರ್ ಬುಡಿಕೆ ತೋಟಕ್ಕೆ ಹೋಗಿದ್ದೊ. ಕಮಲಕ್ಕ ಸುಂದರಿನ ಕರ್ದ್ ಗಂಡಂಗೆ ಸುದ್ದಿ ಮುಟ್ಟಿಸಿಕೆ ತೋಟಕ್ಕೆ ಕಳ್ಸಿದೊ. ಕಮಲಕ್ಕ ಸುರೇಶಂಗೆ, ಗಿರೀಶಂಗೆ ಪೋನ್ ಮಾಡಿ ಇಸಯ ತಿಳ್ಸಿದೊ.

ಸುರೇಶ, 'ಅವ್ವಾ ನಾವುಗೆ ಈಗ ಬಾಕೆ ಆದುಲ್ಲೆ. ಸುದ್ದಕ್ಕೆ ಆಕನ ಬಂದವೆ' –ಎಂತ ಹೇಳ್ತ್. ಗಿರೀಶ,

'ಅವ್ವಾ, ನೀವು ಮಾನಿನ ಕರ್ಕಂಡ್ ವಿಟ್ಲಕ್ಕೆ ಹೋಗಿ, ನಾ ಆಪೀಸ್ ಬುಟ್ಟ ಮೇಲೆ ಅಲ್ಲಿಗೆ ಬನ್ನೇಂತ ಹೇಳ್ತ್.

ಅಯ್ಯಣ್ಣ ಮಾಸ್ಟ್ರ ಅಮ್ಸರಲಿ ಬಂದೊ. ಗಂಡ – ಹೆಣ್ಣ್ ಸೊಸೆ ಜೀಪುಲಿ ವಿಟ್ಲಕ್ಕೆ ಹೋದೊ. ಅಲ್ಲಿ ಆಗಳೇ ನೆಂಟ್ರ್‌ಗ, ಕುಟುಮದೊವು, ಊರೊವು ಸೇರಿದ್ದೊ. ಹೆಣನ ತೆಂಕ– ಬಡ್ಗ ಮೊಲ್ಗಿಸಿದೊ. ತಲೆ ಹಕ್ಕಲೆ ಒಂದು ಕಾಲ್ದೀಪ ಹೋಸಿ ಇಸಿದ್ದೊ. ಒಂದು ಸಣ್ಣ ಮೊಣ್ಣ್‌ನ ಅಳಗೆಲಿ ಗೆಂಡ ಹಾಕಿ, ಅದ್ಕೆ ದೂಪ, ಗಂದದ ಚೆಕ್ಕೆನ ಹಾಕಿದ್ದೊ. ಅದರ್‌ಂದ ಪೊರ್ಮಳದ ಹೊಗೆ ಸುತ್ತೋಳು ಹರ್‌ಂಡ್‌ತಿತ್ತ್. ಊದು ಬತ್ತಿಗಳ ಹೋಸಿ ಇಸಿದ್ದೊ. ತಲೆ ಹಕ್ಕಲೆ ಕಂಚಿನ ಹರ್ವಾಣಲಿ, ಬೆಳ್ತಕ್ಕಿ, ತೊಳ್ಸಿಕೊಡಿ ಹಾಕಿದ ನೀರ್ ಇಸಿದ್ದೊ. ಕಾಯಿ ಗಡಿಲಿ ನೆಣೆ ಹೋಸಿ ಇಸಿ, ತಲೆ ಮುಟ್ಟ ಬೆಳ್ದ್ ಅರ್ವೆನ ಮುಸ್ಕು ಹಾಕಿ ಹೆಣನ ಮೊಲ್ಗಿಸಿದ್ದೊ. ಇವಿಬ್ರೊರು ಹೆಣನ ಹಕ್ಕಲೆ ಹೋಗಿ, ಮುಸ್ಕುನ ಅರ್ವೆ ತೆಗ್ದ್, ಹೆಣನ ಬಾಯಿಗೆ ಹರ್ವಾಣಂದ, ತೊಳ್ಸಿ ಕೊಡಿಲಿ ನೀರ್ನ ತೆಗ್ದ್, ಮೂರ್ಮೂರ್ ಸಲ ಬಾಯಿಗೆ ಬುಟ್ಟ್, ಸೊರ್ಗಕ್ಕೇ ಹೋಗೀಂತ ಮೊನ್ಸ್‌ಲಿ ಹೇಳಿಕೊಂಡೊ. ಅವು ಮಾಡ್ದ ಹಾಂಗೆ ಮಾಲಿನಿನೂ ಮಾಡ್ತ್. ಅಸ್ಟಾಕನ ಬೆಟ್ಟಂಪಾಡಿಂದ ಚಿನ್ನಮ್ಮತ್ತೆ ಮಂಜ, ಸೊಸೆ, ಪುಳ್ಳಿನ ಕರ್ಕಂಡ್ ಜೀಪುಲಿ ಬಂದ್ ಇಳ್ದೊ. ಅಣ್ಣನ ಹೆಣನ ಮುಸ್ಕುನ ಬಟ್ಟೆ ತೆಗ್ದ್, ಮೊರ್ಬ್‌ಕಂಡ್ ತೊಳ್ಸಿ ಕೊಡಿಲಿ ನೀರ್ ಬುಟ್ಟ್ ಸೊರ್ಗಕ್ಕೆ ಹೋಗೀಂತ ಹೇಳಿಕಂಡೊ. ಎಡ್ಡ ಪುಡೆಂದ ಮೂರ್ಮೂರು ಸುತ್ತು ಬಂದೊ. ಅವು ತಕಂಡ್ ಬಂದ ಬೆಳ್ದ್ ಅರ್ವೆ, ಊದುಬತ್ತಿ, ಕರ್ಪೂರ, ಗಂಧದ ಮಾಲೆನ ಅಲ್ಲೆ ಪುಡೆಲಿ ಇಸಿದೊ. ಅವು ಮಾಡ್ದಂಗೆ ಉಳ್ದೋವು ಮಾಡ್ರೊ. ಅಳಗೆಲಿ ಗೆಂಡ ಕೆಟ್ಟ್‌ಕಂಡ್ ಬಾತಿತ್ತ್. ಚಿನ್ನಮ್ಮತ್ತೆ ಲಲಿತನೊಟ್ಟಿಗೆ,

'ಇಂದಾ ಲಲಿತ, ಅಟ್ಟಲಿ ಗೋಟು ಕಾಯಿ ಇದ್ದರೆ ಒಂದೆರ್ಡ್ ತಂದ್ ಆ

ಗೆಂಡಕ್ಕೆ ಹಾಕ್' – ಎಂತ ಹೇಳ್ದೊ.

ಲಲಿತ ಅಟ್ಟ ಹತ್ತಿ ಎರ್ಡ್ ಗೋಟ್‌ಕಾಯಿ ತಂದ್ ಒಡ್ದ್, ಅದರ ತುಂಡು ತುಂಡು ಮಾಡಿ ಗೆಂಡಕ್ಕೆ ಹಾಕಿತ್. ಹಂಞಾ ಹೊತ್ತ್‌ಲಿ ಹೊಗೆ ಎದ್ರಿಕೆ ಸುರಾತ್.

ಕಡಬಂದ, ಬಲ್ನಾಡ್‌ಂದ, ಮಂಗ್ಳೂರ್‌ಂದ ಎಲ್ಲಾ ನೆಂಟ್ರ್‌ಗ ಬಂದ್ ಸೇರ್ದೊ. ಬಂದೊವೆಲ್ಲಾ ಹೆಣಕ್ಕೆ ಹಾಕಿಕೆ ಬೆಳ್ದ್ ಅರ್ವೆ, ಊದುಬತ್ತಿ, ಗಂದದ ಮಾಲೆ, ಹೂ ಮಾಲೆಗಳ ತಂದಿದ್ದೊ. ಅದರ ರಾಸಿನೇ ಒಂದಾಳೆತ್ತರಕ್ಕೆ ಬೀತ್.

ಜಾಲ್ ಪುಡೆಲಿ ಹೆಣನ ಮಿಾಸಿಕೆ ಮೊಣ್ಣ್‌ನ ಮಡ್ಕೆಲಿ ಒಳಗೆ ನೀರ್ ಕಾಸಿ ತಂದ್ ಇಸಿದೊ. ಹೆಣನ ಮೊಲ್ಗಿಸಿಕೆ ಒಂದು ಹಲಗೆನನೂ ಇಸಿದೊ. ನೆರೆಕರೆನ ಗಣ್ಮಕ್ಕ ಕೂಡಿಕಂಡ್ ಬೆದ್‌ರ್‌ನ ಜೋಡ್ಸಿ ಚಟ್ಟ ಕಟ್ಟಿಕೆ ಸುರುಮಾಡ್ದೊ. ಸುಮಾರ್ ಹತ್ತ್ ಅಡಿ ಉದ್ದದ ಎರ್ಡ್ ಬೆದ್ರ್‌ನ ಒಂದು ಅಡಿ ಅಂತರಲಿ ಇಸಿ, ಅದ್ಕೆ ಏಳ್ ಬೆದ್ರ್ ತಟ್ಟೆಗಳ ಕತ್ರಿ ಆಕಾರಲಿ ಒಂದು ಕೊಡಿನ ಕೆಳಗೆಂದ, ಇನ್ನೊಂದು ಕೊಡಿನ ಮೇಲೆಂದ ಇಸಿ ಚಾಳೆ ಪಾಂದಾಳಲಿ ಕಟ್ಟಿಕೆ ಸುರು ಮಾಡ್ದೊ. ಊರೊವು, ಮೂಲದೊವು ಸೇರಿಕಂಡ್ ತೋಟದ ಪುಡೆಲಿ ಹೆಣ ಸುಡಿಕೆ ಜಾಗೆ ನೋಡಿಕೆ ಹೋದೊ. ಅವರ ಹಿರಿಯೋವ್ರ ಗುರ್ಜಿ ಇದ್ದ ಜಾಗೆ ತುಂಬಾ ದೊಡ್ಡದಿತ್ತ್. ಅಲ್ಲೇ ಕಾಟ ಒಟ್ಟಿಕೆ ಸುರು ಮಾಡ್ದೊ. ಬಾಣೆಲಿದ್ದ ಹಲ್ಸಿನ ಮರನ ಮತ್ತೆ ಮಾಯನ ಮರನ ಮೂಲದೊವು ಕಡ್ದ್ ಸೊಯ್ದೆ ಮಾಡ್ದೊ. ಮೂಡು, ಪಡು, ದಿಕ್ಕ್‌ಲಿ ಎರ್ಡ್ ಮರದ ದೊಡ್ಡ ತುಂಡುಗಳ ಕೆಳಗೆ ಇಸಿ, ಅದರ ಮೇಲೆ ತೆಂಕ – ಬಡ್ಗ ಒಳ್ಳೆ ಸೊಯ್ದೆಗಳ ಒಟ್ಟಿ, ಅಡಿಕಾಟ ಮಾಡಿ ಇಸಿದೊ.

ನಾಕ್ ಗಂಟೆಗೆ ಗಿರೀಶನೂ ಬಾತ್. ಮೂರ್ನಾಡ್‌ಂದ ಬೆಳ್ಯಪ್ಪನೊವು ಗಂಡ – ಹೆಣ್ಣ್, ಮತ್ತೆ ಅವರ ತಂಗೆ ಬೋಜಮ್ಮನೊವು ಬಂದೊ.

ಮಿಾಸುವಲ್ಲಿ ಒಂದು ಚಿಪ್ಪಿಲಿ ಅರ್ಸಿಣ – ಎಂಣೆ ಮತ್ತೆ ಗರ್ಕೆ ಹುಲ್ಲು ಇಸಿದ್ದೊ. ಇನ್ನೊಂದು ಚಿಪ್ಪಿಲಿ ಸೀಗೆ ಹೊಡಿ ಮೈ ತೊಳ್ಯಕೆ ಇಸಿದ್ದೊ. ನೀರ್ ಒಳಗೆ ಒಂದು ಒಟ್ಟೆ ಚಿಪ್ಪಿನ ಹಾಕಿ ಇಸಿದ್ದೊ. ಒಳಗೆಂದ ಹೆಣನ ಎತ್ತಿಕಂಡ್ ಬಂದ್ ಹಲಗೆ ಮೇಲೆ ಮೊಲ್ಗಿಸಿದೊ. ರಾಮಯ್ಯ ದೊಡಪ ಸುರುಗೆ ಹೆಣಕ್ಕೆ ಗರ್ಕೆ ಹುಲ್ಲ್‌ಲಿ ಅರ್ಸಿಣ –ಎಂಣೆ ಪೂಜಿ, ಒಟ್ಟೆ ಚಿಪ್ಪಿಲಿ ಎಡಪುಡೆಂದ ನೀರ್ ಹೊಯ್ದ್, ಸೀಗೆಲಿ ಮೈ ತೊಳ್ದ್ ನೀರ್ ಹೊಯ್ದ್ ಮಿಾಸುವ ಸಾಸ್ತ್ರ ಮಾಡ್ದೊ. ಅದರ್‌ಂದ ಮೇಲೆ ಕುಟುಂಮದೊವೆಲ್ಲಾ ಮಿಾಸಿದೊ. ಊರೊವು ಕೆಲವು ಜನ ಮಿಾಸಿದೊ. ಬೆಳ್ದ್ ಬೈರಾಸ್‌ಲಿ ಚೆಂಡಿ ತೆಗ್ದ್, ಒಂದು ಬೆಳ್ದ್ ಜರಿ ಶಾಲ್‌ಲಿ ಮುಂಡಾಸ್ ಕಟ್ಟಿ, ಪೊರ್ಲುನ ಒಂದು ಅಂಗಿನ ಹಿಂದೆ – ಮುಂದೆ ಬಾವಾಂಗೆ ಹಾಕಿದೊ. ಹೆಣಕೆ ಹೀಂಗೆ ಹಾಕುದು ಗಡ. ಬೆಳ್ದ್ ಎಂಟ್ ಮೊಳ ವೇಸ್ಟಿನ ಕಚ್ಚೆ ಹಾಕಿ ಉಡ್ಸಿ,

ಮುಂಡಕ್ಕೆ ಗಂಧದ ಬೊಟ್ಟು ಇಸಿದೊ. ಹೀಂಗೆ ಸಿಂಗಾರ ಮಾಡ್ದ ಹೆಣನ ಒಳಗೆ ತಂದ್ ತಿಣೆಲಿ ಮೊಲ್ಗಿಸಿ ನೆಂಟ್ರ್‌ಗ ತಂದ ಬೆಳ್ದ್ ಅರ್ವೆನೆಲ್ಲಾ ಒಂದರ ಮೇಲೆ ಒಂದು ಹೋಸಿದೊ. ಇದ್ದದರ್ಲಿ ಉದ್ದದ ಬೆಳ್ದ್ ಅರ್ವೆನ ಮೇಲೆಗೆ ಹೋಸಿನೀಂತ ಊರು ಗೌಡ್ರು ಹೇಳ್ದೊ. ನೆಂಟ್ರ್‌ಗ ತಂದ ಗಂದದ ಮಾಲೆ, ಹೂ ಮಾಲೆಗಳ ಅದರ ಮೇಲೆ ಇಸಿದೊ.

ಹೆಣದ ಮೈ ಮೇಲೆ ಹಾಕಿದ ಮೇಲೆನ ಅರ್ವೆಲಿ ತಲೆಕೊಡಿಲಿ ಐದ್ ಕೊಂಡೆ ಅಕ್ಕಿನ, ಕಾಲ್ನ ಬುಡಲಿ ಐದ್ ಕೊಂಡೆ ಬತ್ತನ ಹಾಕಿದೊ. ಸತೀಶ ಗೌಡ್ರು ಒಂದು ಚೊಲ್ಲಿದ ಕಾಯೆನ ಎಡ ಕೈಲಿ ಹಿಡ್ಕಂಡ್ ಅಡ್ಕೆ ಮತ್ತೆ ವೀಳ್ಯದೆಲೆನ ಮೆಟ್ಲ್ ಮೇಲೆ ಇಸಿ, ಆ ಕಾಯೆಲಿ ಗುದ್ದಿ ಹೊಡಿ ಮಾಡ್ದೊ. ಅದರ ಒಂದು ವೀಳ್ಯದೆಲೆಲಿ ಮೊಡ್ಚಿ ಪಕ್ಕಲಿದ್ದಂವನ ಕೈಲಿ ಹಿಡ್ಯಕೆ ಕೊಟ್ರೊ. ಆ ಮೇಲೆ ಆ ಕಾಯೆನ ಮೆಟ್ಲ್ ಕಲ್ಲ್‌ಗೆ ಒಡ್ದ್ ಎರ್ಡ್ ಬಾಗ ಮಾಡ್ದೊ. ಗಂಡ್ ಗಡಿನ ಹೆಣದ ಕಾಲ್ ಬುಡಲಿ ಇಸಿದ ಬತ್ತದ ಮೇಲೆ, ಹೆಣ್ಣ್ ಗಡಿನ ತಲೆ ಹಕ್ಕಲೆ ಇಸಿದ ಅಕ್ಕಿ ಮೇಲೆ ಇಸಿದೊ. ಅದರ್ಲಿ ಎಂಣೆ ಹಾಕಿ, ದಳ್ಯಂದ ಮಾಡ್ದ ನೆಣೆ ಹೊತ್ತಿಸಿದೊ. ಈ ಕಾರ್ಯಕ್ರಮದ ಎಲ್ಲಾ ಊರು ಗೌಡ್ರು ಸತೀಶ ಗೌಡ್ರ್ ಕೈಯಿಂದ ಮಾಡ್ಸಿದೊ. ಹಿರಿಯರೆಲ್ಲಾ ಎಡ ಪುಡೆಂದ ತಲೆ ಬಾಗನ ಮುಟ್ಟಿ, ಕಿರಿಯರ್ ಎಲ್ಲಾ ಎಡಪುಡೆಂದ ಕಾಲ್ನ ಮುಟ್ಟಿ, ನಾರಾಯಣ, ನಾರಾಯಣ, ನಾರಾಯಣ –ಎಂತ ಹೇಳಿಕಂಡ್ ಮೂರು ಸುತ್ತು ಸುತ್ತಿದೊ. ಅಕ್ಕಿ ಮೇಲೆ ಇಸಿದ ನೆಣೆನ ಕೆಡ್ಸಿ, ಗಂದ –ದೂಪ ಇದ್ದ ಅಳಗೆಗೆ ಹಾಕಿದೊ. ಬತ್ತದ ಮೇಲೆ ಇಸಿದ ಕಾಯೆ ಗಡಿನ ಮಾಡ್‌ನ ಸೆರೆಲಿ ಇಸಿದೊ. ಸತೀಶ ಗೌಡ್ರು ಮೊಣಕಾಲೂರಿ ಕುದ್ದ್ ತಲೆ ಹಕ್ಕಲೆ ಇಸಿದ ಅಕ್ಕಿನನೂ, ಕಾಲ್ನ ಹಕ್ಕಲೆ ಇದ್ದ ಬತ್ತನನೂ, ಅರ್ವೆನ ಹರ್ದ್ ಬೇರೆ ಬೇರೆ ಕಟ್ಟಿ ಇಸಿದೊ. ಆ ಮೇಲೆ ಮೊಂದ್ರಿ ಮುತ್ತಂಗೆ ಹೆಣನ ಎತ್ತಿ ಇಜ್ಜಲ್‌ಗೆ ತಂದ್ ಚಟ್ಟದ ಮೇಲೆ ತೆಂಕ – ಬಡಗ ಮೊಲ್ಗಿಸಿದೊ.

ಒಳಗೆ ಹೆಣ ಮೊಲ್ಗಿಸಿದ ಜಾಗೆನ ಸೆಗೆಣಿ ಹಾಕಿ ಹಾಲೆ ಮರದ ಕೆತ್ತೆಲಿ ಲಲಿತ ಸಾರ್ಸಿತ್. ಹೊರಗೆ ಹೆಣಕ್ಕೆ ಹಾಕಿದ ಬಟ್ಟೆನ ಹರ್ದ್ ಕೈನ ಬೆರ್ಳ್‌ಗಳ ಜೋಡಿಸಿ ಕಟ್ಟಿದೊ. ಹಾಂಗೆನೇ ಕಾಲ್ನ ಬೆರ್ಳ್‌ಗಳನೂ ಜೋಡಿಸಿ ಕಟ್ಟಿದೊ. ಆ ಮೇಲೆ ಹೆಣನ ಚಟ್ಟಲಿ ಗಟ್ಟಿಲಿ ಬಿಗ್ದ್ ಕಟ್ಟಿ, ಇಸಿದೊ. ಒಳಗೆ ಇಸಿದ ಗಂದ ದೂಪನ ಅಳೆಗೆನ ಕಿಚ್ಚಿನ ತೆಗ್ದ್‌ದ್ ಸೂಕರ ಮಡ್ಕೆಗೆ ಹಾಕುವೆ. ಸೂಕರಂತೇಳ್ರೆ ಇಡೀ ಬೆದ್ರ್‌ನ, ಇಲ್ಲರೆ ಕೊತ್ತಳಿಂಗೆನ ತಲೆ ಬಾಗ ಸೀಳಿ, ಅದರ ನೊಡುಲಿ ಮೊಣ್ಣ್‌ನ ಮಡ್ಕೆ ಇಸಿ ಕಟ್ಟಿ ಇಸುದು.

ಆ ಮೇಲೆ ಕಾಲ್‌ನ ಕಡೆಂದ ಕುಟುಮಸ್ತರ್‌ನೂ, ತಲೆ ಕಡೆಂದ

ಊರೊವುನೂ ಚಟ್ಟ ಎತ್ತಿ, ನಾರಾಯಣ, ನಾರಾಯಣ, ನಾರಾಯಣ – ಎಂತ ಹೇಳಿಕಂಡ್ ಹೆಣನ ಸುಡಿಕೆ ತಕೊಂಡೋದೊ. ಹೆಣನ ಮುಂದೆ ಸೂಕರ ಹಿಡ್ದ ಊರಂವ ನಡ್ದತ್. ಅದರೊಟ್ಟಿಗೆ ಬಾಯಿಗೆ ನೀರ್ ಕೊಟ್ಟ ಕಂಚಿನ ಬಟ್ಲ್‌ನ 5 ವೀಳ್ಯದೆಲೆ ಒಂದು ಅಡ್ಕೆನ ಒಂದು ಬೆಂಡ, ಒಂದು ಬಟ್ಲ್‌ಲಿ, ಹೆಣಕ್ಕೆ ಹಾಕಿದ ನಾಣ್ಯಗ, ಒಣ್‌ಂಗಿದ ಗೋಟು ಕಾಯಿ, ಗಂದದ ಚೆಕ್ಕೆ – ಇದರೆಲ್ಲಾ ಒಬ್ಬೊಬ್ಬ ಹಿಡ್ಕಂಡ್ ಹೊರ್‍ಟೊ. ಅರ್ದ ದಾರಿಗೆ ಹೋಕನ ಚೆಟ್ಟನ ಇಳ್ಸಿದೊ. ಸತೀಶ ಗೌಡ್ರ ಮೊಣಕಾಲೂರಿ, ಹಿಂದೆ ತಿರ್‍ಗಿ ಕುದ್ರಿಕೆ ಹೇಳ್ದೊ. ಅವರ ಕೈಲಿ ಐದೆಲೆ ಒಂದಡ್ಕೆನ ಕೊಟ್ಟ್ ಕೈನ ಹಿಂದಕೆ ತಂದ್ ಕಲ್ಲ್‌ನ ಅಡಿಲಿ ಆ ಎಲಾಡ್ಕೆನ ಇಸಿಕೆ ಊರೊವು ಹೇಳ್ದೊ. ಅವು ಹೇಳ್ದಾಂಗೆ ಮಾಡ್ದ ಮೇಲೆ, ಚಟ್ಟನ ಎತ್ತಿ ತಲೆನ ಮುಂದೆ ಮಾಡಿ ಹಿಡ್ಕಂಡ್ ಹೊತ್ತ್‌ಕಂಡ್ ಹೆಣ ಸುಡುವ ಜಾಗೆಗೆ ಹೋದೊ. ಮನೆ ಜಾಲ್‌ಂದ ಹೆಣ ತಾಕನ ಕಾಲ್‌ನ ಮುಂದೆ ಮಾಡಿ ತಂದಿದ್ದೊ.

ಸೂಕರ ಹಿಡ್ದಂವನ ಮುಂದೆ ಮಾಡಿಕಂಡ್ ಕಾಟಕ್ಕೆ ಹೆಣ ಹೊತ್ತೋವು ಮೂರು ಸುತ್ತು ಎಡಪುಡೆಂದ ಬಂದ್ ಚಟ್ಟನ ಕೆಳಗಿಳ್ಸಿದೊ. ಹಲ್ಸಿನ ಸೊಪ್ಪು, ಮಾಯನ ಸೊಪ್ಪು ಇಡಿ ದಂಡ್ ಇದ್ದ ಬೂದಿ ಬಾಳೆ ಎಲೆನ ಕಂಕಣೆ ಮಾಡಿ ಕಾಟದ ಮೇಲೆ ಎಲೆನ ಕೊಡಿ ತಲೆ ಬಾಗಕ್ಕೆ ಬಾವ ಹಾಂಗೆ ಇಸಿದೊ. ಊರ ಗೌಡ್ರು ಬೆಂಡನ ಕೆತ್ತಿ, ಮಾಯ್ನ ಸೊಪ್ಪುಂದ ಬೆಂಡದ ನೀರ್‍ನ ಕಾಟದ ಮೇಲೆ ಚಿಪ್ಳುಸಿ ಸುದ್ದ ಮಾಡ್ದೊ. ಆ ಮೇಲೆ ಕಾಟದ ಮೇಲೆ ತೆಂಕ – ಬಡಗ ಹೆಣನ ಮೊಲ್ಗಿಸಿದೊ. ಹೆಣನ ತಂದ ಚಟ್ಟನ ಮತ್ತೆ ಮೊಂದ್ರಿ ತುಂಡು ಮಾಡಿ ಇಟ್ಟೊ.

ಮನೆವೆಲ್ಲಾ ಹೆಣದ ಬಾಯಿಗೆ ಅಕೆರಿನ ತೊಳ್ಸಿ ನೀರ್‍ನ ಬುಟ್ಟೊ. ಅಕೆರಿನ ನೀರ್‌ಗೆ ಬೆಂಡದ ನೀರ್‌ನನೂ ಸೇರ್‍ಸಿದೊ. ಮನೆವೆಲ್ಲಾ ಗಂಜಿ ನೀರ್‌ನ ಹೆಣದ ಬಾಯಿಗೆ ಕೊಟ್ಟೊ. ಬೆಂಡದ ನೀರ್‌ಂದ ಹೆಣನ ಬಾಯಿನ ತೊಳ್ದ್, ಮನೆ ಮೆಟ್ಟ್ ಕಲ್ಲ್‌ಲಿ ಗುದ್ದಿ ತಂದ ಎಲಾಡ್ಕೆನ ಚಿನ್ನಮ್ಮತ್ತೆ ಹೆಣದ ಬಾಯಿಗೆ ಇಸಿದೊ. ಅಕೆರಿಗೆ ಇನ್ನೊಮ್ಮೆ ಬೆಂಡದ ನೀರ್‌ಲಿ ಹೆಣನ ಮೋರೆನ ತೊಳ್ದ್ ಬಾಯಿ ತೊಳ್ಯವ ಸಾಸ್ತ್ರನ ಮಾಡ್ದೊ.

ಊರ್ ಗೌಡ್ರು, ಅಕ್ಕಿ, ಬತ್ತ ಕಟ್ಟಿದರ ಬಿಚ್ಚಿ, ಎರ್‍ಡ್ ಅರ್‍ವೆಂದಲೂ ಕುಂಟಿಗಳ ಹರ್‍ದೊ. ಒಂದರ ಸತೀಶ ಗೌಡ್ರಿಗೂ, ಇನ್ನೊಂದರ ಊರ ಗೌಡ್ರಿಗೂ ಕೊಟ್ಟೊ. ಇದಾದ ಮೇಲೆ ಅಕ್ಕಿ, ಬತ್ತನ ಕಾಲ್ನ ಕಡೆಂದ ಸತೀಶ ಗೌಡ್ರೂ, ತಲೆ ಕಡೆಂದ ಊರೊವೂ ಒಟ್ಟಿಗೆ ಹೆಣದ ಮೇಲೆ ಬಾವ ಹಾಂಗೆ ಸೇರ್‍ಸಿ ಸೊರ್‍ದೊ. ಹಲ್ಸಿನ ಸೊಪ್ಪುನ ಮಾಯ್ನ ಸೊಪ್ಪುನ ಊರೊವು ಇಸಿದೊ. ಅದರ್‌ಂದ ಮೇಲೆ ಹೆಣದ ಮೇಲೆ ಒಳ್ಳ ಸೊಯ್ದೆನ ಒಟ್ಟಿ ಇಸಿ ಮುಚ್ಚಿ, ಮೇಲ್ ಕಾಟ ಒಟ್ಟಿದೊ. ಹೆಣದ ಮೈ

ಮೇಲೆ ಬರೇ ನಾಕಾರ್ ಬಟ್ಟೆಗಳ ಇಸಿ, ಒಳ್ಳದರ ಸೊಯ್ದೆ ಕಡ್ಡೋವ್ಕೆ ಕೊಟ್ಟೊ.

ಸೂಕರಲಿ ಇದ್ದ ಕಿಚ್ಚಿಂದ ಮಡ್ಲ್‌ನ ಸೂಟೆಲಿ ಕಿಚ್ಚಿ ಹೊತ್ತಿಸಿ ಒಂದು ಸೂಟೆನ ಊರೊವ್ರೂ, ಇನ್ನೊಂದು ಸೂಟೆನ ಸತೀಶ ಗೌಡ್ರ ಕೈಲಿ ಕೊಟ್ಟೊ. ಸೂಕರ ಹಿಡ್ದಂವ ಮುಂದೆ, ಅಂವನ ಹಿಂದೆ ಊರ ಗೌಡ್ರು, ಕುಟುಮದೊವು ನಾರಾಯಣ, ನಾರಾಯಣ, ನಾರಾಯಣ – ಎಂತ ಹೇಳಿಕಂಡ್ ಮೂರು ಸುತ್ತು ಬಾಕಾಕನ ಕಾಟದ ನಾಕ್ ಮೂಲೆಗೂ, ಸೂಟೆನ ಮುಟ್ಟಿಸಿಕಂಡ್ ಎಲ್ಲೋವೂ ಬಂದೊ. ಅಕೆರಿಗೆ ತಲೆ ಪುಡೆಂದ ಊರೊವ್ರೂ, ಕಾಲ್ನ ಪುಡೆಂದ ಸತೀಶ ಗೌಡ್ರೂ, ಚಾಮಯ್ಯ ಮಾಸ್ಟ್ರ, ರಾಮಯ್ಯ ಗೌಡ್ರು ಕಿಚ್ಚಿ ಕೊಟ್ಟೊ. ಎರ್ಡ್ ಕಡೆಂದ ಕಿಚ್ಚಿ ದಗ-ದಗ ಉರ್‍ಯಕೆ ಸುರಾತ್. ಎರ್ಡ್ ಕಡೆಂದ ಕಿಚ್ಚಿ ನೊಡು ಕೂಡಿಕಾಕನ ಉದ್ದದ ಎರ್ಡ್ ಮರದ ಕುಂಟೆಗಳ ಕತ್ರಿ ಆಕಾರಲಿ ಕಾಟದ ಮೇಲೆ ಇಸಿದೊ. ಇದಾದ ಮೇಲೆ ಊರೊವು ಮೂಡು ದಿಕ್ಕ್‌ಂದ ಕತ್ತಿನ ಹೆರ್ಕಿದ್ ಇಟ್ಟೊ. ಪಡುದಿಕ್ಕ್‌ಂದ ಮೂಲದೊವು ಮೊಚ್ಚಿನ ಕಾಟದ ಮೇಲೆಂದ ಬಿಸಾಡ್ದೊ. ಕುಟುಮದೊವು ಮನೆಗೆ ಹೋಕಾಕನ ಆ ಹತ್ಯಾರ್‌ಗಳ ಹೆರ್ಕಿಕಂಡ್ ಹೆಣನ ಮಿಾಸಿದ ಜಾಗೆಲಿ ತಂದ್ ಇಸಿದೊ. ಎಲ್ಲೋವೂ ಮಿಾಯಕೆ ಅಲ್ಲೆ ಹಕ್ಕಲೆ ಇದ್ದ ಚೋಡಿಗೆ ಹೋದೋ. ಹೆಣ್ಮಕ್ಕ ಚೋಡ್‌ಲಿ ಮುಣ್‌ಂಗಿ, ಮನೆಗೆ ಬಂದ್ ಮಿಾದೊ.

ಆ ದಿನ ಇರ್‍ಳ್ ಹೆಣ ಮೊಲ್ಗಿಸಿದ ಜಾಗೆಲಿ ತೆಂಕ – ಬಡ್ಗ ಮಣೆ ಇಸಿ, ದೀಪ ಹೋಸಿ ಇಸಿದೊ. ಒಂದು ಚೊಂಬು ನೀರ್‍ನೂ ಸತೀಶ ಗೌಡ್ರು ಅಲ್ಲಿ ತಂದ್ ಇಸಿದೊ. ಸೋಮಯ್ಯ ಗೌಡ್ರ ಮಂಜ ಸತೀಶ ಗೌಡ್ರು ಅಪ್ಪ ಕರ್ಮ ಹಿಡ್ದ, ಪಾಸಕ್ಕೆ ನಿತ್ತ ಕಾರ್‍ಣ ದಿನಾ ಎರ್ಡ್ ಹೊತ್ತು ತಣ್ಣೀರ್‌ಲಿ ಮಿಾದ್, ಗಂಜಿ, ರಾಗಿ ಮಣ್ಣಿ ತಿಂದ್, ಕಣ್ಣ ಚಾ ಕುಡ್ದ್ ಸೂತಕ ಕಳ್ಯಕನ ಮುಟ್ಟ ನಿತ್ತೊ. ಪಾಸಕ್ಕೆ ನಿತ್ತೊವು ಕಾಯೆ ಹಾಕಿದ ಗೈಪು, ಹಾಲ್ ಹಾಕಿದ ಚಾಯ, ತಿಂಬಕೆ ಬೊತ್ತ್, ಕುಡ್ಯಕೆ ಬೊತ್ತ್. ತಲೆಗೆ ಎಂಣೆ ಹಾಕಿಕೆ ಬೊತ್ತ್. ಸೂತಕ ಕಳ್ಯಕನ ಮುಟ್ಟ ಬರೇ ಮೊಂದ್ರಿಲಿ ಮೊಲ್ಗೊಕು. ತಣ್ಣೀರ್ಲಿ ಮಿಾಯೊಕು. ಎಲಾಡ್ಕೆ ತಿಂದರೆ ಸುಣ್ಣ ಹಾಕಿಕೆ ಬೊತ್ತ್. ಮೈಗೆ ಅಂಗಿ ಹಾಕಿಕೆ ಬೊತ್ತ್. ಹಾಂಗಾಗ್ ಒಂದು ಬೈರಾಸ್‌ನ ಉಟ್ಟ್, ಇನ್ನೊಂದ್ ಬೈರಾಸ್‌ನ ಹೊದ್ದ್‌ಕಂಬತಿದ್ದೊ. ಹೆಣ ಸುಟ್ಟ್ ಮಿಾದ್ ಬಂದ್ ಸತೀಶ ಗೌಡ್ರು ಕುತ್ತಿಗೆಗೆ ಕುಂಟಿನ ಸುತ್ತಿಕಂಡ್ ಮನೆ ಮೆಟ್ಲ್‌ಲಿ ನಿತ್ತ್. ಸೂರಡಿ ಅಡಿಲಿ, ಹಲ್ಸಿನ ಎಲೆನ ಕಿಳ್ಳಿನಾಂಗೆ ಮಾಡಿ, ಬಟ್ಲ್‌ಲಿ ಹಾಕಿಸಿದ ಗಂಜಿ ತೆಳಿನ ಮೂರ್‍ಮೂರ್ ಸಲ ಕುಡ್ದೊ. ಇದರ ಪಾಸ ಹಿಡ್ಯೋದೂಂತ ಹೇಳ್ವೆ.

ದೂರಂದ ಬಂದ ನೆಂಟ್ರೆಲ್ಲಾ ಹೊರ್‍ಟೋದೊ. ಅಯ್ಯಣ್ಣಿ ಮಾಸ್ಟ್ರ ಹೆಣ್ಣ್‌ನೊಟ್ಟಿಗೆ,

'ಇಂದನೆ, ನಾ ಇಲ್ಲಿ ನಿತ್ತನೆ. ನಾಳೆ ಕೊಳ್ಳಿ ಕೂಡ್ಸಿಕೆ ಉಟ್ಟಲೆ? ನಾಳ್ದ್ ಮೂರರ ಸುದ್ದ. ನಾ ಅದರ ತೀರ್ಸಿ ಬನ್ನೆ. ನೀ ಬೆಳ್ಯಪ್ಪ ಬಾವನವರ ಕರ್ಕಂಡ್ ಪಂಜಕ್ಕೆ ಹೋಗು. ಅವು ಇರ್ಳ್ ಮೂರ್ನಾಡ್‌ಗೆ ಹೋದು ಬೇಡ. ಇಂದ್ ಪಂಜಲಿ ನಿತ್ತದ್ ನಾಳೆ ಬೊಳ್ಪುಗೆ ಹೋಗಲಿ. ಎಂತ ಹೇಳ್ರೊ.

ಅವು ಹೇಳ್ದಾಂಗೆ ಕಮಲಕ್ಕ ನೆಂಟ್ರ್‌ಗಳ ಕರ್ಕಂಡ್, ಗಿರೀಶನ ಕಾರ್‌ಲಿ ಮಾಲಿನಿನೊಟ್ಟಿಗೆ ಪಂಜಕ್ಕೆ ಹೋದೊ.

ಮಾರ್ನೆ ದಿನ ಊರು ಗೌಡ್ರು, ಮನೆವು ಕುಟುಮಸ್ತರ್ ಕೂಡಿಕಂಡ್ ಬೊಳ್ಪುಗೆ ಹೆಣ ಸುಟ್ಟಲ್ಲಿಗೆ ಹೋಗಿ ಕೊಳ್ಳಿ ಕೂಡ್ಸಿದೊ. ಒಂದ್ ಮೊಣ್ಣ್‌ನ ಗುಂಬಲಿ ಹಂಞ ಬೂದಿ ಮತ್ತೆ ಒಂದೆರ್ಡ್ ಎಲುಗಳ ಹೆರ್ಕಿ ಹಾಕಿಸಿದೊ. ಹೊತ್ತದೆ ಇದ್ದ ಕೊಳ್ಳಿಗಳ ಸೇರ್ಸಿ, ಕಿಚ್ಚಿಕೊಟ್ಟೊ. ಮತ್ತೆ ಅದಕ್ಕೆ ಹಾಲ್, ತುಪ್ಪ ಹ್ಯೊದ್ ಮಿಾದ್ ಮನೆಗೆ ಬಂದೊ. ಬಾಕನ ಬೂದಿ ಹಾಕಿಸಿದ ಗುಂಬನ ತಂದ್ ಮನೆ ಹಕ್ಕಲೆ ಇದ್ದ ಚಾಳೆ ದೈಗೆಕಟ್ಟಿ ಇಸಿದೊ. ಅದರ ಮಾರ್ನೆ ದಿನ ಮೂರರ ಸುದ್ದ. ಊರು ಗೌಡ್ರು, ಕುಟುಮಸ್ತರ್ ಬಂದು ಬಳಗದೊವು ಬೊಳ್ಪುಗೆ ಬಂದ್ ಸೇರ್‍ದೊ. ಚೌರಿಂಜ, ಮತ್ತೆ ಮೊಡ್ಯಾಳ ಬಂದಿದ್ದೊ. ಅವು ಎಲ್ಲಾ ಸೇರಿಕಂಡ್ ಕಾಟದ ಹಕ್ಕಲೆ ಹೋಗಿ, ಕಾಟಕ್ಕೆ ಮೊಡ್ಯಾಳ ಬೆಂಡದ ನೀರ್‌ನ ಚಿಪ್ಳುಸಿತ್. ಸುಟ್ಟ ಜಾಗೆಲಿ ಇದ್ದ ಬೂದಿನ ನೊಡು ಜಾಗಕ್ಕೆ ನೀರ್ ಹೊಯ್ದ್, ಬಿಸಿ ಬೂದಿನ ತಣ್ಣಂಗೆ ಮಾಡಿವೆ. ಸತೀಶ ಗೌಡ್ರು ಎಡ್ಡ ಕೈಲಿ ಕೊಟ್ಟು ತಕಂಡ್ ಹೆಣದ ಬೂದಿನ ಕಾಲ್ ಹಕ್ಕಲೆ, ನೊಡು ಬಾಗ ಮತ್ತೆ ತಲೆ ಹಕ್ಕಲೆ ಇದರ ಮೂರು ಬಾಗ ಮಾಡಿ ಗುರ್ತ ಮಾಡ್ರೊ. ಕುಟುಮಸ್ತ್ರರ್ ಆ ಮೂರು ಬಾಗನ ಬೇರೆ ಬೇರೆ ಗುಪ್ಪೆ ಮಾಡಿವೆ. ನೊಡುಲಿ ದೊಡ್ಡ ಹೊಂಡ ತೆಗ್ದವೆ. ಸತೀಶ ಗೌಡ್ರು ಕೊಟ್ಟುಲಿ ಸುರುಗೆ ಕಾಲ್ನ ಬಾಗನ ಬೂದಿನ ಗುಪ್ಪೆನ ಹೊಂಡಕ್ಕೆ ಜಾರ್ಸಿ ಹಂಞ ನೀರ್ ಹೊಯ್ದುವೆ. ಆ ಮೇಲೆ ನೊಡು ಬಾಗದ ಗುಪ್ಪೆನ ಹೊಂಡಕ್ಕೆ ಜಾರ್ಸುವೆ. ಅಕೆರಿಗೆ ತಲೆ ಬಾಗದ ಗುಪ್ಪೆನ ಹೊಂಡಕ್ಕೆ ಜಾರ್ಸುವೆ. ಕುಟುಮದೊವೆಲ್ಲಾ ಅದಕ್ಕೆ ಹಾಲ್ತುಪ್ಪ ಹೊಯ್ದುವೆ. ಇದಾದ ಮೇಲೆ ಸುತ್ತೋಳು ಇದ್ದ ಮೊಣ್ಣ್‌ನ ಕೆರ್ಸ್‌ದ್ ತೆಗ್ಸ್‌ದ್ ಬೇಕಾದಸ್ಟ್ ನೀರ್ ಹಾಕಿ ಎತ್ತರದ ದೂಪೆ ಮೆತ್ತುವೆ. ಬಡಗ್ ದಿಕ್ಕ್‌ಗೆ ಒಂದ್ ಸಣ್ಣ ಮೆಟ್ಲ್ ಇಸುವೆ. ರಾಮಯ್ಯ ಗೌಡ್ರು ಸುರುಗೆ ಒಂದು ಸರೋಳಿ ಕಣೆನ ದೂಪೆನ ಮುಂದೆ ಕುತ್ತಿ ಇಸಿದೊ. ಅದಾದ ಮೇಲೆ, ಸತೀಶ ಗೌಡ್ರು, ಅಯ್ಯಣ್ಣ ಮಾಸ್ಟ್ರ, ಕುಟುಮಸ್ತರ್ ಸೇರಿಕಂಡ್, ದೂಪೆನ ಸುತ್ತೋಳು ಸರಳಿ ಕಣೆನ ಕುತ್ತಿಕಂಡ್ ಬಂದೊ. ಅದರ ಸುತ್ತೋಳು ಭೊಳ್ಳಿ ಹಾಕಿ ಗಟ್ಟಿಲಿ, ಬೀಳದಾಂಗೆ ಕಟ್ಟಿದೊ. ಒಂದು ಬೆಂಡನ ಒಟ್ಟೆ ಮಾಡಿ, ದೂಪೆನ ಎದ್‌ರ್ ಇಸಿದೊ. ಮತ್ತೆ ಎಲ್ಲೋವೂ ಮಿಾಯಕೆ ಹೋದೊ.

ಮಿಾದ್ ಬಂದ್ ದೇವಸ್ತಾನಂದ ತಂದ ಪುಣ್ಯ ನೀರ್‌ನ ಹಾಕಿಕಂಡೊ. ಹೆಣನ ಮಿಾಸಿದ ಜಾಗೆಗೆ, ಸೊಯ್ದೆ ಕಡ್ಡ ಹತ್ಯಾರ್‌ಗಳಿಗೆ ಪುಣ್ಯ ನೀರ್ ಹಾಕಿದೊ. ಇದರೆಲ್ಲಾ ಊರೋವೇ ಮಾಡ್ದೊ. ಊರೊವು ಮಾಡ್ದ ಅಡ್ಗೆನ ಬಂದವೆಲ್ಲಾ ಉಂಡೊ. ಅದಾದ ಮೇಲೆ ಬೊಜ್ಜದ ದಿನದ ಏರ್ಪಾಡ್‌ನ ಬಗ್ಗೆ ಮಾತಾಡಿಕೆ ಕುದ್ದೊ.

ಅಪ್ಪ, ಅಯ್ಯೆ ಸಾಯಕನ ಕೊಟ್ಟ ಗೂಡೆಗ ಸರ್ಕ್ ತಾವ ಪದ್ಧತಿ ಉಟ್ಟು. ಒಂದು ಮುಡಿ ಅಕ್ಕಿ, ಕುಂಬಳಕಾಯಿ, ಬೂದಿ ಬಾಳೆ ಗೊನೆ, ತೆಂಗಿನಕಾಯೆ, ಅಡ್ಗೆಗೆ ಬೇಕದ ಎಲ್ಲಾ ಸಾಮಾನ್‌ನ ಒಂದು ಹೆಡಗೆಲಿ ಹಾಕಿ ತರೊಕು. ತಂದೋವ್ಕೆ ತಲೆಗೆ ಎಣ್ಣೆ ಕೊಟ್ಟ್, ಹೊಟ್ಟೆ ತುಂಬಾ ಊಟ ಕೊಟ್ಟ್ ಕರ್ಚಿಗೆ ಹಣ ಕೊಟ್ಟ್ ಕಳ್ಸುವೆ. ಸತೀಶ ಗೌಡ್ರು ಕೊಟ್ಟ ಹೆಣ್ಣ್‌ಗ ಸರ್ಕ್ ತಾದು ಬೇಡ. ಅವರವರ ಬಕ್ತಿಗೆ ಏನಾರ್ ತಿನ್ಸ್ ಮಾಡಿ ತನ್ನಿಂತ ಹೇಳ್ದೊ. ಆದರೆ ಚಿನ್ನಮ್ಮತ್ತೆ ಒಪ್ಪಿತ್ಲೆ. ಅವು ಬೊಜ್ಜದ ದಿನ ಹಂದಿ ಮಾಸ ಮತ್ತೆ ಕೋಳಿ ಮಾಸ ನಾವು ತಂದವೇಂತ ಹೇಳ್ದೊ. ಜನ ಸಾವಿರಂದ ಮೇಲೆ ಬಾವೊ. ಅದ್ ನೀವ್ಗೆ ಕರ್ಚ್ ಜಾಸ್ತಿ ಆದೂಂತ ರಾಮಯ್ಯ ದೊಡಪ ಹೇಳ್ದೊ.

ಆಗ ಗಿರಿಜಕ್ಕ, ವಾರಿಜಕ್ಕ, ವಸಂತಿ ಅಕ್ಕ, ಜಯಂತಿ ಅಕ್ಕ ಎಲ್ಲಾ ಸೇರಿಕಂಡ್,

'ನಾವುನೂ ಕೊಟ್ಟ ಹೆಣ್ಣ್‌ಗ ಅಲ್ಲನೋ? ನಾವೆಲ್ಲಾ ಕೂಡಿಕಂಡ್ ಕರ್ಚಿನ ಪಾಲ್ ಮಾಡಿಕಂಡವೆ' –ಎಂತ ಹೇಳ್ದೊ. ಅದ್ಕೆ ರಾಮಯ್ಯ ದೊಡಪ ಒಪ್ಪಿದೊ. ಒಳ್ದ ಕರ್ಚ್‌ನ ಮನೆವು ಮಾಡ್ದೂಂತ ಒಪ್ಪಿಗೆ ಆತ್. ಅಯ್ಯಣ್ಣ ಮಾಸ್ಟ್ರ ಮೂರರ ಸುದ್ದ ಆದ ಕೂಡ್ಲೆ ಪಂಬೆತ್ತಾಡಿಗೆ ಹೊರ್ಟ್ ನಿತ್ತೋ. ಸತೀಶ ಗೌಡ್ರ ಒಟ್ಟಿಗೆ,

'ಸತೀಶಣ್ಣ, ನಾ ಇಂದ್ ಹೋಗಿ ಹತ್ತರ ನೀರ್ ನೆರ್ಳ್‌ಗೆ ಇಸುವ ದಿನ ಹಿಂಬೊತ್ತು ಬನ್ನೆ. ಬಲಾ' – ಎಂತ ಹೇಳ್ದೊ.

'ನೀ ಇದ್ದರೆ ನಂಗೆ ಬಲ ಬಂದದೆ ಅಯ್ಯಣ್ಣ. ರಾಮಯ ದೊಡಪಂಗೂ ಪ್ರಾಯ ಆತ್. ಬಾಸ್ಕರಂಗೆ ನಿನ್ನಸ್ಟ್ ಅನ್ಬವ ಸಾಲ್ದ್. ನೀ ತಿಳ್‌ವಳಿಕೆ ಇದ್ದಂವ. ನಾಳೆ ನಾ ಗುರ್ಜಿ ಕಟ್ಟವರ ಬಾಕೆ ಹೇಳ್ಯಳೆ. ನೀ ನಿತ್ತ್‌ದ್ ಅವರ ಮೇಲ್ತನಿಕೆ ಮಾಡೊಕು. ಬಲಾ. ನಂಗೆ ಬೊಜ್ಜದ ಕಾಗ್ದ ಮಾಡ್ಸುದು, ಬಟವಾಡೆ ಮಾಡ್ದು, ಸಾಮಾನ್ ಸರಂಜಾಮು ಜೋಡ್ಸುದೂಂತ ಬೇಕಸ್ಟ್ ಕೆಲ್ಸ ಉಟ್ಟು. ಬಾಸ್ಕರ ಅಂವನ ಹೆಣ್ಣ್ ಸತ್ತ ಮೇಲೆ ಯಾಗೋಳೂ ಮಂಕರಾಂಗೆ ಇದ್ದದೆ. ಅಂವಂಗೂ ಎಲ್ಯಾದರ್ ಒಂದ್ ಹೆಣ್ಣ್‌ನ ನೋಡಿ ಮೊದ್ವೆ ಮಾಡ್ಸೋಕು'– ಎಂತ ಸತೀಶ ಗೌಡ್ರು ಹೇಳ್ದೊ.

ಅಣ್ಣಂಗೆ ಸಾಯ ಮಾಡ್ದು ತಮ್ಮನ ಕರ್ತವ್ಯ. ರಾಮಯ್ಯ ದೊಡಪಂಗೆ ಗಂಡ್ ಮಕ್ಕ ಇಲ್ಲೆ. ಪುಳ್ಳಿಕ ಪ್ರಾಯಕೆ ಬಂದೊವು ಇದ್ದರೂ, ಅವ್ಕೆ ಇದರಲೆಲ್ಲಾ

ಹೆಚ್ಚಿನ ಅನ್ನವ ಸಾಲ್ದಂತ ಅಯ್ಯಂಣ ಮಾಸ್ಟ್ರ,

'ಹಂಗಾರೆ, ನಾ ಇಂದ್ ಹೋಗಿ ನಾಳೆ ಬೊಳ್ಪುಗೆ, ಕೆಲ್ಸದೊವು ಬಾಕೆ ಮುಂದೆ ಬಂದ್ ಎತ್ತಿನೆ.' – ಎಂತ ಸತೀಶ ಗೌಡ್ರಿಗೆ ಬರವಸೆ ಕೊಟ್ಟ್ ಪಂಬೆತ್ತಾಡಿಗೆ ಹೊರ್ಟ್ಹೋದೊ.

ಮಾರ್ಣೆ ದಿನ ಎಂಟ್ ಗಂಟೆಗೇ ಬಂದ್ ಮುಟ್ಟಿದೊ. ಗಂಟೆ ಒಂಬತ್ತಾಕನ ಕಲ್ಲ್ ಕಟ್ಟೋವು ಬಂದ್, ಹಳಬರ ಗುರ್ಜಿನ ಪಕ್ಕಲೆ ಪಾಯ ತೆಗ್ದ್, ಗುರ್ಜಿ ಕಟ್ಟಿಕೆ ಮುರ ಕಲ್ಲ್‌ನ ಕೆತ್ತಿಕೆ ಸುರು ಮಾಡ್ದೊ. ಮುರ ಕಲ್ಲ್‌ಲಿ ಅಡಿ ಪಾಯ ಕಟ್ಟಿ, ನಾಕ್ ಮಡೆಲಿ, ನಾಕ್ ಸಿಮೆಂಟ್ ಪೈಪುಗಳ ತುಂಡು ಮಾಡಿ ಹಾಕಿ, ಅದರ ಮೇಲೆ ಸ್ಲೇಬ್ ಹಾಕಿ, ಮೇಲೆ ಗೋಪುರದಾಂಗೆ ಮಾಡಿ, ಮುಗುಳಿ ಕಟ್ಟಿ ಪೊರ್ಲುನ ಗುರ್ಜಿ ಕಟ್ಟಿಸಿದೊ. ಗುರ್ಜಿ ಕಟ್ಟಿಕನ ಪಾಯ ತೆಗ್ಯಕಾಕನೇ ನೊಡುಲಿ ಹೊಂಡ ಮಾಡಿ, ಒಂದು ಹೆಡೆಗೆ ದೂಪೆನ ಬೂದಿನ ತಂದ್ ಅದರ್ಲಿ ಸೊರ್ಗಿ ಅದರ ಮೇಲೆ ಕರ್ಗಲ್ ಹಾಕಿದ್ದೊ. ಗುರ್ಜಿನ ಎದ್ರ್ ಮಡೆಲಿ ಮಾರ್ಬಲ್‌ಲಿ ಸೋಮಯ್ಯ ದೊಡಪನ ಹುಟ್ಟಿದ ಮತ್ತೆ ಸತ್ತ ದಿನದ ತಾರೀಕ್, ತಿಂಗ, ವೊರ್ಸ ಬರ್ದ್, ಅವರ ಹೆಸ್ರ್ ಬರ್ದ ಪಲಕನ ಅಂಟಿಸಿಕೆ ಹೇಳ್ದೊ. ಸುತ್ತೋಳೂ ಸಣ್ಣ ಸಣ್ಣ ಕಂಬಗಳ ಹಾಕಿ, ಚೈನ್‌ಗಳ ಕೋಸಿ ಅಲಂಕಾರ ಮಾಡ್ಸಿದೊ. ಎರ್ಡ್ ದಿನಲಿ ಆ ಕೆಲ್ಸ ಎಲ್ಲಾ ಮುಗ್ತ್.

* * * * *

28. "ದೊಡಪನ ಬೊಜ್ಜ"

ಬಂದುಗ, ಬಳಗದೊವು ಕುಟುವಸ್ತರ್ ಎಲ್ಲಾ ಹತ್ತರ ಇರ್ಕ್ಯ ಬಂದ್ ಸೇರ್‍ದೊ. ಎಲ್ಲೋವು ಉಂಡ ಮೇಲೆ ಸತೀಶ ಗೌಡ್ರು ಮಿಾದ್ ಬಂದ್ ಹೊರಗೆ ಇಜ್ಜೆಲಿಲಿ ಹಾಕಿದ ಚಪ್ಪರದಡಿಲಿ ಊರು ಗೌಡ್ರು ಸತೀಶ ಗೌಡ್ರಿಗೆ ತೆಂಕ ಮೋರೆ ಮಾಡಿ ನಿಲ್ಲಿಕೆ ಹೇಳ್ದೊ. ಅವರೊಟ್ಟಿಗೆ ಕುಟುಮದೊವು ಇದ್ದೊ. ಅವರ ಎದ್ರ್ ಮಡೆಲಿ ಊರು ಗೌಡ್ರು, ಸೋದರದೊವು, ಊರೊವು, ನೆಂಟ್ರ್‌ಗ ನಿತ್ತೊ. ಸತೀಶ ಗೌಡ್ರು ಎಡ ಕೈ ನೀಂಡಿ, ಬಲ ಕೈಯಿಂದ ಎಡ್ದ ಕೈನ ಮುಚ್ಚಿ, ಮೂರು ಸರ್ತಿ ಕೈಯಿಂದ ಆರತಿ ಮಾಡ್ದಾಂಗೆ ಮಾಡಿ,

'ನೀರ್ ನೆರ್ಕ್ಯ ಇಸಿಕೆ, ನಾಳೆ ನಡ್ಯವ ಸುದ್ದದ ಕಾರ್ಯಕ್ರಮಕ್ಕೆ ಒಪ್ಪಿಗೆ ಕೊಡಿನಿ' –ಎಂತ ಊರೊವರೊಟ್ಟಿಗೆ ಕೇಳ್ದೊ.

ಒಳಗೆ ನೀರ್ ನೆರ್ಕ್ಯಗೆ ಇಸುವಲ್ಲಿ ಸರಕ್‌ಲಿ ತರುವ ಎಲ್ಲಾ ಸಾಮಾನ್‌ಗಳ ಹಂಞ ಹಂಞ ಇಸಿದೊ. ಒಂದ್ ಬೆಂಡ, ಒಂದು ಚೊಂಬು ನೀರ್, ಎರ್ಡ್ ಮಣೆ, ಕಾಲ್ದೀಪ, ಅರಶಿಣ ಕೊಂಬು, ನೂಲು ಉಂಡೆ, ಮೊಸಿ ತುಂಡು, ಅಕ್ಕಿ ಹೊಡಿ ತಂದಿಸಿ, ಒಂದು ಮಣೆ ಮೇಲೆ ಕಾಲ್ದೀಪ ಹೋಸಿ ಇಸಿದೊ. ಇನ್ನೊಂದು ಮಣೆ ಮೇಲೆ ನೀರ್ ಹಾಂಗೂ ಒಟ್ಟೆ ಮಾಡಿಸಿದ ಬೆಂಡನ ಇಸಿದೊ.

ಒಟ್ಟೆ ಮಾಡಿಸಿದ ಬೆಂಡದ ನೀರ್‌ಗೆ ತಾಂಗುವಾಂಗೆ ಅರಸಿಣ ತುಂಡುನ ಕಟ್ಟಿದ ದಾರನನೂ, ನೀರ್‌ನ ಚೊಂಬುಲಿಸಿದ ನೀರ್‌ಗೆ ತಾಂಗುವಾಂಗೆ ಮೊಸಿ ತುಂಡುನ ಕಟ್ಟಿದ ದಾರನನೂ ಮೇಲೆಂದ ಕಟ್ಟಿ ನೇಲ್ಸಿ ಇಸಿದೊ. ಇದ್ ನೀರ್‌ಗೆ ಮುಟ್ಟುವಾಂಗೆ ಇರೊಕು. ಮುಟ್ಟಿಕೆ ಬೊತ್ತ್. ಆ ಮೇಲೆ ದೀಪದ ಎದ್ರ್ ದೊಡ್ಡ ಬಾಳೆಲೆ ಹಾಸಿ, ಸರ್‌ಕ್‌ನ ಎಲ್ಲಾ ಸಾಮಾನ್‌ನ ಅದರ ಮೇಲೆ ಇಸಿದೊ. ಸತೀಶ ಗೌಡ್ರು ಮನೆನ ಎದ್ರ್ ಬಂದ್, ಮೆಟ್ಟ್‌ಕಲ್ಲ್‌ನ ಮೇಲೆ ಮೊಣಕಾಲೂರಿ ಕುದ್ದ್, ಮೆಟ್ಟ್‌ಕಲ್ಲ್ ಮೇಲೆ ಇಸಿದ ಕುಂಬಳಕಾಯಿನ ಎಡ್ಡ ಕೈಲಿ ಹಿಡ್ದ ಕತ್ತಿಂದ, 'ಅಪ್ಪಂಗೆ ಕುಂಬಳಕಾಯಿ ಕಡ್ಡವೆ' – ಎಂತ ಮೂರು ಸಲ ಹೇಳಿ, ಕುಂಬಳಕಾಯಿನ ಕಡ್ದ್ ಎರ್ಡ್ ತುಂಡು ಮಾಡ್ದೊ. ಆ ತುಂಡುಗಳ ಸರ್ಕ್ ಇಸಿದ ಬಾಳೆಲೆ ಮೇಲೆ ಇಸಿದೊ. ಒಂದು ಪಾಡ ಬೂದಿ ಬಾಳೆ ಕ್ಯಾನನೂ ಇಸಿದೊ. ನೀರ್ ನೆರ್ಳ್ ಇಸಿದ ಜಾಗೆನ ಸುತ್ತೋಳೂ ಅಕ್ಕಿ ಹೊಡಿನ ಹರ್‌ಂಡಿದೊ. ಸತ್ತವರ ಆತ್ಮ ನೀರ್ ಕುಡ್ಯಕೆ ಬಾಕನ, ಹರ್‌ಂಡಿದ ಹೊಡಿ ಮೇಲೆ ಹೆಜ್ಜೆ ಗುರ್ತ ಮೂಡಿದೇಂತ ಹಿರ್‍ಯರ ನಂಬಿಕೆ ಗಡ. ಆ ಮೇಲೆ ಎಲ್ಲೋವೂ ಅಲ್ಲಿಂದ ಮನೆ ಹೊರಗೆ ಬಂದ್ ಸೂರಡಿ ಅಡಿಲಿ ನಿತ್ತ್, ಒಂದು ಚೊಂಬು ನೀರ್‌ನ ಮೆಟ್ಲ್ ಮೇಲೆ ಇಸಿ, ಒಂಟಿ ಕಾಲ್‌ಲಿ ನಿತ್ತ್, ತಲೆ ಮೇಲೆ ಎರ್ಡ್ ಕೈನ ಅಂಗೈ ಮೇಲೆ ಮಾಡಿ ಬೆರ್ಳ್‌ಗಳ ಕೋಸಿಕಂಡ್ ಹಿಡ್ದ್, ಸತೀಶ ಗೌಡ್ರು

'ಅಪ್ಪಾ, ನೀರ್ ನೆರ್ಳ್‌ಗೆ ಇಸ್ಯೋಳೊ. ಬಂದ್ ನೀರ್ ಕುಡ್ದ್ ಹೋಗಿ, ಎಂತ ಮೂರ್ಮೂರು ಸಲ ಕರ್ದ್ ಹೇಳ್ದೊ. ಎಲ್ಲಾ ದೀಪ ಆರ್ಸಿ, ನೀರ್ ನೆರಳ್ ಇಸಿದ ಕೋಣೆನ ಬಾಕಿಲ್ ಬಂದ್ ಮಾಡ್ದೊ. ಕಾಲ್ದೀಪ ಮಾತ್ರ ಉರ್‍ಯತಿತ್ತ್. ಆ ಮೇಲೆ ನೀರ್ ನೆರ್ಳ್ ಇಸಿದ ಜಾಗೆಗೆ ಯಾರೂ ಹೋತ್ಲೆ. ಎಲ್ಲೋವೂ ಮೊಲ್ಗಿಕೆ ಹೋದೊ.

ನಡಿರ್ಳ್ ಕಳ್ದ ಮೇಲೆ ಅಡ್ಗೆವು, ನೀರ್ ನೆರ್ಳ್ ಇಸಿದ ಜಾಗೆಗೆ ಬಂದ್, ಸರ್ಕ್‌ನ ಸಾಮಾನ್‌ನ, ಒಂದು ತುಂಡು ಕುಂಬಳಕಾಯಿನ, ಬಾಳೆ ಕ್ಯಾನ ಅಲ್ಲಿಂದ ಅಡ್ಗೆಗೆ ತಕೊಂಡೋದೊ. ಇನ್ನೊಂದು ತುಂಡು ಕುಂಬಳಕ್ಯಾನ ಎರ್ಡ್ ತುಂಡು ಮಾಡಿ ಮೊಡ್ಯಾಳಂಗೂ, ಚೌರಿಂಜಂಗೂ ಕೊಡಿಕೆ ತೆಕೊಂಡೋದೊ. ಅದರೊಟ್ಟಿಗೆ ಒಂದೊಂದು ಪಾಡ ಬಾಳೆಕ್ಯಾನನೂ ಮೊಡ್ಯಾಳಂಗೆ ಹಾಂಗೂ ಚೌರಿಂಜಂಗೆ ತಕೊಂಡೋದೊ.

ಹನ್ನೊಂದ್ನೇ ದಿನ ಬೊಳ್ಪುಗೆ ಚೌರಿಂಜ ಬಂದ್ ಕುಟುಮದೊವರ ಚೌರ ಸುರು ಮಾಡ್ದೆ. ಎಲ್ಲೋವೂ ಗಡ್ಡ ಮಿಸೆ ಬೋಳ್ಸಿಕೊಂಡೊ. ಅಳ್ಯಂದರ್, ಮೊಮ್ಮಕ್ಕ ಸೋದರ ಅಳಿಯಂದರ್ ಎಲ್ಲಾ ಮಿಸೆನ ಬೋಳ್ಸಿಕಂಡೊ. ಎಲ್ಲರ ಚೌರ ಆದ ಮೇಲೆ ಚೌರಿಂಜ ಮನೆ ಎದ್ರ್‌ನ ಮೆಟ್ಟ್‌ಕಲ್ಲ್ ಮೇಲೆ ಒಂದು ಮಣೆನ ಇಸಿ, ಅದರ

ಮೇಲೆ ಕಾಲ್ದೀಪನ, ದೀಪದ ಕೊಡಿ ತೆಂಕ ದಿಕ್ಕ್‌ಗೆ ಬಾವ ಹಾಂಗೆ ಹೋಸಿ ಇಸಿ, ಒಂದು ಬೆಂಡ್ ಕುಕ್ಕೆಲಿ ಒಂದು ಸೇರ್ ಬೆಳ್ತಕ್ಕಿ, ಒಂದ್ ಕಾಯೆ, ಐದ್ ವೀಳ್ಯದೆಲೆ, ಒಂದು ಅಡ್ಕೆ , ಒಂದು ರೂಪಾಯಿನ ಪಾವೆಲಿ ಮತ್ತೆ ಒಂದು ಚೊಂಬು ನೀರ್ ಇಸಿದೊ. ಸತೀಶ ಗೌಡ್ರು, ಕುಟುಮದೊವು ಮತ್ತೆ ರಾಮಯ ದೊಡಪ, ಚಾಮಯ್ಯ ಮಾಸ್ತ್ರ ದೀಪದ ಎದ್ರ್ ನಿತ್ತೊ. ಅಷ್ಕೆ ಎದ್ರಾಗಿ ಊರ ಗೌಡ್ರು, ಊರೊವು ಚೌರಿಂಜ ನಿತ್ತೊ. ಸತೀಶ ಗೌಡ್ರು ಎಡಕೈ ಮುಂದೆ ಮಾಡಿ, ಬಲ ಕೈಯಿನ ಮುಚ್ಚಿಕಂಡ್, ಎಡ್ದ ಪುಡೆಂದ ಆರತಿ ಎತ್ತಿದಾಂಗೆ ಮಾಡಿ, ದೂಪೆ ಕೆಲ್ಸ ಮತ್ತೆ ಪಾಳಿ ತೆಗ್ಯಕೆ ಊರವರೊಟ್ಟಿಗೆ ಕೇಳಿ ಕಂಡವೆ. ಆ ಮೇಲೆ ದೀಪದ ಎದ್ರ್, ಹೆಗ್ಲ್‌ಲಿದ್ದ ಎರ್ಡ್ ಕುಂಟಿನ ನೆಲದ ಹಾಕಿ, ಅದರ ಮೇಲೆ ಮೊಣಕಾಲೂರಿ ಕುದ್ದೊ. ಚೌರಿಂಜ ಕೂಡಾ ಪಾಳಿ ತೆಗ್ಯಕೆ ಎಲ್ಲರ ಅಪ್ಪಣೆ ಕೇಳ್ದೆ. ಒಪ್ಪಿಗೆ ಸಿಕ್ಕಿದ ಮೇಲೆ ಹಂಜ ತಲೆ ಕೂದಲ್‌ನ ಬಾಳ್‌ಲಿ ಕೆರ್ಕಿ, ಅದರ ಕೆಳಗೆ ಇಸಿದ ಕೊಡಿ ಬಾಳೆಲೆಗೆ ಬೀಳುವ ಹಾಂಗೆ ತೆಗ್ದದೆ. ಅದರ ತೆಗ್ದ್ ಕಂಡ್ ಹೋಗಿ, ಕೂದೊಲು ತೆಗ್ಯವ ಜಾಗೆಗೆ ಹೋಗಿ ಇಸಿದೆ. ಅಲ್ಲಿಗೆ ಸತೀಶ ಗೌಡ್ರ ಕರ್ದ್ ಕುದ್ರಿಸಿ, ಇಡೀ ತಲೆ ಬೋಳಿಸಿ ಮಂಡೆ ಮಾಡಿ, ಗಡ್ಡ, ಮಿಸೆ ಬೋಳ್ಸಿದೆ. ಚೌರ ಆದ ಮೇಲೆ ಒಂದು ಕೊಡ್ಪಾಣ ನೀರ್‌ನ ಸತೀಶ ಗೌಡ್ರು ತಲೆ ಮೇಲೆ ಹ್ಯೊಕೊಂಡೊ. ಇನ್ನೊಂದು ಕೊಡ್ಪಾಣ ನೀರ್ ತಕಂಡ್ ಗುರ್ಜಿ ಹಕ್ಕಲೆ ಹೋದೊ. ಅದರ್‌ಂದ ಮುಂದೆನೆ ಊರ ಗೌಡ್ರು ಕುಟುಮಸ್ತರ ಕರ್ಕಂಡ್ ಗುರ್ಜಿ ಹಕ್ಕಲೆ ಹೋಗಿದ್ದೊ. ಗುರ್ಜಿ ಎದ್ರ್ ಸರೋಳಿ ಕಣೆನ ಕುತ್ತಿದೊ. ಊರೊವು ಗುರ್ಜಿ ಸುತ್ತೋಳು ಬೆದ್ರ್‌ನ ಕಂಬ ಹಾಕಿ ಅಟ್ಟಳಿಕೆ ಕಟ್ಟಿದ್ದೊ. ಅಟ್ಟಳಿಕೆ ಮೇಲೆ ಮೊಡ್ಯಾಳ ಸುತ್ತೋಳು ಮಡಿ ಸೀರೆ ಹೊದಿಸಿತ್. ಮಾಯ್ಯ್ನ ಸೊಪ್ಪುಲಿ ತೋರಣ ಮಾಡಿ ಕಟ್ಟಿದ್ದೊ. ಎದ್‌ರಿಗೆ ಎರ್ಡ್ ಗೊನೆ ಇದ್ದ ಬೂದಿ ಬಾಳೆನ ಕಟ್ಟಿದ್ದೊ. ಬೆದ್ರ್ ಕೊಡಿನ ಮೂರು ಸೀಳ್ ಮಾಡಿ ಗುರ್ಜಿ ಹಕ್ಕಲೆ ಕುತ್ತಿ ಅದರ ಮೇಲೆ ಚಾಳೆನ ಪಿಂಗಾರನ ಒಡ್ದ್ ಅರ್ಳಿಸಿ ಇಸಿ ಕಟ್ಟಿದ್ದೊ. ಇದರೆಲ್ಲಾ ಊರೊವು ಸತೀಶ ಗೌಡ್ರು ಅಲ್ಲಿಗೆ ಬಾಕೆ ಮುಂದೆನೇ ಮಾಡಿ ಇಸಿದ್ದೊ. ಸತೀಶ ಗೌಡ್ರು ಗುರ್ಜಿ ಹಕ್ಕಲೆ ಬಂದ್ ಗುರ್ಜಿ ಎದ್ರ್ ಸರ್ಳಿ ಕಣೆ ಕುತ್ತಿ, ಗುರ್ಜಿಗೆ ಮೂರು ಸಲ ಸುತ್ತು ಬಂದ್ ಕೈ ಮುಗ್ದ್ ಅವು ತಕೊಂಡೋದ ನೀರ್‌ನ ತಲೆಗೆ ಹೊಯ್ಕೊಂಡೊ. ಅಲ್ಲಿಂದ ಎಲ್ಲೋವು ಕೆರೆಲಿ ಮಿಾದ್ ಜಾಲ್‌ಗೆ ಬಂದೊ. ಇಜ್ಜೆಲಿಲಿ ಎರ್ಡ್ ಮೊಣ್ಣ್‌ನ ಮೊಡ್ಕೆಲಿ ನೀರ್ ತುಂಬಿಸಿ ಬೈ ಹುಲ್ಲುನ ಸುಂಪೆ ಮೇಲೆ ಇಸಿದ್ದೊ. ಒಂದ್ ಮೊಡ್ಕೆಲಿ ಮಾಯ್ಯ್ನ ಸೊಪ್ಪುನನೂ, ಇನ್ನೊಂದರ್ಲಿ ಹಲ್ಸಿನ ಸೊಪ್ಪಿನ ಜೊಂಪೆನನೂ ಮುಣ್‌ಂಗಿಸಿ ಇಸಿದ್ದೊ. ಮಾಯ್ಯ್ನ ಸೊಪ್ಪು ಇಸಿದ್ದ ಮಡ್ಕೆನ ನೀರ್‌ನ ಊರೊವು, ಮತ್ತೆ ಹಲ್ಸಿನ ಸೊಪ್ಪು ಇಸಿದ್ದ ಮಡ್ಕೆ ನೀರ್ನ ಕುಟುಮದೊವು ತಲೆಗೆ

ಸೊಪ್ಪಿನ ಕೊಡಿಲಿ ಚಿಪ್ಪುಸಿಕೊಂಡೊ.

ಕ್ರೊಸ್ಲಕ್ಕಿ ಹುಗ್ಗಿನ ಮೂರ್ ಮುದ್ದೆಗಳ ಮಾಡಿ, ಬಾಳೆಲೆ ಮೇಲೆ ಇಸಿದ್ದೊ. ಒಂದು ಮುದ್ದೆ ಅರ್ಸಿಣ ಹೊಡಿ ಮಿಸ್ರ ಮಾಡಿ ಕಟ್ಟಿದ್ದ್. ಇನ್ನೊಂದು ಮುದ್ದೆನ ಮೊಸಿ ಹೊಡಿ ಸೇರ್ಸಿ ಕಟ್ಟಿದ್ದ್. ಮತ್ತೊಂದ್ ಮುದ್ದೆ ಹಾಂಗೆ ಇತ್ತ್. ಚಿನ್ನಮ್ಮತ್ತೆ ತಲೆ ಹರ್‌ಂಡಿಕಂಡ್ ಆ ಬಾಳೆಲೆನ ಕೈಲಿ ಹಿಡ್ಕಂಡ್ ಸತೀಶ ಗೌಡ್ರ ಹಕ್ಕಲೆ ತಂದೊ. ಗೌಡ್ರು ಮೊಸಿ ಹೊಡಿ ಹಾಕಿ ಕಟ್ಟಿದ್ದ ಮುದ್ದೆನ ಎಡ್ಡ ಕೈಲಿ ತಕಂಡ್, ಎಡ ಪುಡೆಂದ ತಲೆಗೆ ಮೂರು ಸುತ್ತು ತಂದ್ ತಲೆನ ಹಿಂದೆಗೆ ಬಿಸಾಡಿಕೆ ಊರು ಗೌಡ್ರು ಹೇಳ್ದೊ. ಅವು ಹೇಳ್ದಾಂಗೆ ಇವು ಮಾಡ್ದೆ. ಆಗ ಮೊಡ್ಯಾಳ ಅವರ ಕೈಗೆ ನೀರ್ ಹಾಕಿ ಸುದ್ದ ಮಾಡ್ದೊ. ಅದೇ ರೀತಿಲಿ ಊರೊಂವ ಒಬ್ಬ ಅರ್ಸಿಣ ಹೊಡಿನ ಮಿಶ್ರ ಮಾಡ್ದ ಹುಗ್ಗಿನ ಮುದ್ದೆನ ತಲೆ ಸುತ್ತು ಎಡ್ಡ ಪುಡೆಂದ ತಂದ್ ತಲೆನ ಹಿಂದಕೆ ಬಿಸಾಡ್ದೆ. ಅಕೆರಿಗೆ ಬಾಳೆಲೆಲಿ ಒಳ್ದ ಹುಗ್ಗಿ ಮುದ್ದೆನ ಸತೀಶ ಗೌಡ್ರು ನಿತ್ತ ಜಾಗೆಲಿ ತೆಂಕ ಬಡ್ಗ ನಿತ್ತ್ ಬಾಳೆಲೆನೊಟ್ಟಿಗೆ ಮುದ್ದೆ ಮಾಡಿ ಎಡ್ಡ ಪುಡೆಂದ ಮೂರ್‍ಮೂರು ಸುತ್ತು ತಂದ್ ಚಿನ್ನಮ್ಮತ್ತೆ ಬಿಸಾಡಿವೆ. ಆಗ ಅವರ ತಲೆಗೆ ಒಂದು ಕೊಡ್ಪಾಣ ನೀರ್ನ ಮನೆವು ಹೊಯ್ದವೆ. ಆ ಮೇಲೆ ಊರ ಗೌಡ್ರು ಸತೀಶ ಗೌಡ್ರ ಮನೆ ಮೆಟ್ಟ್ ಕಲ್ಲ್ ಮೇಲೆ ಕುದ್ರಿಸಿದೊ. ಅವರ ತಲೆ ಮೇಲೆ ಒಂದು ಸೇರ್ ಬೆಳ್ತಕ್ಕಿ ಹಾಕಿಸಿದ ಒಂದು ಬೆಂಡು ಕುಕ್ಕೆನ ಇಸುವೆ. ಚಿನ್ನಮ್ಮತ್ತೆ ಚಂಡಿ ಮೈಲಿ ಒಂದು ಚೊಂಬು ನೀರ್ನ ಸತೀಶ ಗೌಡ್ರ ತಲೆ ಮೇಲೆ ಇಸಿದ ಬೆಂಡು ಕುಕ್ಕೆಲಿದ್ದ ಅಕ್ಕಿಗೆ ಹ್ಯೊದೊ. ನೀರ್ ಬೀಳಿಕನ ಬೆಂಡ್ ಕುಕ್ಕೆನ ಕೆಳಗೆ ಹಿಡ್ಯಕೆ ಹೇಳ್ದೊ. ತಲೆಗೆ ನೀರ್ ಹೊಯ್ಯಕೆ ಹೇಳ್ದೊ. ತಲೆಗೆ ಬಿದ್ದ ನೀರ್ ಬೆಂಡ್ ಕುಕ್ಕೆ ಬೀಳುವ ಹಾಂಗೆ ಹೊಯ್ಯಕೆ ಹೇಳ್ದೊ. ಆಗ ಅಕ್ಕಿ ಎಲ್ಲಾ ಚಂಡಿ ಆದೆ.

ಮೊಡ್ಯಾಳ ನೀರ್ ನೆರ್‍ಳಲಿ ಇಸಿದ ಜಾಗೆಲಿ ಒಂದು ಮಣೆ ಮೇಲೆ ದೀಪ ಹೋಸಿ ಇಸಿದೆ. ಇನ್ನೊಂದು ಮಣೆ ಮೇಲೆ ಮಡಿ ಬಟ್ಟೆ ಹಾಕಿ ಅದರ ಮೇಲೆ ಕಂಚಿನ ಬಟ್ಲ್ ಇಸಿದ್ದೊ. ಅಲ್ಲಿಗೆ ಸತೀಶ ಗೌಡ್ರ ಕರ್ಕಂಡ್ ಬಂದೊ. ಗೌಡ್ರು ಅಕ್ಕಿ ಇದ್ದ ಬೆಂಡ್ ಕುಕ್ಕೆನ ಹೊತ್ತ್‌ಕಂಡ್ ಬಂದ್ ಮಣೆ ಮೇಲೆ ಇಸಿದ ಕಂಚಿನ ಬಟ್ಲ್‌ಗೆ ಸೊರ್ಗಿಕೆ ಹೇಳಿವೆ. ಸತೀಶ ಗೌಡ್ರು ಹೆಗ್ಲ್ ಮೇಲೆ ಇದ್ದ ಕುಂಟಿನ ನೆಲದ ಮೇಲೆ ಇಸಿ, ಅದರ ಮೇಲೆ ಮೊಣಕಾಲೂರಿ, ಬಟ್ಲ್‌ಗೆ ಕುಕ್ಕೆಲಿದ್ದ ಅಕ್ಕಿನ ಎಲ್ಲಾ ಸೊರ್ಗುವೆ. ಅದ್ಕೆ ಮೊಡ್ಯಾಳ ಎರ್ಡ್ ಬಾಳೆಲೆ, ಅರ್ಸಿಣದ ಹೊಡಿ, ಊದುಬತ್ತಿ, ನೆನ್ಸಿದ ನೆಣೆಗ, ಕಿಚ್ಚಿನ ಪೆಟ್ಟಿಗೆ ಐದ್ ವೀಳ್ಯದೆಲೆ, ಒಂದು ಅಡ್ಕೆ ಇಸಿದೆ. ಈ ಬಟ್ಲ್‌ನ ಮಣೆ ಮೇಲೆ ಹಾಸಿದ ಮಡಿ ಬಟ್ಟೆಂದ ಗೌಡ್ರು ಕಟ್ಟುವೆ. ಕುಂಟಿನ ಎಡ್ಡ ಹೆಗ್ಲ್‌ಗೆ ಹಾಕಿಕಂಡವೆ. ಆ ಮೇಲೆ ಸತೀಶ ಗೌಡ್ರ ಒಟ್ಟಿಗೆ ಕುಟುಮದೊವೆಲ್ಲಾ ನಾರಾಯಣ, ನಾರಾಯಣ,

ನಾರಾಯಣ– ಎಂತ ಹೇಳಿಕಂಡ್ ಅದಕ್ಕೆ ಮೂರು ಸಲ ಎಡಪುಡೆಂದ ಸುತ್ತುವೆ. ಅಕ್ಕಿ ಕಟ್ಟಿದ ಕಂಚಿನ ಬಟ್ಲ್‌ನ ರಾಮಯ್ಯ ದೊಡಪ, ಸತೀಶ ಗೌಡ್ರ ಎಡ ಹೆಗ್ಲ್‌ಲಿ ಇಸಿವೆ. ಈಗ ಎಲ್ಲೋವು ಗುರ್ಜಿ ಹಕ್ಕಲೆ ಹೊರ್ಟವೆ. ಮೊಡ್ಯಾಳ ಮುಂದೇನೇ ಮಾಡಿ ಇಸಿದ ನಿಶಾನೆನ ಹಿಡ್ಕಂಡ್ ಊರೊವು ಮುಂದೆ ಹೊರ್ಟವೆ. ಸತೀಶ ಗೌಡ್ರ ತಲೆ ಮೇಲೆ ಬಾವ ಹಾಂಗೆ ಕುಟುಮದೊವು ಅವರ ಹಿಡ್ಕಂಡ್ ಹಿಂದೆಂದ ಹೋದವೆ. ನಿಶಾನೆಂತೇಳ್ರೆ ಬೆದ್ರ್‌ನ ಕಡ್ಡಿಗಳಿಗೆ ಮಡಿ ಬಿಳಿ ಬಟ್ಟೆನ ಅಗಲಲಿ ಬಾವ ಹಾಂಗೆ ಕಟ್ಟಿ, ಬೆದ್ರ್‌ನ ಕಡ್ಡಿಗಳಿಗೆ ಬಾಳೆಕ್ಯಾ, ಕುಂಬಳಕ್ಯಾ ಹೋಳುಗಳ, ವೀಳ್ಯದೆಲೆ, ಅಡ್ಕೆ ಇದರ ಸುರ್ದ್ ಕಟ್ಟಿ ಮೊಡ್ಯಾಳ ಇದರ ತಯಾರಿಸಿ ಇಸಿತ್ತ್. ಬಂದು – ಬಳಗ ತಂದ ತಿಂಡಿಗ ಅಲ್ಲದೆ ಮೂರು ಬಗೆನ ಅಕ್ಕಿ, ಹಿಟ್ಟ್, ಚಪ್ಪೆ, ಕಾರ ಹಾಕಿದ್, ಉಪ್ಪು ಹಾಕಿದ್ – ಇದರನೂ ತಕಂಡ್, ಬೊಜ್ಜಕ್ಕೆ ಮಾಡ್ದ ಎಲ್ಲಾ ಅಡ್ಗೆಗಳ ತೆಂಗಿನ ಕಾಯೆನ ಹೆಣ್ಣ್ ಚಿಪ್ಪಿಲಿ ತುಂಬಿಸಿಕಂಡ್, ಒಬ್ಬೊಬ್ಬ ಒಂದೊಂದು ಬಗೆನ ಹಿಡ್ಕಂಡ್, ಗುರ್ಜಿ ಹಕ್ಕಲೆ ಹೋದೊ. ದಾರಿಲಿ ಹೋಕನ, ಹೆಣ ಹೊತ್ತ್‌ಕೊಂಡ್ ಹೋಕನ ಕಲ್ಲ್‌ನ ಅಡಿಲಿ ಇಸಿದ ಎಲಾಡ್ಕೆನ ತೆಗ್ದ್ ಬಿಸಾಡಿ, ಅದರ ಅಡಿಲಿ ಕಂಚಿನ ಬಟ್ಲ್‌ಲಿ ಇದ್ದ ಎಲಾಡ್ಕೆನ ಇಸಿಕೆ ಹೇಳಿವೆ,

ದೂಪೆ ಹಕ್ಕಲೆ ಹೋಗಿ ಎಲ್ಲೋವು ನಾರಾಯಣ, ನಾರಾಯಣ, ನಾರಾಯಣ – ಎಂತ ಹೇಳಿಕಂಡ್ ಎಡ್ಡ ಪುಡೆಂದ ಮೂರು ಸುತ್ತು ಬಂದ್, ತಕೊಂಡೋದ ನಿಶಾನೆನ ಮುರ್ದ್ ಇಟ್ಟವೆ. ತಿಂಡಿ, ತಿನ್ಸ್, ಬೆಂಡ, ಮಾಡ್ದ ಅಡ್ಗೆಗಳ ಗುರ್ಜಿ ಸುತ್ತೋಳೂ ಇಸಿದೊ. ಮೊಡ್ಯಾಳ ಬಿಳಿ ಮಡಿ ಬಟ್ಟೆನ ಗುರ್ಜಿಗೆ ಹೊದಿಸಿತ್. ಕೊಟ್ಟ ಹೆಣ್ಮಕ್ಕ ಗುರ್ಜಿನ ಸುತ್ತೋಳು ಕಟ್ಟಿದ ಅಟ್ಟಳಿಕೆಲಿ, ಚಿಪ್ಪಿನ ತುಂಡುಲಿ ನೆನ್ಸಿದ ನೆಣೆನ ಹೋಸಿ ಇಸುವೆ. ಸತೀಶ ಗೌಡ್ರು ಗುರ್ಜಿನ ಎದ್ರ್ ಕುಂಟಿನ ಹಾಸಿ, ಅದರ ಮೇಲೆ ಮೊಣಕಾಲೂರಿ ಕುದ್ದ್ ಕಟ್ಟಿ ತಂದ ಕಂಚಿನ ಬಟ್ಲ್‌ನ ಇಸಿ ಕಟ್ಟ್‌ನ ಬಿಚ್ಚಿವೆ. ತಕಂಡ್ ಬಂದ ಬಾಳೆಲೆನ ಹಾಸಿ, ಕೈನ ಹಿಂದೆ ತಾಕನ ಮೊಡ್ಯಾಳ ಕೈಗೆ ನೀರ್ ಹಾಕಿದೆ. ಬಟ್ಲ್‌ಂದ ಬೊಗಸೆ ತುಂಬಾ ಅಕ್ಕಿನ ತೆಗ್ದ್ ಹಾಸಿದ ಬಾಳೆಲೆಗೆ ಹಾಕುವೆ. ಮತ್ತೆ ಮುಂದೆನ ಹಾಂಗೆ, ಕೈ ಹಿಂದೆ ತಂದ್ ಕೈ ತೊಳ್ದ್, ಬೊಗಸೆನ ಮೊಗ್ಚಿ ಹಿಡ್ದ್, ಮುಂಗೈಲಿ ಅಕ್ಕಿ ತೆಗ್ದ್ ಹಾಕಿವೆ. ಇನ್ನೊಮ್ಮೆ ಕೈ ತೊಳ್ದ್ ಬೊಗಸೆಲಿ ಅಕ್ಕಿ ಹಾಕುವೆ. ಒಂದು ಬೆಂಡ, ಐದ್ ವೀಳ್ಯದೆಲೆ, ಒಂದು ಅಡ್ಕೆ ಮತ್ತೆ ಎಂಣೆಲಿ ನೆಂದ ನೆಣೆನ ಹೋಸಿ ಇಸುವೆ. ಬಟ್ಲ್‌ಲಿ ಒಳ್ದ ಅಕ್ಕಿಗೆ ಕಟ್ಟಿ ತಂದ ಅರ್ಸಿಣದ ಹೊಡಿ ಹಾಕಿ ಕಲ್ಸುವೆ. ಇದೆಲ್ಲಾ ಆದ ಮೇಲೆ ಚಿಪ್ಪಿನ ತುಂಡುಲಿ ಎಂಣೆಲಿ ನೆಂದ ನೆಣೆಗಳ ಸುತ್ತೋಳು ಹೋಸಿ ಇಸುವೆ. ಸತೀಶ ಗೌಡ್ರು ಕುಂಟಿನ ಬಲ್ದ ಹೆಗ್ಲ್‌ಗೆ ಹಾಕಿ, ಎದ್ದ್ ಬಟ್ಲ್‌ನ ಕುಂಟಿನ ಮೇಲೆ ಇಸುವೆ. ಆಗ ಕುಟುಮದೊವೆಲ್ಲಾ ಅದರ್‌ಂದ ಅಕ್ಕಿನ

ತಕಂಡ್ ನಾರಾಯಣ, ನಾರಾಯಣ, ನಾರಾಯಣ – ಎಂತ ಹೇಳಿಕಂಡ್ ಗುರ್ಜಿಗೆ ಎಡ್ದ ಕೈಲಿ ಅಕ್ಕಿನ ಬಿಸಾಡಿಕಂಡ್ ಮೂರು ಸುತ್ತು ಎಡ್ದ ಪುಡೆಂದ ಬಂದವೆ. ಸತೀಶ ಗೌಡ್ರು ಕಾಲಿ ಬಟ್ಲ್‌ನ ಗುರ್ಜಿನ ಎದ್ರ್ ಕಂಕಣೆ ಹಾಕಿ, ಕುಂಟಿನ ಅಡ್ಡ ಹಾಕಿ, ಮೊಣಕಾಲೂರಿ, ತಲೆ ಮೇಲೆ ಅಂಗೈ ಮೇಲೆ ಬಾವ ಹಾಂಗೆ ಕೈ ಬೆರ್ಳ್‌ಗಳ ಕೋಸಿಕಂಡ್ ಕುದ್ದವೆ. ಮೊಡ್ಯಾಳ ಊರ ಗೌಡ್ರಿಗೆ, ಕುಟುಮಸ್ತರ ಕೈಗೆ ನೀರ್ ಕೊಟ್ಟ್ ಬೆಳ್ತಕ್ಕಿ ಕೊಟ್ಟದೆ. ಈಗ ಸತ್ತೌವ್ನ ಸೊರ್ಗಕ್ಕೆ ಸಲ್ಲಿಸುವ ಕಾರ್ಯಕ್ರಮನ ಹೇಳಿಕೆ ಅಯ್ಯಣ್ಣ ಮಾಸ್ಟ್ರಿಟ್ಟಿಗೆ ಹೇಳ್ದೊ. ಅವು ಕೈಲಿ ಅಕ್ಕಿನ ಹಿಡ್ಕಂಡ್ ಎರ್ಡ್ ಕೈನ ಜೋಡ್ಸಿಕಂಡ್ ಮುಂದೆ ಬಂದ್ ನಿತ್ತ್,

"ಇಂದ್ ನಮ್ಮ ಕುಟುಮದ ಹಿರ್‍ಯರ್, ದೊಡಪ ಸೋಮಯ್ಯ ಗೌಡ್ರ ಹನ್ನೊಂದನೆ ದಿನ. ಬೊಜ್ಜದ ದಿನ. ನೀವು ನಮ್ಮ ಹಿರ್‍ಯರ್ ಕುಕ್ಕಪ್ಪಜ್ಜನ ಮನೆತನಲಿ ಹಿರಿ ಮಂಜ ಆಗಿ ಹುಟ್ಟಿ, ಆಗನ ಕಾಲಲಿ ಎಂಟ್ನೇ ಕ್ಲಾಸ್ ಮುಟ್ಟ ಓದಿ, ಎಲ್ಲೋವ್ಕೂ ಬೇಕಾದೊವಾಗಿ, ಇಪ್ಪತ್ತೆರ್ಡ್ ವೊರ್ಸಲಿ ನಮ್ಮ ದೊಡವನ ಕೈ ಹಿಡ್ದ್, ಕೀರ್ತಿಗೊಬ್ಬ ಮಂಜ, ಆರತಿಗೊಬ್ಬು ಮಗ್ಳ್‌ಂತ ಇಬ್ರೊರು ಮಕ್ಕಳ ಪಡ್ದ್, ಅವರ ಸಾಂಕಿ ಬೆಳ್ಸಿ, ಮೊದುವೆ ಮಾಡಿ ಸಂಸಾರಸ್ತರನ್ನಾಗಿ ಮಾಡ್ದ ಪುಣ್ಯಾತ್ಮರ್. ದಾನ, ದರ್ಮ ಯಾವುದರ್ಲೂ ಕಮ್ಮಿ ಮಾಡದೆ ಕುಟುಮದೋರ, ಊರೋವ್ರ, ನೆರೆಕರೆಯವ್ರ ಕೈಲಿ ಒಳ್ಳೆ ಹೆಸ್ರ್ ಪಡ್ದ್ ಬಾಳಿ ಬೊದ್ಕಿದೆರಿ. ಹುಟ್ಟಿದಂವ ಸಾಯಲೇ ಬೇಕ್. ಅವರ ಹಾಂಗೆ ದೀರ್ಘಕಾಲ ಬೊದ್ಕಿ ಈ ತೊಂಬತ್ತ್‌ನೇ ವೊರ್ಸಲಿ ಯಾರಿಗೂ ಕಸ್ಟಕೊಡದೆ ಸೊರ್ಗ ಸೇರಿದರಿ. ಆ ದಿನ ಮನೆನೂ, ನೆಂಟ್ರ್‌ಗ, ಊರೊವು ನೀವುಗೆ ಅಕೆರಿನ ನೀರ್‌ಂತ ಕಂಚಿನ ಬಟ್ಲ್‌ಲಿ ಅಕ್ಕಿ, ನೀರ್ ಹಾಕಿ ತೊಳ್ಸಿ ಕೊಡಿಲಿ ನೀರ್ ಕೊಟ್ಟ್, ಬೆಳ್ದ್ ಅರ್ವೆ ಹೋಸಿ, ಕಾಯೆ ಒಡ್ದ್, ತಲೆ, ಕಾಲ್ ಬಾಗಲಿ ದೀಪ ಹೋಸಿ, ಊರೋವ್ಕೆಲ್ಲಾ ತಿಳ್ಯಕೆ ಜೋಡು ಗುಂಡು ಹಾರ್ಸಿದ ಸಂಗತಿ ತಿಳ್ದ ಊರೊವು, ಮೂಲದವರ ಕರ್ದ್ ಕತ್ತಿಕೊಟ್ಟ್, ನೆರೆಕರೆಯವರ ಕರ್ದ್ ಆಚೆ ಕರೆಂದ ಮಾಯ್ನ ಮರ, ಈಚೆಕರೆಂದ ಹಲ್ಸಿನ ಮರ ಕಡ್ದ್ ಸೊಯ್ದೆ ಮಾಡ್ಸಿದೊ. ನಿಮ್ಮ ಮಿಾಸಿ ಮನೆ ಒಳಗೆ ಮೊಲ್ಗಿಸಿ, ಅಕ್ಕಿ– ಬತ್ತ ಕಟ್ಟಿ, ತಲೆ ಕಡೆಂದ ಊರೊವು, ಕಾಲ್ನ ಕಡೆಂದ ಕುಟುಮದೊವು ಚಟ್ಟಲಿ ಹೊತ್ತ್ ತಂದ್, ಕಾಟಲಿ ಮೊಲ್ಗಿಸಿ, ಸಂಸ್ಕಾರಗಳ ಮಾಡಿ, ತಲೆ ಕಡೆಂದ ಊರೊವು ಕಾಲ್ನ ಕಡೆಂದ ಕುಟುಮದೊವು ಕಿಚ್ಚಿಕೊಟ್ಟೊ. ಸತ್ತ ಹೆಣ ಕಿಚ್ಚಿಲಿ ಬೂದಿ ಆಗಿ ಮೊಣ್ಣ್ ಸೇರ್ತ್. ಕಿಚ್ಚಿನ ಹೊಗೆ ಮೋಡ ಆಗಿ, ಆತ್ಮ– ಪರಮಾತ್ಮನೊಟ್ಟಿಗೆ ಸೇರ್ತ್. ಮಾರ್ನೆ ದಿನ ಕೊಳ್ಳಿ ಕೂಡಿ ಹಾಲ್ತುಪ್ಪ ಹೊಯ್ದ್, ಮೂರ್ನೇ ದಿನ ಜಾತಿ ಪದ್ದತಿ ಪ್ರಕಾರ, ಚೌರಿಂಜ, ಮೊಡ್ಯಾಳನ ಕರ್ದ್ ಬೂದಿ ಸುದ್ದ ಮಾಡಿ ದೂಪೆ ಮೆತ್ತಿ ಸೋದರರದೊವು ಸರ್ಳಿ ಕಣೆ ಕುತ್ತಿ ತೊಂಪು ಮಾಡ್ದೊ.

ಪಾಳಿಗೆ ನಿತ್ತ ನಿಮ್ಮ ಮಂಜ ಹತ್ತನೇ ದಿನ ಕುಂಬ್ಳಕಾಯಿ ಕೆಡ್ಡ್, ನೀರ್ ನೆರ್ಳ್‌ಗೆ ಇಸಿ, ನಿಮ್ಮ ನೀರ್ ಕುಡ್ಯಕೆ ಕರ್‍ದೊ. ನಾವು ನಂಬಿದಾಂಗೆ ನೀವು ಬಂದ್ ನೀರ್ ಕುಡ್ಡ್, ಹೋದರೀಂತ ಗ್ರೇಸುವೆ. ಇಂದ್ ಹನ್ನೊಂದನೆ ದಿನ ನಿಮ್ಮ ಕುಟುಂಬದೊವು, ಸ್ನೇಹಿತರ್, ಬಂದು ಬಳಗದೊವು ಬಂದ್‌ದ್ ಸೇರಿ, ನೀವುಗೆ ಇಷ್ಟ ಆದ ತಿಂಡಿ, ತಿನ್ಸ್‌ನ ಮಾಡಿ ತಂದ್ ಇಸ್ಯೊಳೊ. ಇದರೆಲ್ಲಾ ನೀವು ಸ್ವೀಕಾರ ಮಾಡಿ ನಿಮ್ಮ ಈ ಲೋಕದ ಆಸೆಗಳ ತೀರ್ಸಿಕಣಿ. ನೀವು ಇಲ್ಲಿನ ಆಸೆಗಳ ಬುಟ್ಟ್‌ದ್ ಸೊರ್ಗಕ್ಕೆ ಹೋಗಿನಿ. ನಿಮ್ಮ ಜೀವನಲಿ ಏನಾದರ್ ತಿಳ್ದೋ, ತಿಳ್ಯದೆನೋ ಮಾಡ್ದ ತೊಪ್ಪುಗ ಇದ್ದರೆ ನಿಮ್ಮ ಮಂಜ ಹತ್ತ್ ದಿನ ವೃತಲಿ ನಿತ್ತ್, ತಲೆ ಬೋಳ್ಸಿ, ಕರ್ಮ ಮಾಡ್ದರ್ಲಿ, ಮುಂದೆ ನಾವು ತಲೆಕಾವೇರಿಲಿ ಮಾಡುವ ಪಿಂಡ ಹಾಕುವ ಕಾರ್‍ಯಲಿ ಪರಿಹಾರ ಆಗಲಿ. ನೀವು ಕ್ಷುದ್ರ ಶಕ್ತಿಗಳ ಕೈವಶ ಆಗದೆ, ಮುಂದೆನ ಜಲ್ಮಂತ ಒಂದು ಇದ್ದರೆ, ಮೊಡ್ಯಾಳನ ಕಲ್ಲಾಗದೆ, ಹಾರಂವನ ಆಳಾಗದೆ, ಗಾಣದ ಎತ್ತಾಗದೆ, ಚೌರಿಂಜನ ಮುಟ್ಟಾಗದೆ, ಬಾಳೆ ಪಾಲಲಿ, ಮಾಲ್‌ನ ಕೈತಾಂಗಲಿ, ಶ್ರೀ ಮನ್ನಾನಾರಾಯಣನ ಪಾದದಡಿಲಿ ಸೊರ್ಗ ಸೇರಿನಿ– ಎಂತ ನಾವೆಲ್ಲಾ ಕೇಳಿಕಂಡವೆ, ಸೊರ್ಗಕ್ಕೇ ಹೋಗಿ, ಸೊರ್ಗಕ್ಕೇ ಹೋಗಿ, ಸೊರ್ಗಕ್ಕೇ ಹೋಗಿ –ಎಂತ ಮೂರ್ಮೂರು ಸರ್ತಿ ಅಕ್ಕಿನ ಗುರ್ಜಿ ಮೇಲೆ ಹಾಕಿದೊ. ಆಗ ಅಲ್ಲಿ ಸೇರ್‍ದೋವೆಲ್ಲಾ ಸೊರ್ಗಕ್ಕೇ ಹೋಗೀಂತ ಮೂರ್ಮೂರು ಸರ್ತಿ ಹೇಳಿ, ಕೈಲಿದ್ದ ಅಕ್ಕಿನ ಗುರ್ಜಿ ಮೇಲೆ ಹಾಕಿದೊ. ಸತೀಶ ಗೌಡ್ರು ಮೂರು ಸಲ ನೆಲಕ್ಕೆ ಎರ್ಡ್ ಕೈನ ಬೊಡ್ಡ್,

'ಅಪ್ಪಾ ಸೊರ್ಗಕ್ಕೇ ಹೋಗಿ, ಸೊರ್ಗಕ್ಕೇ ಹೋಗಿ, ಸೊರ್ಗಕ್ಕೇ ಹೋಗಿ' – ಎಂತ ಹೇಳಿವೆ. ಆಗ ಅವರ ಸೊರ ಗೊರಗೊರ ಹೇಳಿ, ಕಣನೀರ್ ತುಂಬಿಕಂಡ್ ಬಾತ್. ಅಯ್ಯಣ್ಣ ಮಾಸ್ಟ್ರ ಅಣ್ಣನ ತೊಬ್ಬಿಕಂಡ್ ಎದ್ರಿಸಿದೊ. ಮಕ್ಕ ಮೊರಿಗ ಎಲ್ಲಾ ಗುರ್ಜಿಗೆ ಅಡ್ಡ ಬಿದ್ದ್ ಸೊರ್ಗಕ್ಕೆ ಸಲ್ಲಿಸುವೆ. ಅಲ್ಲಿ ಕಂಕಣೆ ಹಾಕಿದ ಹರಿವಾಣ ಮತ್ತೆ ಗುರ್ಜಿ ಮೇಲೆ ಹಾಕಿದ ಅರ್ರ್ವೆನ ಮೊಡ್ಯಾಳ ತಕಂಡವೆ. ಆ ಮೇಲೆ ಎಲ್ಲೋವೂ ಅಲ್ಲೆ ಹಕ್ಕಲೆಲಿ ಇದ್ದ ಕೆರೆಲಿ ಮುಣ್‌ಂಗಿದ್ ಮಿಾದೊ.

ಮಿಾದ್ ಎಲ್ಲೋವೂ ಮನೆ ಮುಂದೆ ಇದ್ದ ಇಜ್ಜೆಲಿಗೆ ಬಂದೊ. ಮನೆಗೆ ಎದ್ರಾಗಿ ಮನೆವು ಮತ್ತೆ ಕುಟುಮದೊವು ನಿತ್ತೊ ಅವರ ಎದ್ರ್‌ಗೆ ಮೋರೆ ಮಾಡಿ, ಊರೊವು ಮತ್ತೆ ನೆಂಟ್ರ್‌ಗ ನಿತ್ತೊ. ನೊಡುಲಿ ಮೊಡ್ಯಾಳ ಒಂದು ಮಣೆ, ಒಂದು ಚೊಂಬು ನೀರ್ ದಳಿಯ ಇಸಿದೆ. ಸುರುಗೆ ಊರೋವ್ಕೆ ಕಾಲ್ ಮತ್ತೆ ತಲೆ ಬಾಗಕ್ಕೆ ನೀರ್ ಚಿಮ್ಮುಸಿ, ಮತ್ತೆ ಅಕ್ಕಿನ ಹಾರ್ಸಿದೆ. ಅಕೆರಿಗೆ ಅವರ ಹಿಂದೆಂದ ಬಂದ್ ಅದೇ ರೀತಿಲಿ ಮಾಡ್ಡೆ. ಮಡಿ ದಳ್ಯಯ ಅರ್ರ್ವೆನ ಊರ್ ಗೌಡ್ರಿಗೆ ಕೊಟ್ಟದೆ. ಅದೇ ರೀತಿಲಿ ಮನೆಯವರನೂ ಸುದ್ದ ಮಾಡ್ಡೆ. ಮಡಿ ಅರ್ರ್ವೆನ ತಲೆ ಮೇಲೆ ಹೋಸಿಕಂಡ್

ಬಂದದೆ. ಅಸ್ಟಾಕನ ಊರು ಗೌಡ್ರು ಮನೆಯವ್ರ ಮೇಲೆ ಕುಟುಮದೋರ ಮೇಲೆ ಪುಣ್ಯಾರ್ಚನೆ ಚುಮುಕ್ಸಿಕಂಡ್ ಬಂದ್ರೊ. ಮತ್ತೊಬ್ಬ ಊರಂವ ಗಂದ – ದೂಪ ಮತ್ತೆ ಗಂದದ ಬೊಟ್ಟುನ ಎಲ್ಲೋವ್ಕೆ ಕೊಟ್ಟದೆ. ಪುಣ್ಯಾರ್ಚನೆನ ಮನೆನ ಎಲ್ಲಾ ಕಡೆ, ಹಟ್ಟಿ, ಕೊಟಗೆ, ಬಾಮಿಗೆ ಚುಮುಕ್ಸಿಕಂಡ್ ಬಂದ್ರೊ. ಮೊಡ್ಯಾಳ ಹೋಸಿದ ದಳಿಯ ಅರ್ವೆನ ಮನೆ ಮೆಟ್ಲ್‌ಕಲ್ಲ್ ಮೇಲೆ ಹಾಸಿದ್ರೊ. ಮನೆವೆಲ್ಲಾ ಅದರ ಮೆಟ್ಟಿಕಂಡ್ ಒಳಗೆ ಹೋದವೆ. ನೀರ್ ನೆರ್‍ಳ್ ಇಸಿದ ಜಾಗೆಲಿ ಮಣೆ ಮೇಲೆ ದೀಪ ಹೋಸಿ ಇಸುವೆ. ಒಂದು ಗಿಂಡಿಲಿ ಕಾಯೆಣ್ಣೆ ಇಸುವೆ. ಮೂರು ಸೇರ್ ಕ್ಯೊಸ್ಲಕ್ಕಿ, ಹತ್ತ್ ವೀಳ್ಯದೆಲೆ, ಎರ್ಡ್ ಅಡ್ಕೆ ಎರ್ಡ್ ಪಾವೆಲಿನ ಸಾ ಇಸುವೆ. ಸತೀಶ ಗೌಡ್ರು ತೆಂಕ ಮೋರೆ ಮಾಡಿ, ಮೊಣಕಾಲೂರಿ ಕುದ್ದವೆ. ಅಕ್ಕಿನ ದೀಪದ ಎದ್ರ್ ನೆಲಕ್ಕೆ ಸೊರ್ದವೆ. ಅವು ಅಕ್ಕಿನ ಒಂದ್ ಸೇರ್ ಅಳ್ದ್ ಎಡ್ದ ಪುಡೆಗೂ, ಇನ್ನೊಂದು ಸೇರ್‌ನ ಅಳ್ದ್ ಬಲ್ದ ಪುಡೆಗೂ ಸೊರ್ಗುವೆ. ಸೇರ್‌ನ ಕವುಂಚಿ ಹಾಕಿ ಅದರ ಹಿಂದೆಂದಳೂ ಅದೇ ರೀತಿ ಎರ್ಡ್‌ಪುಡೆಗೂ ಅಳ್ತೆ ಮಾಡಿ ಹಾಕುವೆ. ಒಳ್ದ ಅಕ್ಕಿನ ರಾಶಿ ಮಾಡಿ, ಕೈನ ಜೋಡ್ಸಿ, ನೊಡುಲಿ ಎರ್ಡ್ ಪಾಲ್ ಮಾಡಿ ಎಡ್ದ್, ಬಲ್ದ ರಾಶಿಗೆ ಸೇರ್ಸುವೆ. ಎರ್ಡ್ ರಾಶಿಗೂ ಐದ್ ವೀಳ್ಯದೆಲೆ ಒಂದು ಅಡ್ಕೆ, ಒಂದು ನಾಣ್ಯ ಇಸುವೆ. ಕೊಟ್ಟ ಹೆಣ್ಮಕ್ಕ, ಚಿನ್ನಮ್ಮತ್ತೆ, ಲಲಿತಕ್ಕ, ವಾರಿಜಕ್ಕ, ಗಿರಿಜಕ್ಕ, ವಸಂತಿ ಅಕ್ಕ ಜಯಂತಿ ಅಕ್ಕಂದರ್ ಎಲ್ಲಾ ಈ ರಾಶಿಗೆ ಕಾಣಿಕೆ ಹಣ ಹಾಕುವೆ. ಇದಾದ ಮೇಲೆ ಚೌರಿಂಜ ಊರ ಗೌಡ್ರ ಅಪ್ಪಣೆ ಕೇಳಿ, ಕರ್ಮಕ್ಕೆ ನಿತ್ತೋವ್ಕೆ ಗರಿಕೆ ಹುಲ್ಲ್‌ಲಿ ಮೊಣಕಾಲ್‌ಂದ ತಲೆಗೆ ಮುಟ್ಟ ಎಂಣೆ ಪೂಜಿ, ಮೊಡ್ಯಾಳ ಕೊಟ್ಟ ಬೈರಾಸ್‌ನ ಮುಂಡಾಸ್ ಕಟ್ಟಿದೆ. ಈಗ ಮೊಡ್ಯಾಳ ಬಂದ್ ಸತೀಶ ಗೌಡ್ರ ಕೈ ಮುಟ್ಟಿ ಎದ್ರಿಸಿ, ಉಡಿಕೆ ಮಡಿ ಬಟ್ಟೆ ಕೊಟ್ಟದೆ. ಅದರ ಉಟ್ಟ್‌ದ್ ಸತೀಶ ಗೌಡ್ರು ಉಟ್ಟ್‌ಕಂಡಿದ್ದ ಚಂಡಿ ಅರ್ವೆನ ಅಲ್ಲೇ ಬಿಚ್ಚಿ ಇಸುವೆ. ಮತ್ತೆ ಎರ್ಡ್ ಅಕ್ಕಿ ರಾಶಿಂದ ಚಿಟಿಕೆ ಅಕ್ಕಿ ತೆಗ್ದ್ ಸೇರಿಗೆ ಹಾಕಿ ಕೈ ಮುಗ್ದವೆ. ಅದಾದ ಮೇಲೆ ಬೊಜ್ಜದ ಊಟಕ್ಕೆ ಮುಂದೆನ ಹಂತಿಲಿ ಸತೀಶ ಗೌಡ್ರ ಒಟ್ಟಿಗೆ ಮನೆವು ಮೂಡು ದಿಕ್ಕ್‌ಗೆ ಮೋರೆ ಮಾಡಿ ಕುದ್ದವೆ. ಉಂಬಕನ ಕೊಟ್ಟ ಹೆಣ್ಮಕ್ಕ ಎಲ್ಲೋವು ಉಂಬಕೆ ಕುದ್ದವ್ಕೆ ವೀಳ್ಯದೆಲೆ, ಅಡ್ಕೆ ಹೋಳು, ತಲೆಗೆ ಎಂಣೆ ಕೊಟ್ಟವೆ.

ಸೋಮಯ್ಯ ಗೌಡ್ರ ಬೊಜ್ಜದ ಊಟ ಬಾರೀ ಗಡ್ದ್‌ಲಿ ನಡ್ತ್. ಕೋಳಿ, ಹಂದಿ, ಕುಂಬ್ಳಕಾಯಿ, ಕುಡು ಬಾಳೆ ಕ್ಯಾ ಗಸಿ, ಗೋದಿ ಪ್ಯಾಸ, ಅಕ್ಕಿ ಪ್ಯಾಸ, ಕಡ್ಲೆ ಬೇಳೆ ಪ್ಯಾಸ, ಉದ್ದ್‌ನ ಒಡೆ, ಹತ್ತ್ – ಇಪ್ಪತ್ತ್ ಬಗೆ ಸಿಂಯಿ ತಿನ್ಸ್‌ನ ಎಲ್ಲಾ ಇಕ್ಕಿದ್ರೊ. ಸುರೇಶನ ಮಾಂವ ಮತ್ತೆ ಅವರ ತಂಗೆ ಕಡೆಂದ ಜಾಂಗೀರ್ ಮತ್ತೆ ಲಾಡ್ ಮಾಡ್ಸಿ ತಂದಿದ್ರೊ. ಕಮಲಕ್ಕ, ವಿಮಲಕ್ಕ, ಸುನಂದನ ತವರು ಕಡೆವು

ವಸಂತಿ ಅಕ್ಕ, ಜಯಂತಿ ಅಕ್ಕನ ಸೊಸೆ ಕಡೆವು ಎಲ್ಲಾ ಬೇರೆ ಬೇರೆ ತರದ ಸಿಂಯಿ ತಿನ್ಸ್‌ಗಳ ಮಾಡಿ ತಂದಿದ್ದೊ. ಅದರೆಲ್ಲಾ ಸೋಮಯ್ಯ ಗೌಡ್ರ ಹೆಸ್ರ್ ಬರ್ದ ದೊಡ್ಡ ಲಕೋಟೆಲಿ ಹಾಕಿ ಬಂದೊವ್ಕೆ ಹಂಚಿದೊ. ಸುಮಾರ್ ಹಕ್ಕಲೆ ಹಕ್ಕಲೆ ಒಂದ್ ಸಾವ್ರಂದ ಮೇಲೆ ಜನ ಸೇರಿದ್ದೊ. ಬಂದೋವೆಲ್ಲಾ ಸತೀಶ ಗೌಡ್ರು ಅಪ್ಪನ ಬೊಜ್ಜನ ಗಡ್ದ್‌ಲಿ ಮಾಡ್ಸಿದೊ. ಸೋಮಯ್ಯ ಗೌಡ್ರು ಪುಣ್ಯಾತ್ಮರ್. ಇದ್ ಅವರ ಬೊಜ್ಜ ಅಲ್ಲ. ಮೊದ್ವೆಂತ ಹೇಳಿ ಹಾಡಿ ಹೊಗೊಳ್ಡೊ. ಅವು ಕಂಡಿತಾ ಸೊರ್ಗಕ್ಕೇ ಹೋದವೇಂತ ಹೇಳಿಕಂಡ್ ಹೋದೊ.

ಅದೇ ದಿನ ಇರ್ಳ್ ಮಿಾಂಚಿಳ್ ಊಟಾಂತ ಮಾಡ್ಡೊ. ಸತೀಶ ಗೌಡ್ರು ಹಿಂಬೊತ್ತ್ ಮಿಾದ್, ಒಂದು ಹೇಂಟೆ ಲಾಕಿನ ನಾಳಿ ಚಿರಿಂಬಿ ಕೊಂದ್, ಅದರ ಮಾಸ ಮಾಡಿ ಮಡಿಲಿ ಅಡ್ಗೆ ಮಾಡ್ಡೊ. ಕುಟುಮದೊವು ಮತ್ತೆ ಕೊಟ್ಟ ಹೆಣ್ಮಕ್ಕ ಕಡುಂಬು ತಯಾರ್ಸುವೆ. ಮಿಾಂಚಿಳ್ ಊಟದ ಕಡುಂಬು ಉದ್ದಕೆ ಮಾಡೊಕು ಗಡ. ಎಲ್ಲೋವು ಸಾಸ್ತ್ರಕ್ಕೆ ಮೂರ್ಮೂರು ಕಡುಂಬು ಮಾಡಿ ಇಸಿದೊ. ಇರ್ಳ್ ಸುಮಾರ್ ಒಂಬತ್ತ್ ಗಂಟೆ ಹೊತ್ತ್‌ಗೆ ಕನ್ನೆ ಕಂಬದ ಹಕ್ಕಲೆ ಅಗಲ್ ಹಾಕಿದೊ. ಒಂದು ಮೊಂದ್ರಿ ಹಾಸಿ, ಮೊಡ್ಯಾಳ ಕೊಟ್ಟ ಮಡಿ ಬಟ್ಟೆ ಹಾಸಿ, ಮಣೆ ಇಸಿ, ದೀಪ ಹೋಸಿದೊ. ಐದ್ ಗಂದದ ಕಡ್ಡಿನ ಹೋಸಿ, ಬಾಳೆ ಹಣ್ಣ್‌ಗೆ ಕುತ್ತಿ ಇಸಿದೊ. ಅರ್ದ್ ಇಸಿದ ಗಂಧನ ಒಂದ್ ಚೀಂತ್ ಬಾಳೆಲೆಲಿ ಹಾಕಿಸಿದೊ. ಜೋಡು ಬಾಳೆಲೆ ಹಾಸಿ, ಸತೀಶ ಗೌಡ್ರು ಅದರ ಮೇಲೆ ಕಡುಂಬು ಇಕ್ಕುವೆ. ಎಲೆ ಸುತ್ತೋಳು ಹನ್ನೊಂದು ಕಡುಂಬು ಇಸುವೆ. ಮಣೆ ಮೇಲೆ ಐದ್ ವೀಳ್ಯದೆಲೆ, ಒಂದು ಅಡ್ಕೆ, ಒಂದು ಬೆಂಡ ಮತ್ತೆ ಒಂದ್ ಸಣ್ಣ ಗ್ಲಾಸ್‌ಲಿ ಬೀಜದ ಸರಾಯಿ ಹಾಕಿ ಇಸುವೆ. ಅಲ್ಲಿ ಸೇರ್ದ ನೆಂಟ್ರ್‌ಗೆ ನೀರ್ ಕೊಟ್ಟ್, ಪ್ರಾರ್ಥನೆ ಮಾಡಿಕೆ ಹೇಳಿವೆ. ಎಲ್ಲರ ಕೈಗೆ ಬೆಳ್ತಿಗೆ ಅಕ್ಕಿ ಕೊಟ್ಟವೆ. ಕೊಲೆಗಳಿಗಿಸಿಕನ ಹೇಳುವ ಬಿನ್ನ ಹೇಳಿ, ಮಾಡ್ದ ಅಡ್ಗೆನ ಸ್ವೀಕಾರ ಮಾಡಿಕೆ ಪ್ರಾರ್ಥನೆ ಮಾಡಿ ಎಲ್ಲೋವು ಅಕ್ಕಿನ ಅಗೆಲ್‌ಗೆ ಹಾಕಿ, ತಿರ್‌ಗಿ ನಿತ್ತವೆ. ಹಂಞ ಹೊತ್ತ್‌ನ ಮೇಲೆ ಅಗೇಲ್‌ಗೆ ನೀರ್ ಚಿಮ್ಕಿಸಿ, ಅಗೇಲ್‌ನ ಎಳ್ದ್ ಎದ್ರ್‌ಗೆ ಇಸುವೆ. ಇದರ ಅರ್ಧ ಬಾಗನ ಮೊಡ್ಯಾಳಂಗೂ, ಇನ್ನ್ ಅರ್ದ ಬಾಗನ ಕೊಟ್ಟ ಹೆಣ್ಮಕ್ಕಳಿಗೂ ಕೊಟ್ಟವೆ. ಸತೀಶ ಗೌಡ್ರ ಹೆಣ್ಣ್ ಸುನಂದಕ್ಕ ಅಗೆಲ್‌ಲಿ ಇಕ್ಕಿದ ಗೈಪುಂದ ಒಂದು ತುಂಡು ಕರ್ಯಟ ತೆಗ್ದ್ ಒಂದು ಬಾಳೆಲೆಲಿ ಹಾಕುವೆ. ಸತೀಶ ಗೌಡ್ರು ಮತ್ತೆ ಸುನಂದಕ್ಕ ಇಜ್ಜೆಲಿಗೆ ಬಂದ್, ಹೆಣ್ಣ್‌ನ ಕೈಲಿದ್ದ ಬಾಳೆಲೆಂದ ಒಂದು ತುಂಡು ಕರ್ಯಟ ತೆಗ್ದ್ ಅದರ ಅಗ್ದ್ ಉಗ್ದವೆ ಆ ಮೇಲೆ ಬಾಯಿ ಮುಕ್ಕುಸುವೆ. ಹೀಂಗೆ ಮೂರು ಸಲ ಮಾಡ್ಡೊ. ಇದರ ಕೈಪೆ ತೆಗ್ಯೊದೊಂತ ಹೇಳ್ವೆ

ಆ ಮೇಲೆ ಎಲ್ಲೋವ್ಕೂ ಉಂಬಕೆ ನೀರ್ ಕೊಟ್ಟವೆ. ಬೊಜ್ಜಕ್ಕೆ ಬಂದ

ಹೆಚ್ಚಿನೊವೆಲ್ಲಾ ಮದ್ಯಾನನೇ ಉಂಡ್‌ದ್ ಅವರವರ ಮನೆಗೆ ಹೋಗಿದ್ದೊ. ಹಕ್ಕಲೆನ ನೆಂಟ್ರ್‌ಗ ಮತ್ತೆ ಕುಟುಮದೊವು ಮಾತ್ರ ಹನ್ನೊಂದರ ಕೊಲೆಗಳಿಗೆ ನಿತ್ತಿದ್ದೊ.

ಇದಾದ ಮೇಲೆ ಹದ್ನಾರ್‌ನೇ ದಿನ ಹದ್ನಾರ್‌ನೇ ಕೊಲೆಗಳಿಗಿಡುವ ಕ್ರಮ ಉಟ್ಟು. ಆ ದಿನ ನೆಂಟ್ರ್‌ಗ ಊರು ಗೌಡ್ರು, ಬಳಗದೊವು ಬಂದ್ ಸೇರ್‍ದೊ. ಇರ್‍ಳ್ ಹೇಂಟೆ ಲಾಕಿನ ಸತೀಶ ಗೌಡ್ರು ಮಡಿಲಿ ಕೊಂದ್, ಗೈಪು ಮಾಡಿ ಕೊಲೆಗಳಿಗಿಸಿಕೆ ನೀರ್ ದೋಸೆ ಮಾಡ್ವೆ.

ಮಣೆ ಮೇಲೆ ಇಸಿದ ಕಾಲ್ದೀಪನ ಹೋಸಿ, ಸೋಮಯ್ಯ ಗೌಡ್ರ ಒಂದು ಪಟನ ಇಸುವೆ. ದೀಪದ ಎದ್ರ್ ಮೊಂದ್ರಿ ಮೇಲೆ ಬಿಳಿ ಅರ್ವೆ ಹಾಸಿ ಜೋಡು ಬಾಳೆಲೆ ಹಾಕಿ ಸತೀಶ ಗೌಡ್ರು ಇಡೀ ನೀರ್ ದೋಸೆನ ಒಂದರ ಮೇಲೆ ಒಂದರ ಹಾಂಗೆ ಐದ್ ದೋಸೆ ಇಕ್ಕುವೆ. ಅದರ ಮೇಲೆ ಕನು, ಕರ್‍ಯಟ, ಪಲ್ಲೆಕಾಯಿ ಇಕ್ಕುವೆ. ಐದ್ ವೀಳ್ಯದೆಲೆ, ಒಂದು ಅಡ್ಕೆ, ಒಂದು ಬೆಂಡನ ಒಟ್ಟೆ ಮಾಡಿ ಇಸುವೆ. ಒಟ್ಟೆಗೆ ಸರಾಯಿನನೂ ಗ್ಲಾಸ್‌ಲಿ ಹ್ಯೊದ್ ಇಸುವೆ. ಸಣ್ಣ ಸಣ್ಣ ಹದ್ನಾರ್ ಕೊಡಿ ಬಾಳೆಲೆಗಳ ಕೆಳ ಬಾಗಲಿ ಸಾಲ್‌ಗೆ ಇಸಿ, ಇನ್ನೊಂದು ಕೊಡಿ ಬಾಳೆಲೆನ ಬೇರೆ ಅಡ್ಡ ಸಾಲ್‌ಲಿ ಇಸಿ, ಎಲ್ಲಾ ಎಲೆಗಳಿಗೆ ದೋಸೆನ ಸಣ್ಣ ಸಣ್ಣ ತುಂಡು ಮತ್ತೆ ಕೋಳಿ ಸಾರ್‌ನ ಇಕ್ಕುವೆ. ಪ್ರತಿ ಒಂದು ಅಗೆಲ್‌ಗೆ ಒಂದು ವೀಳ್ಯದೆಲೆ ಒಂದು ಹೋಳು ಅಡ್ಕೆ ಇಸುವೆ. ಎಲ್ಲಾ ಬಾಳೆಲೆ ಕೊಡಿಲಿ ಎಣ್ಣೆಲಿ ನೆನ್ಸಿದ, ದಳಿಯಂದ ಮಾಡ್ದ ನೆಣೆನ ಹೋಸಿ ಇಸುವೆ. ಅಲ್ಲಿ ಸೇರ್‍ದ ಎಲ್ಲೋವ್ಕೂ ಬೆಳ್ತಕ್ಕಿ ಕೊಟ್ಟ್‌ದ್ ಊರು ಗೌಡ್ರು ಪ್ರಾರ್ಥನೆ ಮಾಡ್ದ ಮೇಲೆ ಸತೀಶ ಗೌಡ್ರು ಹದ್ನಾರ್ ಅಗೆಲ್‌ನ ಗುಂಪುಂದ ಒಂದು ಅಗೆಲ್‌ನ ಎಳ್ದ್‌ದ್ ಹೊರಗೆ ಇಸುವೆ. ಹೊರಗೆ ಬೇರೆ ಆಗಿ ಇಸಿದ ಅಗೆಲ್‌ನ ಎಳ್ದ ಜಾಗೆಗೆ ಇಸಿ, ಮೂರು ಸಲ ಹದ್ನಾರ್ ಕೊಲೆಗಳಿಗೆ ಸೇರ್‍ಸುವೇಂತ ಸಂಮಂದ ಹೇಳಿ ಸೇರ್‍ಸುವೆ. ಆಗ ಅಲ್ಲಿದ್ದೋವೆಲ್ಲಾ ಅಕ್ಕಿ ಹಾಕಿ ಕೈಮುಗ್ದೊ. ಮತ್ತೆ ಎಲ್ಲೋವೂ ಉಂಬಕೆ ಎದ್ದೊ. ಮಾರ್‍ನೆ ದಿನ ಸತೀಶ ಗೌಡ್ರ ಅವರ ಸೋದರ ಮಾಂವನ ಮನೆವು ಮನೆ ಪಗರಿಕೆ ಕರ್‍ಕಂಡ್ ಹೋದೊ.

ನಲ್ವತ್ತೆಂಟ್ ದಿನ ಕಳ್ದ ಮೇಲೆ ಒಂದು ಒಳ್ಳೆ ದಿನ ನೋಡಿ ರಾಮಯ್ಯ ದೊಡಪ, ಸತೀಶ ಗೌಡ್ರು, ಚಾಮಯ್ಯ ಮಾಸ್ಟ್ರ ಚಿನ್ನಮತ್ತೆನ ಮಂಜ ಈಶ್ವರ ಮತ್ತೆ ಊರು ಗೌಡ್ರು ಕೂಡಿಕಂಡ್, ಚಾಳೆಲಿ ಕಟ್ಟಿ ಇಸಿದ ಹೆಣದ ಬೂದಿ, ಎಲು ಇದ್ದ ಗುಂಬನ ಬೆಳ್ದ್ ಅರ್ವೆಲಿ ಕಟ್ಟಿ ತಲಕಾವೇರಿಗೆ ತಕೊಂಡೋಗಿ ಅಲ್ಲಿ ಸಾಸ್ತ್ರ ಮಾಡಿ, ಪಿಂಡ ಬುಟ್ಟ್ ಬಂದೊ.

29."ದೇವ್ರು ಕಣ್ಣ್ ಬುಟ್ಟೊ."

ಮಾಲಿನಿ ಕಣ್ಣ್ ಬುಟ್ಟ್ ನೋಡಿಕಾಕನ ಪಳ್ಳಂಗೆ ಬೊಳ್ಪಾಗಿತ್ತ್. ಪಕ್ಕಲಿ ತಿರ್‍ಗಿ ನೋಡಿಕನ ಗಿರೀಶ ಆಗಳೇ ಎದ್ದ್ ಹೊರಗೆ ಹೋಗಿತ್ತ್. ಯಾಗೋಳೂ ಅದ್ ಬೊಳ್ಪಿಗೆ ಆರ್ ಗಂಟೆಗೆ ಎದ್ರ್‌ತಿತ್ತ್. ಇಂದ್ಯಾಕೋ ಎದ್ರಿಕೇ ಮೊನ್ನಿಲ್ಲೆ. ತಲೆ ಹಕ್ಕಲೆ ಇದ್ದ ಮೊಬ್ಯಾಲ್ ತೆಗ್ದ್ ನೋಡಿಕನ ಗಂಟೆ ಆಗಳೇ ಆರೂವರೆ ಕಳ್ದಿತ್ತ್. ಹಾಸಿಗೆಂದ ಎದ್ದ್ ಕುದ್ರಿಕನ ತಲೆ ಇಡೀ ಚಕ್ರ ಸುತ್ತಿದಾಂಗೆ ಗಿರ್ರನೆ ತಿರ್‍ಗ್‌ತಿತ್ತ್. ಸಂಕಟ ಮರ್ಕ ಆಗ್ತಿತ್ತ್. ಇಂದ್ ಏನಾತ್ ನಂಗೆ? ಯಾಕೆ ಹೀಂಗೆ ಆದೇಂತ ನೆನ್ಸಿಕಂಡ್, ತಿರ್‍ಗ ಹಾಸಿಗೆಲಿ ಬಿದ್ದ್‌ಕಂಡತ್. ಅಲ್ಲಿಗೇ ಮಂಪರ್ ಬಂದ ಹಾಂಗೆ ಆಗಿ ಕಣ್ಣ್ ಮುಚ್ಚಿತ್.

ಗಿರೀಶ ಬೊಳ್ಪುಗೆ ಎದ್ದಂವ ನೀರೆಡಿಗೆ ಹೋಗಿ ಹಲ್ಲುಜ್ಜಿ, ಮೋರೆ ತೊಳ್ದ್, ನಿತ್ಯ ಕರ್ಮಗಳ ತೀರ್‍ಸಿ, ಅಡ್ಗೆ ಕೋಣೆಗೆ ಬಾಕನ, ಕಮಲಕ್ಕ ಅಂವಂಗೆ ಬಿಸಿ ಬಿಸಿ ಚಾಯನ ಪಾಟೆಂದ ಲೋಟಕ್ಕೆ ಹೊಯ್ದ್ ಕೊಟ್ಟೊ. ಅದರ ಉರ್‍ಗಿ, ಉರ್‍ಗಿ ಕುಡ್ದ್, ಗ್ಲಾಸ್‌ನ ಅವ್ವನ ಕೈಲಿ ಕೊಟ್ಟ್,

'ಅವ್ವಾ ನಾ ಕೆಳಗೆನ ಬೈಲ್‌ಗೆ ಹೋಗಿ ಬನ್ನೆ."– ಎಂತ ಹೇಳಿ, ಇಜ್ಜೆಲ್‌ಗೆ ಇಳ್ದ್, ಜೀಪು ಸೆಡ್ಡ್‌ಗೆ ಹೋಗಿ, ಜೀಪುನ ಸ್ಟಾರ್ಟ್ ಮಾಡಿ, ಹಿಂದೆ ತಿರ್‍ಗಿಸಿ ತಂದ್ ಇಜ್ಜೆಲಿಲಿ ಇಸಿ, ಅಲ್ಲೇ ಚಿಂಟೆ ಮೇಲೆ ಇದ್ದ ಹೆಡಗೆನನೂ, ಒಂದು ಕೈ

ಕುಕ್ಕೆನನೂ ಜೀಪುಲಿ ಇಸಿ, ಬ್ಯೆಲ್‌ನ ತೋಟಕ್ಕೆ ಹೋತ್. ಅಡ್ಕೆ ಒಂದು ಕ್ಯೊಲ್ ಕ್ಯೊಯ್ದ್ ಇಪ್ಪತ್ತ್ ದಿನ ಕಳ್ದಿತ್ತ್. ಆಗಳೇ ಒಂದೊಂದಾಗಿ ಹಣ್ಣಡ್ಕೆ ಕಮ್ಮುಂದ ಉದ್ರಿಕೆ ಸುರಾಗಿತ್ತ್. ಅಂವ ಬೇಗ ಬೇಗ ಕಮ್ಮುನ ಬುಡಲಿದ್ದ, ಬಿದ್ದ ಹಣ್ಣಡ್ಕೆಗಳ ಹೆರ್ಕಿ, ಹೆರ್ಕಿ ಕೈ ಕುಕ್ಕೆಗೆ ತುಂಬುಸಿಕಂಡ್ ಹೋತ್. ಎರ್ಡ್ ದಂಡೆಲಿದ್ದ ಅಡ್ಕೆನ ಹೆರ್ಕಿಕಾಕನ ಕೈಕುಕ್ಕೆ ತುಂಬಿತ್. ಅದರ ತಂದ್ ಜೀಪುಲಿದ್ದ ಹೆಡಗೆಗೆ ತುಂಬುಸಿ, ತಿರ್ಗ ಮೂರ್ನೇ ದಂಡೆಗೆ ಹೆರ್ಕಿಕೆ ಹೋತ್. ಐದಾರ್ ದಂಡೆಲಿದ್ದ ಅಡ್ಕೆನ ಹೆರ್ಕಿ ಕಿಸೆಲಿದ್ದ ಮೊಬ್ಯಾಲ್ ತೆಗ್ದ್ ನೋಡಿಕಾಕನ ಗಂಟೆ ಏಳ್‌ಕಾಲ್ ಕಳ್ದಿತ್ತ್. ಇಂದ್‌ಗೆ ಇಸ್ಟ್ ಸಾಕ್‌ಂತ ಕೈ ಕುಕ್ಕೆಲಿದ್ದ ಅಡ್ಕೆನ ತಂದ್ ಹೆಡಗೆಗೆ ಹಾಕಿ ಜೀಪು ಹತ್ತಿ ಮನೆಗೆ ಬಾತ್. ಹೆಡೆಗೆಲಿದ್ದ ಅಡ್ಕೆನ ಜಾಲ್‌ಲಿ ಹರ್ಗಿದ ಅಡ್ಕೆ ರಾಸಿನ ಪಕ್ಕಲಿ ಒಂದು ಕಮ್ಮುನ ತಟ್ಟೆ ಇಸಿ ಅದರ ಬೇರೆ ಸೊರ್ಗಿ, ಕೈಲಿ ಸರಿ ಮಾಡಿ ಹರ್ಗಿ ಮನೆಗೆ ಬಾತ್. ಅಯ್ಯಣ್ಣ ಮಾಸ್ಟ್ರ ಮನೆ ಹಕ್ಕಲೆ ಇದ್ದ ತೋಟಕ್ಕೆ ಅಡ್ಕೆ ಹೆರ್ಕಿಕೆ ಹೋಗಿದ್ದೊ. ಮುಂದೆ ಆದರೆ ಗಿರೀಶ ಚಿಕ್ಕಮಗಳೂರ್‌ಲಿ ಇತ್ತ್. ಆಗ ಅಯ್ಯಣ್ಣ ಮಾಸ್ಟ್ರ ಎರ್ಡ್ ದಿನಕ್ಕೊಮ್ಮೆ ಕೆಳಗೆನ ತೋಟಕ್ಕೆ ಅಡ್ಕೆ ಹೆರ್ಕಿಕೆ ಹೋಗ್ತಿದ್ದೊ. ಕೆಲ್ಸದೊವು ಬಾಕನ ಗಂಟೆ ಒಂಬತ್ತ್ ಕಳ್ದವೆ. ಅವು ಬಾಕೆ ಮುಂದೆ ಇವರ ಒಮ್ಮೆನ ಅಡ್ಕೆ ಹೆರ್ಕಟ ಮುಗ್ಯತಿತ್ತ್. ಅಡ್ಕೆ ಹೆರ್ಕುವ ನೆಂವನಲಿ ತೋಟ ಸುತ್ತಿದಾಂಗೂ ಆತ್. ಎಲ್ಲೆಲ್ಲಿ ಯಾವ್ಯಾವ ಕಮ್ಮುಲಿ ಅಡ್ಕೆ ಹಣ್ಣಾಗುಟ್ಟೊಂತ ನೋಡ್ದಾಂಗೂ ಆತ್. ಬಿದ್ದ ಸೋಗೆಗಳ ಒತ್ತರೆ ಮಾಡ್ದಾಂಗೂ ಆತ್‌ಂತ ಅವು ದಿನಾ ಬೊಳ್ಪುಗೆ ಎದ್ದ ಕೂಡ್ಲೇ ತೋಟಕ್ಕೆ ಹೋಗ್ತಿದ್ದೊ. ಒಮ್ಮೊಮ್ಮೆ ಹಲ್ಲುಜ್ಜಿಕಂಡೇ ತೋಟಕ್ಕೆ ಹೋಗಿ ತೋಟದ ಕೆರೆಲೇ ಮೋರೆ ತೊಳ್ಕಂಡ್ ಬಾದುನೂ ಉಟ್ಟು. ಆದರೆಡೆಲಿ, ಕಮ್ಮುನ ಎಡೆಲಿ ಹಾಕಿದ ಬಾಳೆಗ ಗೊನೆ ಹಾಕಿದ್ದರೆ ಅದರ ನೋಡಿಕಂಡ್, ಗೊನೆ ಬೆಳ್ದಿದ್ದರೆ ಕಡ್ಕಂಡ್ ಮನೆಗೆ ತಾತಿದ್ದೊ. ಗೈಪುಗೆ, ಚಟ್ನಿಗೆ ಬೇಕಾದ ಪೂಂಬೆನನೂ ಒಟ್ಟಿಗೆ ತಾತಿದ್ದೊ. ಈಗ ಗಿರೀಶ ಮನೆಲೇ ಉಟ್ಟು. ಅಂವ ಅಪ್ಪನೊಟ್ಟಿಗೆ,

'ಅಪ್ಪಾ, ಬ್ಯೆಲ್‌ನ ತೋಟಕ್ಕೆ ದಿನಾ ನಾ ಹೋನೆ. ನೀವು ಮನೆ ಹಕ್ಕಲೆ ಇದ್ದ ತೋಟನ ನೋಡಿಕಣಿ' – ಎಂತ ಹೇಳಿ ಅವರ ಕೆಲ್ಸನ ಹಗ್‌ರ ಮಾಡ್ತ್. ತೋಟಕ್ಕೆ ನೀರ್ ಬುಡುವ ಸಮಯಲಿ ಪಂಪು ಸ್ಟಾರ್ಟ್ ಮಾಡ್ದು, ಜೆಟ್ ಬದ್ಲಾಯ್ಸುದು ಎಲ್ಲಾ ಅಂವಂಗೆ ಕುಸಿನ ಕೆಲ್ಸ.

ಗಿರೀಶ ತೋಟಂದ ಬಂದಂವ ಅಡ್ಕೆ ಜಾಲ್‌ಲಿ ಹರ್ಗಿ ನೀರೆಡಿಗೆ ಹೋಗಿ ಅಲ್ಲಿ ಬಿಸಿ ಬಿಸಿ ನೀರ್‌ಲಿ ಮಿಾದ್, ಅಲ್ಲೇ ನೇಕೆಲಿ ಒಣ್‌ಂಗಿಕೆ ಹಾಕಿದ ಬ್ಯೆರಾಸ್‌ಲಿ ಚೆಂಡಿ ತೆಗ್ದ್, ಕಂಬಾಯಿ ಉಟ್ಟ್‌ಕಂಡ್ ದೇವ್ರ ಕೋಣೆಗೆ ಬಾತ್. ಅರೆ, ಇಂದ್ ಮಾನಿಗೆ ಏನಾಗುಟ್ಟು? ದೇವ್ರ ಕೋಣೆಲಿ ನಿನ್ನೆನ ಹೂಗ ಹಾಂಗೆ ಒಳೊ. ಹೂನನೂ

ಕೊಯ್ದ್ ತಾತ್ಲೆ. ಏನ್ ಕತೇಂತ ನೆನ್ಸಿಕಂಡ್, ಮೊಲ್ಗುವ ಕೋಣೆಗೆ ಬಾತ್. ಅಸ್ಟಾಕನ ಇಂವ ಬಂದ ಸದ್ದ್ ಕೇಳಿ, ಕಮಲಕ್ಕನೂ ಅಂವನ ಹಿಂದೆ ಕೋಣೆಗೆ ಬಂದೊ. ಅವಿಬ್ಬೊರು ನೋಡಿವೆ, ಮಾಲಿನಿ ಇತ್ತಣ ಗೋಚರ ಇಲ್ಲದಾಂಗೆ, ಹಸುಗೂಸುನಾಂಗೆ ಕಣ್ಣ್ ಮುಚ್ಚಿ ಮೊಲ್ಗಿಟ್ಟು. ಅದರ ನೋಡಿ ಇಬ್ಬೊರಿಗೂ ಅಚ್ಚರಿ ಆದೆ.

"ಮಾನಿ, ಮಾನಿ, ನಿಂಗೆ ಏನಾತ್? ಯಾಕೆ ಹೀಂಗೆ ಮೊಲ್ಗಿಯಳ?" – ಕಮಲಕ್ಕ ಮಾಲಿನಿನ ಹಂದಾಡ್ಸಿ ಎದ್ರ್‌ಸುವೆ. ಮಾಲಿನಿ ಹಲ್ಕಿ ಬಿದ್ದ್, ಗಾಬರಿಲಿ ಎದ್ದ್ ಕುದ್ದ್, ಗಂಡ ಮತ್ತೆ ಅತ್ತೆ ತನ್ನನ್ನೇ ನೋಡ್ದರ ನೋಡಿ ನಾಚಿಕೆಲಿ,

'ನಂಗೆ ಏನೂ ಗೊತ್ತ್ಲೆ ಅತ್ತೆ. ಎದ್ರಿಕನ ಸಂಕಟ ಆತ್. ತಿರ್ಗ ತಲೆ ಅಡ್ಡ ಹಾಕಿದೆ.' – ಎಂತ ಹೇಳಿ ಗಡಿಬಿಡಿಲಿ ಎದ್ದ್ ನೀರೆಡಿಗೆ ಹೊರ್ಟದೆ.

'ನಿಂಗೆ ಬೊತ್ತತ್ಲರೆ ಹಂಞ ಹೊತ್ತ್ ಮೊಲ್ಗ್.' –ಕಮಲಕ್ಕ ಹೇಳ್ದೊ.

'ಬೇಡ ಅತ್ತೆ. ನಾ ಈಗ ಉಸಾರೊಳೆ.' – ಎಂತ ಹೇಳಿಕಂಡ್ ಹೋತ್. ಅದ್ ಮೋರೆ ತೊಳ್ದ್ ಬಾಕನ ಅದರ ಕೈಗೆ ಚಾದ ಲೋಟನ ಇಸಿದೊ. ಮಾಲಿನಿ ಒಂದು ಮುಕ್ಕಿ ಕುಡ್ದದೆ. ಅದ್ಕೆ ಹೊಟ್ಟೆ ತೊಳ್ಸಿದಾಂಗೆ ಆಗಿ ಕಕ್ಕಿಕೆ ಬಾತ್. ಊಟದ ಕೋಣೆಲಿದ್ದ ಸಿಂಕ್ ಹಕ್ಕಲೆ ಹೋಗಿ ಬಸಬಸಾಂತ ಕಕ್ಕಿತ್. ಕಮಲಕ್ಕ ಓಡಿ ಹೋಗಿ ಅದರ ತಲೆ ಹಿಡ್ಕೊಂಡೊ. ಕಕ್ಕಿ ಆದ ಮೇಲೆ ಅದರ ಮೋರೆಗೆ ನೀರ್ ಹಾಕಿ, ಕರ್ಕಂಡ್ ಬಂದ್, ಉಂಬ ಮೇಜಿನ ಹಕ್ಕಲೆ ಇದ್ದ ಕುರ್ಚಿಲಿ ಕುದ್ರಿಸಿ ಅದರ ಮೋರೆನನೇ ನೋಡ್ದೊ. ಮಾನಿನ ಮೋರೆ ಚಪ್ಪೆ ಇತ್ತ್. ಅವು ಮಾಲಿನಿನ ತಲೆ ಪೂಜಿ, 'ನೀ ಹೋಗಿ ಮೊಲ್ಗ್. ನಿಂಗೆ ಪಿತ್ತ ಆಗಿರೋಕು. ನಾ ಕಸಾಯ ಮಾಡಿ ತನ್ನೆ' – ಎಂತ ಹೇಳಿ ಕಮಲಕ್ಕ ಅಡ್ಗೆ ಕೋಣೆಗೆ ಹೋದೊ. ಮಾಲಿನಿನ ಗಿರೀಶ ಮೆಲ್ಲಂಗೆ ಎದ್ರಿಸಿ ಮೊಲ್ಗುವ ಕೋಣೆಗೆ ಕರ್ಕಂಡ್ ಬಂದ್ ಮೊಲ್ಗಿಸಿದೆ. ಕಮಲಕ್ಕ ಜೀರಿಗೆ ಓಡು ಕಸಾಯ ಮಾಡಿ, ಅದ್ಕೆ ಒಂದು ತುಂಡು ಬೆಲ್ಲ ಹಾಕಿ ಕೊದಿಸಿ, ಸೊಸೆಗೆ ಬಿಸಿ ಬಿಸಿ ಕಸಾಯನ ತಂದ್ ಕುಡ್ಸಿದೊ. ಕಮಲಕ್ಕನ ತಲೆಲಿ ಒಮ್ಮೆನೇ ಮಿಂಚ್ ಹರ್ದಾಂಗಾತ್. ಅವು ಮಾಲಿನಿನ ಮೋರೆ ನೋಡಿ,

'ನೀ ಈ ತಿಂಗ ಹೊರಗೆ ಆತ್ಲೆ ಅಲ್ಲ?' – ಎಂತ ಹೇಳ್ದೊ. ಆಗ ಮಾಲಿನಿಗೆ ಪಕ್ಕನೆ ನೆಂಪಾತ್. ನಾ ಹೊರಗೆ ಕುದ್ರದೆ ಎರ್ಡ್ ತಿಂಗ ಆತ್‌ಂತ ಅದ್ ನಾಚಿಕೆಲಿ,

'ಹೌದತ್ತೆ. ಎರ್ಡ್ ತಿಂಗ ಆತ್' – ಎಂತ ಹೇಳ್ತ್. ಕಮಲಕ್ಕಂಗೆ ಕುಸಿನೋ ಕುಸಿ. ಅಂತೂ ದೇವ್ರು ಕಣ್ಣ್ ಬುಟ್ಟೋಂತ ನೆನ್ಸಿಕಂಡ್, ಗಿರೀಶನೊಟ್ಟಿಗೆ,

'ಗಿರಿ, ನೀ ಇಂದ್ ರಜೆ ಮಾಡ್. ನಾನೂ ಬನ್ನೆ. ಇದರ ಪುತ್ತೂರಿಗೆ ಕರ್ಕೊಂಡೋಗಿ ಲೇಡಿ ಡಾಕ್ಟ್ರಲ್ಲಿ ಪರೀಕ್ಷೆ ಮಾಡ್ಸೊಮೊ' – ಎಂತ ಹೇಳ್ದೊ. ಅಯ್ಯಣ್ಣ ಮಾಸ್ಟ್ರ ತೋಟಂದ ಬಾಕನ ಇಸ್ಟೆಲ್ಲಾ ರದ್ದಾಂತ ಮನೆಲಾಗಿತ್ತ್. ಅವರ ಕೆಬಿಗೂ

ಈ ಸುದ್ದಿ ಕುಸಿ ಕೊಟ್ಟಿತ್.

ಗಿರೀಶ ಅವ್ವನನೂ, ಹೆಣ್ಣ್‌ನನೂ ಕರ್ಕಂಡ್ ಕಾರ್‌ಲಿ ಪುತ್ತೂರಿಗೆ ಹೋಗಿ, ಹೆರ್ಗೆ ಡಾಕ್ಟ್ರಂತ ಹೆಸ್ರ್ ಪಡ್ದ ಡಾ। ವಸುಂದರಾ ದೇವಿಯಲ್ಲಿಗೆ ಕರ್ಕೊಂಡೋಗಿ ಪರೀಕ್ಷೆ ಮಾಡ್ಸಿತ್. ಅವು ಪರೀಕ್ಷೆ ಮಾಡಿ ಗಬ್ಬ ನಿತ್ತದರ ಸಾಬೀತ್ ಮಾಡ್ದೊ. ಬೊಸ್ರಿ ಹೆಣ್ಣ್‌ಗೆ ಕೊಡಕಾದ ಮಾತ್ರ, ಟಾನಿಕ್ ಬರ್ದ ಕೊಟ್ಟೊ. ತಿಂಗ ತಿಂಗ ಬಂದ್ ಪರೀಕ್ಷೆ ಮಾಡ್ಸಿಕಂಡ್ ಹೋಕೆ ಹೇಳ್ದೊ.

ಇದಾದ ಮೇಲೆ ಕಮಲಕ್ಕನ ಕಾಲ್ ನಿಲ್ಲ್‌ತಿತ್ಲೆ. ಡಾಕ್ಟ್ರ ಎಸ್ಟ್ ಮೊದ್ದ್ ಕೊಟ್ಟರೂ, ಅವರ ಪಂಡ್‌ನ ಕಾಲದ ಕಸಾಯ ಮಾಡಿ ಕುಡ್ಸುದರ ನಿಲ್ಸಿತ್ಲೆ. ತಿಂಗ ಪಗರಿಕನ ಮೂರು ದಿನ ಬೆಳ್ದ್ ದಾಸಾಳದ ಬೇರ್, ಬೆಳ್ದ್ ಚಿಕ್ಕ ಹರ್‌ಳ್ ಬೇರ್, ಸಹದೇವಿ ದೈನ ಬೇರ್‌ನ ಅವೇ ಹೋಗಿ ಹುಡ್ಕಿ ಎಳ್ಳಿ ತಂದ್ ತೊಳ್ದ್, ಅದರ ಕಸಾಯ ಮಾಡಿ ಅದ್ಕೆ ಜೀರಿಗೆ ಹೊಡಿ, ಕಲ್ಸಕ್ರೆ, ದನದ ತುಪ್ಪ ಎರ್ಡ್ ಸವುಂಟು ಹಾಕಿ ಹಸಿ ಹೊಟ್ಟೆಗೆ ಒಂದು ದೊಡ್ಡ ಗ್ಲಾಸ್ ಕಸಾಯನ ಕುಡ್ಸ್‌ತಿದ್ದೊ. ಸುದ್ದಿ ಮಾಲಿನಿನ ತವರು ಮನೆಯೊವ್ಕೂ ಮುಟ್ಟಿತ್. ಅವೂ ಬಾಳ ಕುಸಿ ಆಗಿ ಗಂಡ - ಹೆಣ್ಣ್ ಮಗಳ ನೋಡಿಕೆ ಬಂದೊ. ಬಂದೊವು ಹಂಞ ದಿನದ ಮಟ್ಟಿಗೆ ಮಾಲಿನಿನ ತವರ್‌ಗೆ ಕರ್ಕಂಡೋದವೇಂತ ಹೇಳ್ದೊ. ಮಾಲಿನಿಗೂ ಅವ್ವನೊಟ್ಟಿಗೆ ಇರೊಕೂಂತ ಆಸೆ ಆಗಿತ್ತ್. ಸರೀಂತ ಮಾಲಿನಿನ ಬಲ್ನಾಡ್‌ಗೆ ಕಳ್ಸಿದೊ. ಅಲ್ಲಿನೂ ಅದ್ಕೆ ಎಲ್ಲೋವೂ ಆದರ್ಸೋವೆ. ಮಾಲಿನಿನ ಅಣ್ಣ ಮನೋಹರಂಗೂ ಈಗ ಎರ್ಡ್ ವೊರ್ಸದ ಒಂದು ಗಂಡ್ ಕೂಸು ಇತ್ತ್. ಆ ಕೂಸು ಯಾಗೋಳೂ ಅತ್ತೆ - ಅತ್ತೆಂತ ಮಾಲಿನಿನ ತೊಡೆ ಮೇಲೆ ಕುದ್ದ್‌ಕಂಡ್ ಇರ್ತಿತ್ತ್. ತವರ್‌ಲಿ ದಿನ ಹೋದೇ ಗೊತ್ತಾತ್ಲೆ.

ಗಿರೀಶನೂ ಎರ್ಡ್ ದಿನಕ್ಕೊಮ್ಮೆ ಬಂದ್ ಹೆಣ್ಣ್‌ನ ಮಾತಾಡ್ಸಿ ಹೋಗ್ತಿತ್ತ್. ಇತ್ತ ಕಮಲಕ್ಕಂಗೆ ಬೇಜಾರೋ ಬೇಜಾರ. ಸೊಸೆ ಇಲ್ಲದೆ. ದಿನಾ ಪೋನ್ ಮಾಡಿ ನೀ ಯಾಗ ಬಂದಿಯಾ'ಂತ ಇಚಾರ್ಸ್‌ತಿದ್ದೊ. ಆಗ ಜಯಂತಿ ಅಕ್ಕ,

'ಅತ್ತಿಗೆ ನಿಮ್ಮ ಸೊಸೆನ ಒಂದು ವಾರ ನೀವ್ಗೆ ಬುಟ್ಟ್‌ದ್ ಇರಿಕೆ ಆದ್ಲೇನೋ? ಹಂಗಾದರೆ ನಾವು ಹೆತ್ತೋವು, ನಾವ್ಗೂ ನಮ್ಮ ಮಗಳ ಆರೈಕೆ ಮಾಡೊಕೂಂತ ಆಸೆ ಇರ್ದುಲ್ಲೇನೋ? ಅದ್ ಒಂದು ತಿಂಗ ಮುಟ್ಟ ಇಲ್ಲಿ ಇರ್‌ಲಿ.' –ಎಂತ ಹೇಳ್ದೊ. ಅವು ಹೇಳ್ದುನೂ ಸರೀಂತ ಕಮಲಕ್ಕ ಸುಮ್ಮಂಗಾದೊ.

ಅಂತೂ ಆ ಒಂದು ತಿಂಗ ಕಮಲಕ್ಕ ಕಸ್ಟಲಿ ಕಳ್ದೊ. ಮಾಲಿನಿ ಬಂದ ಮೇಲೆ ಅವ್ಕೆ ರೆಕ್ಕೆ ಬಂದಂಗಾತ್. ಅದ್ಕೆ ದಿನಾ ಏನಾದರ್ ಬಾಯ್ ಸೊಗ್ಸ್‌ನ ತಿನ್ಸ್ ಮಾಡಿ ತಿನ್ಸುದಿದ್ದರೆ ಮೊನ್ಸ್ ನಿಲ್ಸ್‌ತಿತ್ಲೆ. ಅವ್ಕೆ ಹೆಣ್ಣ್ ಮಕ್ಕ ಇಲ್ಲದ ಕಾರ್ಣ ಈಗ ಸೊಸೆನೇ ಮಗಳ್. ಅದರ ಕುದ್ರಿಸಿಕಂಡ್ ದಿನಾ ಉಪಚಾರ ಮಾಡ್ತಿದ್ದೊ. ಪೆಬ್ರವರಿ

ತಿಂಗ ಹತ್ತಕ್ಕೆ ಅದ್ಕೆ ಆರ್ ತಿಂಗ ತುಂಬಿತ್. ಏಳ್ನೇ ತಿಂಗಳ್‌ಲಿ ತವರು ಮನೆವು ಕರ್ಕ್ಕೊಂಡೋಗಿ ಹೂ ಮುಡ್ಸುವ ಮೊದುವೆ ಮಾಡ್ಸುದು ಪದ್ದತಿ. ಮಾಲಿನಿನ ಅಪ್ಪ ಅವ್ವ ಪೆಬ್ರವರಿ ತಿಂಗ ಹನ್ನೆಡ್ಕಕ್ಕೆ ಕರ್ಕ್ಕೊಂಡೋಕೆ ಬಂದೊ.

ಅಯ್ಯಣ್ಣ ಮಾಸ್ಟ್ರ ತಂಗೆ ಮತ್ತೆ ಬಾವನೊಟ್ಟಿಗೆ,

"ಹೂ ಮುಡ್ಸುವ ಮೊದ್ವೆಗೆ ಒಂದು ಒಳ್ಳೆ ದಿನ ನೋಡಿ ನಾವ್ಗೆ ತಿಳ್ಸಿನಿ. ನಾವು ನಮ್ಮ ಕಡೆ ನೆಂಟ್ರ ಕರ್ಕಂಡ್ ಬಂದವೆ." – ಎಂತ ಹೇಳ್ದೊ. ಅದ್ಕೆ ಜಯಂತಿ ಅಕ್ಕ,

"ಆತಣ್ಣ ಏಳ್ನೇ ತಿಂಗಳ್‌ಲಿ ಹೂ ಮುಡ್ಸುವ ಮೊದುವೆ ಮಾಡೊಕೊಲೆ. ಇನ್ನ್ ಒಂದು ವಾರಲಿ ಒಂದು ಒಳ್ಳೆ ದಿನ ನೋಡಿ ತಿಳ್ಸುವೆ" – ಎಂತ ಹೇಳಿ ಮಗಳ ಕರ್ಕಂಡ್ ಹೋದೊ.

* * * * *

30. "ಹೂ ಮುಡ್ಸುವ ಮೊದುವೆ"

ಹೂ ಮುಡ್ಸುವ ಮೊದ್ವೆಗೆ ದಿನ ನೋಡಿ ಫೆಬ್ರವರಿ ಹತ್ತೊಂಬತ್ತಕ್ಕೇಂತ ದಿನ ನಿಚ್ಚಯ ಮಾಡ್ದೊ. ಇನ್ನ್ ಒಂದೇ ವಾರ ಇರ್ದು ಬೊಸ್ರಿ ಹೆಣ್ಣ್‌ಗೆ ತಕೊಂಡೋವ ತಿಂಡಿ- ತಿನ್ಸ್ ಮಾಡುವ ಸಡ್ಗರ ಸುರಾತ್. ಕುಕ್ಕಪ್ಪಣ್ಣನ ಸಣ್ಣ ಮಗ ಜ್ಯೋತಿ ಗೂಡೆನ ಕಮಲಕ್ಕ ಸಾಯ ಮಾಡಿಕೇಂತ ಬಾಕೆ ಹೇಳ್ದೊ. ಅದ್ ದಿನಾ ಹಿಂಬೊತ್ತ್ ಸಾಲೆ ಬುಟ್ಟ ಮೇಲೆ ಬಂದ್ ಕಮಲಕ್ಕಂಗೆ ಸಾಯ ಮಾಡ್ತಿತ್ತ್. ಅವು ಏನಾರೆ ಹೆಚ್ಚ್ ಗಟ್ಲೆ ತಿಂಡಿ ತಿನ್ಸ್ ಮಾಡ್ದಾದರೆ ಇರ್ಳೇ ಮಾಡ್ತಿದ್ದೊ. ಎಲ್ಲೋವು ಮೊಲ್ಗಿದ ಮೇಲೆ ಅವ್ಕೆ ಆರಾಮಲಿ ಕೆಲ್ಸ ಮಾಡಿಕೆ ಲಾಯ್ಕಾಗ್ತಿತ್ತ್. ಹಗಲ್‌ದರೆ ಮನೆಗೆ ಯಾರಾದರ್ ಬರ್ತನೇ ಇರ್ತಿದ್ದೊ. ಜ್ಯೋತಿ ಗೂಡೆನ ಇರ್ಳ್ ಮನೆಲೇ ನಿಲ್ಸಿಕಂಬಲಿದ್ದೊ. ಸುರುಗೆ ಸುಕ್ರುಂಡೆ ಮಾಡಿ ದೊಬ್ಬಿಗೆ ತುಂಬುಸಿ ಇಸಿದೊ. ಹೊದ್ರಿ ಬತ್ತಂದ ಹೊದ್ರಿ ಮಾಡಿ ಕುಕ್ಕಪ್ಪಣ್ಣನ ಹೆಣ್ಣ್ ಗಂಗಮ್ಮಕ್ಕ, ಕಮಲಕ್ಕಂಗೆ ಕಳ್ಸಿದೊ. ಅವರ ಮನೆಲಿ ಹೊಡ್ರಿ ಹೊರ್‍ಯಕೇಂತಳೇ ಮಾಡಿಸಿದ ಒಂದು ಮೊಣ್ಣ್‌ನ ಮಡ್ಕೆ ಇತ್ತ್. ಆ ಮಡ್ಕೆನ ಪುಡೆಲಿ ದೊಡ್ಡ ಬಟ್ಲ್‌ನಷ್ಟ್ ಅಗಲಕ್ಕೆ ಕತ್ತಿಲಿ ಸುತ್ತೊಳು ಕೊಡ್ಪಿ ತೆಗ್ದ್ ಹೊರ್‍ಯಕೆ ಬತ್ತ ಹಾಕಿಕೆ ಗಂಡಿ ಮಾಡಿದ್ದೊ. ಮೇಲೆನ ಬಾಯಿಗೆ ಒಂದು ಬಾವೊಡೆನ ಕಂಕಣೆ ಹಾಕಿ ಆ ಮಡ್ಕೆನ ಒಲೆ ಮೇಲೆ ಇಸ್ತಿದ್ದೊ. ಅದ್ ಓಡುಕಾದ್ ಕೆಂಪಾಕಾಕನ ಹಿಂದೆನ ಇರ್ಳ್ ನೆನ್ಸಿ ಹನಿಗೆ

ಒಣ್ಗಿಸಿದ ಬೊಂಕ ಬತ್ತನ ಒಂದು ಬೊಸೆ ನಷ್ಟ್ ಕಿಂಡಿಮಾಡ್ದ್ ಓಡುಲಿ ಹಾಕಿ ಸಣ್ಣ ಕುಂಟು ಮಾಪ್ಪುಲಿ ಹೊರ್ಯತಿದ್ದೊ. ಆಗ ಬತ್ತ ಪಟ ಪಟಾಂತ ಸಿಡ್ದ್ ಹೊದ್ರಿ ರಟ್ಟಿಕನ ಬಾವೊಡೆ ಮುಚ್ಚಿದ ಕಾರಣ ಹೊರಗೆ ರಟ್ಟ್‌ತಿತ್ಲೆ. ಮಡ್ಕೆ ಒಳಗೇ ಹೊದ್ರಿ ನಿಲ್ಲ್‌ತಿತ್ತ್. ಎರ್ಡ್ ನಿಮ್ಸಲಿ ಹೊದ್ರಿ ಆಗ್ತಿತ್. ಆ ಹೊದ್ರಿನ ಒಂದು ಗಟ್ಟದ ಕಂಬ್ಳಿನ ನಾಕ್ ಮೂಲೆಗೆ ಬೊಳ್ಳಿ ಕಟ್ಟಿ ಕೊಟಗೆನ ಮಾಡಿಗೆ ಕಟ್ಟ್‌ತಿದ್ದೊ. ಆ ಕಂಬ್ಳಿನ ನೊಡುಲಿ ಹೊರ್ದ ಹೊದ್ರಿನ ಹಾಕಿ ಕುಂಟು ಮಾಪ್ಪುಲಿ ಗುಡ್ಸಿದಾಂಗೆ ಅತ್ತ ಇತ್ತ ಮಾಡ್ತಿದ್ದೊ. ಆಗ ಹೊದ್ರಿಲಿ ಅಂಟಿದ ಒಂದೊಂದು ಬತ್ತದ ಚೋಲಿ ಕೆಳಗೆ ನಿಲ್ತಿತ್ತ್. ಮೇಲೆ ಇದ್ದ ಇಡಿ ಹೊದ್ರಿನ್ ತೆಗ್ದ್ ಕುಕ್ಕೆಗೆ ಹಾಕ್ತಿದ್ದೊ. ಕೆಳಗೆ ನಿತ್ತ ಉಮಿದ ತೆಗ್ದ್ ಗೋಣೆಲಿ ತುಂಬುಸಿ ಇಸ್ತಿದ್ದೊ. ಮನೆಲೆ ಮಾಡ್ದ ಈ ಹೊದ್ರಿ ತಿಂಬಕೆ ಬಾಳ ಕಮ್ಮಂಗೆ ಆಗ್ತಿತ್ತ್. ಕಮಲಕ್ಕ ಆ ಹೊದ್ರಿನ ಕುಟ್ಟಿ ಹೊಡಿಮಾಡಿ, ಅದ್ಕೆ ಹೊರ್ದ ಎಳ್ಳ್, ಹೊಡಿ ಮಾಡ್ದ ಏಲಕ್ಕಿ ಬಿತ್ತ್, ಬೀಜದ ಬೆಂಡ್‌ನ ಹೊಡಿ ಸೇರ್ಸಿ, ಬೆಲ್ಲದ ಪಾಕ ಮಾಡಿ ಅದ್ಕೆ ಸೇರ್ಸಿ ಉಂಡೆ ಕಟ್ಟಿ, ಅಕ್ಕಿ ಬಂದಲಿ ಮುಣ್‌ಂಗಿಸಿ ಎಂಣೆಲಿ ಕಾಸಿ ಇಸಿದೊ. ಅಕ್ಕಿ ಬಂದಕೆ ಕಲ್ಸಿಕನ ಹೊರ್ದ ಉದ್ದುನ ಬೇಳೆನ ಹೊಡಿ, ಹುರಿಗಾಳ್‌ನ ಹೊಡಿ ಹಂಞ ಸೇರ್ಸ್‌ತಿದ್ದೊ, ಆಗ ಸುಕ್ರುಂಡೆನ ಹೊರಗೆನ ಬಾಗ ಕುರುಮುರು ಆಗ್ತಿತ್ತ್. ಇಸ್ಟೆಲ್ಲಾ ಅಟ್ಟಣೆ ಮಾಡಿ ಮಾಡ್ದ ಸುಕ್ರುಂಡೆ ಒಂದು ತಿಂಗ ಮುಟ್ಟ ಇಸಿರೂ ಹಾಳಾಗ್ತಿತ್ಲೆ.

ಸುಕ್ರುಂಡೆ ಕೆಲ್ಸ್ ಮುಗ್ದ ಮೇಲೆ ಚಕ್ಕುಲಿ ಮಾಡುವ ಅಟ್ಟಣೆಗೆ ಸುರುಮಾಡ್ದೊ. ಬೆಳ್ತಕ್ಕಿ ತೊಳ್ದ್ ನೆರ್ಳಿಲಿ ಒಣ್‌ಂಗಿಸಿ ಬೀಸಿ ಹೊಡಿಮಾಡಿ ಇಸಿದೊ. ಒಂದು ಸೇರ್ ಬೆಳ್ತಕ್ಕಿಗೆ ಒಂದು ಪಾವು ಉದ್ದುನ ಬೇಳೆನ ಹಾಂಗೆ, ಉದ್ದುನ ಬೇಳೆನ ಹೊರ್ದ್ ಹೊಡಿಮಾಡಿ ಅದ್ಕೆ ಸೇರ್ಸಿದೊ. ಅಂಗ್ಡಿಂದ ಹುರಿಗಾಳ್ ತರ್ಸಿ ಅದರ ಹೊಡಿ ಮಾಡಿ ಒಂದು ಪಾವು ನಾಂಗೆ ಅದ್ಕೆ ಸೇರಿಸಿದೊ. ಈ ಹೊಡಿಗಳ ಮಿಸ್ರ ಮಾಡಿ ಅದ್ಕೆ ತೊಳ್ದ್ ಒಣ್‌ಂಗಿಸಿದ ಎಳ್ಳ್‌ನ ಸೇರ್ಸಿ, ಕಾಯೆನ ಹಾಲ್‌ಲಿ ಕಲ್ಸಿದೊ. ಹಂಞ ಬೆಣ್ಣೆನೂ ಕಲ್ಸಿಕನ ಸೇರ್ಸಿದೊ. ಅದರ್‌ಂದ ಮಾಡ್ದ ಚಕ್ಕುಲಿ ತಿಂಬಕೆ ಕರು ಮುರುಂತೇಳಿ ಬಾಳ ಸೊಗ್ಸಾಗ್ತಿತ್ತ್. ಅದರನೂ ಒಂದು ದೊಡ್ಡ ಡೊಬ್ಬಲಿ ತುಂಬುಸಿ ಇಸಿದೊ. ಮತ್ತೊಂದು ದಿನ ರವೆ ಉಂಡೆ ಮಾಡಿದೊ. ಇದರೊಟ್ಟಿಗೆ ಕರ್ಜಿಕಾಯಿನನೂ ಮಾಡ್ದೊ. ಅದರೆಲ್ಲಾ ಬೇರೆ ಬೇರೆ ಡೊಬ್ಬಿಗಳಿಗೆ ತುಂಬುಸಿ ಇಸಿದೊ. ಪಂಜಂದ ಹೋಳಿಗೆ ಬಟ್ರ್ ಶಂಕರ ನಾರಾಯಣ ಮೂಡೆತ್ತಾಯರ ಬಾಕೆ ಮಾಡಿ ಐನೂರು ಕಡ್ಲೆ ಬೇಳೆ ಹೋಳಿಗೆ, ಐನೂರು ಲಾಡ್ ಮಾಡ್ಸಿದೊ. ಸುಕ್ರುಂಡೆ, ಚಕ್ಕುಲಿ ರವೆ ಉಂಡೆ, ಕರ್ಜಿಕಾಯಿ, ಹೋಳಿಗೆ, ಲಾಡ್, ಆರ್. ಬಗೆ ಆತ್. ಏಳ್ ತಿಂಗಳ್‌ಲಿ ಮಾಡುವ ಬಯಕೆ ಮೊದ್ವೆಗೆ ಏಳ್ ಬಗೆ ಆಕೊಲೆ. ಹಾಂಗಾಗಿ ಬಟ್ರ ಕೈಲಿ

ಐನೂರು ಜುಲ್ಪಿನನೂ ಮಾಡ್ಸಿದೊ. ಈಗ ಕಮಲಕ್ಕನ ಮೊನ್ಸ್‌ಗೆ ಸಮದಾನ ಆತ್. ಇನ್ ಏಳ್ ಬಗೆ ಹೂ ಆಕು.

ಅವರ ಕೆಳಗೆನ ಬೈಲ್‌ನ ತೋಟದ ಪುಡೆಲಿ ದೊಡ್ಡ ಸೊರಗೆ ಹೂನ ಮರ ಇತ್ತ್. ಅದ್ ಮಾರ್ಚ್, ಎಪ್ರಿಲ್‌ಲಿ ಮರ ತುಂಬ ಹೂ ಬುಡ್ತಿತ್ತ್. ಹೂವು ಅರ್ಳಿಕೆ ಮುಂದೆನೇ ಕೆಲ್ಸದೊವು ಮರ ಹತ್ತಿ. ಮುಗುರುನ ಕೊಯಿದ್, ಸೂಜಿಲಿ ಚುರ್ದ್ ಮಾಲೆ ಮಾಡ್ತಿದ್ದೊ. ಹರ್ಗಿದ ಪೊಯ್ಯೆ ಮೇಲೆ ಬೆಳ್ದ್ ಅರ್ವೆನ ಹಾಸಿ, ಅದರ ಮೇಲೆ ಮಾಲೆಗಳ ಇಸಿ ಬಿಸ್ಲ್‌ಲಿ ಒಣ್‌ಂಗಿಸಿ ಇಸ್ತಿದ್ದೊ. ಕಪ್ಪಾಗದಾಂಗೆ, ಅದ್ಕೆ ಬಣ್ಣ ಬಾಕೆ ಅರ್ಸಿಣದ ಹೊಡಿ ಹರ್‌ಂಡ್‌ತಿದ್ದೊ. ಆ ಮಾಲೆ ಒಣ್‌ಂಗಿದ ಮೇಲೆ ಅದರ ಪೊರ್ಲುಲಿ ಮಡಿ ಅರ್ವೆಲಿ ಸುತ್ತಿ ತೆಗ್ದ್ ಇಸ್ತಿದ್ದೊ. ಒಣ್‌ಂಗಿದ ಸೊರ್ಗೆ ಹೂವು ಮೊದ್ದ್‌ಗಿನೂ ಬೇಕಾಗ್ತಿತ್ತ್. ಕಮಲಕ್ಕನೊವು ಪೆಟ್ಟಿಗೆಲಿ ಇಸಿದ ಹೂನ ತೆಗ್ದ್ ಎರ್ಡ್ ಮಾಲೆನ ಪ್ಲಾಸ್ಟಿಕ್ ಚೀಲಲಿ ಕಟ್ಟಿ ಇಸಿದೊ.

ಕುಕ್ಕಪ್ಪಣ್ಣನ ಮನೆ ಹಕ್ಕಲೆ ಇದ್ದ ಕೆರೆ ಪಕ್ಕಲಿ ಕೇದಗೆ ಮರಗ ಇದ್ದೊ. ಅಲ್ಲಿಂದ ಒಂದು ಜೊಂಪೆ ಕೇದಗೆನ ಕುಂಞಣ್ಣ ಕೊಯ್ದ್ ತಾತ್. ಮನೆ ಪಕ್ಕಲಿ ಕಮಲಕ್ಕ ನೆಟ್ಟು ಬೆಳ್ಸಿದ ಜಾಜಿ ಚಪ್ಪರಂದ ಒಂದು ಪಾವುನಸ್ಟ್ ಮುಗುರುಗಳ ಕೊಯಿದ್ ಸುಂದರಿ ಮಾಲೆ ಕಟ್ಟಿಕೊಟ್ಟತ್. ತೋಟಲಿದ್ದ ಕಮ್ಮಂದ ಎರ್ಡ್ ಪಿಂಗಾರದ ಹಾಳೆನ ಕುಂಞಣ್ಣ ಕೊಯಿದ್ ತಾತ್. ಇನ್ನ್ ನಾಳೆ ಹೋಕನ ಪುತ್ತೂರ್‌ಂದ ಮಂಗ್ಳೂರ್ ಮಲ್ಲಿಗೆ ಒಂದು ಚೆಂಡ್, ಸೇವಂತಿಗೆ ಒಂದ್ ಮಾರ್, ಗುಲಾಬಿ ನಾಕೈದ್ ತಕಂಡೋದೂಂತ ನೆನ್ಸಿಕೊಂಡೊ ಈಗ ಏಳ್ ಬಗೆ ಹೂ ಆತ್‌ಲೆ.

ಗಿರೀಶ ಪುತ್ತೂರು ಸಂಜೀವ ಶೆಟ್ಟಿ ಅಂಗ್ಡಿಂದ ಒಂದು ಪಚ್ಚೆ ಬಣ್ಣದ ಕಂಚಿ ರೇಶ್ಮೆ ಸೀರೆ ಐದ್ ಸಾವ್ರ ರೂಪಾಯಿ ಕೊಟ್ಟ್ ತಾತ್. ಅದರ ರವುಕೆನ ಅಲ್ಲೇ ಹೊಲ್ಯಕೆ ಹಾಕಿ ಬಾತ್. ಹೂ ಮುಡ್ಸುವ ಮೊದ್ವೆ ದಿನ ತಕಂಡೋದೂಂತ ಗ್ರೇಸಿತ್.

ಒಂದ್ ದಿನಕ್ಕೆ ಮುಂದೆನೇ ಸುರೇಶ, ರೇಶ್ಮಾ ಬೆಂಗ್ಳೂರ್‌ಂದ ಬಂದೊ. ಅವನ ಅತ್ತೆ ಮಾಂವನೂ ಬಂದೊ. ಒಳ್ದ ನೆಂಟ್ರ್‌ಗ ಎಲ್ಲಾ ಜಯಂತಿ ಅಕ್ಕನ ಮನೆಗೆ ಬನ್ನೇಂತ ಹೇಳಿದ್ದೊ. ಹಂಗಾಗಿ ಪಂಬೆತ್ತಾಡಿಂದ ಕುಕ್ಕಪ್ಪಣ್ಣ, ಅವರ ಹೆಣ್ಣ್, ಮಗಳ್ ಸುರೇಶ ಗಂಡ - ಹೆಣ್ಣ್ ಅಂವನ ಅತ್ತೆ- ಮಾಂವ ಇಷ್ಟೆ ಜನ ಬಲ್ನಾಡ್‌ಗೆ ಹೋದೊ.

ಕಮಲಕ್ಕ, ಮತ್ತೆ ಮಾಸ್ಟ್ರ ಅವರ ಜೀಪುಲಿ ಮನೆವು ತಕೊಂಡೋವ ಹೊದ್ರಿ, ಅವ್ಲಕ್ಕಿ, ಕದೊಳಿ ಬಾಳೆ ಹಣ್ಣ್ ಗೊನೆ, ಕಾಯೆ, ಬೆಲ್ಲ, ಏಳ್ ಬಗೆನ ತಿನ್ಸ್‌ಗ, ಏಳ್ ಬಗೆನ ಹೂ- ಪಿಂಗಾರ, ಚಿನ್ನ, ಹೊಸ ಬಟ್ಟೆ ಬರೆ ಎಲ್ಲಾ ಗಂಟ್‌ಕಟ್ಟಿ ಜೀಪುನ ಹಿಂದೆ ಇಸಿದೊ. ಕುಕ್ಕಪ್ಪಣ್ಣನ ಸಂಸಾರ ಜೀಪುಗೆ ಹತ್ತಿತ್.

ಪುತ್ತೂರ್‌ಲಿ ಹೊಲ್ಯಕಾಕಿದ ರವ್ಕೆನ ತಕಂಡ್, ಮೂರು ಬಗೆ ಹೂನನೂ ತಕಂಡ್ ಹೊದೊ. ಬಲ್ನಾಡ್‌ಗೆ ಮುಟ್ಟಿಕಾಕನ ಗಂಟೆ ಹತ್ತಾತ್. ಆಗಲೇ ವಿಟ್ಲದೊವು, ಬೆಟ್ಟಂಪಾಡಿಯೊವು, ಕಡಬದೊವು, ಕಮಲಕ್ಕನ ಅಪ್ಪ, ಅವ್ವ, ಅಣ್ಣ, ತಮ್ಮ ಅವರ ಹೆಣ್ಮಕ್ಕ ಎಲ್ಲಾ ಬಂದ್ ಸೇರಿದ್ದೊ. ಮಾಲಿನಿನ ಗಂಡನ ಮನೆಯವರ ಚಪ್ಪರದಡಿಂದಳೇ ವಾಲಗ ಊದಿಕಂಡ್ ನೆಂಟ್ರ್‌ಗ ಎದ್‌ರ್‌ಗೊಂಡ್ ನೀರ್ ಮೊಂದ್ರಿ ಕೊಟ್ಟ್ ಉಪಚಾರ ಮಾಡ್ದೊ. ಗಂಡನ ಮನೆವು ತಂದ ಸರ್ಭೆಗಳ ಎಲ್ಲಾ ಒಳಗೆ ತಕೊಂಡೊದೊ.

ನಡು ಒಳಗೆ ಹೊಸ ಮೊಂದ್ರಿ ಹಾಸಿ, ಮಾಲಿನಿನ ಅದರ್ಲಿ ಕುದ್ರಿಸಿ, ಅದರ ಬಲ ಪುಡೆಲಿ ಕಾಲ್ದೀಪ ಹೋಸಿ ಇಸಿ, ಬೊಸ್ರಿ ಹೆಣ್ಣ್‌ನ ಎದ್ರ್ ಕಮಲಕ್ಕ, ರೇಶ್ಮಾ, ಗಂಗಮ್ಮಕ್ಕ ಬಣ್ಣ ಬಂಗಾರ ಇಸಿ ದೀಪಕ್ಕೆ ಅಕ್ಕಿ ಹಾಕಿ ಕೈ ಮುಗ್ದೊ. ವಸಂತಿ ಅಕ್ಕನ ಸೊಸೆ ಗೀತನೂ, ಜಯಂತಿ ಅಕ್ಕನ ಸೊಸೆ ಗುಣವತಿನೂ, ಮಾಲಿನಿನ ತಲೆ ಬಾಚಿ, ಮುಡಿ ಕಟ್ಟಿ ಏಳ್ ಬಗೆ ಹೂನ ಮುಡ್ಸಿದೊ, ಕೈಗೆ ಹೊಸ ಪಚ್ಚೆ ಬಳೆಗಳೊಟ್ಟಿಗೆ, ಬಣ್ಣ ಬಂಗಾರದೊಟ್ಟಿಗೆ ಇಸಿದ ಚಿನ್ನದ ಬಳೆಗಳ ತೊಡ್ಸಿದೊ. ಮುತ್ತು, ಹವಳ, ಪಚ್ಚೆ, ಕೆಂಪುಂತ ಏಳ್ ಬಗೆ ಚಿನ್ನದ ಚೈನ್‌ಗಳ ಕುತ್ತಿಗೆಗೆ ಹಾಕಿ ಸಿಂಗಾರ ಮಾಡ್ದೊ.

ಅ ಮೇಲೆ ಮಾಲಿನಿನ ಮತ್ತೆ ಗಿರೀಶನ, ಮಾಲಿನಿನ ಅಪ್ಪ– ಅವ್ವ ತೊಳ್ಸಿಕಟ್ಟೆ ಹಕ್ಕಲೆ ಕರ್‍ಕೊಂಡೋಗಿ, ಬೊಸ್ರಿ ಹೆಣ್ಣ್‌ನ ಕೈಲಿ ಎಲೆ ಅಡ್ಕೆ ಕೊಟ್ಟ್ ತಿರ್ಪತಿ ತಿಮ್ಮಪ್ಪ ದೇವ್ರ ಹೆಸ್ರ್ ಹೇಳಿ ಅದರ ಕೈಲಿ ಐದ್ ಸಲ ಭೂಮಿ ತಾಯಿಗೆ ನೀರ್ ಹಾಕ್ಸಿದೊ. ಮಾಲಿನಿ ಐದೆಲೆ, ಒಂದಡ್ಕೆನ ಕೈಲಿ ಹಿಡ್ಕಂಡತ್, ಅದರ ಅಪ್ಪ ಎಲಾಡ್ಕೆಗೆ ನೀರ್ ಹೊಯ್ದೊ. ಮಾಲಿನಿ ಎಲೆ ಕೊಡಿಲಿ ಭೂಮಿ ತಾಯಿಗೆ ನೀರ್ ಹನ್ಸಿಕಿಸಿತ್. ಆ ಮೇಲೆ ಒಂದು ಹೇಂಟೆ ಲಾಕಿನ ಮಾಲಿನಿನ ತಲೆ ಸುತ್ತ ತಂದ್, ಅದರ ಕೈಲಿ ಕೋಳಿ ಲಾಕಿಗೆ ಅಕ್ಕಿ ತಿನ್ಸಿ ನೀರ್ ಕುಡ್ಸಿ ಲಾಕಿನ ಬುಟ್ಟ್ ಬುಟ್ಟೊ.

ಆ ಮೇಲೆ ಮಾಲಿನಿನ ಮತ್ತೆ ಗಿರೀಶನ ನಡು ಒಳಗೆ ಕರ್‍ಕೊಂಡೋಗಿ ಅವರಿಬ್ಬರ ಅಕ್ಕ ಪಕ್ಕ ಕುದ್ರಿಸಿ, ಗಿರೀಶನ ಪಕ್ಕಲಿ ಒಂದು ಹೆಣ್ಣ್ ಗೂಡೆನನೂ, ಮಾಲಿನಿನ ಪಕ್ಕಲಿ ಒಬ್ಬ ಗಂಡ್ ಹೈದನನೂ ಕುದ್ರಿಸಿದೊ. ಅವರಿಬ್ಬರ ಎದ್ರ್ ದೊಡ್ಡ ಕೊಡಿಬಾಳೆಲೆನ ಹಾಸಿದೊ. ಬಾಳೆಲೆನ ನೀರ್‌ಲಿ ತೊಳ್ಪ ಮೇಲೆ ಜಯಂತಿ ಅಕ್ಕ ಸುರುಗೆ ಅವರಿಬ್ಬರ ಎಲೆಗೆ ಮೂರ್‍ಮೂರು ಸೆಡೆ ಹೊದ್ರಿ ಅವ್ಲ ಇಕ್ಕಿದೊ. ಅದರ ಮೇಲೆ ಸುತ್ತೋಳೂ ಕದಳಿ ಬಾಳೆ ಹಣ್ಣ್ ಇಸಿದೊ. ಆ ಮೇಲೆ ಹೊದ್ರಿ ಅವ್ಲನ ಮೇಲೆ ಮೂರ್‍ಮೂರು ಸೆಡೆ ಕಾಯಿ ಹಾಲ್‌ನ ಬಡ್ಸಿದೊ. ಆ ಮೇಲೆ ಗಂಡ ಹೆಣ್ಣ್ ಇಬ್ಬೊರು ಸೇರಿ ಕಾಯಿ ಹಾಲ್‌ಗೆ ಬಾಳೆ ಹಣ್ಣ್‌ನ ಚೊಲ್ಲಿ ಹಾಕಿ, ಅದರೊಟ್ಟಿಗೆ ಹೊದ್ರಿ ಅವ್ಲನ ಕಲ್ಸಿ, ದೊಡ್ಡ ಎರ್ಡ್ ಉಂಡೆ ಮಾಡಿಕೆ ಹೇಳ್ದೊ. ಗಿರೀಶನ ಹಕ್ಕಲೆ ಅಂವ ಮಾಡ್ದ ಉಂಡೆನ ಅಂವನ ಹಕ್ಕಲೆ ಕುದ್ದ ಹೆಣ್ಣ್ ಗೂಡೆಗೆ ಕೊಡಿಕೆ

ಹೇಳ್ದೊ. ಮಾಲಿನಿ ಮಾಡ್ದ ಉಂಡೆನ ಅದರ ಪಕ್ಕಲಿ ಕುದ್ದ ಗಂಡ್ ಹೈದಂಗೆ ತೊಡಿಕೆ ಹೇಳ್ದೊ. ಆ ಮೇಲೆ ಮಾಲಿನಿನ ಗಂಡನ ಮನೆವು ತಕೊಂಡೋದ ಏಳ್ ಬಗೆನ ತಿನ್ಸ್‌ಗಳ ಅವರಿಬ್ಬರ ಎಲೆಗೆ ಸುತ್ತೋಳು ಇಕ್ಕಿದೊ. ಅವು ಬೇಕಾದರ ತಿಂದೊ ಮತ್ತೆ ಎಲ್ಲೋವ್ಕೂ ಉಂಬಕೆ ನೀರ್ ಕೊಟ್ಟೊ.

ಬಯಕೆ ಮೊದುವೆ ಆದ ದಿನ ಬೊಸ್ರಿ ಹೆಣ್ಣ್‌ನ ಮನೆ ಪಗರ್‌ಸೊಕು. ಅದಕ್ಕಾಗಿ ಅಯ್ಯಣ್ಣ ಮಾಸ್ಟ್ರ ಬಾವನೊಟ್ಟಿಗೆ ಮಾಲಿನಿನ ಕರ್‍ಕೊಂಡೋದವೇಂತ ಹೇಳ್ದೊ ಜಯಂತಿ ಅಕ್ಕ ಗಂಡನ ಕರ್ಸ್.

'ಇಂದ್‌ಗೆ ಎಂಟ್‌ನೇ ದಿನ ಒಳ್ಳೆದಿನ ಗಡ ಆ ದಿನ ನಾವು ಹೋಗಿ ಮಗಳ ಹೆರ್‍ಗ್ಗೆ ಕರ್‍ಳಂಡ್ ಬರೊಮೊ. ಆಗದೋ?' – ಎಂತ ಹೇಳ್ದೊ.

'ಅಕ್ಕ್, ನಾ ಅವುಕೆ ಹೇಳ್ನೆ" –ಗೌರಿ ಶಂಕರ ಹೇಳ್ದೊ. ಅವು ಹೊರಗೆ ಬಂದ್ ಅಯ್ಯಣ್ಣ ಮಾಸ್ಟ್ರೊಟ್ಟಿಗೆ,

'ಬಾವಾ, ಬಾವ ಐತ್ವಾರ ದಿನ ಒಳ್ಳೆದುಟ್ಟುಗಡ, ನಾವು ಸನಿವಾರ ನಿಮ್ಮಲ್ಲಿಗೆ ಬಂದವೆ. ಅತ್ವಾರ ದಿನ ಗೂಡೆನ ಹೆರ್‍ಗ್ಗೆ ಕರ್‍ಕಂಡ್ ಬಂದವೆ ಆಗದೋ?' – ಎಂತ ಕೇಳ್ದೊ ಕಮಲಕ್ಕಂಗೆ ಅಸ್ಟ್ ಬೇಗ ಸೊಸೆನ ತವುರುಗೆ ಕಳ್ಸಿಕೆ ಮೊನ್ಸ್ ಇತ್ಲೆ. ಆದರೆ ಜಯಂತಿ ಅಕ್ಕ ಬುಡೊಕೊಲೆ.

'ಮಾನಿ ಮೊದುವೆ ಆದ ಮೇಲೆ ತವುರುಗೆ ಬಾದೇ ಕಮ್ಮಿ ಮಾಡ್ತ್. ಈ ನೆಪಲಿ ಆದರೂ ನಮ್ಮಲ್ಲಿ ಐದಾರ್ ತಿಂಗ ನಿಲ್ಲಲಿ'– ಎಂತ ಹೇಳ್ದೊ. ಹೆತ್ತ ಹೊಟ್ಟೆ ಅವರ ಮೊನ್ಸ್‌ಗೆ ಯಾಕೆ ಬೇನೆ ಮಾಡ್ದೂಂತ ಕಮಲಕ್ಕ ಒಪ್ಪಿದೊ.

ಗಂಡನ ಮನೆಲಿ ದಿನಾ ಅದ್ ಮಾಡ್ದ ಹೂನ ಕೊಪ್ಪಳಲಿ ಸುತ್ತುದೇ ಅದ್ಕೆ ಕೆಲ್ಸ. ಮಾಲಿನಿಗೆ ಚಿಂತೆ ನಾ ಹೆರಿಗೆಗೆ ತವುರು ಮನೆಗೆ ಹೋದರೆ ಬಾಕನ ಐದಾರ್ ತಿಂಗ ಕಳ್ಯೋದು. ಆಗ ನನ್ನ ದೈಗಳ ಯಾರ್ ನೋಡ್ದು. ಅದ್ ಮಕ್ಕಳಾಂಗೆ ಸಾಂಕಿದ ದೈಗ ಎಲ್ಲಿ ಹಾಳಾದವೆನೋಂತ ಅದ್ಕೆ ಚಿಂತೆ. ಸುಂದರಿನೊಟ್ಟಿಗೆ ದಿನಕ್ಕೆ ಹತ್ತ್ ಸಲ.

"ಇಂದಾ ಸುಂದರಿ, ನೀ ದೈಗಳ ಲಾಯ್ಕ್‌ಲಿ ಸಾಂಕೊಕು ಬಲಾ? ದಿನ ದಿನ ನೀರ್ ಹಾಕೊಕು. ಗೋಡು ಗೊಬ್ಬರ ಕೊಡೊಕು." – ಎಂತ ಹೇಳ್ತಿತ್. ಆಗ ಸುಂದರಿ ನೆಗಾಡಿಕಂಡ್,

"ನೀವು ಸುಮ್ಮಂಗಿರಿ ಮಾನಕ್ಕ. ನೀವು ಬಾಕ್ನನ ನಾ ಹೇಂಗೆ ದೈಗಳ ಆರೈಕೆ ಮಾಡಿನೇಂತ ನೀವು ನೋಡಿನಿ. ಅದರ ಚಿಂತೆ ಬುಡಿನಿ." – ಎಂತ ಹೇಳ್ತಿತ್. ಗಂಡನೊಟ್ಟಿಗೂ ನಿಲ್ಲಿಕನ ಕುದ್ರಿಕನ ತೋಟದ ದೈಗಳ ಲಾಯ್ಕ್‌ಲಿ ಸಾಂಕೊಕೂಂತ ಹೇಳ್ತಿತ್. ಆಗ ಅಂವ ನೆಗಾಡಿಕಂಡ್.

"ನಿಂಗೆ ನನ್ನಂದಳೂ ದೈಗಳೇ ಹೆಚ್ಚಾದೋ ಅಲ್ಲ? ನಾ ತೋಟಗಾರಿಕೆಲಿ ಇದ್ದಂವ. ನೋಡು ನೀ ಬಾಕನ ಹೇಂಗೆ ಮಾಡ್ನೆಂತ ನಿಂಗೇ ಬೇರ್ಗ್ಗಾಕು'– ಎಂತ ಹೇಳ್ತಿತ್ತ್. ಅದ್ಕೆ ಗಂಡನ ಮಾತ್‌ಲಿ ಬರವಸೆ ಇತ್ತ್.

ಮಾಲಿನಿ ಹೆರ್ಗ್ಗೆ ತವುರು ಮನೆಗೆ ಹೋವದಿನ ಹಕ್ಕಲೆ ಬಂದೇ ಬುಡ್ತ್. ಅದರ ಅಪ್ಪ, ಅವ್ವ, ಅಣ್ಣ, ಅತ್ತಿಗೆ, ಕೂಸೂಂತಐದ್ ಜನ ಅದರ ಕರ್ರೊಂಡೋಕೆ ಬಂದೊ.

ಇರ್ಳ್ ಕೊಲೆಗಳಿಗಿಸಿ, ಗುರು ಕಾರ್ನೂರಿಗೆ ಬಿನ್ನ ಮಾಡ್ದೊ. ಮಾಲಿನಿ ಇರ್ಳ್ ಇಡೀ ನಿದ್ದನೇ ಮಾಡ್ತಿಲ್ಲೆ. ಗಂಡನ ಎದೆ ಮೇಲೆ ತಲೆ ಇಸಿ, ಮೊಲ್ಗಿಕಂಡೇ ಇತ್ತ್. ಅದ್ಕೆ ಹೆದ್ರಿಕೆ, ಇಸ್ಟ್ ಪ್ರೀತಿ ಮಾಡುವ ಗಂಡ, ಅತ್ತೆ, ಮಾಂವನ ಬುಟ್ಟ್. ಐದಾರ್ ತಿಂಗ ತವುರು ಮನೆಲಿ ಇರೊಕೊಲೇಂತ ಹೆರ್ಗ್ಗಲಿ ಏನಾದರ್ ಆದರೇಂತ ಹೆದ್ರಿಕೆನೂ ಇತ್ತ್. ಅದ್ ಅದರ ಆಗಾಗ ಗಂಡನೊಟ್ಟಿಗೆ ಹೇಳ್ತಿತ್ತ್. ಅಂವ ಅದರ ತಲೆ ಪೂಜಿ,

ಬೇ, ಹುಚ್ಚಿ, ನೀ ಏಕೆ ಹೆದ್ರಿಯಾ? ಡಾ. ವಸುಂಧರಾ ದೇವಿ ಹೆಸ್ರ್ ವಾಸಿ ಡಾಕ್ಟ್ರ್. ಅವು ಸಾಬೀತ್‌ಲಿ ಹೆರ್ಗ್ಗ ಮಾಡ್ಸುವೊ. ನೀ ಹೆದ್ರ್ ಬಡ? – ಎಂತ ದೈರ್ಯ ಹೇಳ್ತಿತ್ತ್. ಆದರೂ ಅದ್ ಬಾಡಿದ ಮೋರೆಲೇ ಇರ್ತಿತ್ತ್.

ಮೊರ್ದಿನ ಬೊಳ್ಪುನ ಚಾಯ, ತಿಂಡಿ ಮುಗ್ಸಿ ದೇವ್ರ ಕೋಣೆಲಿ ದೀಪ ಹೋಸಿ, ಎಲ್ಲೋವೂ ಕೈ ಮುಗ್ದೊ. ಅಯ್ಯಣ್ಣ ಮಾಸ್ಟ್ರ

"ದೇವ್ರೆ ನಮ್ಮ ಸೊಸೆ ಗೂಡೆ ತವುರು ಮನೆಗೆ ಹೆರ್ಗ್ಗೆ ಹೊರ್ಟ್ ನಿತ್ತುಟು. ಅದರ ಹೆರ್ಗ್ಗ ಯಾವ ಕಷ್ಟ ಇಲ್ಲದೆ ಸಾಬೀತ್‌ಲಿ ಆಗಲಿ. ನೀ ನಾವ್ಗೆ ಒಬ್ಬ ಒಳ್ಳೆ ವಂಶೋದ್ಧಾರಕನ ಕೊಟ್ಟ್, ಕಾಪಾಡ್. ಸೊಸೆ ಬಾಣಂತಿತನ ಮುಗ್ಸಿ, ಕೂಸುನ ಸಾಬೀತ್‌ಲಿ ಕರ್ಕಂಡ್ ಬಾವ ಹಾಂಗೆ ಮಾಡ್" – ಎಂತ ಪ್ರಾರ್ಥನೆ ಮಾಡಿ ಕೈ ಮುಗ್ದೊ. ಮಾಲಿನಿ ದೇವ್ರ್‌ಗೆ ಕೈ ಮುಗ್ದ್, ಅತ್ತೆ, ಮಾಂವ, ಗಂಡನ ಕಾಲ್ ಹಿಡ್ಕಂಬಕೆ ಹೋತ್. ಅವು ಅದರ ಹೆಚ್ಚ್ ಬೊಗ್ಗಿಗೆ ಬುಡದೆ ಅರ್ಧಲೇ ತಡ್ದ್, ಅದ್ಕೆ ಅಸೀರ್ವಾದ ಮಾಡ್ದೊ. ಗಿರೀಶ ಪ್ರೀತಿಲಿ ಅದರ ಹೆಗ್ಲ್ ಹಿಡ್ದ್ ಎದ್ರಿಸಿ ಅದರ ಕಣ್ಣ ನೀರ್ನ ಒರ್ಸಿದೆ. ಎಲ್ಲೋವೂ ವೇನ್ ಹತ್ತಿದೊ.

ಗಿರೀಶ ಎರ್ಡ್ ದಿನಕೊಮ್ಮೆ ಅತ್ತೆ ಮನೆಗೆ ಹೋಗಿ ಮಾಲಿನಿನ ಮಾತಾಡ್ಸಿ ಬಾತಿತ್ತ್. ಒಮ್ಮೊಮ್ಮೆ ಅಲ್ಲೇ ನಿಲ್ತಿತ್ತ್. ಮಾಲಿನಿಗೂ ಯಾಗ ಹೆರಿಗೆ ಆದೆ. ಯಾಗ ಕೂಸುನ ಮೋರೆನ ನೋಡ್ನೇಂತ ದಿನ ಲೆಕ್ಕ ಮಾಡ್ತಿತ್ತ್.

* * * * *

31. "ಕಮಲಕ್ಕನ ಪೆದ್ದೋಳ್ತಿಗೆ ಮೊದ್ದ್ ಜೋಡ್ಸುವ ಸಡ್ಗರ"

ಒಂದಿನ ಕಮಲಕ್ಕ ಫೋನ್ ಮಾಡಿ ನಾದಿನಿನೊಟ್ಟಿಗೆ ಮಾಲಿನಿನ ಆರೋಗ್ಯ ವಿಚಾರ್ಸಿದೊ. ಸುಕ– ದಕ್ಕ ಮಾತಾಡಿ,

'ಮಾನಿಗೆ ಈ ಸಲ ಎಲ್ಲರ ಹಾಂಗೆ ಮಾಮೂಲಿ ಹೆರ್ಗೆ ಆದರೆ ಹಳ್ಳಿಮೊದ್ದ್ ಮಾಡ್. ಅದ್ ಆರೋಗ್ಯಕ್ಕೆ ತುಂಬಾ ಒಳ್ಳೇದ್. ಕಾಯ್ಲೆ ಕಸಾಲೆ ಬಾದ್ಲೆ' – ಎಂತ ಹೇಳ್ದೊ. ಆಗ ಜಯಂತಿ ಅಕ್ಕ.

' ಅದ್ ಒಪ್ಪೊಕೊಲೆ ಅತ್ತಿಗೆ, ಈಗೆನ ಮಕ್ಕ ಆ ಕಂಯಿ ಮೊದ್ದ್ ಕುಡ್ಯೋಮೊನೋ? ಅದಲ್ಲದೆ ಅದ್ಕೆ ತುಂಬಾ ಪತ್ಯ ಬೇಕ್. ಹೊಟ್ಟೆ ಕಟ್ಟೋಕು. ಅದಾರ್‌ಂದ ಆದೋ?' – ಎಂತ ಕೇಳ್ದೊ.

'ನೀ ಕೇಳಿ ನೋಡು. ನಾ ಹೇಳ್ದ್ಂತ ಹೇಳ್. ಅಪರೇಷನ್ ಆದರೆ ಬೇಡ. ಆಗ ನಾವು ಡಾಕ್ಟ್ರ ಮೊದ್ದ್‌ನನೇ ಮಾಡೋಕು. ಇಲ್ಲರೆ ಒಂದು ಹೋಗಿ ಒಂದು ಆದು' – ಕಮಲಕ್ಕ ಹೇಳ್ದೊ. ಅತ್ತಿಗೆ ಹೇಳ್ದರ ಜಯಂತಿ ಅಕ್ಕ ಮಗಳೊಟ್ಟಿಗೆ ಹೇಳ್ದೊ. ಆಗ ಮಾಲಿನಿ ಕುಸಿಂದ ಒಪ್ಪಿತ್. ಮಗಳ್ ಇಸ್ಟ್ ಸುಲಬಲಿ ಒಪ್ಪಿದರ ನೋಡಿ ಅಯ್ಯೆಗೆ ಸೋಜಿಗ ಆದೆ.

'ನಿಂಗೆ ಅತ್ತೆ ಮಾತ್‌ಂತೇಳ್ರೆ ವೇದ ವಾಕ್ಯ ಅಲ್ಲ? ನಾ ಹೇಳ್ತಿದ್ದರೆ ನೀ ಒಪ್ಪಿಕಿತ್ಲೆ? –ಜಯಂತಿ ಅಕ್ಕ ನೆಗಾಡಿಕಂಡ್ ಹೇಳ್ದೊ.

"ಅಯ್ಯೋ ಅವ್ವಾ, ನೀವ್ಗೇನ್ ಗೊತ್ತ್? ಅತ್ತೆಗೆ ನನ್ನೊಟ್ಟಿಗೆ ಎಸ್ಟ್ ಪ್ರೀತಿಂತ? ಅವು ಹೇಳ್ದು ನನ್ನ ಒಳ್ಳೆದಕ್ಕೆ ಅಲ್ಲನೋ?" ಮಾಲಿನಿ ವಾದಿಸಿದೆ.

'ಹೌದೌದು. ಅತ್ತೆ ಹೇಳ್ದು ಒಳ್ಳೆದಕ್ಕೆ. ನಾ ನಿನ್ನ ಹೆತ್ತವ್ವ, ನಾ ಹೇಳ್ದು ಕೆಟ್ಟದಕ್ಕೆ ಅಲ್ಲ?' ಜಯಂತಿ ಅಕ್ಕ ಕೇಳ್ದೊ.

'ಹಾಂಗಲ್ಲವ್ವಾ ಅವ್ಕೆ ಅನ್ಬವ ಜಾಸ್ತಿ. ಅದ್ಕೆ ಹೇಳ್ದೆ' – ಎಂತ ಅವ್ವನ ಸಮದಾನ ಮಾಡ್ತ್.

ಇದರೆಲ್ಲಾ ಜಯಂತಿ ಅಕ್ಕ ಅತ್ತಿಗೆನೊಟ್ಟಿಗೆ ಫೋನ್‌ಲಿ ಹೇಳಿ.

'ಈಗ ನಿಮ್ಮ ಮಾತಿಗೇ ಬೆಲೆ ಅತ್ತಿಗೆ. ನಾ ಅದ್ಕೆ ಏನೇನೂ ಅಲ್ಲ' – ಎಂತ ಪೇಚಾಡಿಕೊಂಡೊ.

'ನೀ ಏನ್ ಬೇಜಾರ ಮಾಡ್ಬಡ. ಅದ್ಕೆ ಬೇಕಾದ ಪೆದ್ದೋಳ್ತಿ ಮೊದ್ದ್ ಎಲ್ಲಾ ನಾ ಇಲ್ಲಿ ಜೋಡಣೆ ಮಾಡಿ ತನ್ನೆ. ನಿಂಗೆ ಏನ್ ಕಷ್ಟ ಆಕಿಲ್ಲೆ. ಎಂತ ಸಮದಾನ ಮಾಡ್ದೊ.

'ಕಮಲಕ್ಕ, ಗಂಗಮ್ಮಂಗೆ ಪೋನ್ ಮಾಡಿ ಮನೆಗೆ ಕರ್ಸಿಕಂಡ್, ಪೆದ್ದೋಳ್ತಿ ಮೊದ್ದ್‌ನ ಹೇಂಗೆ ಕೊಡ್ದೂಂತ ಇನ್ನೊಮ್ಮೆ ಇಬ್ರೊರು ಕೂಡಿಕಂಡ್ ನೆಂಪು ಮಾಡಿಕೊಂಡೊ ಗಂಗಮ್ಮಕ್ಕ, ಕಮಲಕ್ಕ ನೀವು ನಾಳೆ ನಮ್ಮ ಮನೆಗೆ ಬನ್ನಿ. ನಮ್ಮ ಅತ್ತೆಗೆ ಎಲ್ಲಾ ಮೊದ್ದ್ ಗೊತ್ತುಟ್ಟು. ಅವರ ಅನ್ಬವನನೂ ಕೇಳಿಕೊಮ್ಮೊ?– ಎಂತ ಹೇಳ್ದೊ.

ಮಾರ್ಣೆದಿನ ಬೇಗ ಬೇಗ ಕೆಲ್ಸ ಮುಗ್ಸಿ, ಕಮಲಕ್ಕ ಗಂಡನೊಟ್ಟಿಗೆ, 'ನಾ ಒಮ್ಮೆ ಗಂಗಮ್ಮಕ್ಕನ ಮನೆಗೆ ಹೋಗಿ ಬನ್ನೆ. ಹಂಞ ಜಂಬರ ಉಟ್ಟು – ಎಂತ ಹೇಳ್ದೊ. ಆಗ ಮಾಸ್ಟ್ರ.

'ಹೋಗು, ಹೋಗು, ನಂಗೂ ಇಂದ್ ಸುಳ್ಯಕ್ಕೆ ಹೋಕೆ ಉಟ್ಟು ಬಾಕನ ಹಿಂಬೊತ್ತು ಆದು.' – ಎಂತ ಹೇಳ್ದೊ. ಕಮಲಕ್ಕ ಕುಕ್ಕಪ್ಪಣ್ಣನ ಮನೆಗೆ ಬಂದ್ ಅವರ ಅವ್ವ ಸುಬ್ಬಮ್ಮಜ್ಜಿನ ಮಾತಾಡ್ಸಿ, ಪೆದ್ದೋಳ್ತಿಗೆ ಕೊಡುವಮೊದ್ದ್‌ನ ಎಲ್ಲಾ ಕೇಳಿ ತಿಳ್ಕೊಂಡೊ. ಕಮಲಕ್ಕಂಗೂ ಮೊದ್ದ್ ಗೊತ್ತಿತ್ತ್. ಆದರೆ ಹಿರಿಯರೊಟ್ಟಿಗೆ ಇನ್ನೊಮ್ಮೆ ಕೇಳಿಕಂಡ್, ಮರ್ತದರ ನೆಂಪು ಮಾಡಿಕೊಂಬೊದು ಒಳ್ಳೆದಲ್ಲನೋ? ಸುಬ್ಬಮ್ಮಜ್ಜಿಗೆ ಸೊಸೆನೂ ಕಮಲಕ್ಕನೂ ಪೆದ್ದೋಳ್ತಿ ಮೊದ್ದ್‌ನ ಇಸಯ ಮಾತಾಡ್ದ್ ಬಾಳ್ ಕುಸಿ ಕೊಟ್ಟತ್. ಅವುನೂ ಹುರ್ಬುಂದ ಅವರ ಅನ್ಬವದ ಬಂಡಾರಂದ ಒಂದೊಂದೇ ಹೇಳ್ದೊ.

'ಗೂಡೆನ ಹೊಟ್ಟೆಂದ ಕೂಸು ನೆಲಕ್ಕೆ ಬಿದ್ದ ಕೂಡ್ಲೇ ಗೂಡೆಗೆ ಹೊಟ್ಟೆ

ತುಂಬಾ ಒಂದು ಚೊಂಬು ತಣ್ಣಂಗೆ ನೀರ್ ಅಲ್ಲದೆ ಬೆಂಡದ ನೀರ್‌ನ ಕುಡ್ಸೊಕು. ಮತ್ತೆ ಅದ್ ಎರ್ಡ್ ತಿಂಗ ಮುಟ್ಟ, ತಣ್ಣೀರ್ ಕುಡ್ಯಕಾಗದ್. ಹೊಟ್ಟೆಂದ ಕಸ ಬಿದ್ದ ಮೇಲೆ ಅದ್ಕೆ ಕಾಳ ಜೀರಿಗೆ ಕಡ್ಡ್ ಬೆಚ್ಚ ಮಾಡಿ ಒಂದ್ ಬಟ್ಲ್ ಕುಡ್ಸೊಕು. ಮಾರ್ಣೆದಿನ ಬೆಳ್ಗಾರ್‌ಗೆ ಒಮ್ಮೆ ಹಿಂಬೊತ್ತ್ ಮಿಾಂದ್ ಬಂದ ಮೇಲೆ ಒಮ್ಮೆ ದಿನಕ್ಕೆ ಎರ್ಡ್ ಹೊತ್ತು ಹೊಲ ಮೊದ್ದ್ ಕುಡ್ಸೋಕು ಮೂರು ಮೂರು ದಿನಕ್ಕೊಮ್ಮೆ ಬೇರೆ ಬೇರೆ ತರದ ಹೊಲ ಮೊದ್ದು ಕುಡ್ಸೋಕು – ಎಂತ ಹೇಳ್ದೊ. ಆಗ ಕಮಲಕ್ಕ,

'ಹೊಲ ಮೊದ್ದ್‌ಂತೇಳ್ರೆ ಕಳಂಜಿ ಸೊಪ್ಪು, ನೆಲಪ್ಪಾವಡೆ, ಬೈನೆ ಕಾವಸ ಅಲ್ಲನೋ?' – ಎಂತ ಕೇಳ್ದೊ.

'ಹೌದೌದು– ಸುರುಗೆ ಮೂರು ದಿನ ಕಳಂಜಿ ಸೊಪ್ಪು ಕಡ್ಡ್, ಅದ್ಕೆ ಕಡ್ಯಕನ ಮೆಣ್ಸ್ ಮತ್ತೆ ಅರ್ಸಿಣ ಬೆಳ್ಳುಳ್ಳಿ ನಾಕ್ ಎಸಳ್ ಹಾಕಣಿ. ಅದರ ಬೆಚ್ಚ ಮಾಡಿ ಕುಡ್ಸಿನಿ. ಮೂರು ದಿನ ಕಳ್ದ ಮೇಲೆ ನೆಲಪಾವಡೆ ಸೊಪ್ಪುನ ಕಡ್ಡ್ ಕುಡ್ಸಿನಿ. ಅದರ್‌ಂದ ಮೇಲೆ ಮೂರು ದಿನ ಬೈನೆ ಕಾವಸ ಗುದ್ದಿ ರಸ ತೆಗ್ದ್ ಬೆಚ್ಚ ಮಾಡಿ ಕೊಡಿನಿ. ಎಲ್ಲದಕ್ಕೂ ಮೆಣ್ಸ್, ಅರ್ಸಿಣ, ಬೆಳ್ಳುಳ್ಳಿ ಹಾಕೊಕು.'– ಎಂತ ಹೇಳ್ದೊ.

ಗಂಗಮ್ಮಕ್ಕ ನಾವೆಲ್ಲಾ ಒಂದೊಂದು ಬಟ್ಲ್ ತುಂಬಾ ಕಡ್ಡ ಮೊದ್ದ್‌ನ ಕುಡ್ಯೊತಿದ್ದೊ. ಈಗನ ಮಕ್ಕ ಕುಡ್ಯೋ ಕಲೆ?' – ಎಂತ ಹೇಳ್ದೊ. ಆಗ ಕಮಲಕ್ಕ.

'ದನಕ್ಕೆ ಕೊಟ್ಟ ಹಾಂಗೆ ಕಡ್ಡ್ ಕೊಟ್ಟರೆ ಯಾರ್ ಕುಡ್ಯೊವೋ? ಅದ್ಕೆ ನಾ ಒಂದು ಉಪಾಯ ಮಾಡ್ನೆ ಹೇಂಗೂ ಹೊಟ್ಟೆಗೆ ಮೊದ್ದ್ ಹೋದರೆ ಸಾಕಲೆ? ಮೂರು ದಿನಕ್ಕೆ ಬೇಕಾದ ಮೊದ್ದುನ ಸೊಪ್ಪುನ ಒಂದು ಮಡ್ಕೆಗೆ ಹಾಕಿ ಬೇಸಿ ಅದರ ಕಸಾಯಕ್ಕೆ ಅರ್ಸಿಣ ಹೊಡಿ, ಮೆಣ್ಸ್‌ನ ಹೊಡಿ ಒಣ್ಗಿಸಿ ಕುಟ್ಟಿ ಹೊಡಿ ಮಾಡಿಸಿದ ಸುಂಟಿ ಹೊಡಿ, ಬೆಳ್ಳುಳ್ಳಿ ಒಣ್ಗಿಸಿ, ಅದರ ಹೊಡಿ, ಎಲ್ಲಾ ಒಂದೊಂದು ಸವುಂಟು ಹಾಕಿ, ಕುಡ್ಸಿನೆ, ಅದ್ ಕುಡ್ಯಕೆ ಸುಲಬ ಆದೆ. ಬಾಯಿ ಕಂಯಿ ಆಗದಾಂಗೆ ಚಾಳಿ ಬೆಲ್ಲನ ಕಸಾಯಕ್ಕೆ ಸೇರ್ಸಿನೆ ಆಗದೋ? – ಎಂತ ಹೇಳ್ದೊ.

"ಆದು– ಈಗನ ಗೂಡೆಗ ಅಸ್ಟ್ ಕುಡ್ಯೋದೇ ಹೆಚ್ಚ್' – ಎಂತ ಸುಬ್ಬಮ್ಮಜ್ಜಿ ಹೇಳ್ದೊ.

'ಓಮ, ಮೆಣ್ಸ್ ಎಸ್ಟ್ ಬೇಕ್' – ಕಮಲಕ್ಕ ಕೇಳ್ದೊ. ಒಂದ್ ಸೇರ್ ಓಮನ ಬಿಸ್ಲ್‌ಲಿ ಒಣ್‌ಂಗಿಸಿ ಹೊಡಿ ಮಾಡಿ ಇಸಿಕ ಹಂಞ ಒಳ್ಳೆ ಮೆಣ್ಸ್‌ನನೂ ಹೊಡಿ ಮಾಡಿ ಇಸಿಕ. ಊರು ಮೆಣ್ಸ್ ಗೈಪುಗೆ ಹಾಕುದರ ಹಂಞ ಹೊಡಿ ಮಾಡಿಕ. ಇದರ ಮೂರರ ಒಟ್ಟೆಗೆ ಸೇರ್ಸಿ ಒಂದು ಡೊಬ್ಬಲಿ ಹಾಕಿ ಇಸಿಕ. ಕಾರ ಹೆಚ್ಚ್ ಬೇಡ. ಓಮ ಕಾರ ಅಲ್ಲನೋ? – ಈ ಹೊಡಿನ ಎರ್ಡ್ ಸಣ್ಣ ಸವುಂಟು

ಕಾಸಾಯಕ್ಕೆ ಹಾಕಿಕೊಡು ಓಮನ ಹೊಡಿ ಮಾಡಿ ಗಾಳ್ಸಿದ ಮೇಲೆ ಒಳ್ದ್ ಓಮದ ತೆರಿನ ಕಾಯೇ, ಬೆಲ್ಲ, ಬೆಳ್ತಕ್ಕಿ ನೊಟ್ಟಿಗೆ ಕಡ್ದ್, ಕಾಯೆಣ್ಣೆ ಹೊಯ್ದ್ ದಪ್ಪ ದೋಸೆ ಮಾಡಿಕೊಡು. ಇದರ ಹತ್ತ್‌ದಿನ ಕಳ್ದ ಮೇಲೆ ಕೊಟ್ಟರೆ ಸಾಕ್. ಅದ್ ತಿಂಬಕೆ ಲಾಯ್ಕಾದೆ. ಓಮ ಹೆಚ್ಚಿಗೆ ಒಳ್ದರೆ ನಾಕ್ ಕಾಯೆನ ಹಾಲ್ ತೆಗ್ದ್, ಅದರ ಕುಂದಿಸಿ, ಎಂಣೆ ನೆಡ್ಯಕಾಕನ ಅದಕ್ಕೆ ಓಮದ ಹೊಡಿ ಹಾಕಿ, ಚಾಳಿ ಬೆಲ್ಲ ಗುದ್ದಿ ಹಾಕಿ, ಲೇಹದಾಂಗೆ ಮಾಡಿ, ಹಂಞ ಹಸ್‌ನ ತುಪ್ಪ ಹೊಯ್ದ್ ಇಸಿಕ. ಬೊಳ್ಪುಗೆ ಹಿಂಬೊತ್ತು, ನಿಂಬುಳಿನಸ್ಟ್ ಉಂಡೆ ಪೆದ್ದೋಳ್ತಿಗೆ ತಿಂಬಕೆ ಕೊಡು. ಇಲ್ಲರೆ ಓಮದ ಹೊಡಿ, ಬೆಲ್ಲ ಗುದ್ದಿ ಉಂಡೆ ಮಾಡಿ, ಅಕ್ಕಿ ಬಂದಲಿ ಮುಣ್‌ಂಗಿಸಿ, ಸುಕ್ರುಂಡೆನಾಂಗೆ ಕಾಯೆಣ್ಣೆಲಿ ಕಾಸಿಕೊಡು, ಒಂದ್ ಸೇರ್ ಓಮ ಮುಗ್ಯಕಾಕನ ಪೆದ್ದೊಳ್ತಿನ ಮೈನ ನಂಜ್ ನೀರೆಲ್ಲಾ ಆರಿ, ಚುರುಂಟಿ ಅದ್ ಕಡ್ಡಿ ಹಾಂಗೆ ಆದೆ. ಎರ್ಡ್ ತಿಂಗ ಕಳ್ದ ಮೇಲೆ ಮೈ ಬಾಕೆ, ಹೊಟ್ಟೆಗೆ ತೊಂಪು ಕೊಡಕು ಎಳ್ಳ್, ಮೆಂತೆ, ಕೊತ್ತಂಬೆರಿ, ಜೀರಿಗೆ ಹಾಕಿ ಅಡ್ಗೆ ಮಾಡಿ ತಿನ್ನೋಕು. ಅಂದರೆ ಈ ನಾಕ್ ಬಗೆನ ಹೊಡಿ ಮಾಡಿ, ಕಾಯೆ ಹಾಲ್ ಕುಂದಿಸಿ, ಅದ್ ಎಂಣೆ ನೆಡ್ಯಕಾಕನ ಈ ಹೊಡಿಗಳ ಸೇರ್ಸಿ, ಚಾಳಿ ಬೆಲ್ಲ, ಹಸ್‌ನ ತುಪ್ಪನನೂ ಸೇರ್ಸಿ ಮಾಡುವ ಪಾಕಕ್ಕೆ ಎಳ್ಳು, ಮೆಂತೆ ಅಡ್ಗೇಂತ ಹೇಳ್ವೆ, ಎಳ್ಳ್ – ಮೆಂತೆ ಸಮಸಮ ಹಾಕೊಕು. ಅದರ ಅರ್ದ ಕೊತ್ತೆಂಬೆರಿ ಹಾಕೊಕು. ಕೊತ್ತಂಬೆರಿನ ಅರ್ದ ಬಾಗ ಜೀರಿಗೆ ಹಾಕೊಕು. ಈ ನಾಕ್ ಬಗೆನ ಹೊಡಿ ಒಂದು ಸೇರ್ ಇದ್ದರೆ, ಕಮ್ಮಿಗೆ ಹತ್ತ್ ಕಾಯೆನ ಹಾಲಾದರೂ ಬೇಕಾದೆ. ಅದ್ಕೆ ಮೂರು ಕೊಂಡೆ ಹಸ್‌ನ ತುಪ್ಪ ಸೇರ್ಸೊಕು. ಎರ್ಡ್ ಕಟ್ಟ್ ಚಾಳೆ ಬೆಲ್ಲನ ಹೊಡಿ ಮಾಡಿ ಸೇರ್ಸೊಕು. ಈ ಅಡ್ಗೆ ಒಂದು ವೊರ್ಸ ಮುಟ್ಟ ಇಸಿರೂ ಅದ್ ಹಾಳಾದುಲ್ಲೆ. ಎರ್ಡ್ ತಿಂಗ ಕಳ್ದ ಮೇಲೆ ಹೊಟ್ಟೆ ತುಂಬಾ ಉಣಕ್. ಉಂಬಕನ ದಿನಾ ಬೆಣ್ಣೆ ಕಾಸಿದ ತುಪ್ಪನ ಎರ್ಡ್ ಸವುಂಟು ಹುಗ್ಗೆಗೆ ಹಾಕಿ ಉಣೊಕು. ಆಗ ಪೆದ್ದೊಳ್ತಿಗೆ ಎಸ್ಟ್ ಹಾಲ್, ತುಪ್ಪ, ಎಂಣೆ, ಬೆಣ್ಣೆ ಕೊಟ್ಟರೂ ಕಾದ ಓಡ್‌ಗೆ ನೀರ್ ಹೊಯ್ದಂಗೆ, ಸರೀರ ಇದರ ಎಳ್ಕಂಡದೆ. ಮೊಲೆ ಹಾಲ್‌ನೂ ದಾರಾಳ ಆದೆ. ಪೆದ್ದೋಳ್ತಿ ದಿನಾ ದಿನಾ ಮೈ ಕೈ ತುಂಬಿಕಂಡ್ ಪುಸ್ಟಿ ಆದೆ. '– ಸುಬ್ಬಮ್ಮಜ್ಜಿ ಎಲ್ಲಾ ಎಳೆ ಎಳೆ ವಿವರ್ಸಿ ಹೇಳ್ದೊ. ಕಮಲಕ್ಕ,

'ಪೆದ್ದೊಳ್ತಿಗೆ ಉಷ್ಣ ಜಾಸ್ತಿ ಆಗಿ ಮೊಲೆಲಿ ಹಾಲ್ ಆರಿಕಿಲ್ಲೆನೋ?'– ಎಂತ ಕೇಳ್ದೊ. ಅದ್ಕೆ ಸುಬ್ಬಮ್ಮಜ್ಜಿ

'ಪೆದ್ದೋಳ್ತಿಗೆ ಸುರುನ ಮೂರು ದಿನ ಮೂರು ಮುದ್ದೆ ಬೆಚ್ಚ, ಬೆಚ್ಚ ಹುಗ್ಗಿ ಕೊಡಕು. ಮಾರ್ನೆ ದಿನಂದ ಹಂಞ ಹುಗ್ಗಿ ಹೆಚ್ಚ್ ಕೊಡಕು. ಸೀಗೆ ಸೊಪ್ಪುನ ಬೇಸಿ ಅದರ ಸಾರ್ ತೆಗ್ದ್, ಅದ್ಕೆ ಒಳ್ಳೆ ಮೆಣ್ಸ್ ಹೊಡಿ, ಜೀರಿಗೆ ಹೊಡಿ, ಉಪ್ಪು ಹಾಕಿ

ಕಾಯೆಂಣೆಲಿ ಬೆಳ್ಳುಳ್ಳಿ, ದಾಸಿಮೆ ಅಗ್ರಣೆ ಹಾಕಿ, ಅದರ ಪೆದ್ದೋಳ್ತಿಗೆ ಹುಗ್ಗೆಗೆ ಕಲ್ಸಿ ತಿಂಬಕೆ ಕೊಡೊಕು. ದಿನ ಹೋದ ಹಾಂಗೆ ಹಂಞ ಹಂಞ ಹುಗ್ಗೆ ಹೆಚ್ಚಿಗೆ ಕೊಟ್ಟ್‌ಕಂಡ್ ಬರೊಕು. ಹೊಟ್ಟೆ ತುಂಬಾ ಮೊದ್ದ್ ಕುಡ್ಯಕನ ಊಟ ಕಮ್ಮಿ ಸಾಕಾಗಿ ಹೊಟ್ಟೆ ಚಿರಿಂಟಿದೆ. ಒಂದು ಇಡೀ ಸೀರೆನ ಮಡಿಕೆ ಮಾಡಿ ಹೊಟ್ಟೆಗೆ ಅಮ್ರಸಿ ಸುತ್ತೋಕು. ಇಲ್ಲರೆ ಗಾಳಿ ತುಂಬಿ ಹೊಟ್ಟೆ ದೊಡದಾದೆ. ಪೆದ್ದೋಳ್ತಿ ಮೊಲ್ಗಿಕಾಕನನೂ ನೀಟ ಮೊಲ್ಗಿ ಒಂದು ಕಾಲ್ ಮೇಲೆ ಇನ್ನೊಂದು ಕಾಲ್ ಹಾಕಿ ಅಮ್ರಸಿ ಮೊಲ್ಗೊಕು. ಕಾಲ್ ಅಗಲ್ಸಿ ಮೊಲ್ಗಿಕೆ ಆಗದ್. ಹೊಟ್ಟೆಗೆ ಸೀರೆ ಸುಂದಿರೆ ಸೊಂಟಕೆ ಬಲ ಬಂದದೆ. ' –ಎಂತ ಹೇಳ್ದೊ.

ಕಮಲಕ್ಕ ಅವು ಹೇಳ್ದರ ಎಲ್ಲಾ ಒಂದು ಪುಸ್ತಕಲಿ ಬರ್ದೊಂಡೊ. ಸುಬ್ಬಮ್ಮಜ್ಜಿ,

'ಇಂದಾ ಕಮಲಾ, ಹದ್ನಾರ್ ದಿನ ಮುಟ್ಟ ಪೆದ್ದೋಳ್ತಿಗೆ ಹುಗ್ಗೆನೊಟ್ಟಿಗೆ ಎರ್ಡ್ ಸವುಂಟು ಕಾಯೆಣ್ಣೆ ಹಾಕಿ ತಿಂಬಕೆ ಕೊಡು. ಗಾಣದ ಕಾಯೆಣ್ಣೆ ಬೇಡ. ನೀನೇ ಒಂದು ಹತ್ತ್ ಕಾಯೆನ ಹಾಲ್ ತೆಗ್ದ್, ಕುಂದಿಸಿ ಎಂಣೆ ನೆಡ್ಯಕಾಕನ ಅದರ ಎಂಣೆನ ತೆಗ್ದ್ ಒಂದು ಸೇರ್ ಕುಪ್ಪಿಲಿ ತುಂಬುಸಿ ಇಸಿಕ. ಅದ್ ಒಳ್ಳೆ ಗಮ ಗಮಾಂತೇಳಿ ತುಪ್ಪದ ಹಾಂಗೆ ತಿಂಬಕೆ ರುಚಿ ಇದ್ದದೆ. ಕಾಯೆಣ್ಣೆ ಹೊಟ್ಟೆ ಚಿರಿಂಟಿಕೆ ಒಳ್ಳೆದ್. ಕಾಯೆ ಹಾಲ್ ತೆಗ್ಯಕಾಕನ ಕಾಯೆ ಹೂಗೆ ಹಂಞ ನೀರ್ ಸೇರ್ಸಿ, ಅದರ ಒಂದು ಸೆಕೆಗೆ ಬೇಸ್. ಹಂಞ ಅರ್ಸಿಣ ಕೊಂಬುನ ಅದ್ಕೆ ಗುದ್ದಿ ಸೇರ್ಸಿಕ. ಬೇಸಿದ ಕಾಯೆ ಹೂನ ಕಡ್ದ್ ಹಾಲ್ ತೆಗಿ. ಆಗ ಕಾಯೆ ಹೂವುಂದ ಹಾಲ್ ಲಾಯ್ಕ್ ಬುಟ್ಟದೆ. ನೋಡ್, ಅದರ್‌ಂದ ತೆಗ್ದ ಎಂಣೆ ಎಸ್ಟ್ ಲಾಯ್ಕ್ ಇದ್ದದೇಂತ. ಉಂಬಕೆ ಕಮ್ಮಂಗೆ ಆದೆ.' – ಎಂತ ಕಾಯೆ ಹಾಲ್‌ಂದ ಎಂಣೆ ತೆಗ್ಯವ ಕ್ರಮ ಎಲ್ಲಾ ವಿವರ್ಸಿ ಹೇಳ್ದೊ. ಆಗ ಗಂಗಮ್ಮಕ್ಕ,

'ಅತ್ತೆ, ನೀವು ನಂಗೆ ಪೆದ್ದೋಳ್ತಿ ಇರಿಕಾಕನ ದಿನಾ ಪಲ್ಲೋಡಿ ಮಾಡಿ ಕೊಡ್ತಿದ್ದರಲ್ಲಾ? ಅದರ ಕಮಲಕ್ಕಂಗೆ ಹೇಳಿ.' – ಎಂತ ಹೇಳ್ದೊ.

ಕಾಡ್‌ಲಿದ್ದ ಎಲ್ಲಾ ಕಣಿರ್ ಕೊಡಿಗಳ ತಂದ್ ಅದರ ಅಳೆಗೆಲಿ ಬೇಸಿ, ಅದ್ಕೆ ಹುಳಿ, ಉಪ್ಪು, ಮೆಣ್ಸ್, ಬೆಳ್ಳುಳ್ಳಿ, ಹಾಕಿ ಕಡ್ದ್ ಅದರ ಕೊದಿಸಿ ಇಸಿಕ. ಆ ಪಲ್ಲೋಡಿ ಉಂಬಕನ ನೆಂಚಿಕೆ ಆದೆ. ಹೊಟ್ಟೆಲಿದ್ದ ಅಗ್ರ ಎಲ್ಲಾ ಹೋದೆ. ನೆಲ್ಲಿಕಾಯಿನ ಒಣ್ಗಿಸಿ ಇಸಿದ್ ಇದ್ದರೆ, ಅದರ ನೀರ್‌ಲಿ ಪದನಿಸಿ ಅದರ್‌ಂದ ಪೊಜ್ಜಿ ಮಾಡ್ರೆ ಅದ್ ಪೆದ್ದೋಳ್ತಿಗೆ ಬಾಳ ಒಳ್ಳೇದ್. ಕಾಯೆ ಹಾಕಿದ ಗೈಪುನ ಹದ್ನಾರ್ ದಿನ ಮುಟ್ಟ ಕೊಡ್ಬೇಡ.' – ಎಂತ ಸುಬ್ಬಮ್ಮಜ್ಜಿ ಹೇಳ್ದೊ.

'ಒಂದ್ ಗೆಂಡೆ ಬೆಳ್ಳುಳ್ಳಿನ ಸುಟ್ಟ್, ಚೋಲಿ ತೆಗ್ದ್, ಸುಟ್ಟ ಗೈಪುನ ಊರು ಮೆಣ್ಸ್, ಉಪ್ಪು, ಹುಳಿ ಸೇರ್ಸಿ ಗುದ್ದಿ ಇಸಿಕ. ಈ ಪೊಜ್ಜಿ ಪೆದ್ದೋಳ್ತಿಗೆ ಬಾಳ ಒಳ್ಳದ್.

ಸಾಂಬ್ರಾಣಿ ಸೊಪ್ಪಿನ ಸಾರ್ ಮಾಡಿ ಕೊಡಕ್. ಇದೆಲ್ಲಾ ಹೊಟ್ಟೆಗೆ ಒಳ್ಳೆದ್.' – ಎಂತ ತಿರ್ಗ ಹೇಳ್ದೊ.

ಕಮಲಕ್ಕ, 'ದೊಡವ, ಕೂಸುಗೆ ಮೈಗೆ ಪೂಜುವ ಮೊದ್ದ್, ಹೊಟ್ಟೆಗೆ ಕುಡ್ಸುವ ಕಣೆರ್‌ನ ಹಂಞ ವಿವರಿಸಿ ಹೇಳಿನಿ' –ಎಂತ ಹೇಳ್ದೊ.

'ಇಂದಾ ಗಮನ ಇಟ್ಟ್ ಕೇಳ್. ಕೂಸುಗೆ ಸುರುಗೆ ಮೂರು ದಿನ ಊರು ಕೋಳಿ ಮೊಟ್ಟೆನ ಬೆಳ್ದ್ ನೋಳಿನ ಮೈಗೆ ಪೂಜಿ, ಅರ್ದ ಗಂಟೆ ಕಳ್ದ ಮೇಲೆ ಮಿಾಸ್. ಕೂಸುನೊನೂ ಪೆದ್ದೋಳ್ತಿನೊನೂ ಹಳ್ಳಿ ಮೊದ್ದು ಮಾಡೊವು ಎರ್ಡ್ ಹೊತ್ತು ಮಿಾಸೊಕು. ಮೂರು ದಿನ ಕಳ್ದ ಮೇಲೆ, ಗಂದ – ಚಂದನ, ಚಾಳೆನ ಎಳ್ತ್ ಕರ್ಕ್, ಸೊರ್ಗೆ ಹೂ ಒಣ್ಗಿಸಿದ್ ಇದ್ದರೆ ಅದ್ಕೆ ಸೇರ್ಸಿಕ. ಇದರೆಲ್ಲಾ ಕಡ್ಡ್ ಒಂದು ಅಳಗೆಲಿ ಹಾಕಿ ಕೊದಿಸಿ ಇಸಿಕ. ಕೂಸುನ ಮೈಗೆ ಪೂಜಿಕನ ಅರೆ ಬೆಚ್ಚ ಇರೊಕು. ಹತ್ತ್ ದಿನ ಕಳ್ದ ಮೇಲೆ ಗರ್ಗದ ಕೊಡಿ ಮತ್ತೆ ಕಾಯೆ ಹೂ ಸೇರ್ಸಿ ಕಡ್ಡ್ ಅದರ ಅರೆ ಬೆಚ್ಚ ಮಾಡಿ ಇಪ್ಪತ್ತೊಂದು ದಿನದ ಮುಟ್ಟ ಮೈಗೆ ಪೂಜು. ಕೂಸುನ ಕಣ್ಣ್‌ಗೆ ದಿನಾ ಅಯ್ಯೆ ಮೊಲೆ ಕೊಟ್ಟ್ ಮೊಲ್ಗಿಸಿಕನ ಎರ್ಡ್ ಹನಿ ಮೊಲೆ ಹಾಲ್ ಬುಡು. ನೆತ್ತಿಗೆನೂ ಮೊಲೆ ಹಾಲ್ನ ಅಂಗೈಗೆ ಹಿರ್ದ್ ತಲೆಗೆ ಪೂಜು. ಅಯ್ಯೆನ ಮೊದ್ದ್‌ನ ಚೂಡು, ಮೊಲೆ ಹಾಲ್‌ಲಿ ಕೂಸುಗೆನೂ ಇದ್ದರೆ, ಇದೆಲ್ಲಾ ಕಮ್ಮಿ ಆದೆ.' – ಸುಬ್ಬಮ್ಮಜ್ಜಿ ಹೇಳ್ದೊ.

'ಅಲ್ಲ ದೊಡವ ಒಂದು ಪೆದ್ದೋಳ್ತಿ ಸಾಂಕುದು ಎಸ್ಟ್ ಕಸ್ಟ ಅಲ್ಲನೋ?'– ಕಮಲಕ್ಕ ಹೇಳ್ದೊ.

'ಅದ್ಕೆ ಅಲ್ಲನೋ? ಈಗನ ಹೆಮ್ಮಕ್ಕಳಿಗೆ ಅದ್ರಿಕೆ ಬೊತ್ತ್. ಅದ್ಕೆ ಕಂಪೆನಿ ಮೊದ್ದ್ ಕುಡ್ದ್, ಗುಡಿ ಹೊದ್ದ್ ಮೊಲ್ಗುವೆ. ಒಂದು ಮಳೆ ಬೀಳಿಕಾಕನ, ಶೀತ, ನೆಗಡಿ, ಹೊಟ್ಟೆಗೆ ಉರ್ಚೆಲ್ ಕುತ್ತ ಹಿಡ್ದದೆ. ನಮ್ಮ ಈ ಕಾಡ್' ಮೊದ್ದ್ ಕುಡ್ದರೆ ಆಟಿ ತಿಂಗಳ ಜಡಿ ಮಳೆಗೆ ನೆಂದರೂ, ಸೀತ ಬಂದರೆ ಕೇಳ್? ಮೈ ಯಾಗೋಳೂ ಬೆಚ್ಚಂಗೆ ಇದ್ದದೆ.' ಸುಬ್ಬಮ್ಮಜ್ಜಿ ಹೇಳ್ದೊ.

ಅದ್ ನಿಜಾಂತ ಕಮಲಕ್ಕನೂ ಗಂಗಮ್ಮಕ್ಕನೂ ದನಿಗೂಡ್ಸಿದೊ.

ಇಪ್ಪತ್ತೊಂದು ದಿನ ಕಳ್ದ ಮೇಲೆ ಕೂಸುಗೆ ಎಂಣೆ ಕಾಸಿ, ದಿನಾ ಎರ್ಡ್ ಹೊತ್ತು ಎಂಣೆ ಪೂಜಿ, ಒಂದೊಂದು ಗಂಟೆ ಎಂಣೆ ಎಳ್ಯಕೆ ಚಕ್ಕಳಲಿ ಮೊಲ್ಗಿಸಿ ಮತ್ತೆ ಮಿಾಸಿನಿ' –ಸುಬ್ಬಮ್ಮಜ್ಜಿ ಹೇಳ್ದೊ.

'ಕೂಸುಗೆ ಎಂಣೆ ಕಾಸುದರ ಹಂಞ ಹೇಳಿ ದೊಡವ' –ಎಂತ ಕಮಲಕ್ಕ ಹೇಳ್ದೊ.

ಗರ್ಗದ ಸೊಪ್ಪಿನನೂ, ಕಾಯೆ ಹೂನನೂ ಕಡ್ಡ್ ಅದರ ರಸ ತೆಗ್ದ್, ರಸ

ಎಸ್ಟ್ ಉಟ್ಟೋ ಅಸ್ಟೇ ಕಾಯೆಣ್ಣೆನ ಸೇರ್ಸಿ ಕೊದಿಸಿನಿ. ಅದ್ ಕೊದ್ದ್ ಆಕನ ಸೆಡೆಲಿ ಗೋಂಚಿಕನ ಅದರ ಹಿಂಟೆ ಸಿಕ್ಕಿದೆ. ಆ ಹಿಂಟೆನ ಕೈಲಿ ತೆಗ್ಡ್ ಬೆರ್ಳ್‌ನ ಕೊಡಿಲಿ ಪಿರಿ ಮಾಡಿ ನೋಡಿನಿ. ಪಿರಿ ಮಾಡಿಕೆ ಬಂದರೆ ಅದರ ಇಳ್ಸಿ, ತಣ್ಣಂಗೆ ಮಾಡಿ, ಕುಪ್ಪಿಗೆ ತುಂಬುಸಿಕಣಿ. ಎಂಣೆ ಹಂಞ, ಹಂಞನೇ ಕಾಸೊಕು. ತಿಂಗ ಹೋದ ಹಾಂಗೆ ಎಂಣೆನ ಹೆಚ್ಚ್ ಕೊದುಸೊಕು. ಪಿರಿ ಮುಂದೆನ ಸಲಂದ ಗಟ್ಟಿ ಇರೊಕು. ಇದೆಲ್ಲಾ ಬಾಯಿಲಿ ಹೇಳಿಕೆ ಆಕಿಲ್ಲೆ. ಇದೆಲ್ಲಾ ಅನ್ಬವಂದ ಬರೊಕು. ಹಿಂದೆನ ಕಾಲಲಿ ಕೂಸುಗೆ ಎಂಣೆ ಕಾಸುವ ಅಜ್ಜಿಕಳೇ ಇರ್ತಿದ್ದೊ. ಅವ್ಕೆ ಅದರ ಹದ ಎಲ್ಲಾ ಗೊತ್ತಿರ್ತಿತ್ತ್.' – ಸುಬ್ಬಮ್ಮಜ್ಜಿ ಹೇಳ್ದೊ.

'ನನ್ನ ಪುಳ್ಳಿಗೆ ನೀವೇ ಎಂಣೆ ಕಾಸಿ ದೊಡವ. ನೀವು ಕಾಸಿಕನ ನಾ ನೋಡಿಕಣೆ. ನಂಗೆ ಕಲ್ತಾಂಗೂ ಆತ್." – ಕಮಲಕ್ಕ ಹೇಳ್ದೊ.

"ಅದೇನ್ ಬ್ರಹ್ಮ ವಿದ್ಯೆನೋ? ಒಂದೆರ್ಡ್ ಸಲ ನೋಡ್ರೆ ಎಲ್ಲಾ ಬಂದದೆ"– ಸುಬ್ಬಮ್ಮಜ್ಜಿ ಕುಸಿಂದ ಹೇಳ್ದೊ.

"ಕುಂಟು ನೇರಳೆ ಕೊಡಿ, ಪೇರಳೆ ಕೊಡಿ, ಕಾಡ್ ನೆಕ್ಕರೆ ಕೊಡಿ, ಎಂಜಿರ್ ಸೊಪ್ಪುನ ಕೊಡಿ, ಗೇರ್ ಬೀಜದ ಕೊಡಿ, ಹಾಗಲಕಾಯಿ ಸೊಪ್ಪುನ ಕೊಡಿ, – ಇದರೆಲ್ಲಾ ಕೂಸುಗೆ ಕಣೆರ್ ಮೊದ್ದ್ ಕುಡ್ಸುವೆ. ಹೂ ಕೂಸುಗೆ ಹೆಚ್ಚ್ ಕೊಡಿಕೆ ಆಗದ್. ಒಂದು ನಾಕ್ ಕೊಡಿ ಸೊಪ್ಪುನ ಬಾಳೆಲೆ ಬಾಡ್ಸಿ, ಅದರ್ಲಿ ಕಟ್ಟಿ ಬಿಸಿ ಬೂದಿಲಿ ಹುದ್ಗುಸಿ ಇಸೊಕು. ಅದ್ ಅಲ್ಲೇ ಬೆಂದದೆ. ಅದರ ತೆಗ್ಡ್ ಮೊದ್ದ್ ಅರಿವ ಕಲ್ಲ್‌ಲಿ ಅದರ ಹಾಕಿ, ಅದ್ಕೆ ನಾಕ್ ಬಿತ್ತ್ ಜೀರ್ದಕ್ಕಿ ಸೇರ್ಸಿ, ಅರಿಯೊಕು. ಅದರ ಒಂದು ಬೆಳ್ಡ್ ಮಡಿ ಅರ್ವೆಲಿ ಕಟ್ಟಿ, ಎರ್ಡ್ ಹನಿ ರಸನ ಕೂಸುನ ಬಾಯಿಗೆ ಹಿಂಡೊಕು. ಹೆಚ್ಚ್ ಕೊಡಿಕೆ ಆಗದ್. ಮೂರು, ಮೂರು ದಿನಕ್ಕೆ ಬೇರೆ ಬೇರೆ ಕಣೆರ್ ಕೊಡಿಗಳ ರಸ ತೆಗ್ಡ್ ಕುಡ್ಸೊಕು. ಆಗ ಕೂಸುಗೆ ಬಾಯಿಲಿ ಇದ್ದ ಅಗ್ರ, ಹೊಟ್ಟೆಲಿ ಇದ್ದ ಅಗ್ರ ಎಲ್ಲಾ ಹೋದೆ. ವಾರಕ್ಕೊಮ್ಮೆ ಬಜೆನ ಅರ್ದ್ ಕೈ ಬೆರ್ಳ್‌ಗೆ ಮಡಿ ಅರ್ವೆ ಸುತ್ತಿ ಅದರ್ಲಿ ಬಜದ ರಸನ ಮುಣ್ಂಗಿಸಿ, ಕೂಸುನ ಬಾಯಿ ಬುಡ್ಸಿ ನಾಲಗೆನ ಒರ್ಸೊಕು. ಇದೆಲ್ಲಾ ಬಾಳ ಜಾಗ್ರತೆಲಿ ಮಾಡೊಕು." – ಸುಬ್ಬಮ್ಮಜ್ಜಿ ಪ್ರತಿಯೊಂದು ಇಸಯನನೂ ಬುಡ್ಸಿ, ಬುಡ್ಸಿ ಬುಡ್ಸಿ ಹೇಳ್ದೊ.

"ದೊಡವಾ, ಪೆದ್ದೊಳ್ತಿಗೆ ಮೈಗೆ ಹಾಕಿಕೆ ಯಾವ ಎಂಣೆ ಒಳ್ಳೆದ್?"– ಕಮಲಕ್ಕ ಹೇಳ್ದೊ.

"ಪೆದ್ದೋಳ್ತಿಗೆ ಹೊಟ್ಟೆಗೆ ಕೊಡುವ ಮೊದ್ದ್‌ನ ಚೂಡ್‌ಲಿ ಮೈ ಎಲ್ಲಾ ಬಿಸಿ ಇದ್ದದೆ. ಕೈ ಕಾಲ್ ಕಿಚ್ಚ್ ಬಂದದೆ. ಅದ್ ತೊಂಪಾಕೆ ಹೊನ್ನೆ ಕಾಯಿನ ಎಂಣೆ ಬಾಳ ಒಳ್ಳೆದ್. ಮುಂದೆಲ್ಲಾ ಬೈಲ್‌ಲಿ ಹೊನ್ನೆ ಮರಗ ಇರ್ತಿದ್ದೊ. ನಾವೆಲ್ಲಾ ಅದರ

ಕಾಯಿನ ಕೊಯ್ದ್, ಚೋಲಿ ತೆಗ್ದ್ ಅದರ ಬೆಂಡ್‌ನ ಕಡ್ದ್, ಬೇಸಿ ಎಂಣೆ ತೆಗ್ಯತಿದ್ದೊ. ಈಗ ಹೊನ್ನೆ ಮರನೂ ಇಲ್ಲೆ. ಎಂಣೆ ತೆಗ್ಯವೂ ಇಲ್ಲೆ. ಈಗ ಅಂಗ್ಡಿಲಿ ಸಿಕ್ಕುವ ಹೊನ್ನೆಂಣೆನೇ ಗತಿ. ನಿಂಗೆ ಸಿಕ್ಕಿರೆ ಎಲ್ಲಾ ಕಾಡ್ ಎಂಣೆಗಳ ಎರ್ಡೆರ್ಡ್ ಕೊಂಡೆ ಒಂದು ಬರ್‌ಣಿಲಿ ಹಾಕಿ ಇಸಿಕ. ಕಾಡ್‌ಲಿ ಚೊಳ್‌ಗಲ್ ಮರ ಇದ್ದದೆ. ಅದರ ಬಿತ್ತ್‌ಂದ ಎಂಣೆ ತೆಗ್ದವೆ. ನಾಣೇಲ್ ಮರದ ಬಿತ್ತ್‌ಂದಲೂ ಎಂಣೆ ತೆಗ್ದವೆ. ಆ ಎಂಣೆ ಪಿತ್ತ ಇಳ್ಯಕೆ ಬಾಳ ಒಳ್ಳೇದ್. ಗಟ್ಟದ ಹರಳೆಂಣೆ, ಚಿಕ್ಕ ಹರಳೆಣ್ಣೆ, ಬೇವಿನ ಎಂಣೆ – ಇದೆಲ್ಲಾ ಸಿಕ್ಕಿರೆ ಎಲ್ಲದರನೂ ಸೇರ್ಸಿ ಇಸಿಕ. ಈ ಮಿಶ್ರ ಎಂಣೆನ ಮೆದ್ದೋಳ್ತಿ ಮೈಗೆ ಪೂಜು. ತಲೆಗೆ ಕಾಯೆಂಣೆ ಹಾಕ್. ನಲ್ವತ್ತ್ ದಿನ ಮುಟ್ಟ ಪೆದ್ದೋಳ್ತಿಗೆ ಮೈಗೆ ಎರ್ಡ್ ಹೊತ್ತ್ ಎಂಣೆ ಪೂಜಿ, ಒಂದೊಂದು ಗಂಟೆ ಎಂಣೆ ಎಳ್ಯಕೆ ಕುದ್ರಿಸಿ, ಮತ್ತೆ ಬೆಚ್ಚ ಬೆಚ್ಚ ನೀರ್‌ಲಿ ಮಿಾಸೊಕು. ಮಿಾಸಿಕನನೂ ಹಾಂಗೆ ಪೆದ್ದೋಳ್ತಿ ಮಿಾಸುವ ಕ್ರಮನೇ ಬೇರೆ ಉಟ್ಟು. ಪೆದ್ದೋಳ್ತಿನ ನೀರೆಡಿ ಮೂಲೆಲಿ ನಿಲ್ಸಿ, ಅದರ ಮೈನ ಸಂದ್ ಸಂದ್‌ಗೆ ನೀರ್‌ನ ದೂರಂದ ಚೋಂಪೊಕು. ನೀರ್ ಚೋಂಪಿದಾಂಗೆ ಪೆದ್ದೋಳ್ತಿ ತಿರ್ಗಿಕಂಡ್, ನೀರ್ ಬೀಳದ ಜಾಗೆಗೆ ಮೈನ ಒಡ್ಡಿಕಂಡ್ ನಿಲ್ಲೋಕು. ಸುರುಗೆ ಹೆಗ್ಲ್‌ಗೆ ಮೂರು ಚೊಂಬು, ಮತ್ತೆ ಕಂಕ್ಳಡಿ ಮೂರು ಚೊಂಬು, ಸೊಂಟಕ್ಕೆ ಮೂರು ಚೊಂಬು, ಕುಂಡೆ ಅಂಡ್‌ಗೆ ಮೂರ್ ಚೊಂಬು, ಕಾಲ್‌ಗೆ, ಬೆನ್ನ್‌ಗೆ – ಹೀಂಗೆ ಎಲ್ಲಾ ಪುಡೆಗೂ ಮೂರ್ಮೂರು ಚೊಂಬು ನೀರ್ನ್ ಚೋಂಪೋಕು. ಪೆದ್ದೋಳ್ತಿಗೆ ನೀರ್ ಹಾಕೊವು ಒಳ್ಳೆ ಗಟ್ಟಿ ಮುಟ್ಟಾಗಿರೊಕು. ಶರೀರದ ಎಲ್ಲಾ ಅಂಗಾಂಗಗಳಿಗೆ ನೀರ್ ಚೋಂಪಿ ಆ ಮೇಲೆ ಸೀಗೆ ಹೊಡಿಲಿ ತಲೆ ತೊಳ್ದ್ ಮೂರು ಚೊಂಬು ಒಡ್ಯೆನ ತಲೆಗೆ ಹೊಯ್ಯೊಕು. ಆಗ ತಲೆನ ಚೂಡು ಇಳ್ದದೆ. ಬೈರಾಸ್‌ಲಿ ತಲೆ ಚೆಂಡಿ ತೆಗ್ದ್ ತಲೆಗೆ ಸುತ್ತಿ. ಕಡ್ಲೆ ಹೊಡಿ ಹಾಕಿ ಮೈ ತೊಳ್ಯೊಕು. ಎಂಣೆ ಜಿಡ್ಡ್ ಹೋಕೆ ಸಾಬಾನ್‌ಂದ ಕಡ್ಲೆ ಹೊಡಿ ಒಳ್ಳದ್. ಓಮ ತಿಂಬಕನ ಪೆದ್ದೋಳ್ತಿಗೆ ಕಾಲ್ ಬಗ ಬಗನೆ ಉರ್ದ್ದ್ ಕಿಚ್ಚಿ ಬಂದದೆ. ಅದ್ಕೆ ಮೈಗೆ ಎಂಣೆ ಹಾಕಿ ಕುದ್ರಿಕನ ಒಂದು ಪಾತ್ರಲಿ, ಇಲ್ಲರೆ ದೊಡ್ಡ ಕಮ್ಮುನ ಹಾಳೆಲಿ ಒಡ್ಯೆ ಹಾಕಿ, ಅದರ್ಲಿ ಕಾಲ್ ಹುದ್ಗಿಸಿ, ಎಂಣೆ ಎಳ್ಯಕನ ಮುಟ್ಟ ಕುದ್ರುಸೊಕು. ದಡ್ಸ್‌ನ ಕೆತ್ತೆನ ತಂದ್ ಒಂದು ದೊಡ್ಡ ಮೊಣ್ಣ್‌ನ ಮಂಡೆಲಿ ಕೆತ್ತೆನ ಗುದ್ದಿ ಹಾಕಿ, ಬಿಸಿ ನೀರ್ ಹೊಯ್ದ್ ಇಸೊಕು. ಅದ್ ನೋಳಿ ಬುಟ್ಟ್ ಮಂದದ ಒಡ್ಯೆ ಆದೆ. ವಾರಕ್ಕೊಮ್ಮೆ ಕೆತ್ತೆನ ಬದಾಲ್ಲೋಕು."– ಎಂತ ಸುಬ್ಬಮ್ಮಜ್ಜಿ ಪೆದ್ದೋಳ್ತಿಗೆ ಹಾಕುವ ಎಂಣೆಂದ ಹಿಡ್ದ್, ಮಿಾಸುವ ಕ್ರಮ, ಒಡ್ಯೆ ಮಾಡುವ ಕ್ರಮ ಎಲ್ಲಾ ಬುಡ್ಸಿ ಹೇಳ್ದೊ. ಕಮಲಕ್ಕಂಗೆ ಸುಬ್ಬಮ್ಮಜ್ಜಿನ ಅನ್ಬವದ ಮಾತ್‌ನ ಕೇಳಿ ಬಾಳ ಕುಸಿ ಆತ್. ಗಂಗಮ್ಮಕ್ಕ ಒತ್ತಾಯಂದ ಕಮಲಕ್ಕಂಗೆ ಉಂಬಕೆ ನೀರ್ ಕೊಟ್ಟೊ.

"ನೀವು ಬಾದೇ ಅಪ್ರೂಪ. ಮದ್ಯಾನದ ಹೊತ್ತ್. ಉಣದೆ ಹೇಂಗೆ ಕಳ್ಸುದು? ಉಂಡ್‌ದೇ ಹೋಗಿ" - ಎಂತ ಒತ್ತಾಯ ಮಾಡ್ದೊ.

ಸೋಂತೆ ಕ್ಯಾ ಗೈಪುಲಿ ಕಮಲಕ್ಕ ಉಂಡೊ. ನಿನ್ನೆನ ಚಿಬೆರಿ, ಮುಂಡಿಗೆಡ್ಡೆ ಹಾಕಿ ಮಾಡ್ದ ಆರ್ಸಿದ ಗೈಪುನೂ ಇತ್ತ್. ಕಮಲಕ್ಕಂಗೇಂತ ಹಾಳೆ ಮೀನ್ ಚಟ್ನಿ ಗಂಗಮ್ಮಕ್ಕ ಮಾಡಿ ಇಸಿದ್ದೊ. ಧಿನಾ ತನ್ನ ಅಡ್ಗೆ ಉಂಡ್, ಉಂಡ್ ಬೇಜಾರಾಗಿದ್ದ ಕಮಲಕ್ಕಂಗೆ ಗಂಗಮ್ಮಕ್ಕನ ಕೈರುಚಿ ಬಾಳ ಪಸಂದ ಆತ್.

"ನೀವು ಗೈಪು ಲಾಯ್ಕ್ ಮಾಡ್ರೆ ಗಂಗಮ್ಮಕ್ಕ ಇಂದ್‌ನಾ ಒಂದು ಪುಂಡಿ ಹೆಚ್ಚಿಗೆ ಉಂಡೆ, ಮುಂಡಿ ಲಾಯ್ಕ್ ಬೆಂದುಟು. ಇದರ ಬಿತ್ತ್ ನಂಗೂ ಒಂದು ಕೊಡೊಕು". - ಎಂತ ಕಮಲಕ್ಕ ಹೇಳ್ದೊ.

"ಇದ್ ಹಾಲ್ ಮುಂಡಿ, ತೊರ್ಸುದುಲ್ಲೆ. ಒಂದೇ ಸೆಕೆಗೆ ಬೆಂದದೆ. ನಾ ಬಿತ್ತ್ ತೆಗ್ಡ್ ಇಸ್ಯಳೆ. ಮಳೆ ಬೀಳಿಕಾಕನ ಕೊಟ್ಟನೆ"- ಗಂಗಮ್ಮಕ್ಕ ಹೇಳ್ದೊ. ಹೊತ್ತ್ ಇಳ್ಯಕಾಕನ ಕಮಲಕ್ಕ ಗಂಗಮ್ಮಕ್ಕ ಕೊಟ್ಟ ಚಾಕುಡ್ದ್ ಮನೆಗೆ ಬಂದೊ.

ಕಮಲಕ್ಕಂಗೆ ಕುದ್ದರೂ, ನಿತ್ತರೂ, ಕೆಲ್ಸ ಮಾಡಿಕಾಕನೆಲ್ಲಾ ಪೆದ್ದೋಳ್ತಿನ ಮೊದ್ದ್‌ದೇ ತಲೆಲಿ ಸುತ್ತ್‌ತಿತ್ತ್. 'ನಂಗೂ ಒಂದ್ ಹೆಣ್ಣ್ ಮಗ ಇರ್ತಿದ್ದರೆ, ಅದ್ ಬೊಸ್ರಿ ಆಗಿ ಹೆರಿಕೆ ತೌರಿಗೆ ಬಾಕಾಕನ, ನಾನೂ ಪೆದ್ದೋಳ್ತಿ ಮೊದ್ದ್‌ನ ಅಟ್ಟೈಸ್ರ ಮಾಡಿ ಪೆದ್ದೋಳ್ತಿನ ಸಾಕ್ತಿದ್ದೆ. ಏನು ಮಾಡ್ದು? ನಂಗೆ ಆ ಭಾಗ್ಯ ಇಲ್ಲೇಂತ - ಪೇಚಾಡಿಕೊಂಡೊ. 'ಈಗ ಸೊಸೆ ಮಾನಿಗಾದರೂ ನಂದಾದಸ್ಟ್ ಸಾಯ ಮಾಡಿ ಪೆದ್ದೋಳ್ತಿ ಮೊದ್ದ್‌ನ ಜೋಡ್ಸಿಕೊಡೊಕು. ಜಯಂತಿಗುನೂ ಸಾಯ ಆದೆ-ಎಂತ ಗ್ರೇಸಿ, ಮೊದ್ದ್‌ನ ಜೋಡ್ಸುವ ಅಟ್ಟಣೆ ಸುರು ಮಾಡ್ದೊ.

ಸುರುಗೆ ಪೆದ್ದೋಳ್ತಿಗೆ ಮೈಗೆ ಹಾಕುವ ಎಂಣೆನ ಎಲ್ಲಿಂದಾದರೂ ತರ್ಸಿ ಇಸೊಕು. ಅಂಗ್ಡಿ ಎಂಣೆ ಬೇಡ. ಈಗಲೂ ಕಾಡ್ ಪುಡೆಲಿದ್ದ ಹಳ್ಳಿಯೊವು ಹೊನ್ನೆಂಣೆ, ಹರ್ಳೆಂಣೆ, ಚೊಳ್ಗಲ್ ಎಂಣೆ - ಎಲ್ಲಾ ಮಾಡಿ ಪೇಟೆ ಅಂಗ್ಡಿಗೆ ಮಾರೋವು ಒಳೊ. ಕುಕ್ಕಪ್ಪಣ್ಣನ ಹಕ್ಕಲೆ ಇಚಾರ್ಸೋಕೂಂತ ಏಚನೆ ಮಾಡಿಕಂಡ್ ಇದ್ದೊ. ಅಷ್ಟಾಕನ 'ನೆನದೊವು ಮನಲಿ' - ಎಂತ ಹೇಳ್ದಾಂಗೆ ಹೊರಗೆ ಕುಕ್ಕಪ್ಪಣ್ಣ ಗಂಡನೊಟ್ಟಿಗೆ ಮಾತಾಡುವ ದನಿ ಕೇಳ್ಸಿತ್. ಬಂದ್ ನೋಡಿವೆ ಕುಕ್ಕಪ್ಪಣ್ಣ ಎಲ್ಲಿಗೋ ಹೊರ್ಟವರಾಂಗೆ ಡ್ರೆಸ್ ಮಾಡಿ ಮಾಸ್ಟ್ರೊಟ್ಟಿಗೆ ಮಾತಾಡ್ತಿದ್ದೊ.

"ನಾ ಒಂದ್ ಜೋಡಿ ಹಂದಿ ಕುರ್ಳೆಗಳ ಸಾಂಕಿಕೆ ಹುಡ್ಕಂಡಿದ್ದೆ ನನ್ನ ಕೊಂಬಾರಕ್ಕೆ ಕೊಟ್ಟ ತಂಗೆ ಮನೆಲಿ ಅದರ ಹಂದಿ ಮೊರಿ ಇಸಿಟ್ಟು ಗಡ ಹೇಳಿ ಕಳ್ಸಿತ್. ಬೇಕರೆ ಬೇಗ ಬಂದ್ ತಕೊಂಡ್ಹೋಗು. ಜನ ಕೇಳ್ದರ್ಲಿ ಹೆಚ್ಚಿ ದಿನ ಇಸಿಕೆ ಆದುಲ್ಲೇಂತ ಅದ್ ಹೇಳ್ದೆ. ಏನ್ ಮಾಡ್ದು? ಈಗ ನನ್ನ ಕೈಲಿ ಕಾಸ್ ಇಲ್ಲೆ. ತಂಗೆ

ಹಕ್ಕಲೆ ಸಾಲ ಮಾಡಿಕೆ ಮೊನ್ಸಿಲ್ಲೆ. ದರ್ಮಕ್ಕೆ ತಂದರೆ ಬರ್ಕತ್ತಿಲ್ಲೆ. ಈಗ ನೀವು ನಂಗೆ ಒಂದು ಸಾವ್ರ ಸಾಲ ಕೊಡೊಕು. ನಿನ್ನೆ ತಾನೆ ಸೊಸೈಟಿ ಸಾಲ ಕಟ್ಟಿ ಬಂದೆ" – ಎಂತ ಕುಕ್ಕಪಣ್ಣ ಅಯ್ಯಣ್ಣ ಮಾಸ್ಟ್ರೊಟ್ಟಿಗೆ ಹೇಳ್ತಿದ್ದೊ. ಅದ್ಕೆ ಅಯ್ಯಣ್ಣ ಮಾಸ್ಟ್ರ "ಅಸ್ಟೆ ತಾನೆ? ನೀವು ಕೇಳ್ದು ಹೆಚ್ಚೋ, ನಾ ಕೊಡ್ದು ಹೆಚ್ಚೊ? ನೀವ್ಗೆ ಸಾಲ ಕೊಡದೆ ನಾ ಬೇರೆ ಯಾರ್ಗೆ ಕೊಡಲಿ?" – ಎಂತ ಹೇಳಿ ಒಳಗೆ ಕಾಪಾಟ್ಂದ ದುಡ್ಡು ತಾಕೆ ಹೋದೊ. ಆಗ ಕಮಲಕ್ಕ,

"ಅಣ್ಣಾ ನಿಮ್ಮಂದ ಒಂದು ಉಪಕಾರ ಆಕಾಗಿತ್ತ್. ಹೇಂಗೂ ತಂಗೆ ಮನೆಗೆ ಹೋದರೆ ನಂಗೆ ಹಂಞ ಕಾಡ್ ಎಂಣೆಗ ಬೇಕಾಗಿತ್ತ್. ಕೊಂಬಾರದ ಕಡೆ ಕಾಡ್‌ಲಿ ಹೊನ್ನೆ, ಚೊಳ್ಗಲ್, ನಾಣಿಲ್ ಮರಗ ಹಳ್ಳದ ಪುಡೆಲಿ ಒಳೊಗಡ. ಅಲ್ಲಿಯೊವು ಅದರ ಎಂಣೆ ತೆಗ್ದ್ ಉಪ್ಪಿನಂಗಡಿ, ನೆಲ್ಯಾಡಿ, ಪುತ್ತೂರು ಸಂತೆಲಿ ಮಾರಿಕೆ ತಂದವೆಗಡ. ನಂಗೆ ಒಂದ್ ಸೇರ್ ಎಂಣೆ ತನ್ನಿ. ನಾ ದುಡ್ಡು ಕೊಟ್ಟನೆ." – ಎಂತ ಹೇಳ್ದೊ.

'ಅದ್ಕೇನ್? ನಾ ನೀವ್ಗಲ್ಲದೆ ಬೇರೆ ಯಾರಿಗೆ ತರ್ಲಿ? ಕಂಡಿತ ತನ್ನೆ" – ಎಂತ ಬರವಸೆಕೊಟ್ಟೊ.

"ಹರ್ಳೆಣ್ಣೆ ಸಿಕ್ಕಿರೆನೂ ಹಂಞ ಹಿಡ್ಕಣಿ." –ಎಂತ ಹೇಳಿ ಒಂದ್ ಸೇರ್ ಎಂಣೆ ಹಿಡ್ಯವ ಕುಪ್ಪಿನ ಕಮಲಕ್ಕ ತಂದ್ ಕೊಟ್ಟ್‌ದ್ ಗಂಡನೊಟ್ಟಿಗೆ–

"ಅಣ್ಣನೊಟ್ಟಿಗೆ ನನ್ನ ಒಂದು ಜಂಬರನೂ ಉಟ್ಟು. ಅವ್ಕೆ ನೀವು ಇನ್ನೂ ಒಂದ್ ಸಾವ್ರ ಹೆಚ್ಚಿಗೆ ಕೊಡಿನಿ." –ಎಂತ ಹೇಳಿ ಇಸಯ ತಿಳ್ಸಿದೊ.

ಅಯ್ಯಣ್ಣ ಮಾಸ್ಟ್ರ ಎರ್ಡ್ ಸಾವ್ರ ರುಪ್ಪಾಯ್ನ ತಂದ್ ಕುಕ್ಕಪ್ಪಣ್ಣನ ಕೈಲಿ ಇಸಿದೊ. ಈಗ ಕಮಲಕ್ಕಂಗೆ ಮೊನ್ಸ್ ಹಗುರಾತ್. ಎಂಣೆನ ಸಮಸ್ಯೆ ಇಸ್ಟ್ ಬೇಗ ತೀರ್ದ್ದೇಂತ ಅವು ನೆನ್ಸಿತ್ಲೆ.

ಕಮಲಕ್ಕ ನೆನ್ಸಿದಾಂಗೆ ಕುಪ್ಪಿ ತುಂಬಾ ಎಲ್ಲಾ ಬಗೆನ ಕಾಡ್ ಎಂಣೆನ ಮಿಶ್ರ ಮಾಡಿ ಕಮಲಕ್ಕಂಗೆ ಕುಕ್ಕಪ್ಪಣ್ಣ ತಂದು ಕೊಟ್ಟೊ. ಅವರ ತಂಗೆ ದುಡ್ಡು ತಕಂಡತ್ಲೆ ಗಡ.

"ಕಮಲಕ್ಕನ ಕೈಯಿಂದ ನಾ ದುಡ್ಡು ತಕಂಬೊದೋ? ಬೇಡೇ ಬೇಡಾಂತ" ದುಡ್ಡುನ ಅಣ್ಣನ ಕೈಲಿ ಹಿಂತಿರ್ಗಿಸಿದೊ. ಅವರ ತಂಗೆಗೆ ಕಾಡ್‌ಲಿದ್ದ ಎಣ್ಣೆ ಕಾಯಿಂದ ಎಂಣೆ ತೆಗ್ದ್ ಪೇಟೆಗೆ ಮಾರುವ ಕೆಲ್ಸ. ಅದರ್ಲಿ ಅವ್ಕೆ ತುಂಬಾ ಸಂಪಾದ್ನೆನೂ ಆಗ್ತಿತ್ತ್.

* * * * *

32. "ಗಿರೀಶ ಅಪ್ಪ ಆತ್."

ಏಪ್ರೀಲ್ ಹತ್ತಕ್ಕೆ ಡಾಕ್ಟ್ರ ಹೆರುವ ದಿನಾಂಕ ಹೇಳಿದ್ದೊ. ಆದರೆ ಒಂದು ವಾರಕ್ಕೆ ಮುಂದೆನೇ ಮಾನಿಗೆ ಹೊಟ್ಟೆ ಬೇನೆ ಸುರಾತ್. ಮಾಲಿನಿನ ನರ್ಸಿಂಗ್ ಹೋಂಗೆ ಸೇರ್ಸಿ ಜಯಂತಿ ಅಕ್ಕ ಗಿರೀಶಂಗೂ, ಕಮಲಕ್ಕಂಗೂ ಫೋನ್ ಮಾಡಿ ತಿಳ್ಸಿದೊ. ಹೆಚ್ಚ್ ಕಸ್ಟ ಇಲ್ಲದೆ ಹೆರ್‍ಗೆ ಸುಲಬಲಿ ಆತ್. ಎಲ್ಲೋವ್ಕೂ ಈಗ ತಲೆಂದ ಬೆಟ್ಟ ಇಳ್ದಂಗಾತ್. ಗಂಡ್ ಕೂಸು ಗುಂಡು ಗುಂಡಾಗಿ ಗಿರೀಶನ ಪಡಿ ಅಚ್ಚ್ ಆಗಿತ್ತ್. ಗಿರೀಶ, ಕಮಲಕ್ಕ ಅಯ್ಯಣ್ಣ ಮಾಸ್ಟ್ರ ಬಂದ್ ಮುಟ್ಟಿಕಾಕನ ಮಾಲಿನಿಗೆ ಹೆರಿಗೆ ಆಗಿತ್ತ್. ಬೊಳ್ಪುಗೆ ಹತ್ತ್ ಗಂಟೆ ಹತ್ತ್ ಮಿನಿಟಿಗೆ ಕೂಸು ಹುಟ್ಟಿತ್ತ್. ಅಯ್ಯಣ್ಣ ಮಾಸ್ಟ್ರ ಕುಸಿಂದ ಅಲ್ಲದ್ದವ್ಕೆಲ್ಲಾ ಲಾಡ್ ತಂದ್ ಹಂಚಿದೊ. ಹಿಂಬೊತ್ತಾಕನ ಅಯ್ಯಣ್ಣ ಮಾಸ್ಟ್ರ ಜಯಂತಿ ಅಕ್ಕನೊಟ್ಟಿಗೆ,

"ಇನ್ನ್ ನಾವು ಹೊರ್‍ಟವೆ. ಐದ್ನೇ ದಿನ ಅಮೆ ಮಾಡಿಕನ ಬಂದವೆ" –ಎಂತ ಹೇಳಿ ಹೆಣ್ಣ್‌ನ ಕರ್‍ಕಂಡ್ ಹೊರ್‍ಟೊ. ಗಿರೀಶ ನರ್ಸಿಂಗ್ ಹೋಂ ಲೇ ನಿತ್ತತ್.

ಕಮಲಕ್ಕಂಗೆ ಬಾರೀ ಕುಸಿ ಆತ್. ಅವು ನೆನ್ಸಿದಾಂಗೆ ಮಾಲಿನಿಗೆ ಹಳ್ಳಿ ಮೊದ್ದ್ ಮಾಡ್ದೊಂತ ಎಲ್ಲೋವೂ ತೀರ್ಮಾನ ಮಾಡ್ದೊ. ಅಂದೇ ಅಯ್ಯಣ್ಣ ಮಾಸ್ಟ್ರ, ಕಮಲಕ್ಕ ಪಂಬೆತ್ತಾಡಿಗೆ ಬಂದೊ. ಮಾರ್ಣೇ ದಿನಂದ ಎಲ್ಲಾ ಮೊದ್ದ್‌ಗಳ

ಜೋಡ್ಸಿ ಗಂಟ್ ಕಟ್ಟಿ ಬೇರೆ ಬೇರೆ ಇಸಿದೊ. ಐದ್ನೇ ದಿನ ಅಮೆ. ಬೊಳ್ಳುಗೆ ಏಳ್ ಗಂಟೆಗೇ ಈ ಎಲ್ಲಾ ಸಾಮಾನ್‌ನ ಜೀಪುಗೆ ಹಾಕಿ ಗಂಡ– ಹೆಣ್ಣ್ ಬಲ್ನಾಡ್‌ಗೆ ಹೊರ್‍ಟೊ. ಒಟ್ಟಿಗೆ ಕುಕ್ಕಪ್ಪಣ್ಣ, ಗಂಗಮ್ಮಕ್ಕ, ಜ್ಯೋತಿ ಗೂಡೆನನೂ ಕರ್‍ಕಂಡೊ. ಒಂಬತ್ತ್ ಗಂಟೆಗೆ ಬಲ್ನಾಡ್‌ಗೆ ಮುಟ್ಟಿದೊ. ಆಗಳೇ ಜಯಂತಿ ಅಕ್ಕಂಗೆ ಪೆದ್ದೋಳ್ತಿಗೆ ಹೊಲ ಮೊದ್ದ್ ಕುಡ್ಸಿ, ಎಂಣೆ ಪೂಜಿ ಮಿಾಸಿ ಆಗಿತ್ತ್. ಮೊಡ್ಯೋಳ್ತಿನೂ ಬಂದಿತ್ತ್. ಅದ್ ತಂದ ಮಡಿ ಸೀರೆನ ಮಾಲಿನಿಗೆ ಉಡ್ಸಿ ಮೊಲ್ಗಿಸಿದ್ದೊ. ಕೂಸುನನೂ ಮಿಾಸಿ ಮೊಡ್ಯೋಳ್ತಿ ತಂದ ಮಡಿ ಅರ್‍ವೆ ಹೊದಿಸಿ ಮೊಲ್ಗಿಸಿದ್ದೊ. ಸುಮಾರ್ ಹತ್ತ್ ಗಂಟೆಗೆ ಅಮೆ ಕಳೆವ ಶಾಸ್ತ್ರ ಸುರು ಮಾಡ್ದೊ. ಮೊಡ್ಯೋಳ್ತಿ ತೊಳ್ಸಿ ಕಟ್ಟೆಲಿ ತಂದಿಸಿದ ಪುಣ್ಯಾರ್ಚನೆನ ಮನೆ ಇಡೀ ಚಿಮ್ಮುಸಿ, ಬಾಮಿಗೆ ಮಿಾವ ಕೊಟಗೆಗೆ, ಪೆದ್ದೋಳ್ತಿಗೆ, ಕೂಸುಗೆ, ಮನೆಯೋವ್ಕೆಲ್ಲಾ ಹಾಕಿ, ಪುಣ್ಯಾರ್ಚನೆನ ತೊಳ್ಸಿ ಕಟ್ಟೆಲಿ ಇಸಿದೆ. ಮೊಡ್ಯೋಳ್ತಿ ಬೆಳ್ದ್ ನೂಲುನ ಉಂಡೆಂದ ದಾರನ ಬುಡ್ಸಿ, ಕೂಸುನ ಸೊಂಟಕ್ಕೆ, ಕೈಗಳಿಗೆ ಕಟ್ಟಿಕೆ ಪಿರಿ ಮಾಡಿ ಇಸಿತ್. ಒಂದು ಮಣೆ ಮೇಲೆ ಮೂಡು ದಿಕ್ಕ್‌ಗೆ ಮೋರೆ ಮಾಡಿ ಮಾಲಿನಿನ ಕುದ್ರಿಸಿ, ಅದರ ಕೈಲಿ ಹೂ ಕೂಸುನ ಕೊಟ್ಟೊ. ಮಾಲಿನಿ ಕೈ ನೀಂಡಿ ಕೂಸುನ ಕಾಲ್ ಮುಂದೆ ಬಾವ ಹಾಂಗೆ ಹಿಡ್ಕಂಡತ್. ಮಡ್ಯೋಳ್ತಿ ಕೂಸುನ ಸೋದರ ಮಾವನ, ಅಜ್ಜ, ಅಜ್ಜಿನ ಅಪ್ಪಣೆ ಕೇಳಿ,

"ಕೂಸುನ ಸೊಂಟಕ್ಕೆ, ಕೈಗಳಿಗೆ ಚಿನ್ನದ ದಾರನ ಕಟ್ಟುವೇ" – ಎಂತ ಅಪ್ಪಣೆ ಕೇಳಿ, ಕೂಸುನ ಸೊಂಟಕ್ಕೆ ಮತ್ತೆ ಎರ್‍ಡ್ ಕೈನ ಮಣಿಕಟ್ಟಿಗೆ ನೂಲುನ ಕಟ್ಟಿದೆ. ಗರಿಕೆ ಹುಲ್ಲ್‌ಲಿ ಕೂಸುನ ಮತ್ತೆ ಪೆದ್ದೋಳ್ತಿನ ತಲೆಗೆ ಮೂರು, ಮೂರು ಸಲ ಎಣ್ಣೆ ಪೂಜಿದೆ. ಪೆದ್ದೋಳ್ತಿ ಹಕ್ಕಲೆ ದೀಪ ಹೋಸಿ ಇಸುವೆ. ಒಂದು ಕೊಡಿ ಬಾಳೆಲೆಲಿ ಐದ್ ಕೊಂಡೆ ಬೆಳ್ತಿಗೆ, ಅಕ್ಕಿ ಒಂದು ಕಾಯೆನ ಇಸುವೆ. ಈ ಸಾಸ್ತ್ರ ಆದ ಮೇಲೆ ಬಂದೋವ್ಕೆಲ್ಲಾ ಊಟ ಕೊಟ್ಟವೆ. ಬಾಯಿ ಸಿಂಯಿ ಮಾಡಿಕೆ ಪದಂಜಿ ಪಾಯಸ ಮಾಡಿದ್ದೊ. ಗುಜ್ಜೆ, ಕಡ್ಲೆ ಉಪ್ಕರಿ, ತೊಂಡೆ, ಹಸಿ ಬೀಜದ ಬೊಂಡು ಹಾಕಿದ ಪಲ್ಯ, ಎಳ್ತ್ ಕಳ ಸೋಂತೆ ಹುಳಿ, ಎಲ್ಲಾ ನೆಟ್ಟಿ ಕ್ಯಾ ಹಾಕಿ ಮಾಡ್ದ ಸಾಂಬಾರ್ ಮಾಡಿದ್ದೊ. ಅಕೆರಿಗೆ ಹುಗ್ಗೆಗೆ ಕೋಳಿ ಸಾರ್, ಮತ್ತೆ ಆರ್‍ಸಿದ ತುಂಡುನೂ ಇತ್ತ್.

ಪೆದ್ದೋಳ್ತಿಗೇಂತ ಓಮದ ಹೊಡಿ, ಮೆಣ್ಸ್‌ನ ಹೊಡಿ ಹಾಕಿ ತುಪ್ಪಲಿ ಆರ್‍ಸಿದ ಕೋಳಿ ತುಂಡುಗಳ ಬೇರೆ ಮಾಡಿ ಮಾಲಿನಿಗೆ ಕೊಟ್ಟೊ.

ಹಿಂಬೊತ್ತ್ ಮಾಸ್ತ್ರ ಬಳಗ ಪಂಬೆತ್ತಾಡಿಗೆ ಹೊರ್‍ಡಿಕನ ಕಮಲಕ್ಕ ಜಯಂತಿ ಅಕ್ಕಂಗೆ ಅವು ತಂದ ಪೆದ್ದೋಳ್ತಿ ಮೊದ್ದ್‌ನ ಸಾಮಾನ್‌ಗಳ ಒಪ್ಪುಸಿ, ಬರ್‍ದ್ ತಂದ ಪುಸ್ತಕನನೂ ಕೊಟ್ಟ್,

'ಇದರ್ಲಿ ಹೇಳ್ದಾಂಗೆ ಮಾಡ್' – ಎಂತ ಹೇಳ್ದೊ.

"ಅಯ್ಯೋ ಅತ್ತಿಗೆ, ನೀವು ಇದರೆಲ್ಲಾ ತಾಕೆ ಯಾಕೆ ಹೋದರಿ? ಸುರುನ ಹೆರ್ಗೆ ಕರ್ಚ್ ತವರು ಮನೆವೇ ಮಾಡೊಕೊಲೆ. ನಾ ಎಲ್ಲಾ ನಿಬಾಯ್ಸ್‌ತಿದ್ದೆ." – ಎಂತ ಜಯಂತಿ ಅಕ್ಕ ಹೇಳ್ದೊ. ಆ ಕಮಲಕ್ಕ ನಾದಿನಿಗೆ,

"ನಂಗೇನ್ ಹೆಣ್ಣ್ ಮಕ್ಕ ಒಳನೋ? ನಾ ಮಾಡಿರೆ ಏನ್? ನೀ ಮಾಡಿರೆ ಏನ್? ಒಟಾರೆ ನಮ್ಮ ಮಾನಿಗೆ ಪೊರ್ಲುಲಿ ಪೆದ್ದೋಳ್ತಿ ಆರೈಕೆ ಆದರೆ ಆತ್." – ಎಂತ ಹೇಳ್ದೊ. ಅತ್ತಿಗೆನ ಪ್ರೀತಿ ವಿಸ್ವಾಸಕ್ಕೆ ಜಯಂತಿ ಅಕ್ಕನ ಕಣ್ಣ್ ತುಂಬಿ ಬಾತ್.

ಅವೆಲ್ಲಾ ಹೋದ ಮೇಲೆ ಅವು ಸಾಮಾನ್‌ನ ಕಟ್ಟ್ ಬಿಚ್ಚಿ ನೋಡ್ದೊ. ಮೈಗೆ ಹಾಕಿಕೆ ಎರ್ಡ್ ಕುಪ್ಪಿ ಮಿಶ್ರ ಎಂಣೆಗ, ಪೆದ್ದೋಳ್ತಿಗೆ ಕೊಡಿಕೆ ಹೊಲ ಮೊದ್ದ್‌ಗ, ಕೂಸುನ ಮೈಗೆ ಪೂಜಿಕೆ ಬೇಕಾದ ಗಂದ – ಚಂದನ ಚಾಳೆನ ಎಳ್ತ್ ಚೆಂಡೆಲ್, ಒಣ್ಗಿಸಿದ ಸೊರಗೆ ಹೂವು –ಎಲ್ಲಾ ಬೇರೆ ಬೇರೆ ಕಟ್ಟ್ ಕಟ್ಟಿ, ಅದರ ಕೊಡುವ ರೀತಿ ಎಲ್ಲಾ ಬೇರೆ ಬೇರೆ ಚೀಟ್‌ಲಿ ಬರ್ದ್ ಇಸಿದ್ದೊ. ಜಯಂತಿ ಅಕ್ಕಂಗೆ ತಲೆಂದ ದೊಡ್ಡ ಬಾರ ಇಳ್ದಾಂಗಾತ್. ಅವ್ಕೆ ಮೊದ್ದ್ ಹುಡ್ಕುವ ಕೆಲ್ಸ ತೊಪ್ಪಿತ್. ಕಮಲಕ್ಕ ಹೇಳ್ದಾಂಗೆ ಎಲ್ಲಾ ಮೊದ್ದ್‌ಗಳ ಕ್ರಮ ಪ್ರಕಾರ ಕೊಟ್ಟ್‌ಕಂಡ್ ಬಂದೊ. ಹದ್ನಾರ್‌ನೇ ದಿನನೇ ಕೂಸುನ ತೊಟಿಲ್‌ಗೆ ಹಾಕುವ ಸಾಸ್ತ್ರ ಮಾಡ್ದೂಂತ ಗಂಡ – ಹೆಣ್ಣ್ ನಿಶ್ಚಯ ಮಾಡ್ದೊ. ಬೇರೆ ದಿನ ಆದರೆ ದಿನ ನೋಡೊಕು. ಹೆಚ್ಚ್ ಆಡಂಬರ ಮಾಡ್ದು ಬೇಡ. ನೆರೆಕರೆಗೆ, ಗಂಡನ ಮನೆಯೋವ್ಕೆ ಮಾತ್ರ ಹೇಳ್ರೆ ಸಾಕ್‌ಂತ ಮಾಲಿನಿ ಅಪ್ಪ, ಅವ್ವನೊಟ್ಟಿಗೆ ಹೇಳ್ದೆ.

ಜಯಂತಿ ಅಕ್ಕ ಪುಳ್ಳಿಗೆ ಸೊಗ್ಸಾದ ಒಂದು ಹಿತ್ತಾಳೆ ತೊಟಿಗಿಲ್‌ನ ಪುತ್ತೂರು ಸಂಜೀವ ಸೆಟ್ರ ಕಂಚಿನ ಅಂಗ್ಡಿಂದ ತಂದೊ. ಅದ್ಕೆ ಲಾಯ್ಕ್‌ನ ಬೀಟಿ ಮರದ ಸ್ಟೇಂಡ್ ಮರದ ಸ್ಟೇಂಡ್ ಮಾಡ್ಸಿದೊ. ಅಣ್ಣ, ಅತ್ತಿಗೆಗೆ ಪೋನ್ ಮಾಡಿ ಹದ್ನಾರ್ನೇ ದಿನ ಹಗಲ್ ಹನ್ನೊಂದ್ ಗಂಟೆಗೆ ತೊಟಿಗಿಲ್‌ಗೆ ಹಾಕುವ ಸಾಸ್ತ್ರ ಮಾಡ್ವೇಂತ ತಿಳ್ಸಿದೊ.

ತೊಟಿಗಿಲ್‌ನ ಮೂಡು, ಪಡುಗೆ ಕಟ್ಟಿದೊ. ತೊಟಿಗಿಲ್ ಸುತ್ತ ಕಿನ್ನರಿ ಬಳ್ಳಿನ ಸುತ್ತಿಸಿದೊ. ಗಿರೀಶ ಪುತ್ತೂರ್‌ಂದ ಹೂ ತಂದಿತ್. ಮಲ್ಲಿಗೆ ಹೂಲಿ ಸಿಂಗಾರ ಮಾಡ್ದೊ. ಕೂಸುನ ಮಿಾಸಿ, ಕಮಲಕ್ಕ ತಂದ ಹೊಸ ಅಂಗಿನ ಹಾಕಿ ಸಿಂಗಾರ ಮಾಡ್ದೊ. ಜಯಂತಿ ಅಕ್ಕ ಮಾಡ್ಸಿದ ಮೂರು ಪವನ್‌ನ ಚಿನ್ನದ ನೇವಳನ ಸೊಂಟಕ್ಕೆ ಹಾಕಿದೊ. ಕಮಲಕ್ಕ ಕುತ್ತಿಗೆಗೆ ಒಂದು ಪವನ್‌ನ ಚೈನ್, ಕೈಗೆ ಕಡಗ ಚಿನ್ನಲ್ಲಿ ಮಾಡ್ಸಿ ತಂದಿದ್ದೊ. ಅದರೆಲ್ಲಾ ಹಾಕಿ ಸಿಂಗಾರ ಮಾಡ್ದೊ. ಕಾಲಿಗೆ ಬೆಳ್ಳಿ ಗೆಜ್ಜೆ ಹಾಕಿದೊ. ತೊಟಿಗಿಲ್ ಹಕ್ಕಲೆ ಮಣೆ ಮೇಲೆ ದೀಪ ಹೋಸಿ, ಕೊಡಿ

ಬಾಳೆಲೆಲಿ ಸಕ್ಕರೆ ಹಾಕಿದ ಹಾಲ್‌ನ ಒಂದು ಮಿಳ್ಳಿಲಿ ಇಸಿದೊ. ಮಣೆ ಮೇಲೆ ಮಾಲಿನಿ ಕೂಸುನ ಹಿಡ್ಕಂಡ್ ಕುದ್ದತ್. ಅದರ ಅಣ್ಣ ಸುರುಗೆ ಚಿನ್ನದ ಉಂಗುರನ ಹಾಲಿಗೆ ಕಂತಿಸಿ ಅದರ ಕೂಸುನ ಬಾಯಿಗೆ ಮುಟ್ಟಿಸಿತ್. ಆ ಮೇಲೆ ಕೂಸುನ ಅಜ್ಜ, ಅಜ್ಜಿಕ, ಅಪ್ಪ, ಬಂದ ಮುತ್ತೈದೆಗ ಕೂಸುಗೆ ಹಾಲ್‌ನ ಕೊಟ್ಟೊ. ಮುತ್ತೈದೆಗ ಒಂದು ಗುಂಡು ಕಲ್ಲ್‌ನ ಸುರುಗೆ ತೊಟ್ಲ್‌ನ ಅಡಿಂದ ತಂದ್ ತೊಟ್ಲ್‌ಲಿ ಮೊಲ್ಗಿಸಿದೊ. ಆಗ ಮಾಲಿನಿನ ಅಣ್ಣನ ಮಂಜ ಅದ್ ಯಾಕೇಂತ ಕೇಳ್ತ್. ಆಗ ಕಮಲಕ್ಕ,

"ಅದ್ ಮಂಜ, ಹಿಂದೆನ ಕಾಲಲಿ ಪೂತನೀಂತ ಒಂದು ರಕ್ಕಸಿ ಇತ್ತ್‌ಗಡ ಅದ್ ಮಕ್ಕಳ ತಿಂಬತಿತ್ತ್ ಗಡ. ಮಕ್ಕಳ ತೊಟಿಗಿಲ್‌ಗೆ ಹಾಕಿದ ಕೂಡ್ಲೇ ಅದ್ ಬಂದ್ ತಿಂಬತಿತ್ತ್ ಗಡ. ಅದ್ ಬಾಯಿ ಹಾಕಿಕನ ಅದ್ಕೆ ಗುಂಡ್ ಕಲ್ಲ್ ಸಿಕ್ಕಿದೆ. ಆಗ ಅದ್ ಅದರ ಬುಟ್ಟ್ ಹೋಗ್ತಿತ್ತ್" – ಎಂತ ಹೇಳ್ದೊ.

"ಅದ್ ಮತ್ತೆ ಬಂದ್ ತಿಂಬಕಿಲ್ಲೆನೋ?"– ಅಂವ ಕೇಳ್ಟೆ.

"ಇಲ್ಲೆ ಒಮ್ಮೆ ಬಂದ ಮೇಲೆ ಈ ತೊಟ್ಲ್‌ಲಿ ಗುಂಡ್ ಕಲ್ಲ್ ಇರ್ದೂಂತ ತಿಳ್ದ್ ಅದ್ ಮತ್ತೆ ಬಾದ್ಲೆ" – ಎಂತ ಹೇಳ್ದೊ.

ಮುತ್ತೈದೆಗ ಮತ್ತೆ ಕೂಸುನ ಜೋಗುಳ ಹಾಡ್ ಹಾಡಿಕಂಡ್ ತೊಟಿಗಿಲ್‌ಗೆ ಹಾಕಿದೊ. ಕೂಸುನ ಅಪ್ಪ ಅದರ ಕೆಬಿಲಿ "ಆದರ್ಶ, ಆದರ್ಶ, ಆದರ್ಶ" – ಎಂತ ಮೂರು ಸಲ ಹೇಳಿದೆ.

ಆ ಮೇಲೆ ಎಲ್ಲೋವ್ಕೂ ಗಡ್ದ್‌ನ ಊಟ ಆತ್. ಮಾಲಿನಿ ಹೆರಿಗೆ ಆದ ಮೇಲೆ ಬಾಳ ಲಾಚರ್ ಆತ್. ಮೈ ಕೈ ತುಂಬಿಕಂಡ್ ಬಾಕೆ ಜಯಂತಿ ಅಕ್ಕ ಪೆದ್ದೋಳ್ತಿ ಆರೈಕೆ ಬಾಳ ಲಾಯ್ಕ್‌ಲಿ ಮಾಡ್ದೊ. ಆದರೂ ಓಮ, ಮೆಣ್ಸ್ ತಿಂದ ಕಾರ್ಣ ಪೆದ್ದೋಳ್ತಿಗ ಎರ್ಡ್ ತಿಂಗ ಆಕಾಕನ ಬಾಳ ಬೊಚ್ಚುತಿದ್ದೊ.

ನಲ್ವತ್ತನೇ ದಿನ ನಲ್ವತ್ತರ ನೀರ್ ಮಿಾಸಿದೊ. ಎಂಣೆ ಹಾಕಿ ಸ್ನಾನ ಮಾಡ್ದ ಮೇಲೆ ಅಕೆರಿಗೆ ನಲ್ವತ್ತ್ ಒಣಕ್ ನೀರ್ ಪೆದ್ದೋಳ್ತಿ ತಲೆ ಮೇಲೆ ಹಾಕೊಕು. ಅದ್ ಲೆಕ್ಕ ಮಾಡ್ದು ಕಷ್ಟಾಂತ ಪೆದ್ದೋಳ್ತಿ ತಲೆ ಮೇಲೆ ಒಂದು ಒಣಲೆನ ಹಿಡ್ದ್ ಮಂಡೆಲಿದ್ದ ನೀರ್‌ನೆಲ್ಲಾ ಒಂದು ಕೊಡ್ಪಾಣಕ್ಕೆ ಹಾಕಿ, ಅದರ ಒನಲೆ ಮೇಲೆ ಹೊಯ್ಯೊತಿದ್ದೊ. ಜಯಂತಿ ಅಕ್ಕ ಮಗಳಿಗೆ ಹಾಂಗೆ ಮಾಡ್ದೊ. ಆ ಮೇಲೆ ಮಗಳ ಕೈಲಿ ಐದ್ ವೀಳ್ಯದೆಲೆ ಒಂದು ಇಡಿ ಅಡ್ಕೆ, ನಾಕಾಣೆ ದುಡ್ಡು ಇಸಿ ಅದರ ಮಂಡೆ ಒಳಗೆ ಹಾಕಿ ಕೈ ಮುಗ್ಯಕೆ ಹೇಳ್ದೊ. ಅವ್ವ ಹೇಳ್ದಾಂಗೆ ಮಗ ಮಾಡ್ತ್. ಅಕೆರಿಗೆ ಕಮಲಕನೂ, ಮಾಲಿನಿನೂ ಆ ಮಂಡೆನ ಒಲೆಂದ ಇಳ್ಸಿ, ಕವುಂಚಿ ಹಾಕಿದೊ. ಅದರ್‌ಂದ ಮೇಲೆ ಜಯಂತಿ ಅಕ್ಕ ಮಗಳ ಕರ್ಕಂಡ್ ಮನೆ ಒಳಗೆ ಬಂದ್ ಕನ್ನೆಕಂಬದ ಹಕ್ಕಲೆ ಹೋಸಿ ಇಸಿದ ದೀಪಕ್ಕೆ ಕೈ ಮುಗ್ಯಕೆ ಹೇಳಿ ಮನೆ ಹಿರ್ಯರ ಕಾಲ್ ಹಿಡ್ಯಕೆ

ಹೇಳ್ದೊ. ಪೆದ್ದೋಳ್ತಿ ಚಾಕ್ರಿಗೇಂತ ಜಯಂತಿ ಅಕ್ಕ ಒಂದ್ ದೂರದ ಸಂಬಂದದ ಹೆಂಗ್‌ಸ್‌ನ ಕೆಲ್ಸಕ್ಕೆ ನಿಲ್ಸಿಕಂಡಿದ್ದೊ. ಅದ್ಕೆ ಮಾಲಿನಿ ಕೈಲಿ ಒಂದು ಹೊಸ ಸೀರೆ ಕೊಡ್ಸಿ, ಕಾಲ್ ಹಿಡ್ಕಂಬಕೆ ಹೇಳ್ದೊ. ಆ ಮೇಲೆ ಹಟ್ಟಿಗೆ ಕರ್‍ಕೊಂಡೋಗಿ ದನಗಳ ಮೈ ಮುಟ್ಟಿ ಕೈ ಮುಗ್ದ್ ದನಂಗಳಿಗೆ ಅದರ ಕೈಲಿ ಹುಲ್ಲು ಕೊಡ್ಸಿದೊ. ಮತ್ತೆ ಮನೆಗೆ ಕರ್‍ಕಂಡ್ ಬಂದ್ ಸೀರೆ ಉಟ್ಟ್, ಹಣೆಗೆ ಕುಂಕುಮ ಇಸಿಕೆ ಹೇಳ್ದೊ. ಅಷ್ಟರ ತನ್ಕ ಪೆದ್ದೋಳ್ತಿ ಲಂಗ, ತುಂಡು ಸೀರೆ ಉಡಕಾಗಿತ್ತ್. ಆದರೆ ಮಾಲಿನಿ ಮಾತ್ರಾ ಒಂದು ನೈಟಿ ಹಾಕಂಬತಿತ್ತ್. ಕೂಸುಗೆ ಎರ್‍ಡ್ ತಿಂಗ ತುಂಬಿದ ಮೇಲೆ ಕಮಲಕ್ಕ ಒಂದು ದಿನ ಪುಳ್ಳಿನ ಸೊಸೆನ ನೋಡಿಕೆ ಬಂದೊ. ಬಾಕಾಕನ ಒಂದು ಬರ್ಣಿಲಿ ಎಳ್ಳ್, ಮೆಂತೆ ಅಡ್ಗೆ ಮಾಡಿ ತಂದಿದ್ದೊ. ಅವ್ಕೆ ಸೊಸೆನ ನೋಡಿ ಬಾಳ ಬೇಜಾರಾತ್. ಅದ್ ಬಾಳ್ ಬೊಚ್ಚಿತ್ತ್. ನಾದಿನಿ ಒಟ್ಟಿಗೆ ಮೂರು ತಿಂಗಳ್‌ಲೇ ಪಂಬೆತ್ತಾಡಿಗೆ ಕರ್‍ಕೊಂಡೋನೇಂತ ಹೇಳ್ದೊ. ಮಾಲಿನಿಗೂ ಗಂಡನ ಮನೆಗೆ ಹೋಕೆ ಒಂಟಿಕಾಲ್‌ಲಿ ನಿತ್ತಿತ್ತ್. ಉಪಾಯ ಇಲ್ಲದೆ ಜಯಂತಿ ಅಕ್ಕ ಒಪ್ಪಿದೊ.

ಒಂದ್ ಒಳ್ಳೆ ದಿನ ನೋಡಿ ಕಮಲಕ್ಕ, ಅಯ್ಯಣ್ಣ ಮಾಸ್ಟ್ರ ಬಂದ್ ಮಾಲಿನಿನನೂ ಆದರ್ಶನನೂ ಕರ್‍ಕೊಂಡೋದೊ. ಜಯಂತಿ ಅಕ್ಕನೂ ಮಗಳ ಬುಡಿಕೆ ಪಂಬೆತ್ತಾಡಿಗೆ ಬಂದೊ. ಗಿರೀಶ ಪುತ್ತೂರು ವಾಸ್ದೇವ ಭಟ್ರಲ್ಲಿಂದ ಮುಕ್ಕಾಲ್ ಪವನ್‌ನ ಚಿನ್ನದ ಉಂಗುರ ಮಾಡ್ಸಿ ತಂದ್ ಅತ್ತೆಗೆ ಪೆದ್ದೋಳ್ತಿ ಚಾಕ್ರಿ ಮಾಡ್ದಕ್ಕೆ ಉಡ್ಗೊರೆ ಕೊಟ್ಟಿತ್. ಅಯ್ಯಣ್ಣ ಮಾಸ್ಟ್ರನೂ ತಂಗೆಗೆ ಸೀರೆ ರವುಕೆ ಕಣ ಉಡ್ಗೊರೆನ ಕಮಲಕ್ಕನ ಕೈಯಿಂದ ಕೊಡ್ಸಿದೊ.

* * * * *

33."ಪುಳ್ಳಿ ಮನೆಗೆ ಬಂದ ಸಡಗರ "

ಈಗ ಕಮಲಕ್ಕಂಗೆ ಒಂದು ಗಳ್ಗೆ ಪುರುಸೊತ್ತಿಲ್ಲೆ. ಗುಡ್ಡೆಗೆ ಹೋಗಿ ಎಲ್ಲಾ ನಾರ್ ಬೇರ್‌ಗಳ ಹುಡ್ಕಿ ತಂದ್, ಕೂಸುಗೆ ಎಂಣೆ ಕಾಸಿದೊ. ದಿನಾ ಎರ್ಡ್ ಹೊತ್ತ್ ಕೂಸುನ ಮೈಗೆ ಎಂಣೆ ಪೂಜಿ, ಮೈ, ಕೈ, ಹಣೆ ಮೂಂಕು ಪೂಜಿ, ತಟ್ಟಿ ಸರಿ ಮಾಡಿ ಒಂದ್ ಗಂಟೆ ಕಾಡ್ ಮುರ್ಗದ ಚರ್ಮಲಿ ಮೊಲ್ಗಿಸಿ, ಬಿಸಿ ಬಿಸಿ ನೀರ್‌ಲಿ ಮಿಾಸ್ತಿದ್ದೊ. ರಾಗಿ ಪದನಿಸಿ, ಮುಂಗೆ ಬರ್ಸಿ ಒಣ್‌ಂಗಿಸಿ ಕುಟ್ಟಿ ಹೊಡಿ ಮಾಡಿ ಇಸಿದೊ. ಗೋದಿನ ಪದನಿಸಿ, ತೊಳ್ದ್ ಕಡ್ದ್ ಅದರ ಮಣ್ಣಿ ತೆಗ್ದ್ ಒಣ್‌ಂಗಿಸಿ ಇಸಿದೊ. ಗೋದಿ ಹೊಡಿ, ರಾಗಿ ಹೊಡಿ ಒಂದೊಂದು ಚಮ್ಚ ಸೇರ್ಸಿ, ಹಾಲ್‌ಲಿ ಮಣ್ಣಿ ಮಾಡಿ, ದಿನಾ ಎರ್ಡ್ ಹೊತ್ತ್ ಕೂಸುಗೆ ತಿನ್ಸ್‌ತಿದ್ದೊ. ಹೊಟ್ಟೆಗೆ ದಿನಕೊಂದು ತರ ಕೊಡಿ ಮೊದ್ದ್ ಕಾಡ್‌ಂದ ತಂದ್, ಅದರ ಗುದ್ದಿ ಒಂದ್ ಬೆಳ್ದ್ ಅರ್ವೆಲಿ ಕಟ್ಟಿ ಹಿಂಡಿ, ನಾಕ್ ಹನಿ ರಸನ ಕೂಸುಗೆ ಕೊಡ್ತಿದ್ದೊ. ಮಾಲಿನಿಗೆ ಮೈ ಬಾಕೆ ಎಳ್ಳ್ ಮೆಂತೆ ಅಡ್ಗೆ ಮಾಡಿ, ಒಂದು ಬರ್ಣಿಲಿ ತುಂಬುಸಿ ಇಸಿ, ದಿನಾ ಒಂದು ಪುಂಡಿ ತಿಂಬಕೆ ಕೊಡ್ತಿದ್ದೊ. ಹಾಲ್, ತುಪ್ಪ ಹೇಂಗೂ ಮನೆಲಿ ದಾರಾಳ ಇತ್ತ್. ಅವರ ಆರೈಕೆಲಿ ಮಾಲಿನಿನೂ, ಆದರ್ಶನೂ ದಿನಂದ ದಿನಕ್ಕೆ ಮೈ ಕೈ ತುಂಬಿಕಂಡ್ ಬಂದೊ. ದಿನಾ ಯಾರಾದರೊಬ್ಬ ಕೂಸುನ ನೋಡಿಕೆ ಬಾತಿದ್ದೊ.

ಬಂದೊವೆಲ್ಲಾ ಕೂಸುನ ಕೈಗೆ ದುಡ್ಡು ಇಸಿ ಹೋಗ್ತಿದ್ದೊ. ಅವರ ಹಾಂಗೆ ಕಳ್ಸಿಕೆ ಆದೆನೋ? ಬಂದೊವ್ಕೆಲ್ಲಾ ಊಟ ಉಪಚಾರ, ಸೊಸೆ, ಪುಳ್ಳಿನ ಆರೈಕೆಲಿ ಕಮಲಕ್ಕಂಗೆ ದಿನ ಕಳ್ದದೇ ಗೊತ್ತಾತ್ಲೆ. ಸುರೇಶನೂ, ರೇಶ್ಮನೂ ಬೆಂಗ್ಳೂರ್‌ಂದ ಬಂದ್ ಕೂಸುನ ನೋಡಿ ಹೋದೊ. ಕೂಸುಗೆ ಒಂದು ಪವನ್‌ನ ಚಿನ್ನದ ಚೈನ್ ಸುರೇಶ ತಂದ್ ಉಡ್ಗೊರೆ ಕೊಟ್ಟತ್. ತಮ್ಮನ ಕೂಸುನ ನೋಡ್ದ ಮೇಲೆ ಸುರೇಶಂಗೂ ಮಕ್ಕ ಬೇಕ್‌ಂತ ಆಸೆ ಆತ್. ಅವು ಬಂದ ಹೋದ ಎರ್ಡ್ ತಿಂಗಳ್‌ಲಿ ಸುರೇಶ ಕಮಲಕ್ಕಂಗೆ ಫೋನ್ ಮಾಡಿ ರೇಶ್ಮ ಬೊಸ್ರಿಂತ ಹೇಳ್ತ್. ಈಗ ಕಮಲಕ್ಕಂಗೆ ಆಕಾಸನೇ ಕೈಲಿ ಸಿಕ್ಕಿದಂಗಾತ್. ಅಯ್ಯಣ್ಣ ಮಾಸ್ಟ್ರು ಕುಸಿಪಟ್ಟೊ. ವೊರ್ಸ ಆಕನ ಸುರೇಶನೂ ಕೂಸುನ ಅಪ್ಪ ಆತ್. ಅಪ್ರೂಪಕ್ಕೆ ಹುಟ್ಟಿದ ಈ ಹೆಣ್ಣ್ ಕೂಸುಗೆ 'ಶ್ರೀ ಲಕ್ಷ್ಮೀ' ಎಂತ ಹೆಸ್ರಿಸಿದೊ. ರೇಶ್ಮಾ ಮಾತ್ರಾ ಅದರ 'ಲಕ್ಕೀ' – ಎಂತ ಕರ್ರ್ಯತಿತ್ತ್.

ಆದರ್ಶ ಯಾಗೋಳೂ ಅಜ್ಜನ ತೊಡೆ ಮೇಲೇ ಇರ್ತಿತ್ತ್. ಅವನ ನೋಡಿಕಾಕನೆಲ್ಲಾ ಅವ್ವೆ, ಗಿರೀಶ ಅವರ ಅಪ್ಪ, ಅವ್ವನೊಟ್ಟಿಗೆ ಹೇಂಗೆ ಅಂಟಿಕಂಡಿತ್ತ್‌ಂತ ನೆಂಪಾಗ್ತಿತ್ತ್. ಅಯ್ಯಣ್ಣ ಮಾಸ್ಟ್ರಿಗೂ ದಿನಕ್ಕೊಮ್ಮೆ ಆದರೂ ಪುಳ್ಳಿನ ಎತ್ತಿ ಕೊಂಡಾಟ ಮಾಡದಿದ್ದರೆ ಮೊನ್ಸಿಗೆ ತೃಪ್ತಿ ಸಿಕ್ತಿತ್ಲೆ. ಎಸ್ಟೇ ಕೆಲ್ಸ ಇದ್ದರೂ ಪುಳ್ಳಿನ ಒಟ್ಟಿಗೆ ದಿನಕ್ಕೆ ಒಂದೆರ್ಡ್ ಗಂಟೆನಾದರೂ ಕಳ್ಯತಿದ್ದೊ. ಅಂವನೂ ಅಸ್ಟೇ ಅಜ್ಜಪ್ಪನ ನೋಡ್ದ ಕೂಡ್ಲೆ ಕುಂಡೆ ಪೊಕ್ಕಿಸಿ, ಕೈ ಕಾಲ್ ಕೊಡ್ಡಿಕಂಡ್, ನೆಗಾಡಿಕಂಡ್ ಅವರ ಗಮನ ಸೆಳ್ಯತಿತ್ತ್. ಅವು ನೋಡ್‌ತ್ಲರೆ ದುಕ್ಡಿಸಿ, ದುಕ್ಡಿಸಿ ಮೊರ್ಡ್ತಿತ್ತ್. ಆಗ ಅಯ್ಯಣ್ಣ ಮಾಸ್ಟ್ರ ಕೊಂಡಾಟಂದ,

"ಅಯ್ಯೋ, ನನ್ನ ಬಂಗಾರ ಮೊರ್ಡ್ ಬಡ. ನಿನ್ನ ಇಂದ್ ಎತ್ತಿಕಂಡತೇ ಇಲ್ಲೆ ಅಲ್ಲ? ಇಂದಾ ಈಗ ಬನ್ನೆ. ಕೈ ಕಾಲ್ ತೊಳ್ದ್ ಮನಾರ ಆಗಿ ಬನ್ನೆ. ನನ್ನ ಬಂಗಾರಂಗೆ ಮೊಣ್ಣಾಕೆ ಬೊತ್ತಲೇ?"– ಎಂತ ಹೇಳಿಕಂಡ್, ನೀರೆಡಿ ಕೊಟಗೆಗೆ ಹೋಗಿ ಮಿಾದ್ ಮಡಿ ಅರ್ವೆ ಹಾಕಂಡ್ ಬಂದ್ ಅಂವನ ಹಿಡ್ಕಂಬತಿದ್ದೊ. ಅಸ್ಟಾಕನ ಅಂವನ ಮೊರ್ಡಟ ಜೋರಾಗ್ತಿತ್ತ್. ಬೇರೆ ಯಾರ್ ಎತ್ತಿಕಂಡರೂ ಅವನ ಮೊರ್ಡಟ ನಿಲ್ತಿತ್ಲೆ. ಅವು ಬಂದ್ ಎತ್ತಿಕಂಡ ಕೂಡ್ಲೇ ಒಮ್ಮೆಲೇ ಅಂವ ಮೊರ್ದುದರ ನಿಲ್ಸ್‌ತಿತ್.

"ಚೀ, ಕಳ್ಳಾ, ಈಗ ನೋಡು ಹೇಂಗೆ ಸುಮ್ಮನಾತ್?"– ಆಗ ಕಮಲಕ್ಕ ಹೇಳ್ತಿದ್ದೊ. ಆಗ ಅಂವ ಕಣ್ಣ್‌ಲಿ ನೀರ್ ತುಂಬಿಕಂಡ್ ನೆಗಾಡ್ತಿತ್ತ್.

ವೊರ್ಸ ಕಳ್ದದೇ ಗೊತ್ತಾತ್ಲೆ. ಸುರುನ ಹುಟ್ಟಿದ ಹಬ್ಬನ ಗಡ್ಸ್‌ಲಿ ಮಾಡ್ದೊ. ಆ ದಿನ ಮನೆಲಿ ಸತ್ಯನಾರಾಯಣ ಪೂಜೆನ ಇಸಿಕಂಡೊ. ನೆಂಟ್ರಿಷ್ಟರಿಗೆಲ್ಲಾ ಹೇಳಿಕೆ ಕೊಟ್ಟೊ. ಸುರೇಶ, ರೇಶ್ಮಾ, ಶ್ರೀ ಲಕ್ಷ್ಮೀನೂ ಬಂದೊ. ಆದರ್ಶಂದ ಲಕ್ಕಿ ಒಂದು

ವೊರ್ಸ ಎರ್ಡ್ ತಿಂಗಳ್‌ಗೆ ಸಣ್ಣದ್. ಲಕ್ಕಿ ಬೆಳ್ಳಂಗೆ, ಬೆಳ್ಳಂಗಾಗಿ ಗುಂಡು ಗುಂಡಾಗಿತ್ತ್. ಈ ಬಾರಿನೂ ಎಲ್ಲಾ ನೆಂಟ್ರಿಸ್ಟರ್‌ನೂ ಬಂದರೂ ಮಂಗ್ಳೂರ್‌ಂದ ಗಿರಿಜಕ್ಕ ಬಾತ್ಲೆ. ಇದ್ ಅಯ್ಯಣ್ಣ ಮಾಸ್ತ್ರಿಗೆ ಬಾಳ ಅಚ್ಚರಿ ಆತ್. ಅವು ಹೆಣ್ಣ್‌ನೊಟ್ಟಿಗೆ

"ಈಗ ಗಿರಿಜ ಮುಂದೆನಾಂಗೆ ನಮ್ಮೊಟ್ಟಿಗೆ ಇಲ್ಲೆ. ಸೋಮಯ್ಯ ದೊಡಪನ ಬೊಜ್ಜದ ಸಮಯಲೂ ನಾ ಮಾತಾಡ್ಸಿರೆ ಹತ್ತಕೆ ಒಂದ್ ಮಾತಾಡ್ತಿತ್ತ್. ಮುಂದೆ ಅದ್ಕೆ ನಾಂತೇಳ್ರೆ ಬಾಳ ಪ್ರೀತಿ. ಗಿರೀಶಂಗೆ ಸೌಕ್ಯ ಇಲ್ಲದಿರಿಕಾಕನ ಅದ್ ಹೇಂಗೆ ಅಂವನ ನೋಡಿಕಂಡತ್? ನಂಗೆ ಸಾಯ ಮಾಡ್ತ್? ಮಾಲಿನಿನ ಬಯಕೆ ಮೊದ್ವೆಗುನೂ ಬಾತ್ಲೆ. ಈಗ ಕೂಸುನ ಹುಟ್ಟಿದ ಹಬ್ಬಕ್ಕೂ ಬಾತ್ಲೆ. ಅದ್ಕೇನಾತ್? ನಮ್ಮ ಮೇಲೆ ಏಕೆ ಕೋಪ"?– ಎಂತ ಕೇಳ್ದೊ. ಆಗ ಕಮಲಕ್ಕ,

"ನಂಗೆ ಈ ಇಸಯ ಮುಂದೇನೇ ಗೊತ್ತಿತ್. ನಾವು ಮಾನಿನ ಗಿರೀಶಂಗೆ ತಂದದ್ ಅದ್ಕೆ ಸಿಟ್ಟ್ ಗಡ. ಜಯಂತಿನೊಟ್ಟಿಗೆ ಅದ್ ಹೇಳ್ತ್ ಗಡ. ನನ್ನ ಮಗ ಇರಿಕನ ಅಂವಂಗೆ ಹೇಂಗೆ ಮೊನ್ಸ್ ಬಾತ್, ನಿನ್ನ ಮಗಳ ಕೇಳಿಕೇಂತ ಹೇಳ್ತ್ ಗಡ." – ಎಂತ ಹೇಳ್ದೊ.

ಇದರ ಕೇಳಿ ಅಯ್ಯಣ್ಣ ಮಾಸ್ತ್ರಿಗೆ ತುಂಬಾ ಬೇಜಾರಾತ್.

"ನಾ ಏನ್ ಮಾಡ್ಲಿ? ಮಕ್ಕಳ ಮೊನ್ಸ್ ಅಲ್ಲನೋ? ಹೆಣ್ಣ್, ಹೊನ್ನ್, ಮೊಣ್ಣ್ ರುಣಾನು ಬಂದಾಂತ ಹೇಳುವೆ. ಅದೆಲ್ಲಾ ನಮ್ಮ ಕೈಲುಟ್ಟೊ? ದೇವ್ರು ನಡ್ಸೋಕು. ವಿದ್ಯೆ, ಬುದ್ದಿ ಇದ್ದ ಅದ್ಕೆ ಅಸ್ಟುನೂ ತಿಳ್ಕಂಬಕೆ ಆದ್ಲೆನೋ?"– ಎಂತ ಅಯ್ಯಣ್ಣ ಮಾಸ್ಟ್ರ ಪೇಚಾಡಿಕಂಡೊ. ಕಮಲಕ್ಕ ಅವ್ಕೆ ಸಮದಾನ ಹೇಳ್ದೊ.

* * * * *

34. "ಆಸ್ತಿನ ಬಾಗ ಮಾಡ್ದೊ"

ದಿನ ಉರ್ಳಿಕಂಡ್ ಹೋತ್. ಮಳ್ಳಿಕ ದೊಡ್ಡೊವು ಆದೊ. ಆದರ್ಶನ ಬೆಳ್ಳಾರೆ ಜ್ಞಾನ ಗಂಗಾ ಸಾಲೆಗೆ ಸೇರ್ಸಿದೊ. ಸಾಲೆನ ಬಸ್ಸ್ ಪಂಜಕ್ಕೆ ಬಾತಿತ್. ಅಯ್ಯಣ್ಣ ಮಾಸ್ಟ್ರ ಮಳ್ಳಿನ ಮಾರ್ಗದಕರೆಗೆ ಕರ್ಕಂಡ್ ಹೋಗಿ, ಬಸ್ಸ್ ಹತ್ತಿಸಿ ಬಾತಿದ್ದೊ. ಹಿಂಬೊತ್ತ್ ತಿರ್ಗ ಹೋಗಿ ಕರ್ಕಂಡ್ ಬಾತಿದ್ದೊ. ಅಂವ ಈಗ ಎರ್ಡ್ನೇ ಕ್ಲಾಸ್‌ಲಿ ಓದ್ತಿತ್. ಶ್ರೀ ಲಕ್ಷ್ಮೀನೂ ಬೆಂಗ್ಳೂರ್‌ಲಿ ಒಂದನೇ ಕ್ಲಾಸ್, ಕಾನ್ವೆಂಟ್ ಸಾಲೆಲಿ ಓದ್ತಿತ್. ಇದರೆಡೆಲಿ ವಿಟ್ಲದ ರಾಮಯ್ಯ ದೊಡಪ ತೀರಿಹೋದೊ. ಅವ್ಕೆ ಕಾಯ್ಲೆ ಕಸಾಲೆ ಏನ್ ಇತ್ಲೆ. ಎರ್ಡ್ ದಿನ ಉರ್ಜೆಲ್ ಸುರಾತ್. ಆ ಮೇಲೆ ಕಕ್ಕಿಕೆ ಸುರು ಮಾಡ್ದೊ. ಎರ್ಡೇ ದಿನಲಿ ಅವರ ಪ್ರಾಣ ರೆಟ್ಟೆ ಹೋತ್. ಎಲ್ಲೋವ್ಕೂ ಸೋಜಿಗ. ಹೀಂಗೆ ಏಕಾಏಕಿ ಏನೂ ಕಾಯ್ಲೆ ಇಲ್ಲದೊವು, ತೀರಿ ಹೋದೂಂತೇಳ್ರೆ ಹೇಂಗೆ? ನೆವನಕ್ಕೆ ಇದೊಂದು ಉರ್ಜೆಲ್ - ಕಕ್ಕೆಲ್. ದೇವ್ರು ತಕಂಡೋಕೆ ಏನಾದರೊಂದ್ ಕಾರ್ಣ ಬೇಕಲೆ? ವಿಮಲ ದೊಡವಂಗಂತೂ ತಲೆ ಮೇಲೆ ಆಕಾಸ ಬಿದ್ದಾಂಗಾತ್. ಅವ್ಕೆ ಗಂಡಂದ ಮುಂದೆ ಅವೇ ಹೋಕೂಂತ ಇತ್ತ್. "ಮುತ್ತೈದೆ ಸಾವು ಸಿಕ್ಕಿಕೆ ನಾ ಮಣ್ಯ ಮಾಡ್ತಿಲ್ಲೆ. ಹೀಂಗೆ ಹೇಳದೆ ಕೇಳದೆ ಅವು ನನ್ನ ನೊಡು ನೀರ್‌ಲಿ ಕೈ ಬುಟ್ಟ್‌ದ್ ಹೋದಲೇ" -

ಎಂತ ಅವು ತಲೆ ತಲೆ ಬೊಡ್ಕಂಡ್ ಮೊರ್‍ಡ್ತಿದ್ದೊ. ಅವರ ಸಾವು ನೋಡಿ ಅಯ್ಯಣ್ಣ ಮಾಸ್ಟ್ರಿಗೂ ಚಿಂತೆ ಸುರಾತ್. ಮೊಯಿಂಸನ ಜೀವನ ಹೀಂಗೇಂತ ಹೇಳಿಕೆ ಬಾದುಲ್ಲೆ. ನಾ ಈಗಳೇ ಆಸ್ತಿನ ನನ್ನ ಮಕ್ಕಳಿಗೆ ಪಾಲ್ ಮಾಡುವ ವಿಲಾವರಿ ಮಾಡೊಕು. ಇಲ್ಲರೆ ನಾ ಸತ್ತ ಮೇಲೆ ಆಸ್ತಿಗಾಗಿ ಮಕ್ಕ ಹೊಡ್ದಾಡಿಕೆ ಬೊತ್ತಲೆ? ನನ್ನ ಮಕ್ಕ ಹಾಂಗೆ ಮಾಡಿಕಿಲ್ಲೆ. ಆದರೆ ಹೇಂಗೆ ಹೇಳ್ದು? ದುಡ್ಡು ಕೆಟ್ಟದ್. ಆಸೆಂತೇಳ್ದು ಒಂದು ಉಟ್ಟಲೆ? ಅದ್ ಎಸ್ಟ್ ಒಳ್ಳೆವರ್‍ನೂ ಕೆಟ್ಟದ್ ಮಾಡ್ದೆ."– ಎಂತೆಲ್ಲಾ ಮೊನ್ಸ್‌ಲಿ ಏಚನೆ ಮಾಡಿ ಅಯ್ಯಣ್ಣ ಮಾಸ್ಟ್ರ ಒಂದು ದಿನ ದೊಡ್ಡ ಮಂಜಂಗೆ ಪೋನ್ ಮಾಡಿ,

"ಇಂದಾ ಸುರೇಶಾ, ನೀ ಒಂದು ವಾರ ರಜೆ ಮಾಡಿ ಊರ್‌ಗೆ ಬಾ. ನಿನ್ನೊಟ್ಟಿಗೆ ಹಂಞ ಮಾತಾಡಿಕೆ ಉಟ್ಟು" – ಎಂತ ಹೇಳ್ದೊ.

ರಾಮಯ್ಯ ದೊಡ್ಡಪ್ಪ ತೀರಿ ಹೋದ ಮೇಲೆ ನಿನ್ನ ಅಪ್ಪ ಮುಂದೆನಾಂಗೆ ಇಲ್ಲೆ. ಮಾತ್‌ಕತೆ ಕಮ್ಮಿ ಆಗುಟು. ಪುಳ್ಳಿನೊಟ್ಟಿಗೂ ಮುಂದೆನಾಂಗೆ ಇರ್‍ದುಲ್ಲೆ. ಅವ್ಕೆ ಏನಾಗುಟೂಂತ ನಂಗೆ ಗೊತ್ತಾದ್ಲೆ" –ಎಂತ ಕಮಲಕ್ಕ ಒಮ್ಮೆ ಪೋನ್ ಮಾಡಿಕನ ಸುರೇಶನೊಟ್ಟಿಗೆ ಹೇಳಿದ್ದೊ. ಇದರೆಲ್ಲಾ ನೆನ್ಸಿ, ಅಪ್ಪಂಗೆ ಮೊನ್ಸ್‌ಲಿ ಏನೋ ಬಾರೀ ಬೇಜಾರ ಇರಕೂಂತ ನೆನ್ಸಿ, ಸುರೇಶ ಒಂದು ವಾರ ರಜೆ ತೆಗ್ದ್ ಊರಿಗೆ ಬಾತ್.

ಸುರೇಶನೊಟ್ಟಿಗೆ ಅಯ್ಯಣ್ಣ ಮಾಸ್ಟ್ರ,

"ನಂಗೂ ಪ್ರಾಯ ಆತ್. ನನ್ನಂದ ಇನ್ನ್ ಮುಂದೆನಾಂಗೆ ಕೆಲ್ಸ ಮಾಡಿಕೆ ಆಕಿಲ್ಲೆ. ನಿಮ್ಮ, ನಿಮ್ಮ ಹಿಸೆನ ನೀವೇ ನೋಡಿಕಣಿ. ನಾವ್ಗಿಬ್ಬೊರಿಗೆ ನೀವು ವೊರ್ಸಕ್ಕೆ ಇಂತಿಸ್ಟ್‌ಂತ ಕರ್ಚಿಗೆ ಕೊಡಿನಿ. ನಾ ಆಸ್ತಿನ ನೀವ್ಗಿಬ್ಬೊರಿಗೆ ಪಾಲ್ ಮಾಡಿ ಕೊಟ್ಟನೆ."– ಎಂತ ಹೇಳ್ದೊ. ಆಗ ಸುರೇಶ,

"ಅಯ್ಯೋ ಅಪ್ಪಾ, ನಂಗೆ ಹಳ್ಳಿಲಿದ್ದ್ ಆಸ್ತಿ ನೋಡಿಕೆ ಆಕಿಲ್ಲೆ. ನಂಗೆ ಆಸ್ತಿ ಬೇಡ. ನನ್ನ ಪಾಲ್‌ನ ಆಸ್ತಿನ ದುಡ್ಡು ಕೊಡಿನಿ. ನಾ ಬೆಂಗ್ಳೂರ್‌ಲಿ ಪ್ಲಾಟ್ ತೆಗ್ದ್ ಬಾಡಿಗೆಗೆ ಕೊಟ್ಟರೆ, ಕುದ್ದಲ್ಲಿಗೆ ನಂಗೆ ತಿಂಗಳ್‌ಗೆ ಇಪ್ಪತ್ತ್– ಇಪ್ಪತ್ತೈದ್ ಸಾವ್ರ ಬಾಡಿಗೆ ಸಿಕ್ಕುದು. ಈ ಹಳ್ಳಿಲಿ ದುಡ್ಯೋದು ಯಾರ್? ಎಲ್ಲಾ ಗಿರೀಶಂಗೇ ಬರ್‍ದ್ ಹಾಕಿ. ಅಂವಂಗಾದ್ರೆ ಕೃಷಿಲಿ ಬಾಳ ಪ್ರೀತಿ ಉಟ್ಟು. ಅಂವ ನಿಬಾಯ್ಸುದು. ಅಂವನ ಹೆಣ್ಣ್‌ನೂ ಹಳ್ಳಿ ಜೀವನಕ್ಕೆ ಹೊಂದಿಕೊಂಡುಟ್ಟು"–ಎಂತ ಹೇಳ್ತ್.

ಇದರ ಕೇಳಿ ಅಯ್ಯಣ್ಣ ಮಾಸ್ಟ್ರ ಹೆಣ್ಣ್‌ನೊಟ್ಟಿಗೆ, "ಏನ್ ಮಾಡ್ದುನೆ? ಗಿರೀಶಂಗೆ ಒಬ್ಬಂಗೇ ಇಸ್ಟ್ ದೊಡ್ಡ ಆಸ್ತಿನ ಬರ್‍ದ್ ಹಾಕುದು ಸರಿನೋ? ಅರ್ದ ಆಸ್ತಿನ ಬೆಲೆ ಅಂವಂಗೆ ಕೊಡಕಡ. ಅಸ್ಟ್ ಹಣ ಏಕಗಂಟ್‌ಲಿ ಕೊಡಿಕೆ ನನ್ನ ಹಕ್ಕಲೆ ಎಲ್ಲಿ ಉಟ್ಟು? ನನ್ನ ಹಕ್ಕಲೆ ಇದ್ದರೆ ಇದ್ದರ ಹತ್ತ್ ಲಕ್ಷ ಕೇಶ್ ಇರ್‍ದು. ಒಳ್ದದರ

ಎಲ್ಲಿಂದ ತರ್ಲಿ? ಇಸ್ಟರ ಮುಟ್ಟ ನಾ ಆಸ್ತಿ ಮೇಲೆ ಸಾಲ ಮಾಡ್ತಿಲ್ಲೆ." – ಎಂತ ಹೇಳ್ದೊ. ಆಗ ಕಮಲಕ್ಕ,

"ನಾ ಏನ್ ಹೇಳ್ದು? ನಂಗೆ ಗೊತ್ತಿತ್ತ್. ಸುರೇಶ ಸಣ್ಣ ಪ್ರಾಯಂದಲೇ ಕೈ ಕೆಸ್ರ್ ಮಾಡ್ದಂವ ಅಲ್ಲ. ಅಂವಂಗೆ ಸೋಕುನ ಜೀವನ ಬೇಕ್. ಹಿರ್‍ಯರ ಆಸ್ತಿ ಮಾರಿಕಾದೆನೋ? ನಾವು ಗಿರೀಶನ ಒಟ್ಟಿಗೆ ಮಾತಾಡೊಮೊ." –ಎಂತ ಹೇಳ್ದೊ.

ಈ ಮಾತ್ ಗಿರೀಶನ ಕೆಬಿಗೆ ಬೀತ್. ಅಂವ,

"ಅಪ್ಪಾ, ಈಗಳೇ ಏಕೆ ಆಸ್ತಿ ಪಾಲ್ ಮಾಡುವ ಇಸಯ ಏಚನೆ ಮಾಡ್ರೆ? ನಂಗೆ ಪಿಂಚಣಿ ಸಿಕ್ಕಿಕಾಕನ ಹಂಞ ಹಣ ಸಿಕ್ಕಿದೆ. ಆಗ ಪಾಲ್ ಮಾಡಿನಿ. ಅಂಣಂಗೆ ಅಂವನ ಪಾಲ್‌ನ ಹಣ ಕೊಟ್ಟ್ ಬರ್ಸಿಕೊಮೊ. ಈಗ ಹೀಂಗೆ ಇರ್ಲಿ"– ಎಂತ ಹೇಳ್ತ್.

ಅಯ್ಯಣ್ಣ ಮಾಸ್ತ್ರ ಒಪ್ಪಿತ್ಲೆ. " ನಂಗೆ ಏಕೋ ನಾ ಹೆಚ್ಚ್ ದಿನ ಬೊದ್ಕಿಕಿಲ್ಲೇಂತ ಮೊನ್ಸ್‌ಗೆ ಆದೆ. ನಾ ಇರಿಕಾಕನನೇ ಇದರ ಇಲೇವಾರಿ ಆಕು."– ಎಂತ ಹೇಳಿ, ಮಕ್ಕಳಿಬ್ಬರ ಕರ್ಕಂಡ್ ಸುಳ್ಯಲಿ ಸಿವಿಲ್ ಸರ್ವಿಸ್‌ಲಿ ಹೆಸ್ರ್ ಮಾಡ್ದ ಲಾಯರ್ ಬಾಲಮುರಳಿ ಮೋಹನರಾಯರಲ್ಲಿಗೆ ಹೋದೊ. ಇವರ ಹಾಡಾವಳೆಗಳ ಕೇಳ್ದ ವಕೀಲರ್,

"ಗೌಡ್ರೇ ಈಗನ ದಾಮಾಶಯದ ಪ್ರಕಾರ ನಿಮ್ಮ ಸ್ಥಿರ ಆಸ್ತಿಗೆ ಒಂದು ಕೋಟಿ ರೂಪಾಯಿ ದರ ಕಟ್ಟಕ್ ನೀವು ಈಗ ನಿಮ್ಮ ಹಕ್ಕಲೆ ಇದ್ದ ಹತ್ತ್ ಲಕ್ಷನ ದೊಡ್ಡ ಮಂಜಂಗೆ ಕೊಡಿನಿ. ಒಳ್ದ ಹಣನ ಕಂತ್ ಪ್ರಕಾರ ವೊರ್ಸಕ್ಕೆ ಐದ್ ಲಕ್ಷದಾಂಗೆ ಗಿರೀಶ ಕೊಟ್ಟ್‌ಕಂಡ್ ಬರ್ಲಿ." –ಎಂತ ಹೇಳ್ದೊ.

ಅಯ್ಯಣ್ಣ ಮಾಸ್ತ್ರಿಗೂ ಅವರ ಮಾತ್ ಸರೀಂತ ಕಂಡದೆ. ಮಕ್ಕಳಿಬ್ಬೊರೂ ಅದ್ಕೆ ಒಪ್ಪಿದೊ. ಆಗ ವಕೀಲರ್ ಸುರೇಶ, ಗಿರೀಶರೊಟ್ಟಿಗೆ,

"ಈಗ ಮಾಸ್ತ್ರ ಆಸ್ತಿನ ಸಮ ಬಾಗ ಮಾಡ್ರೆ, ಅವರ ಜೀವನಾಂಶಕ್ಕೆ ಏನ್ ಮಾಡ್ರೆ? ಅವು ಸೊಂತಕ್ಕೆ ಏನ್ ಇಸಿಕಂಡತ್ಲೆಲೆ?" –ಎಂತ ಕೇಳ್ದೊ. ಆಗ ಸುರೇಶ,

" ನಾವಿಬ್ಬೊರು ಅವ್ವಿಬ್ಬೊರಿಗೆ ತಿಂಗ, ತಿಂಗ ಹತ್ತತ್ತ್ ಸಾವ್ರ ರೂಪಾಯಿನ ಕರ್ಚಿಗೆ ಕೊಟ್ಟವೆ," –ಎಂತ ಹೇಳಿ ಗಿರೀಶನ ಮೋರೆ ನೋಡ್ದೆ. ಆಗ ಗಿರೀಶ,

"ಆತ್. ಅಣ್ಣ ಹೇಳ್ದಕ್ಕೆ ನನ್ನ ಒಪ್ಪಿಗೆ ಉಟ್ಟು" –ಎಂತ ಹೇಳ್ತ್. ಅಂತೂ ಎಲ್ಲೋವು ಕೂಡಿ ಒಂದು ಒಪ್ಪಂದಕ್ಕೆ ಬಂದೊ. ವಕೀಲರ್ ಪಾಲ್ ಪಟ್ಟಿನ ಕರಡ್ ಪ್ರತಿ ತಯಾರ್ಸಿ ಮಾಸ್ತ್ರಿಗೆ ತೋರ್ಸಿದೊ. ಅದರ ಓದಿ ಮಾಸ್ತ್ರ

"ಸ್ಥಿರಾಸ್ತಿ ಪಾಲಾತ್. ಚರಾಸ್ತಿ ಬಾಬ್ತು ರಿಕಾರ್ಡ್‌ಲಿ ಕಾಣ್ಸಿನಿ. ಮನೆ ಸಾಮಾನ್, ದನಕರ್‌ಗಳ ಅಂದಾಜ್ ಬೆಲೆ ಹಿಡ್ದ್, ಅದರ ಬಾಗನ ಸುರೇಶಂಗೆ

ಹಣದ ರೂಪಲಿ ಕೊಡೊಕು." – ಎಂತ ಹೇಳ್ದೊ.

'ಅದ್ ಸರೀಂ'ತ ವಕೀಲರ್, " ನಾ ನಾಳೆ ನಿಮ್ಮ ಮನೆಗೆ ಬನ್ನೆ. ನೀವು ನಿಮ್ಮ ಚರ ಸೊತ್ತ್‌ಗಳ ಪಟ್ಟಿ ಮಾಡಿ ಇಸಿನಿ. ನಾವು ಅಂದಾಜ್ ಬೆಲೆ ಕಟ್ಟಿ, ಅಸ್ಟ್ ಹಣಲಿ ಅರ್ದ ಬಾಗ ಸುರೇಶಂಗೆ ಕೊಡೊಮೊ."– ಎಂತ ಹೇಳ್ದೊ.

ಮಾರ್ಣೆ ದಿನ ವಕೀಲರ್ ಮನೆಗೆ ಬಂದೊ. ಕಮಲಕ್ಕ, ಅಯ್ಯಣ್ಣ ಮಾಸ್ಟ್ರ, ಸುರೇಶ, ಗಿರೀಶ ಸೇರಿ ಮನೆನ ಪಾತ್ರ ಪಡಗ, ದನಕರ್‌ಗ, ಪಂಪುಗಳ, ಕೃಷಿ ಹತ್ಯಾರ್‌ಗಳ ಎಲ್ಲಾ ಪಟ್ಟಿ ಮಾಡಿ ಇಸಿದೊ. ಅದರ ವಕೀಲರ್ ನೋಡಿ ಅಂದಾಜ್ ಬೆಲೆ ಆರ್ ಲಕ್ಷಂತ ಲೆಕ್ಕ ಹಾಕಿ, ಸುರೇಶಂಗೆ ಚರಸೊತ್ತು ಬಾಬ್ತು ಮೂರು ಲಕ್ಷ ಕೊಡ್ದೂಂತ ತೀರ್ಮಾನ ಆತ್. ಆ ಹಣನ ಗಿರೀಶ, 'ನಾ ಕೊಟ್ಟನೆ' –ಎಂತ ಒಪ್ಪಿಕಂಡದೆ. ಇನ್ನ್ ಮನೆ ಹಟ್ಟಿ ಕೊಟಡೆಗ, ಪಂಪು ಸೆಡ್ಡ್ ಒಳೊ ಅಲ್ಲ. ಅದ್ಕೆ ಬೆಲೆ ಕಟ್‌ಬಡನೋ?" – ಅಯ್ಯಣ್ಣ ಮಾಸ್ಟ್ರ ಹೇಳ್ದೊ. ಆಗ ವಕೀಲರ್,

"ಅಪ್ಪ, ಅವ್ವನ ಯಾರ್ ಸಾಂಕುವೆನೋ ಅವ್ರ ಹೆಸ್ರ್‌ಗೆ ಮಾಡಿನಿ" – ಎಂತ ಹೇಳ್ದೊ.

"ಅಪ್ಪ, ಅವ್ವ ನನ್ನ ಹಕ್ಕಲೆ ಬಂದ್ ನಿಲ್ಲಿಕಿಲ್ಲೆ. ಹಂಗಾಗಿ ಅವರ ಗಿರೀಶನೇ ಸಾಂಕೊಕಸ್ಟೆ. ಆದ ಕಾರ್ಣ ಅದರೆಲ್ಲಾ ಅಂವನ ಹೆಸ್ರ್‌ಗೇ ಮಾಡಿನಿ" –ಎಂತ ಸುರೇಶ ಹೇಳ್ದೆ. ಅದ್ಕೆ ಗಿರೀಶನೂ, ಮಾಸ್ಟ್ರೂ ಕಮಲಕ್ಕನೂ ಒಪ್ಪಿದೊ.

ಒಂದು ಒಳ್ಳೆ ದಿನ ನೋಡಿ, ಆಸ್ತಿನ ಎರ್ಡ್ ಬಾಗ ಮಾಡಿ ಸುರೇಶನ ಹಕ್ಕ್‌ನ ಗಿರೀಶನ ಹೆಸ್ರ್‌ಗೆ ಬರ್ದ್ ಸರ್ತಗಳ ಹಾಕಿ ರಿಕಾರ್ಡ್ ಮಾಡಿ, ಸುಳ್ಯ ಸಬ್‌ರಿಜಿಸ್ಟ್ರಿ ಆಪೀಸ್‌ಲಿ ರಿಜಿಸ್ಟ್ರೇಷನ್ ಮಾಡಿಸಿದೊ. ಕುಕ್ಕಪ್ಪಣ್ಣ ಮತ್ತೆ ಕುಂಞಂಣ ಅದ್ಕೆ ಸಾಕ್ಷಿದಾರರಾಗಿ ದಸ್ಕತ್ ಹಾಕಿದೊ. ಸುರೇಶ ಒಂದು ವಾರ ರಜೆ ಹಾಕಿದಂವಂಗೆ ಹತ್ತ್ ದಿನ ಊರ್‌ಲಿ ನಿಲ್ಲುವ ಹಾಂಗಾಂತ್, ಅಂವ ಮೇಲಾಪಿಸರಿಗೆ ಪೋನ್ ಮಾಡಿ, ಮನೆ ಪರಿಸ್ತಿತಿ ಎಲ್ಲಾ ತಿಳ್ಸಿ, ಇನ್ನ್ ನಾಕ್ ದಿನ ರಜೆ ಹೆಚ್ಚಿಗೆ ಬೇಕ್‌ಂತ ಕೇಳ್ತ್. ಎಲ್ಲಾ ಸರಿ ಕಟ್ಟಾಗಿ ಸುರೇಶ ಹದಿಮೂರು ಲಕ್ಷದ ಚೆಕ್ ಹಿಡ್ಕಂಡತ್. ಅವೆಲ್ಲಾ ಪಂಬೆತ್ತಾಡಿಗೆ ಬಂದೊ. ಮಾರ್ಣೆ ದಿನ ಸುರೇಶ ಬೆಂಗ್ಳೂರ್‌ಗೆ ಹೊರ್ಟೊ ನಿತ್ತತ್. ಆಗ ಮಾಸ್ಟ್ರ,

"ನಿಂಗೆ ನಾಳೆ ಹೋದರೆ ಆಗದೋ? ಇಂದ್ ನಿಲ್ಲ್." – ಎಂತ ಹೇಳ್ದೊ.

"ಆದುಲ್ಲೆ ಅಪ್ಪ, ಈಗಳೇ ತುಂಬಾ ರಜೆ ತಕಂಡೆ. ಹಕ್ಕ್‌ನ ರಜೆ ಎಲ್ಲಾ ಮುಗ್ತ್" –ಎಂತ ಹೇಳ್ತ್.

'ನಿನ್ನ ಇಸ್ಟ' – ಮಾಸ್ಟ್ರ ಹೇಳ್ದೊ.

ಸುರೇಶ ಹೋಗಿ ಸುಬ್ರಹ್ಮಣ್ಯಕ್ಕೆ ಮುಟ್ಟಿಟ್ಟೋ ಏನೋ? ಅಯ್ಯಣ್ಣ ಮಾಸ್ಟ್ರ

ಹೆಣ್ಣ್‌ನ ಕರ್ಢ್,

"ನಂಗೆ ಸಂಕಟ ಮರ್ಕ ಆದೆ. ಒಂದು ಚೊಂಬು ನೀರ್ ತಾ" – ಎಂತ ಹೇಳಿ ಅಲ್ಲೇ ಒರ್ಗಿದೊ. ಗಂಡನ ಅವಸ್ತೆ ನೋಡಿ ಗಾಬೆರಿಂದ ಕಮಲಕ್ಕ ಗಿರೀಶನ ಕರ್ದ್ ನೀರ್ ತಾಕೆ ಒಳಗೆ ಓಡಿದೊ. ಗಿರೀಶ ಬಂದ್ ನೋಡ್ದೆ, ಗೋಡೆಗೆ ಒರ್ಗಿದ ಮಾಸ್ಟ್ರ ಗೊರ ಗೊರೋಂತ ಉಸ್ರು ಮೇಲೆ ಕೆಳಗೆ ಮಾಡ್ತಿದ್ದೊ. ಕಣ್ಣ್ ಗಿರಗಿರನೆ ತಿರ್ಗಿ ಮೇಲೆ ನೋಡ್ತಿತ್ತ್.

"ಅವ್ವಾ ಬೇಗ ಬನ್ನಿ. ನೋಡಿ ಅಪ್ಪ ಹೇಂಗೇಂಗೋ ಮಾಡಿವೆ."– ಎಂತ ಕರ್ದ್ ಹೇಳ್ತ್.

ಅಂವನ ಬೊಬ್ಬೆ ಕೇಳಿ ಹಟ್ಟಿಲಿದ್ದ ಕುಂಞಂಣನೂ ಓಡಿ ಬಾತ್. ಅಡ್ಗೆ ಕೋಣೆಲಿದ್ದ ಮಾಲಿನಿನೂ ಬಾತ್. ಕಮಲಕ್ಕ ನೊಡ್ಗುವ ಕೈಯಿಂದ ಚೊಂಬು ನೀರ್ ತಂದ್ ಮಂಜನ ಕೈಲಿ ಕೊಟ್ಟೊ. ಗಿರೀಶ ಅಪ್ಪಂಗೆ ಒಂದು ಮುಕ್ಕಿ ನೀರ್ ಕುಡ್ಸಿದೆ. ಅಂವನ ಕೈ ನೀರ್ ಕುಡ್ಸವೇ, ಅಯ್ಯಣ್ಣ ಮಾಸ್ಟ್ರ ತಲೆನ ಪಕ್ಕಕ್ಕೆ ಮಾಲ್ಸಿದೊ. ಕುಂಞಂಣ ಇದರ ನೋಡಿ ಕಮಲಕ್ಕಂಗೂ, ಮಾಲಿನಿಗೂ,

"ನೀವು ನೀರ್ ಕುಡ್ಸಿನಿ" – ಎಂತ ಹೇಳ್ತ್. ಕಮಲಕ್ಕ, ಮಾಲಿನಿ ಅಂಬೆರ್ಪಿಲಿ ನೀರ್ ಕುಡ್ಸಿದೊ. ಹಂಞ ನೀರ್ ಹೊಟ್ಟೆ ಒಳಗೆ ಹೋತ್. ಹಂಞ ನೀರ್ ಕಟ ಬಾಯಿಲಿ ಹೊರಗೆ ಬೀತ್. ಅಯ್ಯಂಣ ಮಾಸ್ಟ್ರ ಜೂವ ಹೊರ್ಟ್ಹೋತ್. ಇದರ ನೋಡಿ ಕಮಲಕ್ಕ ಮೊತಿ ತೊಪ್ಪಿ ಬಿದ್ದೊ.

* * * * *



ಎಂ.ಜಿ. ಕಾವೇರಮ್ಮ

ಸೂಂತೋಡು ಮನೆತನದ ಅಪ್ಪಣ್ಣ ಗೌಡ ಮತ್ತೆ ಮುದ್ದಮ್ಮ ದಂಪತಿಗಳ ಮಗಳಾಗಿ 14-7-1939 ರಲ್ಲಿ ಹುಟ್ಟಿದ ಕಾವೇರಮ್ಮ ಸುಳ್ಯ ಹೈಯರ್ ಎಲಿಮೆಂಟರಿ ಶಾಲೆ, ಬೋರ್ಡ್ ಹೈಸ್ಕೂಲ್ ಸುಳ್ಯ, ಮೈಸೂರು ಸೆಂಟ್ ಫಿಲೋಮಿನಾಸ್ ಕಾಲೇಜ್‌ಲ್ ಪದವಿಪೂರ್ವ ಶಿಕ್ಷಣ ಪಡೆದವು. ಹೈಸ್ಕೂಲ್‌ನ ಮುಖ್ಯೋಪಾದ್ಯಾಯ ಆಗಿದ್ದ ಮಾವೋಜಿ ಮನೆತನದ ದಿ. ಐತಪ್ಪ ಗೌಡರ ಮಗ ಮಾವೋಜಿ ಗೋಪಾಲಕೃಷ್ಣರ ಜತೆಲಿ ಮದುವೆ ಆಗಿ ಸಂಸಾರಕೆ ಕಾಲಿರಿಸಿದ ಕಾವೇರಮ್ಮ ಒಬ್ಬ ಮಂಜ, ಮೂರು ಜನ ಗೂಡೆಗಳ ಅಯ್ಯೆ, 8 ಮೊಮ್ಮಕ್ಕಳ ಅಜ್ಜಿ, ಒಬ್ಬ ಮರಿಮಗನ ಮುತ್ತಜ್ಜಿ ಆಗಿ ಈ 80 ರ ವಯಸ್ಸಲೂ ಜೀವನದ ಉತ್ಸಾಹನ ಸಾಹಿತ್ಯ ಕೃಷಿಲಿ ಕಂಡುಕೊಂಡ ಆದರ್ಶ ಗೃಹಿಣಿ ಆಗೊಳೊ.

ಹಗಲ್ ಇರ್‌ಳ್ ಬರ್ದ್ ಒಳ ಹರಿವು ಕವನ ಸಂಕಲನ ಪ್ರಕಟಿಸಿದೊ. ಈಗ ಮಕ್ಕಳ ಸಾಹಿತ್ಯದ 30 ಕವನಗಳ ಬರ್ದ್ ಪ್ರಕಟಣೆಗೆ ತಯಾರಿಸೊಳೊ. ಅರೆಬಾಸೆ ಅಕಾಡೆಮಿಂದ 'ಅಜ್ಜಪ್ಪನ ಕಥಾ ಸಂಕಲನಂದ ಹೆರ್ಕಿದ ಕಥೆಗ' ಮತ್ತೆ 'ಸರ್ಮಾಲೆ' ಕವನ ಸಂಕಲನ 'ನೆಂಪುಗಳ ರಂಗೋಲಿ' ಈಗಾಗಲೆ ಬಿಡುಗಡೆ ಕಂಡದೆ. 'ಬೊದ್ಕ್' ಅಕಾಡೆಮಿ ಪ್ರಕಟಿಸ್‌ತ ಇರೊ ಇವ್ರ 4ನೇ ಪುಸ್ತಕ.

ಇವರ ವಿಳಾಸ :
ಎಂ.ಜಿ. ಕಾವೇರಮ್ಮ
"ನಿಸರ್ಗ" ಮೊವಾಜಿ,
ಸುಳ್ಯ ದ.ಕ.

Ptd @ Sri Krishna Printers. Mdk. Mob : 94481 35592